ಬೆಂಗಳೂರು
ಗುರುವಾರ, 26 ಮಾರ್ಚ್ 2026
ಸಂಪುಟ 33, ಸಂಚಿಕೆ 144, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ : ಅಷ್ಟಮಿ, ನಕ್ಷತ್ರ: ಆರ್ದ್ರೆ

ದಿನದ ಮಾತು

ಮಾನವ ದೇಹದೊಳಗಿನ ಆತ್ಮವೇ ನಾವು ಪೂಜಿಸಬೇಕಾದ ದೇವರು.

▲ ಸ್ವಾಮಿ ವಿವೇಕಾನಂದ

ಯುದ್ಧ: ಅಂದುಕೊಂಡಿದ್ದು ಬೇರೆ, ಆದದ್ದು ಬೇರೆ!

ಗುರುತರ

• ಸೋಮಶೇಖರ ಸಿ.ಜಿ.

• ಪುಟ ೬

ಕಿರುಸುದ್ದಿ

ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಅಬಾಧಿತ

• **ಹೊಸದಿಲ್ಲಿ:** ದೇಶದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆ ಇಲ್ಲ ಎಂದು ಕೇಂದ್ರ ಸರ್ಕಾರ ಬುಧವಾರ ಸ್ಪಷ್ಟಪಡಿಸಿದೆ. ಗೃಹಬಳಕೆ ಎಲ್‌ಪಿಜಿ ರೀಫಿಲ್ಲಿಂಗ್ ಅವಧಿಯನ್ನು 25ರಿಂದ 35 ದಿನಗಳವರೆಗೆ ಹೆಚ್ಚಿಸಲಾಗಿ ಮತ್ತು ದೇಶದಲ್ಲಿ ಇಂಧನ ಕೊರತೆ ಇದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ವದಂತಿಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಸ್ಪಷ್ಟನೆ ನೀಡಿದ್ದು, ಯಾವುದೇ ಕಾರಣಕ್ಕೂ ಈ ವದಂತಿಗಳನ್ನು ನಂಬಬಾರದು ಮತ್ತು ಜನರು ಆತಂಕದಿಂದ ಹೆಚ್ಚುವರಿ ಖರೀದಿ ಮಾಡಬಾರದು ಎಂದು ಮನವಿ ಮಾಡಿದೆ.

ದೇಶದಲ್ಲಿ ಇಂಧನ ಕೊರತೆ ಇಲ್ಲ, ಎಲ್‌ಪಿಜಿ ರೀಫಿಲ್ಲಿಂಗ್ ಅವಧಿ ಹೆಚ್ಚಿಸಿಲ್ಲ: ಕೇಂದ್ರ

• ಪುಟ ೫

ಪಾಕ್‌ನ ಯೋಜಿತ ನರಮೇಧ: ಬಾಂಗ್ಲಾ

• **ಢಾಕಾ:** ಪಾಕಿಸ್ತಾನದ 1971ರ ಆಪರೇಷನ್ ಸರ್ಚ್‌ಲೈಟ್ ಒಂದು ಪೂರ್ವಯೋಜಿತ ಜನಾಂಗೀಯ ನರಮೇಧವಾಗಿದ್ದು, ಚರಿತ್ರೆಯಲ್ಲೇ ತೀರಾ ಕ್ರೂರ ಮತ್ತು ಕರಾಳ ದಿನವಾಗಿದೆ ಎಂದು ಬಾಂಗ್ಲಾ ಪ್ರಧಾನಿ ತಾರಿಖ್ ರಹಮಾನ್ ಟೀಕಿಸಿದ್ದಾರೆ. ಜನಾಂಗೀಯ ನರಮೇಧ ದಿನದ ಹಿನ್ನೆಲೆ ರಹಮಾನ್ ಈ ರೀತಿ ಹೇಳಿಕೆ ನೀಡಿದ್ದಾರೆ.

• ಪುಟ ೫

ತಲೆಮರೆಸಿಕೊಂಡಿದ್ದ ಆಪ್ ಶಾಸಕನ ಬಂಧನ

• ಪುಟ ೫

ರಷ್ಯಾದಿಂದ 600 ಲಕ್ಷ ಬ್ಯಾರಲ್ ಕಚ್ಚಾ ತೈಲ ಖರೀದಿ

• ಪುಟ ೫

ಐಎಎಫ್ ವಾಯು ಬಾಣ ಹೆಲಿಕಾಪ್ಟರ್

• ಪುಟ ೫

ಗ್ಯಾಸ್ ಶುಲ್ಕ ವಸೂಲಿ ಸಿಸಿಪಿಎ ಕ್ರಮದ ಎಚ್ಚರಿಕೆ

• ಪುಟ ೫

ಆಯವ್ಯಯದಲ್ಲಿ ಮಧ್ಯಮ ವರ್ಗದವರಿಗೆ ಹಲವು ಕ್ರಮ

• ಪುಟ ೫

ಖಾಲಿ ಚೊಂಬಲ್ಲ, ತುಂಬಿದ ಕೊಡ ಎಂದ ಸಿಎಂ ಸಿದ್ದರಾಮಯ್ಯ

ಪರಿಪೂರ್ಣ ಬಜೆಟ್

• **ವಿಧಾನಸಭೆ:** ಕಾಂಗ್ರೆಸ್ ಸರ್ಕಾರ ಕರ್ನಾಟಕಕ್ಕೆ ಖಾಲಿ ಚೊಂಬು ನೀಡದೆ ತುಂಬಿದ ಚೊಂಬನ್ನೇ ನೀಡಲಾಗಿದೆ. ನಮ್ಮ ಬಜೆಟ್ ತುಂಬಿದ ಕೊಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಬುಧವಾರ ಸದನದಲ್ಲಿ ಆಯವ್ಯಯ ಕುರಿತ ಚರ್ಚೆಗೆ ಉತ್ತರ ನೀಡಿದ ಅವರು, ಪ್ರತಿಪಕ್ಷದವರು ಆಯವ್ಯಯವನ್ನು ಎಷ್ಟೇ ಟೀಕಿಸಿದರೂ ಮಾವಿನಹಣ್ಣನ್ನು ಬೇವಿನಹಣ್ಣು ಆಗಲು ಸಾಧ್ಯವಿಲ್ಲ ಎಂದು ಸಮರ್ಥಿಸಿಕೊಂಡರು.

ರಾಜ್ಯದ ಈ ವರ್ಷದ ಆಯವ್ಯಯ ಗಾತ್ರ 4,48,004 ಕೋಟಿ ರೂ.ಗಳಷ್ಟಾಗಲಿದೆ. 2025-26ರಲ್ಲಿ ಆ ಗಾತ್ರವು 4,09,549 ಕೋಟಿ ರೂ.ಗಳಷ್ಟಿತ್ತು. ಕಳೆದ ವರ್ಷದ ಆಯವ್ಯಯಕ್ಕೆ ಹೋಲಿಸಿದರೆ ಈ ವರ್ಷ 38,455 ಕೋಟಿ ರೂ.ಗಳಷ್ಟು ಹೆಚ್ಚಿನ ಗಾತ್ರದ್ದಾಗಿದೆ. ಶೇ.9.4ರಷ್ಟು ಬೆಳವಣಿಗೆಯಾಗಿದೆ. ಕೇಂದ್ರ ಸರ್ಕಾರದ ಬಜೆಟ್ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.5.6ರಷ್ಟು ಮಾತ್ರ ಬೆಳವಣಿಗೆ ಸಾಧಿಸಿದೆ ಎಂದರು. 2025-26ರಲ್ಲಿ ದೇಶದ ಜಿಡಿಪಿ ಸ್ಥಿರ ಬೆಲೆಗಳಲ್ಲಿ ಶೇ.7.4ರಷ್ಟು ಬೆಳವಣಿಗೆ ದಾಖಲಿಸಿದರೆ, ರಾಜ್ಯದ ಜಿಎಸ್‌ಡಿಪಿ ಶೇ.8.1ರಷ್ಟು ಬೆಳವಣಿಗೆ ದಾಖಲಿಸಿದೆ. ಕರ್ನಾಟಕದ ಜಿಎಸ್‌ಡಿಪಿ ದೇಶದ ಜಿಡಿಪಿ ಬೆಳವಣಿಗೆಗಿಂತ ಹೆಚ್ಚಿರುವುದು ನಮ್ಮ ಸರ್ಕಾರ ಬಂಡವಾಳ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಆರ್ಥಿಕ ಪ್ರಗತಿಗೆ ಉತ್ತೇಜನ ನೀಡುತ್ತಿರುವುದನ್ನು ಹೇಳುತ್ತದೆ. ದೇಶದಲ್ಲಿ ಜಿಎಸ್‌ಟಿ ಸಂಗ್ರಹಣೆಯಲ್ಲಿ ಕರ್ನಾಟಕ ನಂ.2 ಸ್ಥಾನದಲ್ಲಿದೆ, ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ನಂ.2 ಇದೆ. ವಿತ್ತೀಯ ಶಿಸ್ತು ಕಾಪಾಡಿಕೊಂಡೇ ರಾಜ್ಯದ ಆರ್ಥಿಕತೆಯನ್ನು ದೇಶದಲ್ಲಿ ನಂ.1 ಮಾಡುವತ್ತ ಹೆಜ್ಜೆಯಿಟ್ಟಿದ್ದೇವೆ ಎಂದು ಹೇಳಿದರು.

ಆರ್ಥಿಕ ಶಿಸ್ತು ಮೀರಿಲ್ಲ: 16ನೇ ಹಣಕಾಸು ಆಯೋಗದ ಮಾರ್ಗಸೂಚಿಯ ಅನುಸಾರ ರಾಜ್ಯಗಳು ಶೇ.3ರೊಳಗೆ ಹಾಗೂ ಕೇಂದ್ರ ಸರ್ಕಾರ ಶೇ.4.2ರೊಳಗೆ ವಿತ್ತೀಯ ಕೊರತೆ ಹೊಂದಿರಬೇಕು.

➡ಪುಟ ೭



- ಬಜೆಟ್ ಮೇಲಿನ ಚರ್ಚೆಯಲ್ಲಿ ಒಟ್ಟು 50 ಜನ ಭಾಗಿ
- ಪ್ರತಿಪಕ್ಷದವರು 21 ಸದಸ್ಯರು
- ನಡೆದಿರುವ ಚರ್ಚೆಯ ಒಟ್ಟು ಅವಧಿ 24 ತಾಸು 45 ನಿಮಿಷ

ವಿಪಕ್ಷಗಳ ಸಭಾತ್ಯಾಗ

ಮುಖ್ಯಮಂತ್ರಿಗಳು ಬಜೆಟ್ ಕುರಿತು ಮಾತನಾಡಿದ ಭಾಷಣ ಸರಿಯಾಗಿ ಇಲ್ಲ, ನಮ್ಮ ಗೊಂದಲಗಳಿಗೆ ಸ್ಪಷ್ಟನೆ ನೀಡಿಲ್ಲ, ಇದನ್ನು ನಾವು ವಿರೋಧಿಸುತ್ತೇವೆ ಎಂದು ವಿಪಕ್ಷಗಳ ಸದಸ್ಯರು ಧಿಕ್ಕಾರ ಕೂಗಿ ಸಭಾತ್ಯಾಗ ಮಾಡಿದರು.

> ಸಿಎಂ ಸಿದ್ದರಾಮಯ್ಯ ಅವರು ಹೇಳಿದಂತೆ ನಾನು ಆಳವಾಗಿಯೇ ಬಜೆಟ್ ಅಧ್ಯಯನ ಮಾಡಿದ್ದು, ಎಷ್ಟೇ ಆಳವಾಗಿ ಹೋದರೂ ಬಜೆಟ್‌ಲ್ಲಿ ಸಾಲವೇ ಕಂಡುಬರುತ್ತಿದೆ. ಇದು ಕ್ರೆಡಿಟ್ ಬಜೆಟ್.
>
> ■ **ಅಶೋಕ್**, ವಿಪಕ್ಷ ನಾಯಕ

ಅನುದಾನಕ್ಕಾಗಿ ಕೇಂದ್ರಕ್ಕೆ ರಾಜ್ಯದ ನಿಯೋಗ

ರಾಜ್ಯಕ್ಕೆ ಅನ್ಯಾಯವಾದಾಗ ಯಾವುದೇ ಸರ್ಕಾರವಿದ್ದರೂ, ವಿರೋಧಿಸಲೇಬೇಕು. ಕನ್ನಡಿಗರೆಲ್ಲರೂ ಒಗ್ಗಟ್ಟಾಗಿ ಈ ಅನ್ಯಾಯವನ್ನು ವಿರೋಧಿಸಬೇಕು. ಕರ್ನಾಟಕಕ್ಕೆ 14ನೇ ಹಣಕಾಸು ಆಯೋಗದಲ್ಲಿ ಶೇ. 4.713ರಷ್ಟು ಪಾಲು ದೊರೆತಿತ್ತು. ಆದರೆ 15ನೇ ಹಣಕಾಸು ಆಯೋಗದಲ್ಲಿ ಅದು ಶೇ. 3.647 ರಷ್ಟಾಗಿತ್ತು. ನ್ಯಾಯಯುತವಾದ ರಾಜ್ಯದ ಪಾಲನ್ನು ನಮಗೆ ನೀಡಿಲ್ಲ. 16ನೇ ಆಯೋಗದಲ್ಲಿ ಸ್ವಲ್ಪ ಸುಧಾರಣೆಯಾಗಿ 4.131 ರಷ್ಟು ರಾಜ್ಯಕ್ಕೆ ನಿಗದಿಯಾಗಿದೆ. ಆದರೆ, ರಾಜ್ಯ ಕೋರಿದ್ದ ಶೇ. 4.7ರಷ್ಟು ಬರಲಿಲ್ಲ, ಆದ್ದರಿಂದ ಕೇಂದ್ರದ ವಿರುದ್ಧದ ಹೋರಾಟ ಮುಂದುವರೆಯಲಿದೆ. ಸದ್ಯದಲ್ಲಿಯೇ ರಾಜ್ಯದ ಅನುದಾನದ ಬೇಡಿಕೆಯನ್ನಿಟ್ಟು ಪಕ್ಷಾತೀತವಾದ ನಿಯೋಗವೊಂದು ಕೇಂದ್ರಕ್ಕೆ ಹೋಗಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ನಾನು ನಂ1 ಕನ್ನಡಿಗ

ಸಿಜಿಪಿ ವರದಿ ಪ್ರಸ್ತಾಪಿಸುವ ವೇಳೆ ವಿಪಕ್ಷ ನಾಯಕ ಅಶೋಕ್ ಅವರು, ಪುಟ ಸಂಖ್ಯೆ ಕನ್ನಡದಲ್ಲಿ ಹೇಳಿ ಎಂದಾಗ ನಾನು ಕನ್ನಡ ಕಾವಲು ಸಮಿತಿ ಅಧ್ಯಕ್ಷನಾಗಿದ್ದೆ. ಆವಾಗಲೂ ಕನ್ನಡಿಗ, ಈಗಲೂ ಕನ್ನಡಿಗ, ಮುಂದೆಯೂ ಕನ್ನಡಿಗ. ನಾನು ನಂ1 ಕನ್ನಡಿಗ ಎಂದು ಸಿದ್ದರಾಮಯ್ಯ ಹೇಳಿದರು.

ಧನ ವಿನಿಯೋಗ ವಿಧೇಯಕ ಅಂಗೀಕಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 2025-26ನೇ ಸಾಲಿನ ಹಣಕಾಸು ವರ್ಷದ ಸೇವೆಗಳಿಗಾಗಿ ರಾಜ್ಯದ ಸಮುಚಿತ ನಿಧಿಯಿಂದ ಹಣದ ಸಂದಾಯ ಮತ್ತು ವಿನಿಯೋಗಕ್ಕಾಗಿ ಒಪ್ಪಿಗೆ ನೀಡುವ ಕರ್ನಾಟಕ ಧನ ವಿನಿಯೋಗ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಲಾಯಿತು.

ಮಧ್ಯಪ್ರಾಚ್ಯದಲ್ಲಿ ಯುದ್ಧ ತೀವ್ರತೆ ಹೆಚ್ಚಳ

ಟ್ರಂಪ್ ಕದನ ವಿರಾಮ ತಿರಸ್ಕರಿಸಿದ ಇರಾನ್

• **ದುಬೈ:** ಅಮೆರಿಕದ ಕದನ ವಿರಾಮ ಪ್ರಸ್ತಾವನೆಯನ್ನು ತಿರಸ್ಕರಿಸಿರುವ ಇರಾನ್, ತನ್ನದೇ ಪ್ರತಿಪ್ರಸ್ತಾವನೆಯನ್ನು ಮುಂದಿಟ್ಟಿದೆ. ಇದೇ ವೇಳೆ ಮಧ್ಯಪ್ರಾಚ್ಯದಲ್ಲಿ ದಾಳಿ-ಪ್ರತಿದಾಳಿಗಳು ಹೆಚ್ಚುತ್ತಿವೆ. ಕುವೈತ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ನಡೆದ ದಾಳಿಯಿಂದ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಇಸ್ರೇಲ್ ಟೆಹ್ರಾನ್ ಮೇಲೆ ವಾಯುದಾಳಿ ನಡೆಸಿದರೆ, ಇರಾನ್ ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ ಮುಂದುವರಿಸಿದೆ. ಅಮೆರಿಕದ ಅಬ್ರಹಾಂ ಲಿಂಕನ್ ನೌಕೆ ಮೇಲೆ ದಾಳಿ ನಡೆಸಿದ್ದಾಗಿ ಇರಾನ್ ಸೇನೆ ಹೇಳಿದೆ.





ಅಮೆರಿಕ ಸೇನಾ ನಿಯೋಜನೆ ಹೆಚ್ಚಳ: ಅಮೆರಿಕ ಸುಮಾರು 1,000 ಪ್ಯಾರಾಟ್ರೂಪರ್‌ಗಳನ್ನು ಹಾಗೂ 5,000 ಮೆರೀನ್ ಸೈನಿಕರನ್ನು ಮಧ್ಯಪ್ರಾಚ್ಯಕ್ಕೆ ಕಳುಹಿಸುತ್ತಿದೆ. ಈ ಪಡೆಗಳು ಯುದ್ಧಭೂಮಿಯಲ್ಲಿ ಪ್ರಮುಖ ಪ್ರದೇಶಗಳನ್ನು ಕಬಳಿಸಲು ತರಬೇತಿ ಪಡೆದಿವೆ. ಇದು ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಇನ್ನಷ್ಟು ಹೆಚ್ಚಿಸಿದೆ.

ಸಂಧಾನ ಮಾತುಕತೆಗೆ ಸವಾಲು: ಪಾಕಿಸ್ತಾನ ಮತ್ತು ಈಜಿಪ್ಟ್ ಮಧ್ಯಸ್ಥಿಕೆಯಲ್ಲಿ ಅಮೆರಿಕ 15 ಅಂಶಗಳ ಪ್ರಸ್ತಾವನೆ ನೀಡಿದೆ. ಇದರಲ್ಲಿ ನಿರ್ಬಂಧ ಸಡಿಲಿಕೆ, ಇರಾನ್ ಪರಮಾಣು ಕಾರ್ಯಕ್ರಮದ ಕಡಿತ, ಕ್ಷಿಪಣಿ ನಿಯಂತ್ರಣ ಮತ್ತು ಹಾರ್ಮುಜ್ ಜಲಸಂಧಿ ತೆರವು ಒಳಗೊಂಡಿದೆ. ಆದರೆ, ಇರಾನ್ ತನ್ನ ಭದ್ರತೆಗೆ ಸಂಬಂಧಿಸಿದ ವಿಷಯಗಳಲ್ಲಿ ಯಾವುದೇ ಸಾಮರಸ್ಯಕ್ಕೆ ಸಿದ್ಧವಿಲ್ಲ ಎಂದು ತಿಳಿಸಿದೆ. ಇರಾನ್ ತನ್ನ ಐದು ಅಂಶಗಳ ಯೋಜನೆಯನ್ನು ಮಂಡಿಸಿದ್ದು, ಇದರಲ್ಲಿ ಯುದ್ಧ ನಿಲುಗಡೆ, ಪರಿಹಾರ ಧನ, ಮತ್ತು ಹಾರ್ಮುಜ್ ಮೇಲಿನ ತನ್ನ ನಿಯಂತ್ರಣವನ್ನು ಒಪ್ಪಿಕೊಳ್ಳುವಂತೆ ಕೇಳಿದೆ. ಈ ಅಂಶಗಳು ಅಮೆರಿಕಕ್ಕೆ ಅಸಾಧ್ಯವೆಂದು ತೋರುತ್ತಿದೆ. ಇಸ್ರೇಲ್ ಟೆಹ್ರಾನ್ ಮತ್ತು ಇಸ್ಫಹಾನ್ ಪ್ರದೇಶಗಳಲ್ಲಿ ವಾಯುದಾಳಿ ನಡೆಸಿದೆ.

➡ಪುಟ ೭

ಪಾಕಿಸ್ತಾನ ದಲ್ಲಾಳಿ ರಾಷ್ಟ್ರ : ಜೈಶಂಕರ್

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಯುದ್ಧದ ಹಿನ್ನೆಲೆ ದೇಶೀಯ ರಾಜಕೀಯ ಕಾವೇರಿದಂತೆ, ಬುಧವಾರ ನಡೆದ ಸರ್ವಪಕ್ಷ ಸಭೆ ಭಾರೀ ವಾಗ್ವಾದಕ್ಕೆ ಸಾಕ್ಷಿಯಾಯಿತು. 'ಪಾಕಿಸ್ತಾನ ದಲ್ಲಾಳಿ ರಾಷ್ಟ್ರ, ನಾವು ಅಲ್ಲ' ಎಂದು ಕೇಂದ್ರ ಸರ್ಕಾರ ತಿರುಗೇಟು ನೀಡಿತು. ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಯುದ್ಧ ತಕ್ಷಣ ಅಂತ್ಯಗೊಳ್ಳಬೇಕು ಎಂದು ತಿಳಿಸಿರುವುದಾಗಿ ಸರ್ಕಾರ ಹೇಳಿದರೂ, ಅದರ ನಿಲುವಿನ ಮೇಲೆ ವಿರೋಧ ಪಕ್ಷಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದವು. ಸಭೆಯಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಪಾಕಿಸ್ತಾನವನ್ನು ನೇರವಾಗಿ ಟಾರ್ಗೆಟ್ ಮಾಡಿ, '1981ರಿಂದಲೇ ಅಮೆರಿಕ ಪಾಕಿಸ್ತಾನವನ್ನು ಬಳಸಿಕೊಂಡಿದೆ. ನಾವು ಅಂತಹ ದಲ್ಲಾಳಿ ರಾಷ್ಟ್ರವಲ್ಲ' ಎಂದು ಸ್ಪಷ್ಟಪಡಿಸಿದರೆಂದು ಮೂಲಗಳು ತಿಳಿಸಿವೆ.

➡ಪುಟ ೭

ಏಕಾತ್ಮ ಮಾನವ ದರ್ಶನದಲ್ಲಿ ರಾಜ್ಯಪಾಲ ಗೆಹಲೋತ್

ಭಾರತೀಯ ಸಂಸ್ಕೃತಿಯ ದರ್ಶನ

• **ಮೈಸೂರು :** ಭಾರತ ದೇಶ ತನ್ನ ಮಹಾನ್ ನಾಗರಿಕತೆ ಮತ್ತು ಸಂಸ್ಕೃತಿಯ ಕಾರಣ ಜಾಗತಿಕ ವೇದಿಕೆಯಲ್ಲಿ ಪ್ರಸಿದ್ಧಿ ಪಡೆದಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಹೇಳಿದರು.

ಮೈಸೂರಿನ ಮುಕ್ತಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಘಟಿಕೋತ್ಸವ ಭವನದಲ್ಲಿ ಪ್ರಜ್ಞಾ ಪ್ರವಾಹ ಕರ್ನಾಟಕದ ವತಿಯಿಂದ ಬುಧವಾರ ಆಯೋಜಿಸಲಾದ 'ಏಕಾತ್ಮ ಮಾನವ ದರ್ಶನ: ಭಾರತದ ವಿಶ್ವದೃಷ್ಟಿ' ವಿಷಯ ಕುರಿತಾದ ವಿಚಾರ ಸಂಕಿರಣ ಸಮಾರಂಭದಲ್ಲಿ ಮಾತನಾಡಿದ ಅವರು, ಕಾಲಕಾಲಕ್ಕೆ ಅನೇಕ ಮಹಾನ್ ವಿಭೂತಿಪುರುಷರು ಭಾರತದಲ್ಲಿ ಅವತರಿಸಿ ಇಲ್ಲಿನ ಮಹಾನ್ ಪರಂಪರೆಯನ್ನು ಸಮೃದ್ಧಗೊಳಿಸಿದ್ದಾರೆ. ಈ ಮಹಾನ್ ಪುರುಷರ ಮೂಲಕ ಸ್ಥಾಪಿತಗೊಂಡ ಮಹಾನ್ ಪರಂಪರೆಯು ಸಮಾಜ ಮತ್ತು ರಾಷ್ಟ್ರಕ್ಕೆ ಕಾಲಕಾಲಕ್ಕೆ ಪಥದರ್ಶಕದಂತೆ ಕಾರ್ಯನಿರ್ವಹಿಸಿದೆ ಎಂದು ಬಣ್ಣಿಸಿದರು.

➡ಪುಟ ೭



ಈ ಮಸೂದೆ ಜಾರಿಗೊಳಿಸಿದ ಎರಡನೇ ರಾಜ್ಯವೆಂಬ ಹೆಗ್ಗಳಿಕೆ

ಏನಾಸಂ ಅಂಗೀಕರಿಸಿದ ಗುಜರಾತ್

• **ಅಹ್ಮದಾಬಾದ್:** ವಿವಾಹ, ವಿವಾಹ ವಿಚ್ಛೇದನ, ಉತ್ತರಾಧಿಕಾರ, ಲಿವ್-ಇನ್ ಸಂಬಂಧಗಳು ಇತ್ಯಾದಿಗಳಿಗೆ ಮತ-ಧರ್ಮ ಭೇದವಿಲ್ಲದೆ ಸಮಾನ ಕಾನೂನನ್ನು ಅನ್ವಯಿಸುವ ಉದ್ದೇಶದ ಏಕರೂಪ ನಾಗರಿಕ ಸಂಹಿತೆಯನ್ನು (ಏನಾಸಂ) ಗುಜರಾತ್ ವಿಧಾನಸಭೆ ಬಹುಮತದ ಧ್ವನಿಮತದಿಂದ ಅಂಗೀಕರಿಸಿದೆ. ತನ್ಮೂಲಕ ಈ ಮಸೂದೆ ಅಂಗೀಕರಿಸಿದ ದ್ವಿತೀಯ ರಾಜ್ಯವೆಂಬ ಹೆಗ್ಗಳಿಕೆಗೆ ಗುಜರಾತ್ ಪಾತ್ರವಾಗಿದೆ. ಕಾಂಗ್ರೆಸ್ ಮತ್ತು ಆಪ್ ಪಕ್ಷಗಳು ಮಸೂದೆಗೆ ಸಹಮತ ವ್ಯಕ್ತಪಡಿಸಿಲ್ಲ. ಗುಜರಾತ್ ವಿಧಾನಸಭೆಯಲ್ಲಿ ಸತತ 7 ತಾಸುಗಳ ಸುದೀರ್ಘ ಚರ್ಚೆ ನಂತರ ಏಕರೂಪ ನಾಗರಿಕ ಸಂಹಿತೆ ಮಸೂದೆ ಅಂಗೀಕಾರವಾಗಿದೆ. ಯುಸಿಸಿ ಅನುಷ್ಠಾನ ಬಗ್ಗೆ ರಾಜ್ಯ ನಿಯೋಜಿತ ನಿಯೋಗವು ತನ್ನ ಅಂತಿಮ ವರದಿ ಸಲ್ಲಿಸಿದ ವಾರದ ನಂತರ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದರು.



➡ಪುಟ ೭



ಯಾರಿಗೆ ಅನ್ವಯಿಸದು?

ಪರಿಶಿಷ್ಟ ಪಂಗಡಗಳು ಮತ್ತು ಸಂವಿಧಾನದಲ್ಲಿ ಸಂರಕ್ಷಿಸಲ್ಪಡುವ ಸಾಂಪ್ರದಾಯಿಕ ಹಕ್ಕುಗಳನ್ನು ಹೊಂದಿರುವ ನಿರ್ದಿಷ್ಟ ಗುಂಪುಗಳಿಗೆ ಸಮಾನ ನಾಗರಿಕ ಸಂಹಿತೆ ಅನ್ವಯಿಸುವುದಿಲ್ಲ ಎಂದು ಮಸೂದೆಯಲ್ಲಿ ಹೇಳಲಾಗಿದೆ. ಸಮಾನ ಕಾನೂನು ಚೌಕಟ್ಟನ್ನು ಸೃಷ್ಟಿಸುವುದು ಯುಸಿಸಿಯ ಧ್ಯೇಯವೆಂದು ಮಸೂದೆಯ ಉದ್ದೇಶಗಳು ಮತ್ತು ಕಾರಣಗಳಲ್ಲಿ ವಿಶದಪಡಿಸಲಾಗಿದೆ.

ಕೈ ಕಚೇರಿಗಳ ತೆರವಿಗೆ ಗಡುವು



ಮಾ.28ರೊಳಗೆ ಖಾಲಿ ಮಾಡಿ: ಕೇಂದ್ರ ಸೂಚನೆ

• **ಹೊಸದಿಲ್ಲಿ:** ಕಾಂಗ್ರೆಸ್ 1978ರಿಂದಲೇ ಹಿಡಿತದಲ್ಲಿಟ್ಟುಕೊಂಡಿರುವ ದಿಲ್ಲಿಯ ಲುಟ್ಯೆನ್ಸ್ ವಲಯದಲ್ಲಿರುವ 24 ಅಕ್ಬರ್ ರಸ್ತೆಯಲ್ಲಿನ ಪಕ್ಷದ ಪ್ರಧಾನ ಕಚೇರಿ ಕಟ್ಟಡವನ್ನು ಮಾ.28ರೊಳಗೆ ತೆರವುಗೊಳಿಸಬೇಕಾಗಿದೆ. ಅಲ್ಲದೆ, 5 ರೈಸಿನಾ ರೋಡ್‌ನಲ್ಲಿನ ಭಾರತೀಯ ಯುವ ಕಾಂಗ್ರೆಸ್(ಐವೈಸಿ)ಕಚೇರಿಯನ್ನೂ ಸಮಾನ ಗಡುವಿನೊಳಗೆ ತೆರವುಗೊಳಿಸುವಂತೆ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ. ಕಟ್ಟಡದ ತೆರವಿಗೆ ಸೂಚಿಸಿ ಈಚೆಗೆ ನೋಟಿಸ್ ಬಂದಿದೆ. ಯಾವುದೇ ಒತ್ತಡಪೂರ್ವಕ ತೆರವು ಕಾರ್ಯಾಚರಣೆ ತಡೆಯಲು ನಾವು ನ್ಯಾಯಾಲಯಗಳ ಮೊರೆ ಹೋಗುವುದಾಗಿ ಕಾಂಗ್ರೆಸ್ ನಾಯಕರು ತಿಳಿಸಿದ್ದಾರೆ.

➡ಪುಟ ೭

ಸಭಾಪತಿ ಪೀಠದಲ್ಲಿ ಸಾತ್ವಿಕ ವನವಾಸಿ ಶಾಂತಾರಾಮ ಸಿದ್ದಿ

▸ **ಕೋಟ ಶ್ರೀನಿವಾಸ ಪೂಜಾರಿ**
ಸಂಸದರು



ಸುಮಾರು ಆರು ವರ್ಷಗಳ ಹಿಂದೆ ಶಾಂತಾರಾಮ ಸಿದ್ದಿ ಎಂಬ ಮುಗ್ಧಗಣ್ಣಿನ, ಗುಂಗುರು ತಲೆ ಕೂದಲಿನ ರಾಜಕೀಯ ಕ್ಷೇತ್ರಕ್ಕೆ ಮಾತ್ರವಲ್ಲ, ಸುತ್ತಲ ಪ್ರಪಂಚಕ್ಕೂ ಹೊಸಬರಾದ ಹೆಚ್ಚಾಗಿ ಅರಣ್ಯ ಪ್ರದೇಶದಲ್ಲಿ ವಾಸ ಮಾಡಿಕೊಂಡಿರುವ ತನಗಿಂತ, ತನ್ನ ಜಾತಿ ಧರ್ಮಕ್ಕಿಂತ ದೇಶ ಮೊದಲು ಎಂದು ಬದುಕಿದ ಸಂಘದ ಕಾರ್ಯಕರ್ತ ಬುಡಕಟ್ಟು ಸಿದ್ದಿ ಜನಾಂಗದ ಶಾಂತಾರಾಮರ ಮನೆಗೆ ಧಾವಿಸಿದ್ದೆ. ಉತ್ತರಕನ್ನಡ ಜಿಲ್ಲೆಯ, ಯಲ್ಲಾಪುರ ಸಮೀಪದಲ್ಲಿ ಪ್ಲಾಸ್ಟಿಕ್ ಹೊದಿಸಿದ ಹಳೆಯ ಹಂಚಿನ ಮನೆ ಎದುರು ನಿಂತು ನಿಮ್ಮನ್ನು ನಮ್ಮ ಪಾರ್ಟಿ ಮೇಲ್ಮನೆಯ ನಾಮನಿರ್ದೇಶಿತ ಶಾಸಕರಾಗಿ ಘೋಷಿಸಿದೆ. ಅಭಿನಂದಿಸಲು ಬಂದೆ ಎಂದಿದ್ದೆ. ನನ್ನ ಕೈ ಹಿಡಿದು ಮನೆಯೊಳಗೆ ಕರೆದೊಯ್ದ ಶಾಂತಾರಾಮ ಸಿದ್ದಿ ಪುಟ್ಟ ಮನೆಯ ಗೋಡೆಗೆ ತಗಲಿ ಕುಳ್ಳಿರಿಸಿದ ದೇವರ ಫೋಟೋದೊಂದಿಗೆ ಭಾರತಮಾತೆ, ಡಾಕ್ಟರ್‌ಜಿ, ಗುರೂಜಿ ಭಾವಚಿತ್ರಗಳೆದುರು ಕೈಮುಗಿದು ನಿಂತು ಭಾವುಕರಾಗಿದ್ದರು. ಮರುದಿವಸ ಪ್ರಜಾವಾಣಿಯಲ್ಲಿ, ಕಮಲದಲ್ಲಿ, ಅರಳಿದ ಕಾಡ ಕುಸುಮ ಎಂಬ ಶೀರ್ಷಿಕೆಯಲ್ಲಿ ನಾನೊಂದು ಲೇಖನ ಬರೆದಿದ್ದೆ.



➡ಪುಟ ೭

ಉಪ ಚುನಾವಣೆ ಮುಸ್ಲಿಂ ಆಕ್ರೋಶ

▸ **ಪವಮಾನ ಐರಣಿ**

• **ದಾವಣಗೆರೆ:** 500 ರೂ., ಹಾಫ್ ಬಿರಿಯಾನಿಗೆ ಮತ ಹಾಕುವವರು ಎಂಬ ಮುಖಂಡರೊಬ್ಬರ ಹೇಳಿಕೆ ಮುಸ್ಲಿಮರ ಆಕ್ರೋಶ ಈ ಬಾರಿಯ ದಾವಣಗೆರೆ ದಕ್ಷಿಣ ಉಪಚುನಾವಣೆಯಲ್ಲಿ ಸ್ಫೋಟಗೊಳ್ಳಲಿದೆಯಾ? ಇಂತಹ ಹೇಳಿಕೆಯೊಂದು ಫಲಿತಾಂಶದ ದಿಕ್ಕನ್ನೇ ಬದಲಿಸಲಿದೆಯಾ?

20 ಮುಸ್ಲಿಂ ಅಭ್ಯರ್ಥಿಗಳಿಂದ ನಾಮಪತ್ರ

ಇಂತಹ ಹಲವು ಪ್ರಶ್ನೆಗಳು ದಾವಣಗೆರೆ ದಕ್ಷಿಣದ ಉಪ ಚುನಾವಣೆಗೆ ಇದೇ ಮೊದಲ ಬಾರಿಗೆ ದಾಖಲೆಯ ಸಂಖ್ಯೆಯಲ್ಲಿ ಮುಸ್ಲಿಂ ಉಮೇದುವಾರರು ನಾಮಪತ್ರ ಸಲ್ಲಿಸಿದ ನಂತರ ಕೇಳಿಬರುತ್ತಿವೆ. ಅಭ್ಯರ್ಥಿ ಆಯ್ಕೆ ಸಂಬಂಧ ಜಿಲ್ಲೆಗೆ ವೀಕ್ಷಕರಾಗಿ ಆಗಮಿಸಿದ್ದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹಾಗೂ ಮಾಜಿ ಸಚಿವ ಎಚ್.ಎಂ. ರೇವಣ್ಣ ನೇತೃತ್ವದ ಸಭೆಯಲ್ಲಿ, ಮುಸ್ಲಿಮರು 500 ರೂಪಾಯಿ, ಹಾಫ್ ಬಿರಿಯಾನಿಗೆ ಮತ ಹಾಕುವವರು ಎಂದು ಮುಖಂಡರೊಬ್ಬರು ಅವಹೇಳನ ಮಾಡಿದ್ದಾರೆ ಎನ್ನುವ ವಿಚಾರ ಕೂಡ ಸಮುದಾಯದ ಸ್ವಾಭಿಮಾನ ಕೆರಳಿಸಿದೆ ಎನ್ನಲಾಗಿದೆ.

➡ಪುಟ ೭

ಶಿಕ್ಷಕರು ಕಲಿಸಲು ಬಳಕೆ: ಸಚಿವ

• **ವಿಧಾನ ಪರಿಷತ್** : ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರನ್ನು ಬೋಧನೇತರ ಕೆಲಸಗಳಿಗೆ ನಿಯೋಜಿಸದಂತೆ ಶೀಘ್ರವೇ ಸೂಕ್ತ ಕಾನೂನು ರೂಪಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ವಿಧೇಯಕ-2026 ಅನ್ನು ಕುರಿತ ಚರ್ಚೆಯಲ್ಲಿ, ಶಿಕ್ಷಕರನ್ನು ಅನ್ಯ ಕಾರ್ಯಗಳಿಗೆ ಬಳಕೆ ಮಾಡುತ್ತಿರುವುದರಿಂದ ಸರ್ಕಾರಿ ಶಾಲಾ ಶಿಕ್ಷಣ ಕುಸಿಯುತ್ತಿದೆ ಎಂದು ಸದಸ್ಯರು



ಪಕ್ಷಾತೀತವಾಗಿ ಶಿಕ್ಷಕರ ಪರ ಧ್ವನಿ ಎತ್ತಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಜನಗಣತಿ, ಜಾತಿಗಣತಿ, ಮತದಾರರ ಪಟ್ಟಿ ಪರಿಷ್ಕರಣೆ ಸೇರಿ ಎಲ್ಲ ಸಮೀಕ್ಷೆಗಳಿಗೂ ಶಿಕ್ಷಕರನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇದರಿಂದ ಶಿಕ್ಷಣದ ಮೇಲೂ ಪರಿಣಾಮ ಬೀರುತ್ತಿದೆ. ಸುಪ್ರೀಂ ಕೋರ್ಟ್ ಆದೇಶವನ್ನು ಆಧರಿಸಿ, ಆದಷ್ಟು ಬೇಗ ವಿಧೇಯಕ ಮಂಡಿಸುತ್ತೇನೆ. ತಾವೆಲ್ಲರೂ ಬೆಂಬಲಿಸಬೇಕು ಎಂದು ಶಾಸಕರಲ್ಲಿ ಮನವಿ ಮಾಡಿದರು. ಇದಕ್ಕೂ ಮುನ್ನ ಮಾತನಾಡಿದ ಭೋಜೇಗೌಡ, ಪುಟ್ಟಣ್ಣ, ಎಸ್.ವಿ.ಸಂಕನೂರ್ ಹಾಗೂ ಶಶೀಲ್ ನಮೋಶಿ ಮತ್ತಿತರರು, ಶಿಕ್ಷಕರನ್ನು ನಾನಾ ರೀತಿಯ ಸಮೀಕ್ಷೆಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ಬೀದಿ ನಾಯಿಗಳನ್ನೂ ಗಣತಿ ಮಾಡಬೇಕೆಂಬ ಆದೇಶ ಬಂದಿದೆ. ದೇಶದ ಭವಿಷ್ಯ ರೂಪಿಸಬೇಕಾದ ಶಿಕ್ಷಕರ ಪರಿಸ್ಥಿತಿಗೆ ಎಲ್ಲಿಗೆ ಬಂದಿದೆ. ಕೇಂದ್ರ ಸರ್ಕಾರ ಜನಗಣತಿಗಾಗಿ ತರಬೇತಿ ನಡೆಯುತ್ತಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕರ್ತವ್ಯದಲ್ಲಿದ್ದೇನೆ ಎಂದರೂ ಶಿಕ್ಷಕರು, ಮುಖ್ಯ ಶಿಕ್ಷಕರನ್ನು ತಹಸೀಲ್ದಾರ್, ಜಿಲ್ಲಾಧಿಕಾರಿಗಳು ಬಿಡುತ್ತಿಲ್ಲ, ಗಣತಿ ತರಬೇತಿಗೆ ಬಾರದವರಿಗೆ ನೋಟಿಸ್ ನೀಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅದಕ್ಕೆ ಧ್ವನಿಯಾದ ಸಭಾಪತಿ ಬಸವರಾಜ್ ಹೊರಟ್ಟಿ, ಶಿಕ್ಷಕರನ್ನು ಬೇರೆ ಕಾರ್ಯಗಳಿಗೆ ನಿಯೋಜನೆ ಮಾಡಬೇಡಿ. ಈ ಬಗ್ಗೆ ಕಾನೂನು ತನ್ನಿ ಎಂದು ಸೂಚಿಸಿದರು.

ಗ್ರೂಪ್ ಫೋಟೋ



16ನೇ ವಿಧಾನಸಭೆಯ ಸದಸ್ಯರ ಜತೆ ವಿಧಾನಸೌಧ ಮುಂಭಾಗದಲ್ಲಿ ಏರ್ಪಡಿಸಲಾಗಿದ್ದ ಗ್ರೂಪ್ ಫೋಟೋ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪೀಕರ್ ಯು.ಟಿ. ಖಾದರ್, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ್, ರಾಮಲಿಂಗಾರೆಡ್ಡಿ, ಲಕ್ಷ್ಮಿ ಹೆಬ್ಬಾಳ್ಕರ್ ಸೇರಿದಂತೆ ಹಲವು ಸಚಿವರು, ಶಾಸಕರು ಇದ್ದರು.

ಪಕ್ಷದ ತೀರ್ಮಾನಕ್ಕೆ ಬದ್ಧ: ಸಿಎಂ

• **ವಿಧಾನಸಭೆ:** ನಮ್ಮ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುವವರೆಗೆ ನಾನೇ ಮುಖ್ಯಮಂತ್ರಿ ಆಗುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ಆಯವ್ಯಯ ಅಂದಾಜುಗಳ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಅವರು ಉತ್ತರ ನೀಡುತ್ತಿದ್ದ ವೇಳೆ, ಪ್ರತಿಪಕ್ಷ ನಾಯಕ ಆರ್.ಅಶೋಕ, ಸಭಾಧ್ಯಕ್ಷರು ಶಾಸಕರ ಗ್ರೂಪ್ ಫೋಟೊ ತೆಗೆಸಿದ್ದಾರೆ. ಅವರ ಬಗ್ಗೆಯೇ ಅನುಮಾನ ಮೂಡಿದೆ. ಐದು ವರ್ಷಕ್ಕೊಮ್ಮೆ ಫೋಟೊ ತೆಗೆಸುವುದು ಸಂಪ್ರದಾಯ. ಹೊಸ ಕಿಟಕಿ, ಬಾಗಿಲುಗಳನ್ನು ಮಾಡಿಸಿದ್ದಾರೆ. ಅಧ್ಯಕ್ಷರು ಯಾವಾಗ ಹೋಗುತ್ತಾರೋ ಹೇಳಿ ಎಂದು ಮುಖ್ಯಮಂತ್ರಿಗಳನ್ನು ಪ್ರಶ್ನಿಸಿದರು.



ಆಗ ಸಿಎಂ ಮಾತನಾಡಿ, 2028ರ ಚುನಾವಣೆಯಲ್ಲೂ ಗೆಲ್ಲುತ್ತಾರೆ, ಅವರು ಸ್ಪರ್ಧಿಸುವ ಎಲ್ಲಾ ಚುನಾವಣೆಯಲ್ಲಿ ಗೆಲ್ಲುತ್ತಾರೆ. ನೀವು ಏನೇ ಕಿತಾಪತಿ ಮಾಡಿದರೂ ಜಾಕ್ ಹಾಕಿ ಎತ್ತಿದರೂ ಅವರು ಮನ್ನಣೆ ಕೊಡುವುದಿಲ್ಲ ಎಂದರು. ಆಗ ಅಶೋಕ, ಅವರ ಕನಸುಗಳು ಎಂದು ಮರು ಪ್ರಶ್ನಿಸಿದರು. ಮಾತು ಮುಂದುವರೆಸಿದ ಸಿದ್ದರಾಮಯ್ಯ, ಅವರು ಸಚಿವರಾಗುವುದಾದರೆ ಸಂತೋಷವೇ. ಕನಸು ಎಲ್ಲರಿಗೂ ಇದೆ. ಮುಖ್ಯಮಂತ್ರಿ ಆಗುವ ಕನಸು ನಿಮಗೆ ಇಲ್ಲವೇ? ಎಂದು ಮರು ಪ್ರಶ್ನಿಸಿದರು. ಅದಕ್ಕೆ ಉತ್ತರಿಸಲು ಅಶೋಕ ತಡವರಿಸಿದಾಗ, ಸಿದ್ದರಾಮಯ್ಯ ಮಾತು ಮುಂದುವರಿಸಿ, ಪ್ರತಿಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಅಶೋಕ ಮುಖ್ಯಮಂತ್ರಿಯಾದರೆ ಖುಷಿ ಪಡುವೆ. ಆದರೆ, ವಿಜಯೇಂದ್ರ ಅವರೂ ಕಾಯುತ್ತಾ ಕುಳಿತಿದ್ದಾರೆ. ಅವರು ಯಾರಿಗೂ ಬಿಡುವುದಿಲ್ಲ ಎಂದು ಛೇಡಿಸಿದರು.

ಬಿಜೆಪಿ ಶಾಸಕ ಸುನೀಲ್ ಕುಮಾರ್ ಮಾತನಾಡಿ, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆದರೂ ಸಂತೋಷ ಎಂದು ಹೇಳಲಿಲ್ಲ, ಹಾಗೆ ಹೇಳುವಂತೆ ಸವಾಲು ಹಾಕಿದರು. ಇದಕ್ಕೆ ಉತ್ತರಿಸಿದ ಮುಖ್ಯಮಂತ್ರಿಗಳು, ರಾಜ್ಯದ ಎಲ್ಲಾ 224 ಶಾಸಕರು ಮುಖ್ಯಮಂತ್ರಿಯಾಗಲು ಅರ್ಹರಿದ್ದಾರೆ ಎಂದು ಹೇಳುವ ಮೂಲಕ ಚರ್ಚೆಗೆ ತೆರೆ ಎಳೆದರು.

ಕಿರುಸುದ್ದಿ

ವಿಧಾನಸೌಧ ಆವರಣದಲ್ಲಿ 6 ಲಕ್ಷ ರೂ. ನಗದು ಪತ್ತೆ

• **ಬೆಂಗಳೂರು:** ವಿಧಾನಸೌಧದಲ್ಲಿ ಲಕ್ಷಾಂತರ ರೂಪಾಯಿ ಹಣ ಮತ್ತು ಚಿನ್ನಾಭರಣ ಕಳ್ಳತನವಾದ ಘಟನೆ ಮಾಸುವ ಮುನ್ನವೇ, ಮತ್ತೊಂದು ದೊಡ್ಡ ಮೊತ್ತದ ನಗದು ಪತ್ತೆಯಾಗಿರುವುದು ಸಂಚಲನ ಮೂಡಿಸಿದೆ. ಬುಧವಾರ ಕೆಂಗಲ್ ಗೇಟ್ ಮೂಲಕ ವಿಧಾನಸೌಧ ಪ್ರವೇಶಿಸಲು ಯತ್ನಿಸುತ್ತಿದ್ದ ವ್ಯಕ್ತಿಯೊಬ್ಬನ ಬ್ಯಾಗ್‌ನಲ್ಲಿ ಬರೋಬ್ಬರಿ 6 ಲಕ್ಷ ರೂ. ನಗದು ಪತ್ತೆಯಾಗಿದ್ದು, ಪೊಲೀಸರು ತಕ್ಷಣ ಆತನನ್ನು ವಶಕ್ಕೆ ಪಡೆದಿದ್ದಾರೆ. ಕಾಂಗ್ರೆಸ್ ಶಾಸಕ ಯಶವಂತರಾಯಗೌಡ ಪಾಟೀಲ್ ಅವರನ್ನು ಭೇಟಿಯಾಗಲು ಬಂದಿದ್ದ ಯುವಕನ ಬ್ಯಾಗ್‌ಅನ್ನು ಭದ್ರತಾ ತಪಾಸಣೆಗೊಳಪಡಿಸಿದಾಗ ದೊಡ್ಡ ಮೊತ್ತದ ಹಣ ಬೆಳಕಿಗೆ ಬಂದಿದೆ. ನಿಯಮದ ಪ್ರಕಾರ ಇಷ್ಟು ಹಣದೊಂದಿಗೆ ಒಳಗೆ ಹೋಗುವಂತಿಲ್ಲ ಎಂದು ಪೊಲೀಸರು ಸೂಚಿಸಿದರೂ, ಶಾಸಕರನ್ನು ಭೇಟಿಯಾಗಲೇಬೇಕೆಂದು ಯುವಕ ಹಠ ಹಿಡಿದಿದ್ದ ಎನ್ನಲಾಗಿದೆ. ಪರಿಸ್ಥಿತಿಯ ಗಂಭೀರತೆ ಅರಿತ ಪೊಲೀಸರು ಆತನನ್ನು ಎಸಿಪಿ ಕೃಷ್ಣಯ್ಯ ಅವರ ಕಚೇರಿಗೆ ಕರೆದೊಯ್ದು ವಿಚಾರಣೆ ನಡೆಸಿದ್ದಾರೆ. ವಿಚಾರಣೆಯ ವೇಳೆ ಯುವಕ ತಾನು ಇಂಡಿ ಕ್ಷೇತ್ರದವನಾಗಿದ್ದು, ಶಾಸಕರಿಂದ ಲೆಟರ್ ಹೆಡ್ ಪಡೆಯಲು ಬಂದಿರುವುದಾಗಿ ತಿಳಿಸಿದ್ದಾನೆ. ಹಣದ ಬಗ್ಗೆ ಪ್ರಶ್ನಿಸಿದಾಗ, ತನ್ನ ದೊಡ್ಡಪ್ಪ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದು, ಅವರ ಚಿಕಿತ್ಸೆಗಾಗಿ ಈ ಹಣವನ್ನು ತಂದಿರುವುದಾಗಿ ಹೇಳಿಕೆ ನೀಡಿದ್ದಾನೆ.

ಹೆಚ್ಚುವರಿ ತೆರಿಗೆ ವಿಧಿಸಿಲ್ಲ: ಸಚಿವ ರಾಮಲಿಂಗಾರೆಡ್ಡಿ

• **ವಿಧಾನ ಸಭೆ:** ಜಿಬಿಎ ವ್ಯಾಪ್ತಿಯ ಆಸ್ತಿ ತೆರಿಗೆ ಪರಿಷ್ಕರಿಸಿ ವ್ಯತ್ಯಾಸದ ಮೊತ್ತಕ್ಕೆ ಬಡ್ಡಿಯನ್ನು ವಿಧಿಸಲಾಗುತ್ತಿದ್ದು, ಯಾವುದೇ ಹೆಚ್ಚುವರಿ ತೆರಿಗೆ ವಿಧಿಸಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಶಾಸಕ ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಒಟ್ಟಾರೆ 1277.6 ಕೋಟಿ ರೂ. ಸುಸ್ತಿದಾರರ ಬೇ ಬಾಕಿ ಮತ್ತು ಆಸ್ತಿ ತೆರಿಗೆ ಪರಿಷ್ಕರಣೆ ಬೇ ಬಾಕಿ ಆಸ್ತಿ ತೆರಿಗೆಯನ್ನು ವಸೂಲಾತಿ ಮಾಡಲಾಗಿದೆ ಎಂದು ತಿಳಿಸಿದರು. ನಿಗದಿಪಡಿಸಲಾಗಿರುವ ತೆರಿಗೆ ಮೇಲೆ ಯಾವುದೇ ಆಕ್ಷೇಪಣೆ ಇದ್ದಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು. ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡದೇ ಇರುವ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಉದ್ದೇಶದಿಂದ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ (ಕೆಟಿಸಿಪಿ) ಪ್ರಕರಣ 17ರ ಅಡಿಯಲ್ಲಿ ಏಕ ನಿವೇಶನಕ್ಕಾಗಿ ಅನುಮೋದನೆ ನೀಡಿ ಎ ಖಾತೆ ನೀಡಲಾಗುತ್ತಿದೆ ಎಂದು ವಿವರಿಸಿದರು.

ಆದಾಯ ಮಿತಿ ಹೆಚ್ಚಿಸಲು ಕ್ರಮ: ಮುನಿಯಪ್ಪ

• **ವಿಧಾನ ಸಭೆ:** ಆಡಳಿತ ಸುಧಾರಣೆ ಆಯೋಗವು ನೀಡಲಿರುವ ವರದಿಯನ್ನು ಪರಿಗಣಿಸಿ ಪಡಿತರ ಚೀಟಿಯ ಆದಾಯ ಮಿತಿ ಹೆಚ್ಚಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು. ಅರ್ಧ ಗಂಟೆ ಕಾಲಾವಧಿಯ ಚರ್ಚೆಯಲ್ಲಿ ಶಾಸಕ ಅಶ್ವತ್ಥನಾರಾಯಣ ಪ್ರಶ್ನೆಗೆ ಉತ್ತರಿಸಿದ ಸಚಿವರು, 1 ಲಕ್ಷ 20 ಸಾವಿರಕ್ಕೆ ಇರುವ ಬಡತನ ರೇಖೆಯ ಆದಾಯ ಮಿತಿಯನ್ನು 3 ಲಕ್ಷಕ್ಕೆ ಏರಿಸಲು ಆಡಳಿತ ಸುಧಾರಣೆ ಆಯೋಗವು ತಿಳಿಸಿದ್ದು, ಇದನ್ನು ಪರಿಗಣಿಸಿ ಸರ್ಕಾರದ ಮುಂದೆ ತರಲಾಗುವುದು ಎಂದು ತಿಳಿಸಿದರು.

ಭೂ-ದಾಖಲೆಗಳ ನಿರ್ವಹಣೆಗೆ ಕ್ರಮ: ಸಚಿವ ಮಧು ಬಂಗಾರಪ್ಪ

ಭೂಮಿ ವಿಧೇಯಕ ಮಂಡನೆ

• **ವಿಧಾನ ಪರಿಷತ್:** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿದ್ದ ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ 2026 ಅನ್ನು ಬುಧವಾರ ಮತ್ತೊಮ್ಮೆ ಮೇಲ್ಮನೆಯಲ್ಲಿ ಅಂಗೀಕರಿಸಲಾಗಿದೆ.

ಬುಧವಾರ ಮೇಲ್ಮನೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು, ಈ ವಿಧೇಯಕವನ್ನು ಪರ್ಯಾಲೋಚಿಸಿ, ಕಂದಾಯ ಇಲಾಖೆಯ ನಂತರ ಶಿಕ್ಷಣ ಇಲಾಖೆಯಲ್ಲಿಯೇ ಅತೀ ಹೆಚ್ಚು ಜಮೀನು ಹೊಂದಿದ್ದು, ಎಲ್ಲ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳ ಸ್ವತ್ತುಗಳ ನಿಖರ ಹಾಗು ಭೂ-ದಾಖಲೆಗಳ ನಿರ್ವಹಣೆ, ಒತ್ತುವರಿ ತೆರವು ಮೊದಲಾದ ಕಾರ್ಯನಿರ್ವಹಣೆಗೆ ನುರಿತ ಕಾನೂನಾತ್ಮಕ ತಂಡ ಸಹ ರಚನೆಗೆ ಈ ನೂತನ ತಿದ್ದುಪಡಿಯಲ್ಲಿ ಅವಕಾಶವಿದೆ ಎಂದರು.



ಯಾವುದೇ ಖಾಸಗಿ ಜಾಗದಲ್ಲಿ ಕನಿಷ್ಠ 12 ವರ್ಷಗಳಿಂದ ಸತತವಾಗಿ ಸರ್ಕಾರಿ ಶಾಲೆ ಅಥವಾ ಕಾಲೇಜು ನಡೆಯುತ್ತಿದ್ದರೆ, ಆ ಭೂಮಿ ಇನ್ನು ಮುಂದೆ ಅಧಿಕೃತವಾಗಿ ಸರ್ಕಾರದ ಸ್ವತ್ತಾಗಲಿದೆ. ಈ ಭೂಮಿಯ ಮೇಲೆ ಈ ಹಿಂದೆ ಇದ್ದ ಸಾಲ, ಉತ್ತರಾಧಿಕಾರ ಸೇರಿದಂತೆ ವಿವಾದಗಳನ್ನು ಸಂಪೂರ್ಣವಾಗಿ ಮುಕ್ತಗೊಳಿಸಿ ಸರ್ಕಾರದ ಹೆಸರಿಗೆ ನೋಂದಾಯಿಸಲಾಗುತ್ತದೆ ಎಂದು ತಿಳಿಸಿದರು.

ಯಾವುದೋ ಕಾಲಘಟ್ಟದಲ್ಲಿ ವಕ್ಫ್‌ಗೂ ಸಹ ಶಾಲಾ ಜಮೀನುಗಳು ಹೋಗಿರಬಹುದು, ಈ ನಿಟ್ಟಿನಲ್ಲಿ ವಕ್ಫ್ ಮಂಡಳಿ ಹಾಗೂ ಇಲಾಖಾ ಸಚಿವರಿಗೂ ಸಹ ಈ ವಿಷಯವಾಗಿ ಚರ್ಚೆ ನಡೆಸಲಾಗುವುದು ಎಂಬ ವಿಷಯವನ್ನು ಸಹ ಪ್ರಕಟಿಸಿದರು. ದಾನನೀಡಿದ ಕುಟುಂಬ ಸದಸ್ಯರನ್ನು ಆಯಾ ಶಾಲೆಯ ಎಸ್‌ಡಿಎಂಸಿ ಮಂಡಳಿಯಲ್ಲಿ ಕಡ್ಡಾಯವಾಗಿ ಸದಸ್ಯರನ್ನಾಗಿ ಮಾಡಿ ಎಂಬ ಸದಸ್ಯ ಹಣಮಂತ ನಿರಾಣಿ ಸಲಹೆ ಸೇರಿದಂತೆ ಅನೇಕ ಸಲಹೆಗಳನ್ನು ಪರಿಗಣಿಸಿ ನಿಯಮಾವಳಿ ರೂಪಿಸುವ ಸಂದರ್ಭದಲ್ಲಿ ಅಂತಿಮಗೊಳಿಸಲಾಗುವುದು ಎಂದು ಮಧು ಬಂಗಾರಪ್ಪ ತಿಳಿಸಿದರು. ಸುದೀರ್ಘ ಚರ್ಚೆಯ ನಂತರ ಮೇಲ್ಮನೆಯಲ್ಲಿ ಈ ವಿಧೇಯಕಕ್ಕೆ ಅಂಗೀಕಾರ ದೊರಕಿತು.

ಶಾಲಾ ಕಟ್ಟಡಗಳಲ್ಲಿ ಅನೈತಿಕ ಚಟುವಟಿಕೆಗಳಿಗೆ ಕಡಿವಾಣ

ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡಗಳಲ್ಲಿ ಅನೈತಿಕ ಚಟುವಟಿಕೆಗಳಿಗೆ ಶಿಕ್ಷಣ ಇಲಾಖೆ ಸಹಿಸುವುದಿಲ್ಲ, ಇನ್ನು ಮುಂದೆ ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ 2026 ಅನ್ನು ವಿಧೇಯಕದ ಮೇಲೆ ನಡೆದ ಚರ್ಚೆಯ ವೇಳೆ ಬಿಜೆಪಿ ಸದಸ್ಯ ಪಿ.ಎಚ್. ಪೂಜಾರ್ ಅವರು, ನಮ್ಮ ಕುಟುಂಬ ದಾನವಾಗಿ ನೀಡಿದ ಶಾಲೆಯ ಕಟ್ಟಡ ಈಗ ಶಿಥಿಲಾವಸ್ಥೆಗೆ ತಲುಪಿದ್ದು, ಅಲ್ಲಿ ಜೂಜಾಡುವುದು, ಮದ್ಯ ಸೇವಿಸುವುದು ಸೇರಿದಂತೆ ಆ ಸ್ಥಳ ಅನೈತಿಕ ಚಟುವಟಿಕೆಗಳ ತಾಣವಾಗಿದೆ ಎಂದು ದೂರಿದರು. ಇದಕ್ಕೆ ಉತ್ತರಿಸುವ ವೇಳೆ ಸಚಿವ ಮಧು ಬಂಗಾರಪ್ಪ, ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳಲ್ಲಿ ಈ ರೀತಿಯ ಅನೈತಿಕ ಚಟುವಟಿಕೆಗಳು ನಡೆದರೆ, ಇನ್ನು ಮುಂದೆ ಶಿಕ್ಷಣ ಇಲಾಖೆ ಸಹಿಸುವ ಪ್ರಶ್ನೆಯೇ ಇಲ್ಲ. ಇಂತಹ ಚಟುವಟಿಕೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ವಸತಿ ಶಾಲಾ ಕಟ್ಟಡಗಳ ದುರಸ್ತಿಗೆ ಒತ್ತು ನೀಡಲಿ

• **ವಿಧಾನಸಭೆ:** ವಸತಿ ಶಾಲೆಗಳ ಕಟ್ಟಡಗಳ ದುರಸ್ತಿ ಕಾಮಗಾರಿಗೆ ಹೆಚ್ಚಿನ ಒತ್ತು ನೀಡಿ, ಇಂತಹ ಶಾಲೆಗಳ ಕಟ್ಟಡಗಳ ನಿರ್ವಹಣೆ ಮಾಡದಿದ್ದರೆ ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ ತೊಂದರೆಯಾಗಲಿದೆ ಎಂಬುದನ್ನು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಗಮನಿಸಿದೆ.

ಬುಧವಾರ ಕಲಾಪದಲ್ಲಿ ಸಮಿತಿಯು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಇಲಾಖೆಯಡಿಯಲ್ಲಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಮತ್ತು ಅಲ್ಪಸಂಖ್ಯಾತರ ಕಲ್ಯಾಣ, ಹಜ್ ವಕ್ಫ್ ಇಲಾಖೆಗಳು ನಡೆಸುತ್ತಿರುವ ವಸತಿ ಶಾಲಾ-ಕಾಲೇಜುಗಳು ಹಾಗೂ ವಸತಿ ನಿಲಯಗಳಿಗೆ ಸಂಬಂಧಿಸಿದ ವರದಿ ಮಂಡಿಸಲಾಯಿತು. ವಿದ್ಯಾರ್ಥಿ ವಸತಿ ಶಾಲೆ ಅಥವಾ ವಸತಿ ನಿಲಯಗಳ ದುರಸ್ತಿ ಮತ್ತು ಹೊಸ ಕಟ್ಟಡಗಳ ನಿರ್ಮಾಣಕ್ಕೆ ಅಗತ್ಯ

» ವಿದ್ಯಾರ್ಥಿ ವಸತಿ ನಿಲಯ, ಶಾಲಾ-ಕಾಲೇಜುಗಳ ನಿರ್ಮಾಣಕ್ಕೆ ಬೇಕಾದ ನಿವೇಶನಗಳನ್ನು ಕಾಯ್ದಿರಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳಿಗೆ ಸೂಕ್ತ ಆದೇಶ ಹೊರಡಿಸಬೇಕು.

ವಾಗಿ ಬೇಕಾಗುವ ಅನುದಾನದ ವಿವರದ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಬೇಕು. ಭವಿಷ್ಯದಲ್ಲಿ ನಿರ್ಮಿಸುವ ವಸತಿ ಶಾಲೆ ಅಥವಾ ನಿಲಯಗಳ ಮೇಲ್ವಿಚಾರಣೆ ಸೋರದಂತೆ ಹೊಸ ವಿನ್ಯಾಸ(ಮಂಗಳೂರು ಮಾದರಿ)ವನ್ನು ರಚಿಸಿ, ಈ ವಿನ್ಯಾಸದ ಪ್ರಕಾರ ವಸತಿ ಶಾಲೆ ಅಥವಾ ನಿಲಯಗಳ ಕಟ್ಟಡ ಕಾಮಗಾರಿ ನಿರ್ವಹಿಸಬೇಕು. ಅವಶ್ಯಕತೆಗನುಸಾರ ಶೌಚಾಲಯ ನಿರ್ಮಾಣ, ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದರು.

ಜೂ.15ರೊಳಗೆ ಪ್ರವೇಶಾತಿ ಪ್ರಕ್ರಿಯೆ ಮುಗಿಸಿ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆ ಆಧರಿಸಿ ವಸತಿ ನಿಲಯ ಮತ್ತು ಶಾಲಾ ಕಾಲೇಜುಗಳಲ್ಲಿ ಅದರಲ್ಲೂ ಪ್ರಮುಖವಾಗಿ ಕ್ರೈಸ್ ಸಂಸ್ಥೆಯ ಶಾಲಾ ಪ್ರವೇಶಾತಿ ಪ್ರಕ್ರಿಯೆಯನ್ನು ಪ್ರತಿ ವರ್ಷ ಜೂ.15ರೊಳಗೆ ಪೂರ್ಣಗೊಳಿಸಬೇಕು. ಸರ್ಕಾರಿ ಶಾಲೆಗಳ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಿ ಈಗ ನೀಡುತ್ತಿರುವ ಶೇ.2 ಪ್ರವೇಶಾತಿಯನ್ನು ಕನಿಷ್ಠ ಶೇ.5ಕ್ಕೆ ಹೆಚ್ಚಿಸಬೇಕು. ವಿದ್ಯಾಸಿರಿ ಯೋಜನೆಯ ಮಾಸಿಕ 1500 ರೂ.ಗಳ ವಿದ್ಯಾರ್ಥಿ ವೇತನವನ್ನು ಪ್ರಸ್ತುತ ಜೀವನ ನಿರ್ವಹಣೆಗನುಸಾರ ಹೆಚ್ಚಿಸಲು ಶಿಫಾರಸ್ಸು ಮಾಡಿದೆ.

ಪಂಚಾಯತ್ ರಾಜ್ ಬಿಲ್ ಪಾಸ್

• **ವಿಧಾನ ಪರಿಷತ್** : ವಿರೋಧ ಪಕ್ಷದ ವಿರೋಧ ಮತ್ತು ಸಭಾತ್ಯಾಗದ ನಡುವೆಯೇ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ-2026 ಅನ್ನು ವಿಧಾನಪರಿಷತ್ತಿನಲ್ಲಿ ಅಂಗೀಕಾರ ಪಡೆಯಿತು.

ವಿಧೇಯಕದ ಪರ್ಯಾಲೋಚನಾ ಪ್ರಸ್ತಾವ ಮಂಡಿಸಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಭಾರತ ಸಂವಿಧಾನ 326ನೇ ಅನುಚ್ಛೇದದ ಅಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆ ನಡೆಸುವುದನ್ನು ಖಚಿತಪಡಿಸಿಕೊಳ್ಳಲು ಮತದಾರರ ಮತಪತ್ರದ ಗೌಪ್ಯತೆ, ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯವನ್ನು ಸುರಕ್ಷಿತಗೊಳಿಸಬೇಕಿದೆ ಎಂದು ಹೇಳಿದರು.

ಬಿಜೆಪಿ ಸದಸ್ಯ ಸಿ.ಟಿ. ರವಿ ಅವರು, ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ತಂತ್ರಜ್ಞಾನ ಜತೆ ಮುನ್ನುಗ್ಗುವ ಪ್ರಯತ್ನವಾಗಬೇಕು. ಕರ್ನಾಟಕ ಸರ್ಕಾರ ತೀರಾ ಹಿಂದುಳಿದಿದೆ. ನೀವು ಬ್ಯಾಲೆಟ್ ಪೇಪರ್‌ನಲ್ಲೇ ಚುನಾವಣೆ ಎದುರಿಸುವುದಾದರೆ ಬ್ಯಾಲೆಟ್‌ನಲ್ಲೇ ಚುನಾವಣೆ ನಡೆಸಿ, ಬದಲಾಗಿ ಸಾಂವಿಧಾನಿಕ ಸಂಸ್ಥೆ ಮೇಲೆ ಅಪನಂಬಿಕೆ ಸರಿಯಲ್ಲ, ಇವಿಎಂ ಮೇಲೆ ನಂಬಿಕೆ ಇಲ್ಲದಿದ್ದರೆ ರಾಜೀನಾಮೆ ಕೊಡಿ ಎಂದು ತಿಳಿಸಿದರು. ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಮಾತನಾಡಿ, ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ವೇಳೆಯಲ್ಲಿ ಇವಿಎಂ ಪ್ರಾರಂಭವಾಯಿತು. 2014ರ ಬಳಿಕ ಇವಿಎಂ ಮೇಲೆ ಆಡಳಿತ ಪಕ್ಷಕ್ಕೆ ಅಪನಂಬಿಕೆ ಶುರುವಾಗಿದೆ. ಕಾಂಗ್ರೆಸ್ ಗೆದ್ದುಕೊಂಡು ಬಂದ ವೇಳೆ ಯಾವುದೇ ಸಮಸ್ಯೆ ಆಗಿರಲಿಲ್ಲ, ಹಿಂದಿನ ದಿನಗಳ ಬ್ಯಾಲೆಟ್ ಪೇಪರ್‌ಗೆ ಮಾರುಹೋಗುವುದು ಸರಿಯೇ?, ಬ್ಯಾಲೆಟ್‌ಗೆ ಹೋದರೆ ಅದೆಷ್ಟೋ ಮರಗಳನ್ನು ತುಂಡರಿಸುವ ಪರಿಸ್ಥಿತಿ ಎದುರಾಗುತ್ತದೆ ಎಂದು ಈ ವಿಧೇಯಕವನ್ನು ವಿರೋಧಿಸಿದರು.

ಅಂತಿಮವಾಗಿ ಸ್ಪಷ್ಟನೆ ನೀಡಿದ ಪ್ರಿಯಾಂಕ್ ಖರ್ಗೆ, ಇವಿಯಂ ಕುರಿತು ವಿಶ್ವಾಸ ಕಳೆದುಕೊಂಡಿದೆ ಎಂದರೆ ಅದು ಚುನಾವಣಾ ಆಯೋಗವೇ ಕಾರ್ಯವೈಖರಿಯ ನಡೆಯಿಂದಾಗಿ. ಚುನಾವಣೆ ಆಯೋಗದ ಲೋಪದ ಬಗ್ಗೆ 2018 ರಿಂದ ಮೂರು ಬಾರಿ ಪತ್ರ ಬರೆದರೂ ಸ್ಪಂದಿಸಿಲ್ಲ, ದೇಶದ ಇತರೆ ರಾಜ್ಯಗಳಲ್ಲಿ ಬ್ಯಾಲೆಟ್ ಪೇಪರ್ ಬಳಕೆಯಿದೆ. ಇಷ್ಟೇ ಅಲ್ಲದೆ, ವಿದೇಶಗಳಲ್ಲಿ ಇವಿಯಂ ಕುರಿತು ಆತಂಕ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು. ಇದೇ ವೇಳೆ ವಿಧೇಯಕ ಕುರಿತಂತೆ ಪರ-ವಿರೋಧ ಸುದೀರ್ಘ ಚರ್ಚೆ ನಡೆಸಿದರು. ವಿಧೇಯಕ ವಿರೋಧಿಸಿ ವಿಪಕ್ಷ ಸದಸ್ಯರ ಸಭಾತ್ಯಾಗ ನಡುವೆ ಅಂತಿಮವಾಗಿ ಮಸೂದೆಗೆ ಅನುಮೋದನೆ ದೊರೆಯಿತು.

ಇವಿಎಂನಿಂದಲೇ ಗೆದ್ದಿರುವುದು ನೀವು

ವಿಧೇಯಕ ಸ್ವಾಗತಿಸಿ ಎಂದ ಕಾಂಗ್ರೆಸ್ ಸದಸ್ಯರು ಏರು ಧ್ವನಿಯಲ್ಲಿ ಕೂಗಿದಾಗ ತಿರುಗೇಟು ನೀಡಿದ ಜೆಡಿಎಸ್ ಸದಸ್ಯ ಭೋಜೇಗೌಡ, ಇವಿಎಂ ಮೇಲೆ ನಂಬಿಕೆಯಿಲ್ಲದ ಕಾಂಗ್ರೆಸ್‌ನವರು ಚುನಾವಣೆಯಲ್ಲಿ 140 ಸೀಟು ಗೆದ್ದು ಬಂದಿದ್ದು ಹೇಗೆ?, ಜನ ಏನ್ ಹೆಬ್ಬೆಟ್ಟು ಒತ್ತಿದ್ರಾ?, ಕಾಂಗ್ರೆಸ್‌ನವರು ನೀವು ಇದೇ ಇವಿಎಂನಿಂದಲೇ ಗೆದ್ದಿರುವುದು ಎಂದು ಆಡಳಿತ ಪಕ್ಷದ ವಿರುದ್ಧ ಕಿಡಿಕಾರಿದರು.

ನನಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ: ಸಿಎಂ

• **ವಿಧಾನಸಭೆ:** ನಾನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡವನು. ನಾನು ಯಾವತ್ತೂ ರಾಹು ಕಾಲ, ಗುಳಿಕ ಕಾಲ ನೋಡಿಲ್ಲ, ಅದನ್ನೆಲ್ಲ ನಂಬುವುದಿಲ್ಲ, ಯುಗಾದಿ, ಶಿವರಾತ್ರಿಯಲ್ಲಿ ನಾನು ಮಾಂಸ ತಿನ್ನುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದರು.



ಬುಧವಾರ ಸದನದಲ್ಲಿ ಆಯವ್ಯಯ ಕುರಿತ ಚರ್ಚೆಗೆ ಅವರು ಉತ್ತರ ನೀಡುವ ವೇಳೆ, ಮಧ್ಯಪ್ರವೇಶಿಸಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರಿಗೆ ಪ್ರತಿಕ್ರಿಯಿಸಿದರು. ಅದಕ್ಕೂ ಮೊದಲು ಅಶೋಕ ಅವರು, ಸಿದ್ದರಾಮಯ್ಯ ಅವರು ಕರ್ಮ ಸಿದ್ಧಾಂತದ ಬಗ್ಗೆ ಮಾತನಾಡುತ್ತಾರೆ. ಆದರೆ, ರಾಹುಕಾಲ ಬಿಟ್ಟು ಬಜೆಟ್ ಮಂಡನೆ ಮಾಡಿದ್ದಾರೆ. ಹೇಳುವುದು ಒಂದು ಮಾಡುವುದು ಇನ್ನೊಂದು ಎಂದು ಕಾಲೆಳೆದರು.

ಇದಕ್ಕೆ ಸ್ಪಷ್ಟನೆ ನೀಡಿದ ಸಿದ್ದರಾಮಯ್ಯ, ಹೌದು ನಿಮ್ಮಂಥವರ ಮಾತು ಕೇಳಬೇಕಲ್ಲ, ನಮ್ಮ ಮನೆಯವರು ಹಾಗೂ ಅಧಿಕಾರಿಗಳು ಈ ಬಗ್ಗೆ ಹೇಳಿದರು. ರಾಹುಕಾಲದಲ್ಲಿ ಬಜೆಟ್ ಮಂಡಿಸುವುದು ಬೇಡ ಎಂದಿದ್ದರು. ಇವತ್ತು ಕೂಡ ನಾನು ರಾಹುಕಾಲ, ಗುಳಿಕ ಕಾಲ ನಂಬುವುದಿಲ್ಲ, ಹಿಂದೆಯೂ ನಾನು ರಾಹುಕಾಲ ಗುಳಿಕಕಾಲದಲ್ಲೇ ಬಜೆಟ್ ಮಂಡಿಸಿದ್ದೇನೆ. ಬೇಕಾದರೆ ತೆಗೆದು ನೋಡಿ ಎಂದರು. ಈ ವೇಳೆ ಮತ್ತೆ ಮಧ್ಯಪ್ರವೇಶ ಮಾಡಿದ ಅಶೋಕ, ಅವತ್ತಿನ ಪರಿಸ್ಥಿತಿ ಬೇರೆ ಇತ್ತು, ಇವತ್ತಿನ ಪರಿಸ್ಥಿತಿ ಬೇರೆ ಇದೆ. ಮುಂದಿನ ಬಜೆಟ್ ನೀವೇ ಮಂಡಿಸಬೇಕಲ್ವಾ? ಅದಕ್ಕೆ ಕಾಲ ನೋಡಿ ಬಜೆಟ್ ಮಂಡನೆ ಮಾಡಲಾಗಿದೆ ಎಂದು ಕಿಚಾಯಿಸಿದರು. ನಾನು ಯಾವತ್ತೂ ರಾಹು ಕಾಲ, ಗುಳಿಕ ಕಾಲ ನೋಡಿಲ್ಲ, ಅದನ್ನೆಲ್ಲ ನಂಬುವುದಿಲ್ಲ, ಯುಗಾದಿ, ಶಿವರಾತ್ರಿಯಲ್ಲಿ ನಾನು ಮಾಂಸ ತಿನ್ನುತ್ತೇನೆ. ಇದರಲ್ಲಿ ತಪ್ಪು ಏನಿದೆ? ಎಂದು ತಿರುಗೇಟು ನೀಡಿದರು.

ನಾನು ದೇವರು ಇದ್ದಾನೆ ಎಂದು ನಂಬಿದ್ದೇನೆ. ಆದರೆ ದೇವಸ್ಥಾನದಲ್ಲಿ ಮಾತ್ರ ಅಲ್ಲ, ದೇವರು ಎಲ್ಲಾ ಕಡೆ ಇದ್ದಾನೆ. ನಾನು ಯಾವುದೇ ಮೂಢನಂಬಿಕೆಗಳನ್ನು ಬೆಂಬಲಿಸುವುದಿಲ್ಲ, ಶಿಕ್ಷಣ ವ್ಯವಸ್ಥೆಯಲ್ಲಿ ವೈಚಾರಿಕತೆ ಮತ್ತು ವೈಜ್ಞಾನಿಕತೆ ಇರಬೇಕು. ಆದ್ದರಿಂದ ನಮ್ಮ ಸರ್ಕಾರ ಮೂಢನಂಬಿಕೆ ನಿಷೇಧ ಕಾಯ್ದೆ ಜಾರಿಗೆ ತಂದಿತು ಎಂದು ಸಿದ್ದರಾಮಯ್ಯ ಹೇಳಿದರು.

271 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ: ಛಲವಾದಿ

• **ವಿಧಾನ ಪರಿಷತ್:** ಅಧಿವೇಶನ ಆರಂಭದ ದಿನದಿಂದ ಮಾ.24 ರವರೆಗೆ ಒಟ್ಟು 271 ಪ್ರಶ್ನೆಗಳಿಗೆ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಮೇಲ್ಮನೆಯಲ್ಲಿ ಈ ಕುರಿತು ಮಾತನಾಡಿದ ಅವರು, ನಗರಾಭಿವೃದ್ಧಿ ನಗರ ಯೋಜನೆ ಇಲಾಖೆಯಲ್ಲೇ 41 ಪ್ರಶ್ನೆಗಳಿಗೆ ಇಲಾಖೆ ಅಧಿಕಾರಿಗಳು ಉತ್ತರ ನೀಡಿಲ್ಲ, ಬೃಹತ್ ಮಧ್ಯಮ ಕೈಗಾರಿಕಾ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ 28 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ, ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯಲ್ಲಿ 30 ಪ್ರಶ್ನೆಗಳಿಗೆ ಉತ್ತರವೇ ಇಲ್ಲ, ಮುಖ್ಯಮಂತ್ರಿ ಅವರು ನಿಭಾಯಿಸುತ್ತಿರುವ ಇಲಾಖೆಗಳಿಂದ ಒಟ್ಟು 11 ಪ್ರಶ್ನೆಗಳಿಗೆ ಉತ್ತರ ನೀಡಿಲ್ಲ ಎಂದು ಕಿಡಿಕಾರಿದರು.

ಹಸ್ತಪ್ರತಿ ಅಧ್ಯಯನಕ್ಕೆ ಪ್ರಾಧಿಕಾರ ರಚನೆ ಉದ್ದೇಶ ಸರಿ: ಸಿ.ಟಿ. ರವಿ

ಡಿಜಿಟಲೀಕರಣ ವಿಧೇಯಕ ಅಂಗೀಕಾರ

• **ವಿಧಾನ ಪರಿಷತ್:** ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2026ನೇ ಸಾಲಿನ ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣ ವಿಧೇಯಕ ಕವು ಸದಸ್ಯರುಗಳ ವಿಸ್ತೃತ ಚರ್ಚೆಯ ನಂತರ ಸರ್ವಾನುಮತದಿಂದ ಅಂಗೀಕಾರವಾಯಿತು.



ಈ ವಿಧೇಯಕ ಕುರಿತು ಮಾತನಾಡಿದ ಕಾನೂನು, ನ್ಯಾಯ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಅವರು, ನಮ್ಮ ರಾಜ್ಯದಲ್ಲಿರುವ ಹಸ್ತಪ್ರತಿಗಳನ್ನು ಸಮೀಕ್ಷೆ ಮಾಡುವುದು. ದಾಖಲೆಗಳನ್ನು ಸಂರಕ್ಷಣೆ ಮಾಡುವುದು, ಡಿಜಿಟಲೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯಗೊಳಿಸುವ ಉದ್ದೇಶದಿಂದ ಹಸ್ತಪ್ರತಿ ಪ್ರಾಧಿಕಾರ ಸ್ಥಾಪಿಸಲು ಈ ವಿಧೇಯಕದ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಹಸ್ತಪ್ರತಿಗಳ ದಾಖಲೆಗಳ ಮಾಲೀಕತ್ವವನ್ನು ಬದಲಾಯಿಸಲಾಗುವುದಿಲ್ಲ, ಡಿಜಿಟಲೀಕರಣ ಮಾಡಿ ವಾಪಸ್ಸು ಮಾಲೀಕರಿಗೆ ನೀಡಲಾಗುವುದು. ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣವನ್ನು ಸರಿಯಾಗಿ ಮಾಡಿದಾಗ ಜ್ಞಾನಭಂಡಾರವನ್ನು ಸರಕ್ಷಣೆ ಮಾಡಿದಂತಾಗುತ್ತದೆ. ಮುಂದಿನ ಪೀಳಿಗೆಗೂ ನೀಡಿದಂತಾಗುತ್ತದೆ. ಜಗತ್ತಿನಲ್ಲಿ ಕನ್ನಡ ಜ್ಞಾನಸಂಪನ್ನವಾಗುತ್ತದೆ ಎಂದು ಸಚಿವರು ವಿವರಿಸಿದರು.

ಈ ವೇಳೆ ಬಿಜೆಪಿ ಸದಸ್ಯ ಸಿ.ಟಿ. ರವಿ, ಪುರಾತತ್ವ ಇಲಾಖೆಯೇ ಸಿಬ್ಬಂದಿ ಕೊರತೆ, ಅನುದಾನ ಕೊರತೆಯಿಂದ ನರಳುತ್ತಿದೆ. ಒಂದರ್ಥದಲ್ಲಿ ಐಸಿಯುನಲ್ಲಿದೆ. ಇದನ್ನು ಬಲಪಡಿಸುವುದನ್ನು ಬಿಟ್ಟು ಹಸ್ತಪ್ರತಿ ಸಂಗ್ರಹಣೆಗಾಗಿ ಪ್ರತ್ಯೇಕ ಪ್ರಾಧಿಕಾರದ ಔಚಿತ್ಯವೇನು, ಹಸ್ತಪ್ರತಿ ಅಧ್ಯಯನಕ್ಕೆ ಪ್ರಾಧಿಕಾರ ರಚನೆ ಉದ್ದೇಶ ಸರಿ ಇದೆ. ಆದರೆ ಈಗಾಗಲೇ ಪುರಾತತ್ವ ಇಲಾಖೆ ಅನುದಾನ ಕೊರತೆಯಿಂದ ಬಳಲುತ್ತಿದೆ. ಸಿಬ್ಬಂದಿ ಕೊರತೆಯೂ ಅಧಿಕವಾಗಿದೆ. ಮತ್ತೊಂದೆಡೆ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಬಳ ನೀಡದೇ ಮುಚ್ಚುವಂತಹ ಪರಿಸ್ಥಿತಿ ಎದುರಾಗಿದೆ. ಹೀಗಿರುವಾಗ ಇನ್ನೊಂದು ಪ್ರಾಧಿಕಾರ ಅಗತ್ಯವಿದೆಯೇ? ಎಂದು ಪ್ರಶ್ನಿಸಿದರು.


ದಾನಿಗಳ ನೆರವು

ಇದಕ್ಕೆ ಉತ್ತರಿಸಿದ ಸಚಿವರು, ಪುರಾತತ್ವ ಸ್ಥಳಗಳ ಅಭಿವೃದ್ಧಿಗೆ ದೇಶದಲ್ಲಿ ನೆಲೆಸಿರುವ ಅನೇಕ ದಾನಿಗಳು ಕೋಟಿ ರೂ.ವರೆಗೆ ಹಣವನ್ನು ದಾನದ ರೂಪದಲ್ಲಿ ನೀಡಿದ್ದಾರೆ. ಇದೇ ರೀತಿ ಪ್ರಾಧಿಕಾರಕ್ಕೂ ಸಹ ಬೇರೆ-ಬೇರೆ ಸಂಪನ್ಮೂಲ, ದಾನಿಗಳ ನೆರವು ಪಡೆದು ಕಾರ್ಯಗತಗೊಳಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು. ಈ ಸುದೀರ್ಘ ಚರ್ಚೆಯ ನಂತರ ಕರ್ನಾಟಕ ಜ್ಞಾನ ಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣ ವಿಧೇಯಕಕ್ಕೆ ಅಂಗೀಕಾರ ದೊರೆಯಿತು.

ಸಭಾಪತಿ ಪೀಠದಿಂದ ಅಧಿಕಾರಿಗಳಿಗೆ ಬಸವರಾಜ ಹೊರಟ್ಟಿ ಸೂಚನೆ

ಬೀದರ್ ಡಿಸಿ ನನ್ನ ಕಚೇರಿಗೆ ಹಾಜರಾಗಲಿ

• **ವಿಧಾನ ಪರಿಷತ್:** ಮೇಲ್ಮನೆ ಸದಸ್ಯರಾಗಿ ನಾಲ್ಕೂವರೆ ವರ್ಷ ಕಳೆದರೂ ಕಾಂಗ್ರೆಸ್ ಸದಸ್ಯ ಭೀಮರಾವ್ ಪಾಟೀಲ್ ಅವರಿಗೆ ಈವರೆಗೂ ಕಚೇರಿ ನೀಡಲು ಬೇಜವಾಬ್ದಾರಿ ಅನುಸರಿಸುತ್ತಿರುವ ಬೀದರ್ ಜಿಲ್ಲಾಧಿಕಾರಿ, ಕಡ್ಡಾಯವಾಗಿ ನನ್ನ ಕಚೇರಿ ಯಲ್ಲಿ ಹಾಜರಿರಬೇಕು. ಇಲ್ಲವಾದರೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಭಾಪತಿ ಬಸವರಾಜ ಹೊರಟ್ಟಿ ಪೀಠದಿಂದ ರೂಲಿಂಗ್ ನೀಡಿದರು.



ಬುಧವಾರ ಕಲಾಪ ಆರಂಭವಾಗುತ್ತಿದ್ದಂತೆ ಈ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಸದಸ್ಯ ಪುಟ್ಟಣ್ಣ, ಇತ್ತೀಚೆಗೆ ದಿನಗಳಲ್ಲಿ ಪರಿಷತ್ ಸದಸ್ಯರಿಗೆ ಅವಮಾನ ಆಗುತ್ತಿದೆ. ಭೀಮರಾವ್ ಅವರು ಶಾಸಕರಾಗಿ ನಾಲ್ಕೂವರೆ ವರ್ಷವಾದರೂ ಬೀದರ್ ಜಿಲ್ಲಾಧಿಕಾರಿ ಅವರಿಗೆ ಇನ್ನೂ ಕಚೇರಿ ಒದಗಿಸಿಕೊಟ್ಟಿಲ್ಲ, ಈ ಬಗ್ಗೆ ಎಷ್ಟೇ ದೂರು ನೀಡಿದರೂ, ಹಕ್ಕು ಭಾದ್ಯತಾ ಸಮಿತಿಯಿಂದ ಶಿಫಾರಸ್ಸು ಮಾಡಿದರೂ, ಈ ಬಗ್ಗೆ ಜಿಲ್ಲಾಧಿಕಾರಿ ನಿರ್ಲಕ್ಷ್ಯ ತೋರಿದ್ದಾರೆ ಎಂದು ಅಸಮಾಧಾನ ಹೊರಹಾಕಿದರು. ಆಗ ಮೇಲ್ಮನೆಯ ಎಲ್ಲ ಪಕ್ಷಗಳ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿ, ಬೀದರ್ ಜಿಲ್ಲಾಧಿಕಾರಿಯ ಮೇಲೆ ಸೂಕ್ತ ಕ್ರಮಕ್ಕೆ ಒಕ್ಕೊರಲಿನಿಂದ ಒತ್ತಾಯಿಸಿದರು.

ಸದಸ್ಯ ಪುಟ್ಟಣ್ಣ ಅವರು, ಸಭಾಪತಿ ಕಚೇರಿಯಿಂದ 2023ರ ಸೆ.14 ರಂದು ಪತ್ರ ಬರೆದು ಭೀಮರಾವ್ ಪಾಟೀಲ್ ಅವರಿಗೆ ಕಚೇರಿ ನೀಡುವಂತೆ ತಿಳಿಸಲಾಗಿದೆ. ಅಲ್ಲದೇ ಬೀದರ್‌ನಲ್ಲಿಯೇ ನಡೆದ ಹಕ್ಕು ಭಾದ್ಯತಾ ಸಮಿತಿ ಸಭೆ ಸೇರಿ ಪಾಟೀಲ್ ಅವರಿಗೆ ಕಚೇರಿ ನೀಡುವಂತೆ ಸೂಚನೆ ನೀಡಿತ್ತು. ಆದರೆ, ಭೀಮರಾವ್ ಪಾಟೀಲ್ ಅವರಿಗೆ ಈವರೆಗೆ ಕಚೇರಿ ಒದಗಿಸಿಲ್ಲ, ಕೂಡಲೇ ಜಿಲ್ಲಾಧಿಕಾರಿಗೆ ಸಮನ್ಸ್ ನೀಡಿ ವಿಚಾರಿಸಬೇಕು. ಇಲ್ಲವಾದಲ್ಲಿ, ಸದನಕ್ಕೆ ಕರೆಸಿ ಛೀಮಾರಿ ಹಾಕಿ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದರು.

ಮೂರು ಬಾರಿ ಪತ್ರ

ನಾಲ್ಕೂವರೆ ವರ್ಷದಿಂದ ಜನರ ಕೆಲಸ ಮಾಡಲು ಅನುಕೂಲವಾಗುವಂತೆ ಬೀದರ್ ತಾಲೂಕಿನಲ್ಲಿ ಕಚೇರಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಮೂರು ಬಾರಿ ಪತ್ರ ಬರೆದರೂ ಪ್ರಯೋಜನವಾಗಿಲ್ಲ ಎಂದು ಭೀಮರಾವ್ ಪಾಟೀಲ್ ಎಂದರು.

ಸರ್ಕಾರ ಗಂಭೀರ ಚರ್ಚೆ

ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಮುಖ್ಯ ಕಾರ್ಯದರ್ಶಿಗಳ ಮುಖಾಂತರ ಇದರ ಸಂಬಂಧ ವಿವರಣೆ ಕೇಳಿ, ಜಿಲ್ಲಾಧಿಕಾರಿಯನ್ನು ಗುರುವಾರ ನಿಮ್ಮ ಕಚೇರಿಗೆ ಹಾಜರಾಗುವಂತೆ ನಿರ್ದೇಶನ ನೀಡಲಾಗುವುದು ಎಂದು ಸಭಾನಾಯಕ ಭೋಸರಾಜ್ ಭರವಸೆ ನೀಡಿದರು.

ಪ್ರತಿಭಟನಾ ಮೆರವಣಿಗೆ| ತಹಶೀಲ್ದಾರ್ ಮೂಲಕ ಸಿಎಂಗೆ ಮನವಿ

ಭೂಸ್ವಾಧೀನಕ್ಕೆ ವಿರೋಧ



• **ದೊಡ್ಡಬಳ್ಳಾಪುರ:** ತಾಲ್ಲೂಕಿನ ದೊಡ್ಡಬೆಳವಂಗಲ ಹೋಬಳಿಯಲ್ಲಿ 2100 ಎಕರೆ ಕೃಷಿ ಭೂಮಿಯನ್ನು ಕೈಗಾರಿಕಾ ಅಭಿವೃದ್ಧಿಗೆ ಕೆಐಎಡಿಬಿಯ ವಿವೇಚನಾರಹಿತವಾದ ಮತ್ತು ಬಲವಂತದ ಭೂ-ಸ್ವಾಧೀನಕ್ಕೆ ದೊಡ್ಡಬೆಳವಂಗಲ, ಚಿಕ್ಕಬೆಳವಂಗಲ, ಸೊಣ್ಣೇನಹಳ್ಳಿ, ನಾರನಹಳ್ಳಿ, ರಾಂಪುರ ಗ್ರಾಮಗಳ ರೈತರು ತೀವ್ರ ವಿರೋಧ ವ್ಯಕ್ತಪಡಿಸಿದರು.

ಬುಧವಾರ ಚಿಕ್ಕಬೆಳವಂಗಲ ಗ್ರಾಮದಿಂದ ದೊಡ್ಡಬೆಳವಂಗಲ ಗ್ರಾಮದವರೆಗೆ ಪ್ರತಿಭಟನಾ ರ‍್ಯಾಲಿ ಮಾಡಿ ತಹಶೀಲ್ದಾರ್ ಮಲ್ಲಪ್ಪ ಮೂಲಕ ಸಿಎಂ ಸಿದ್ದರಾಮಯ್ಯಗೆ ಮನವಿ ಸಲ್ಲಿಸುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಸನ್ನ ಮಾತನಾಡಿ, ರೈತರ ಅಭಿಪ್ರಾಯ ಪಡೆಯದೆ, ಸ್ಥಳೀಯ ಪಂಚಾಯ್ತಿಯನ್ನು ಲೆಕ್ಕಿಸದೆ, ಪರಿಸರ ಮತ್ತು ಜೀವವೈವಿಧ್ಯದ ಸಮತೋಲನವನ್ನು ಪರಿಗಣಿಸದೆ ರೈತರ ಕೃಷಿ ಜಮೀನಿಗೆ ಲಗ್ಗೆ ಹಾಕುವುದು, ಭೂ-ಸ್ವಾಧೀನಕ್ಕೆ ನೋಟಿಸ್ ನೀಡುವುದು ಕೆಐಎಡಿಬಿಯ ಕೆಟ್ಟ ಚಾಳಿಯಾಗಿದೆಂದು ಟೀಕಿಸಿದರು. ಕೈಗಾರಿಕಾ ಸ್ಥಾಪನೆಯ ಹೆಸರಿನಲ್ಲಿ ಕೆಐಎಡಿಬಿ ಈಗಾಗಲೇ ವಶಪಡಿಸಿಕೊಂಡಿರುವ ಭೂಮಿ ಇನ್ನೂ ಖಾಲಿ ಬಿದ್ದಿದೆ. ಅಲ್ಲೆಲ್ಲ ಇನ್ನು ಕೈಗಾರಿಕೆಗಳು ಸ್ಥಾಪನೆಯಾಗಬೇಕಿದೆ. ಕೈಗಾರಿಕಾ ಸ್ಥಾಪನೆಗೆಂದು ವಶಪಡಿಸಿಕೊಂಡ ಭೂಮಿಯನ್ನು ಬಿಲ್ಡರ್‌ಗಳಿಗೆ, ವಿಶ್ವವಿದ್ಯಾಲಯಗಳಿಗೆ, ಕೈಗಾರಿಕೇತರ ಉದ್ದೇಶಗಳಿಗೆ ಮಾರಿರುವ ಉದಾಹರಣೆಗಳೂ ನಮ್ಮ ಮುಂದಿವೆ ಎಂದು ಕಿಡಿಕಾರಿದರು.

ಪ್ರಾಂತ ರೈತ ಸಂಘದ ಉಪಾಧ್ಯಕ್ಷೆ ಪ್ರಭಾ ಬೆಳವಂಗಲ, ಎಸ್‌ಟಿಆರ್‌ಆರ್ ರಸ್ತೆ ಮತ್ತು ಕ್ವಿನ್ ಸಿಟಿಗೆ ಹೊಂದಿಕೊಂಡಿರುವ ಈ ಜಮೀನುಗಳು ಖಾಲಿ ಇವೆ ಎಂಬ ಸುಳ್ಳು ವರದಿಯನ್ನು ಸರ್ಕಾರಕ್ಕೆ ನೀಡಲಾಗಿದೆ. ತಿಪ್ಪಗೊಂಡನಹಳ್ಳಿ ಜಲಾನಯನ ಪಾತ್ರದ ಅರ್ಕಾವತಿ, ಕುಮದ್ವತಿ ನದಿಗಳಿಂದ ಸುತ್ತುವರೆದ ಜಮೀನುಗಳು ಇದರಲ್ಲಿವೆಂದರು.

ಇಲ್ಲಿನ ಸುಮಾರು ಅರ್ಧಕ್ಕು ಹೆಚ್ಚು ಭೂ ಭಾಗದಲ್ಲಿ ಅಡಿಕೆ ತೋಟ, ತೆಂಗಿನ ತೋಟ, ಮಾವು, ದ್ರಾಕ್ಷಿ, ಹಣ್ಣು- ತರಕಾರಿಗಳ ತೋಟಗಳಿವೆ. ಉಳಿದ ಭಾಗದಲ್ಲಿ ರಾಗಿ, ಜೋಳ, ಮಳೆಯಾಶ್ರಿತ ಬೆಳೆಯನ್ನು ಬೆಳೆಯುವರು. ಸುಮಾರು 50ಕ್ಕೂ ಹೆಚ್ಚು ಕುಕ್ಕುಟ ಫಾರಂಗಳು ಇವೆ. ಪ್ರತಿ ಗ್ರಾಮದಿಂದಲು ದಿನವೊಂದಕ್ಕೆ ಸರಾಸರಿ ಒಂದು ಸಾವಿರ ಲೀಟರ್ ಹಾಲನ್ನು ನಗರಕ್ಕೆ ಪೂರೈಸಲಾಗುತ್ತಿದೆ. ಇದಕ್ಕೆ ಪೂರಕವಾಗಿ ಮೇವಿನ ಬೆಳೆಗಳನ್ನು ಇಲ್ಲಿ ಬೆಳೆಯಲಾಗುತ್ತಿದೆಂದರು.

ಕುರಿ, ಮೇಕೆ, ಕೋಳಿ ಸಾಕಾಣಿಕೆಗಳು ನೂರಾರು ಕುಟುಂಬಗಳ ಆದಾಯದ ಮೂಲಗಳಾಗಿವೆ. ಈಗಾಗಲೇ ದೊಡ್ಡಬಳ್ಳಾಪುರ ರಸ್ತೆಯಿಂದ ಸೋಂಪುರ ರಸ್ತೆವರೆಗಿನ ದೊಡ್ಡಬೆಳವಂಗಲ ಹೋಬಳಿಯ 5,800 ಎಕರೆ ಭೂಮಿಯನ್ನು ಕ್ವಿನ್ ಸಿಟಿಗೆ ವರಬಾರೆ ಮಾಡಲಾಗಿದೆ. ಹೆದ್ದಾರಿ, ಸ್ಮಾರ್ಟ್ ಸಿಟಿ ಮುಂತಾದ ಹೆಸರುಗಳ ಮೂಲಕ ರೈತರಿಂದ ನೂರಾರು ಎಕರೆ ಕೃಷಿ ಯೋಗ್ಯವಾದ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲಾಗಿದೆ. ಕೃಷಿಗೆ ಬೇಕಾದ ಭೂಮಿ ಕುಗ್ಗಿ ಹೋಗಿದೆ. ಆಹಾರದ ಸ್ವಾವಲಂಬನೆಯಲ್ಲಿ ಭಾರೀ ಹೊಡೆತ ಬಿದ್ದಿದೆ ಹೀಗಾಗಿ ಇಲ್ಲಿನ ಜಮೀನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಬೇಕು ಎಂದು ಒತ್ತಾಯಿಸಿದರು.

ಬೋವಿ, ಲಂಬಾಣಿ, ಕೊರಚ, ಕೊರಮರಿಗೆ ಅನ್ಯಾಯ ಮಾಡಬೇಡಿ

ಸರಕಾರಕ್ಕೆ ಉಗ್ರ ಹೋರಾಟ ಎಚ್ಚರಿಕೆ



• **ಬೆಂಗಳೂರು:** ರಾಜ್ಯ ಸರ್ಕಾರ ಮಾ.27ರ ವಿಶೇಷ ಸಂಪುಟ ಸಭೆಯಲ್ಲಿ ಯಾರದ್ದೋ ಒತ್ತಡಕ್ಕೆ ಮಣಿದು, ತಪ್ಪು ಹೆಜ್ಜೆ ಇಟ್ಟು ಬೋವಿ, ಲಂಬಾಣಿ ಮತ್ತು ಕೊರಮ-ಕೊರಚ ಸಮುದಾಯಗಳಿಗೆ ಅನ್ಯಾಯ ಮಾಡಿದರೆ, ಸರ್ಕಾರ ವಿರುದ್ಧ ಹೋರಾಟ ನಡೆಸಲಾಗುವುದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಎಚ್ಚರಿಕೆ ನೀಡಿದೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ನೇತೃತ್ವದಲ್ಲಿ ಮಂಗಳವಾರ ಹಮ್ಮಿಕೊಂಡ ಬೆಂಗಳೂರು ಚಲೋ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಭೋವಿ, ಲಂಬಾಣಿ ಮತ್ತು ಕೊರಮ-ಕೊರಚ ಸಮುದಾಯಗಳ ರಾಜಕೀಯ ನಾಯಕರು, ಮುಖಂಡರು ಸೇರಿದಂತೆ ಸಾವಿರಾರು ಜನರು ಭಾಗವಹಿಸಿ, ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 54ಸಾವಿರ ಹುದ್ದೆಗಳ ನೇಮಕಾತಿಯನ್ನು ಹಳೆಯ ಶೇ.50ರ ಮೀಸಲಾತಿ ಅನ್ವಯಿಸಿ, ಕೂಡಲೇ ನಡೆಸಬೇಕು ಎಂಬುದು ಸೇರಿದಂತೆ ಪ್ರಮುಖ ಹಕ್ಕೊತ್ತಾಯಗಳನ್ನು ಮುಂದಿಡಿದರು. ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾತನಾಡಿ, ಪರಿಶಿಷ್ಟ ಜಾತಿಯ 101 ಸಮುದಾಯಗಳ ಒಳ ಮೀಸಲಾತಿಗೆ ಸಂಬಂಧಿಸಿದಂತೆ ನಾಗಮೋಹನ್ ದಾಸ್ ವರದಿ ಹೇಳಿರುವುದೇ ಬೇರೆ. ಆದರೆ, ಸರ್ಕಾರ ಹೊಸ ರೋಸ್ಟರ್ ಮಾಡಿರುವುದೇ ಬೇರೆ. ಎ,ಬಿ,ಸಿ ಎಂಬ ವರ್ಗೀಕರಣ ಮಾಡಿ, ಎ ವರ್ಗಕ್ಕೆಷ್ಟೇ ಆದ್ಯತೆ ನೀಡಿ, ಉಳಿದ ವರ್ಗಗಳ ಕತ್ತು ಹಿಸುಕುವುದಕ್ಕೆ ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚಿತ್ರದುರ್ಗ ಭೋವಿ ಗುರುಪೀಠದ ಶ್ರೀಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಶ್ರೀಸರ್ದಾರ್ ಸೇವಾಲಾಲ್ ಸ್ವಾಮೀಜಿ, ಶಾಸಕರಾದ ಚಂದ್ರಪ್ಪ, ಶಾರದ ಪೂರ‍್ಯಾನಾಯ್ಕ್, ಚಂದ್ರ ಲಮಾಣಿ, ಕೃಷ್ಣ ನಾಯ್ಕ್, ಮಾನಪ್ಪ ವಜ್ಜಲ್, ಮಾಜಿ ಸಂಸದರಾದ ಉಮೇಶ್ ಜಾಧವ್, ಜನಾರ್ಧನಸ್ವಾಮಿ, ಮಾಜಿ ಶಾಸಕರಾದ ರಾಜೀವ್, ಭೀಮಾ ನಾಯ್ಕ್ ಸೇರಿದಂತೆ ಇತರರಿದ್ದರು.

ಹೋರಾಟ ಅನಿವಾರ್ಯ

ರಾಜ್ಯ ಸರ್ಕಾರ ಮಾ.27ರ ವಿಶೇಷ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಜಾರಿ ಸಂಬಂಧ ಬೋವಿ, ಲಂಬಾಣಿ ಮತ್ತು ಕೊರಮ - ಕೊರಚ ಸಮುದಾಯಗಳಿಗೆ ಅನ್ಯಾಯವೆಸಗುವ ರೀತಿಯಲ್ಲಿ ತಪ್ಪು ನಿರ್ಧಾರಗಳನ್ನು ಕೈಗೊಂಡಲ್ಲಿ, ನಾಲ್ಕು ಸಮುದಾಯಗಳು ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಎಚ್ಚರಿಕೆ ನೀಡಿದೆ.

ಹಕ್ಕೊತ್ತಾಯಗಳೇನು?: ಒಳಮೀಸಲಾತಿ ಅನ್ವಯದ ಈಗಿನ ರೋಸ್ಟರ್ ಪದ್ಧತಿಯನ್ನು ಕೂಡಲೇ ಬದಲಾಯಿಸಬೇಕು. ಹಳೆಯ ರೋಸ್ಟರ್ ಅನ್ವಯ ನೇಮಕಾತಿ ಆಗಬೇಕು. ಪ.ಜಾತಿ ಮತ್ತು ಪ.ಪಂಗಡ ಜನಸಂಖ್ಯೆಗೆ ಅನುಗುಣವಾಗಿ ಕ್ರಮವಾಗಿ ಶೇ.17 ಮತ್ತು ಶೇ.7ರಷ್ಟು ಮೀಸಲಾತಿ ಶಾಶ್ವತ ಜಾರಿ ಮಾಡಲು ಸಂವಿಧಾನ ಶೆಡ್ಯೂಲ್-9ರಲ್ಲಿ ಸೇರಿಸಲು ರಾಜ್ಯ ಸರ್ಕಾರ ಸರ್ವಪಕ್ಷಗಳ ನಿಯೋಗದ ಮೂಲಕ ಕೇಂದ್ರ ಸರ್ಕಾರಕ್ಕೆ ಒತ್ತಡ ಹೇರಬೇಕು. 54ಸಾವಿರ ಹುದ್ದೆಗಳ ನೇಮಕಾತಿ ಮತ್ತು ಬ್ಯಾಕ್‌ಲಾಗ್ ಹಳೆಯ ಶೇ.50ರ ಮೀಸಲಾತಿ ಅನ್ವಯಿಸಿ, ನೇಮಕಾತಿ ನಡೆಸಲು ಕೂಡಲೇ ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಲಾಯಿತು.

ಏ.28ರಿಂದ ಮೇಕೆ ಮಾಂಸ ಸಂಸ್ಕರಣಾ ಕೇಂದ್ರ ಆರಂಭ



• **ಬೆಂಗಳೂರು:** ಶಿರಾ ತಾಲೂಕಿನ ಚೀಲನಹಳ್ಳಿಯಲ್ಲಿ ಕುರಿ ಮತ್ತು ಮೇಕೆ ಮಾಂಸ ಸಂಸ್ಕರಣಾ ಕೇಂದ್ರ ಏಪ್ರಿಲ್ 28 ರಿಂದ ಕಾರ್ಯಾರಂಭ ಮಾಡುವಂತೆ ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ವೆಂಕಟೇಶ್ ತಿಳಿಸಿದ್ದಾರೆ.

ಶಿರಾ ತಾಲೂಕಿನ ಚೀಲನಹಳ್ಳಿಯಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ವತಿಯಿಂದ ಕುರಿ ಹಾಗೂ ಮೇಕೆ ಮಾಂಸ ಸಂಸ್ಕರಣೆ ಆಧುನಿಕ ವಧಾಗಾರ ಕೇಂದ್ರ ಕಾರ್ಯಾರಂಭ ಮಾಡುವ ಕುರಿತು ವಿಕಾಸಸೌಧದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮೊದಲು ವಧಾಗಾರ ಆರಂಭಿಸಿ ಸ್ಥಳೀಯವಾಗಿ ರೈತರಿಂದ ಕುರಿ ಮೇಕೆಗಳನ್ನು ಖರೀದಿಸಿ, ಒಂದು ವೇಳೆ ನಿಮಗೆ ಕೊರತೆಯುಂಟಾದರೆ ಹೊರ ರಾಜ್ಯದಿಂದ ಖರೀದಿ ಮಾಡುವ ಬಗ್ಗೆ ಪರಿಶೀಲನೆ ಮಾಡೋಣ. ಯಾವುದೇ ಸಬೂಬುಗಳನ್ನು ಹೇಳದೆ ಏ.28ಕ್ಕೆ ವಧಾಗಾರ ಕಾರ್ಯ ಆರಂಭ ಮಾಡಬೇಕು. ಒಂದು ವೇಳೆ ಮಾಡದಿದ್ದರೆ ಶಿಸ್ತು ಕ್ರಮ ಜರುಗಿಸುವುದಾಗಿ ಪ್ರಥಮ್ ಮೀಟ್ ವರ್ಕ್ಸ್ ಅಧ್ಯಕ್ಷ ಸುದರ್ಶನ್ ಅವರಿಗೆ ಎಚ್ಚರಿಕೆ ನೀಡಿದರು. ಪ್ರಥಮ್ ಮೀಟ್ ವರ್ಕ್ಸ್ ಸಂಸ್ಥೆಯ ಅಧ್ಯಕ್ಷ ಸುದರ್ಶನ್ ಮಾತನಾಡಿ, ಆರಂಭದಲ್ಲಿ ಪ್ರತಿದಿನ ತಮಗೆ 500 ಕುರಿಹಾಗೂ ಮೇಕೆಗಳ ಅಗತ್ಯವಿದ್ದು, ಮುಂದಿನ ದಿನಗಳಲ್ಲಿ ಆ ಸಂಖ್ಯೆ ಮತ್ತಷ್ಟು ಹೆಚ್ಚಾಗುತ್ತದೆ. ಹೀಗಾಗಿ ತುಮಕೂರು ಚಿತ್ರದುರ್ಗ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಂದ ಕುರಿ ಹಾಗೂ ಮೇಕೆಗಳನ್ನು ಖರೀದಿಸಲು ಅವಕಾಶ ಮಾಡಿಕೊಡಬೇಕೆಂದು ಸಚಿವರಲ್ಲಿ ಮನವಿ ಮಾಡಿದರು.

ಏ.13ರಿಂದ ಮಕ್ಕಳಿಗೆ ಬೇಸಿಗೆ ಉಚಿತ ಶಿಬಿರ

• **ಬೆಂಗಳೂರು:** ಖ್ಯಾತ ಸಂಗೀತ ವಿದ್ವಾಂಸರು, ವಿದುಷಿಯರ ಸಂಗೀತ ಮಾರ್ಗದರ್ಶನದಲ್ಲಿ ಏ.13 ರಿಂದ 28ರವರೆಗೆ ಮಕ್ಕಳ ಉಚಿತ ಬೇಸಿಗೆ ಸಂಗೀತ ಶಿಕ್ಷಣ ಶಿಬಿರ ಆಯೋಜಿಸಲಾಗಿದೆ. ಜಯನಗರ 9ನೇ ಬಡಾವಣೆಯಲ್ಲಿರುವ ಭಾರತ - ಭಾರತೀ ಸಂಗೀತ ಸೇವಾ ಪ್ರತಿಷ್ಠಾನ (ರಿ), ಜಯನಗರ 8ನೇ ಬಡಾವಣೆಯ ಶ್ರೀ ಜಯರಾಮ ಸೇವಾ ಮಂಡಳಿ (ರಿ.), ಜಯನಗರ 3ನೇ ಬಡಾವಣೆಯ ಸುಸ್ವರ ಭಾರತೀ ಇವರುಗಳ ಸಂಯುಕ್ತಾಶ್ರಯದಲ್ಲಿ ಖ್ಯಾತ ಸಂಗೀತ ವಿದ್ವಾಂಸರು, ವಿದುಷಿಯರು ಕರ್ನಾಟಕ ಶಾಸ್ತ್ರೀಯ ಸಂಗೀತ, ತ್ರಿಮೂರ್ತಿಗಳ ಕೃತಿಗಳು, ಹರಿದಾಸರ ದೇವರನಾಮಗಳು, ಶಿವಶರಣರ ವಚನಗಳು, ದೇಶಭಕ್ತಿಗೀತೆಗಳನ್ನು ಶ್ರುತಿ, ರಾಗ, ತಾಳ ಬದ್ಧವಾಗಿ ಕಲಿಸಲಾಗುವುದು. ಆಸಕ್ತರು ಏ. 4ರ ಸಂಜೆ 8 ಗಂಟೆಯೊಳಗೆ ತಮ್ಮ ಹೆಸರನ್ನು ನೋಂದಾಯಿಸಬಹುದು. ಹೆಚ್ಚಿನ ಮಾಹಿತಿಗಾಗಿ ಬಿ.ಎಸ್. ಹರಿಪ್ರಸಾದ, ಮೊ: 89042-35300 ಅಥವಾ ಅಮಿತ ನಾಗಪ್ರಕಾಶ್ ಮೊ: 93432-95642 ಸಂಪರ್ಕಿಸಬಹುದಾಗಿದೆ.

ಪಿಂಚಣಿದಾರರ ಕಾಯ್ದೆ ಹಿಂಪಡೆಯಲು ಆಗ್ರಹ



• **ಬೆಂಗಳೂರು:** ಕೇಂದ್ರ ಸರ್ಕಾರ ಪಿಂಚಣಿದಾರರನ್ನು ವರ್ಗೀಕರಿಸಲು ಪಿಂಚಣಿದಾರರ ನಡುವೆ ವ್ಯತ್ಯಾಸವನ್ನು ಕಾಯ್ದುಕೊಳ್ಳಲು ಅಧಿಕಾರ ಹೊಂದಿದೆ ಎಂಬ ತತ್ವವನ್ನು ಮಾನ್ಯ ಮಾಡುವ ಕಾಯ್ದೆ ಜಾರಿಗೊಳಿಸಿದ್ದು, ಈ ಕಾಯ್ದೆಯನ್ನು ಕೂಡಲೇ ಹಿಂಪಡೆಯಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಒತ್ತಾಯಿಸಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣದಲ್ಲಿ, ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ನೇತೃತ್ವದಲ್ಲಿ, ಕಪ್ಪು ಪಟ್ಟಿ ಧರಿಸಿ, ಫಲಕಗಳನ್ನು ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಡಾ.ಎಲ್.ಬೈರಪ್ಪ ಬೈರಪ್ಪ ಮಾತನಾಡಿ, ಯಾವುದೇ ಪೂರ್ವ ಸೂಚನೆ ನೀಡದೆ ಹಣಕಾಸು ಮಸೂದೆ ಭಾಗವಾಗಿ 2025 ರ ಮಾ.25 ರಂದು ಲೋಕಸಭೆಯಲ್ಲಿ ವಿಧೇಯಕಕ್ಕೆ ಅಂಗೀಕಾರ ಪಡೆಯಲಾಗಿದೆಂದಿದ್ದಾರೆ. ಈ ಕಾಯ್ದೆಯನ್ನು ಜಾರಿಗೆ ತಂದರೆ ಪಿಂಚಣಿದಾರರ ನಿವೃತ್ತಿಯ ದಿನಾಂಕವು ಪಿಂಚಣಿ ಅರ್ಹತೆಗೆ ಸಂಬಂಧಿಸಿದಂತೆ ವ್ಯತ್ಯಾಸಗಳು ಹಾಗೂ ವರ್ಗೀಕರಣಕ್ಕೆ ಆಧಾರವಾಗಿರುತ್ತದೆ. ಕೇಂದ್ರ ವೇತನ ಆಯೋಗದ ಕಾರ್ಯಾಚರಣೆಯ ಅವಧಿಗೆ ಮೊದಲು ಅಸ್ತಿತ್ವದಲ್ಲಿರುವ ಪಿಂಚಣಿದಾರರು ವೇತನ ಆಯೋಗದ ಶಿಫಾರಸುಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಇದರಿಂದ ಈ ಕಾಯ್ದೆಯನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದರು. ದಿವಂಗತ ಡಿ.ಎಸ್.ನಕರ ಅವರ ಪ್ರಕರಣದಲ್ಲಿ, ಸುಪ್ರೀಂಕೋರ್ಟ್‌ನ ಅಂದಿನ ನ್ಯಾ. ಚಂದ್ರಚೂಡ್ ಅವರ ನೇತೃತ್ವದ ಪೀಠವು ಸದಸ್ಯರ ಸಂವಿಧಾನ ಪೀಠವು ಪಿಂಚಣಿಯು ಸಾಮಾಜಿಕ ಕಲ್ಯಾಣ ಕ್ರಮವಾಗಿದ್ದು, ತಮ್ಮ ವೃದ್ಧಾಪ್ಯದಲ್ಲಿ ಜೀವನ ನಡೆಸಲು ಆರ್ಥಿಕವಾಗಿ ಸಹಾಯವಾಗುತ್ತದೆ ಎಂಬ ತೀರ್ಪನ್ನು ನೀಡಿರುತ್ತದೆ. ಕೇಂದ್ರ ಸರ್ಕಾರ ಜಾರಿ ಮಾಡಿರುವ ಕಾಯ್ದೆಯು ಎಲ್ಲಾ ನಾಗರಿಕರಿಗೆ ನ್ಯಾಯ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸಲು ಶ್ರಮಿಸುವ ಸರ್ಕಾರದ ಘೋಷಿತ ಉದ್ದೇಶಗಳಿಗೆ ವಿರುದ್ಧವಾಗಿದೆ. ಸುಪ್ರೀಂ ನ್ಯಾಯಾಂಗ ಘೋಷಣೆಗೆ ವಿರುದ್ಧವಾಗಿದೆ ಎಂದರು.

ಕಾರು ಮಾಲೀಕರ ವಿರುದ್ಧದ ಪ್ರಕರಣ ರದ್ದು

• **ಬೆಂಗಳೂರು:** ದಾಖಲೆ ತಿರುಚಿ ನೋಂದಣಿ ಮಾಡುವ ಮೂಲಕ ಸರ್ಕಾರಕ್ಕೆ ತೆರಿಗೆ ವಂಚಿಸಿದ ಆರೋಪದ ಮೇಲೆ ಲ್ಯಾಂಬೋರ್ಗಿನಿ ಕಾರೊಂದರ ಮಾಲೀಕರ ವಿರುದ್ಧ ದಾಖಲಿಸಿದ್ದ ಪ್ರಕರಣವನ್ನು ಹೈಕೋರ್ಟ್ ಬುಧವಾರ ರದ್ದುಪಡಿಸಿದೆ. ಪ್ರಕರಣ ಸಂಬಂಧ ನಕಲಿ ಮತ್ತು ವಂಚನೆ ಆರೋಪದ ಮೇಲೆ ತಮ್ಮ ವಿರುದ್ಧ ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಹಾಯ್ ಕಾರ್ ಕೇರ್ ಮುಖ್ಯಸ್ಥ ಹಾಗೂ ಲ್ಯಾಂಬೋರ್ಗಿನಿ ಕಾರಿನ ಮಾಲೀಕ ಜೆ.ರಾಮಕೃಷ್ಣಯ್ಯ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಭಾಗಶಃ ಪುರಸ್ಕರಿಸಿದೆ. ರಾಜ್ಯ ಸರ್ಕಾರವು ಕಾನೂನಿನ ಅನ್ವಯ ಕ್ರಮಕೈಗೊಳ್ಳುವ ಸ್ವಾತಂತ್ರ್ಯವನ್ನು ಕಾಯ್ದಿರಿಸಿ, ಕೊಡಿಗೇಹಳ್ಳಿ ಠಾಣೆಯಲ್ಲಿ ಅರ್ಜಿದಾರರ ವಿರುದ್ಧ ದಾಖಲಿಸಿರುವ ಪ್ರಕರಣವನ್ನು ರದ್ದುಪಡಿಸಲಾಗಿದೆ. ಜಪ್ತಿ ಮಾಡಿರುವ ಪೊಲೀಸ್ ಕಸ್ಟಡಿಯಲ್ಲಿರುವ ಲ್ಯಾಂಬೋರ್ಗಿನಿ ಕಾರನ್ನು ಅರ್ಜಿದಾರರಿಗೆ ಒಂದು ವಾರದಲ್ಲಿ ಮರಳಿಸಬೇಕು. ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿರುವ ಬೆಂಗಳೂರು ದಕ್ಷಿಣದ ಹಿರಿಯ ಮೋಟಾರ್ ವಾಹನ ಇನ್ಸ್‌ಪೆಕ್ಟರ್ ವಿರುದ್ಧ ಇಲಾಖಾ ತನಿಖೆ ನಡೆಸಬೇಕು.

ಕ್ರಿಮಿನಲ್ ಮಿಸ್ ನಂ.3650/2026

[illegible]

BEFORE THE HON'BLE COURT OF PRINCIPAL SMALL CAUSES AND MACT AT MYSORE

MVC NO:248/2025

PETITIONER : Pavithra W/o Swamy M, aged around 26 years, R/O #79, 1st Ward, 2nd Cross, Halladakeri, Nanjangud Town, Mysore Dist -571301. **V/S**

RESPONDENT NO.2: Ramegowda S/o Basavegowda B.L. (Dead by LR). **RESPONDENT NO.2(a): Smt. Shantala** w/o Late Ramegowda, Aged about 50 years, R/O 110, LIG, 3rd Phase, Chikkamagalur-577102. (Owner of the Eicher Goods vehicle bearing registration no: KA-18-E-0253).

COURT NOTICE

A petitioner has filed the above case against the Respondents for seeking compensation in respect of accidental injuries sustained in the RTA that took place for the on 18-10-2024. The above said case is posted on 21-04-2026 for the appearance of the Respondent No.2(a) through Kannada daily news paper 'Hosa Digantha' Hence, the Respondent No.2(a) in the above case is heir by inform to appear before this Hon'ble Court at 11.00 a.m. on the above said date of Hering either personally or through your counsel without fail and objections to file Otherwise, you will be placed as ExParte and the case will be heard and disposed off in your absence.

Given under my hand and seal of the court.

By Order of the Court
Chief Ministerial Officer, Court of Small Causes Mysore

Sri. Mallikarjunaswamy, Advocate
Place: Mysore, Date: 24-02-2026

CHANGE OF NAME

I, N. Hariesh S/o. late Narasaiah, Aged about 57 years, residing at No.48, Anarghya Nilaya, 2nd Main, HGH Layout, Opp to BDA Park, Ganganagar, R.T. Nagar post, Bengaluru 560032, I have changed my name from N. Harish to N. Hariesh. Vide Affidavit Date 23/3/26 Advocate and notary by K C Chowda Gowda

---

ಕ್ರಿಮಿನಲ್ ಮಿಸ್. ನಂ. 2078/2026

[illegible]

BEFORE THE MOTOR ACCIDENT CLAIMS TRIBUNAL AT BENGALURU (SCCH-10)

MVC No. 4513/2025

PETITIONER: AMAR. A -V/s-

RESPONDENTS: M/s. CARRUM MOBILITY SOLUTIONS PVT LTD., & ANOTHER

NOTICE TO RESPONDENT NO. 1

M/S. CARRUM MOBILITY SOLUTIONS PVT. LTD., No. 71, 75, BSR Paradise Apartment road, Kadubeesanahalli, Panathur, Bengaluru 560103.

Take notice that the above petition is filed against you by the petitioner/s for recovery of compensation of Rs. 20,00,000/- (Rupees twenty Lakh) due to the injuries sustained by injured Amar. A in the road traffic accident which occurred on 31-05-2025 at about 04:45 P.M on Hennur - Bangalore Main Road, Opp. Southern Asia Bible College, Bengaluru City in which your Car (Cab) bearing Reg. No. KA-03-AM-6521 was involved.

The hearing of the said case is fixed to be held on **29-04-2026** You are hereby directed to appear on that day before the court, personally or through your advocate, failing which the matter will be determined ex-parte.

Given under my hand and seal of the court on this 24-03-2026.

By order of the Court, Assistant Register, Court of Small Causes, Bangalore.

Advocate for petitioner: **SHASHIKIRAN. C. BANGALORE LAW FIRM**
No. 10/1, 3rd Floor, Above Syndicate Bank, Avenue Road, Bengaluru-560002.

IN THE COURT OF THE PRINCIPAL CIVIL JUDGE AND JMFC AT ANEKAL

C.Mis.No.446/2026

BETWEEN: 1. SRI.THIPPAIAH, S/o Muniyappa (died), aged about 72 years, Residing at: Sidi Hosakote Village, Sidi Hosakote post, Anekal Taluk, Bangalore District...**PETITIONER**

AND: THE TASHILDAR, ANEKAL... **RESPONDENT**

NOTICE

Whereas, the petitioner has filed the above petition for seeking death certificate of petitioner's Mother namely **SMT. GULLAMMA** W/o Late Muniyappa, who is died on 30-08-1975 at: Sidi Hosakote Village, Sidi Hosakote post, Anekal Taluk, Bangalore District, for necessary relief, to take notice that if any interested persons in respect of death certificate of SMT. GULLAMMA W/o Late Muniyappa, are hereby called upon to appear before above said Hon'ble Court either personally or through on advocate duly instructed on **28-04-2026** at 11:00 A.M if anybody interest in this matter regard to appear in this court in personally or by a pleader to file objections the same of you faring which the petition will be disposed on enquiry.

Given under my hand the seal of this court on 25-03-2026

By order of the Court, Sheristedar, Prl. Civil Judge (Jr. Dvn) & JMFC Court, Anekal.

Advocate for Petitioner: **BRUNDA.P.**
No.3, Behind Raghavendra Bhavan, Next to PLD Bank, Attibele Road, Anekal, Bangalore-562106.

[illegible]

IN THE COURT OF MOTOR ACCIDENT CLAIMS TRIBUNAL AT BENGALURU

MVC NO. 6458/2025 (SCCH-07)

BETWEEN: Sri. Ashfan Hussain... PETITIONER

AND: Sri. Dama J & another... **RESPONDENTS**

NOTICE TO RESPONDENT NO. 1

Sri. J. Dama, S/o Late Markandeya, aged about 26 years, R/at No.294, Somappanahalli, Shakthi Nagar, Bettahalasuru, Bengaluru-560157.

Take notice that the above petitioner has filed the claim petition against the respondents for claiming the compensation of Rs.30,00,000/- for the injuries of the petitioner in a RTA, dated 18/03/2025 at about 09.15 a.m., on Bethamangala-Kolar Main Road, near Jayamangala Cross by offending Concrete Mixer Lorry bearing No.KA-01-AK-4539. The respondent No.1 above named is hereby directed to appear before this Hon'ble Court either in person or through the pleader on **02-05-2026** before SCCH-07 at 11:00 A.M., to defend the above case, failing which the matter will be determined as Ex-parte.

Given under hand and seal of the court on this 18/03/2026.

By order of the Court, Assistant Register, Court of Small Causes, Bangalore

Advocate for Petitioner: **N.M. ANANDA**
No.29/2, ASVNV Bhavana, 5th Floor, K.G. Road, Bengaluru 560 009.

ಕ್ರಿ.ಮಿಸ್ ನಂ. 68/2026

[illegible]

IN THE COURT OF DEPUTY DIRECTOR OF LAND RECORDS, BENGALURU RURAL DISTRICT AT BEERASANDRA

Survey Appeal No. 402/2025

Appellants: Thimmaiah and others -V/s-

Respondents: Assistant Director of Land Records Nelamangala and others

To, R3: Mahalakshmi K.H. W/o Srinivasamurthy, Resident of Kamalapura Village, Sompura Hobli, Nelamangala Taluk, Bangalore Rural Dist

NOTICE

The appellants preferred the appeal against respondents for relief sought in the appeal on the file of Hon'ble Deputy Director of Land Record at Bangalore Rural at Beerasandra in the Survey Appeal 402/2025 with respect to survey number 17/1 measuring 1.02.00 guntas and survey number 17/2 measuring 02.00.00 guntas and suvey no. 17/3 measuring 00.29.00 guntas and Sy.No.17/4 measuring 2.29.00 guntas and Sy.No.17/5 measuring 0.25.00 guntas and Sy.No.17/6 measuring 1.02.00 gunta situated at Kamalapura village, Sompura Hobli, Nelamangala Taluk. You are respondent no. 3 in the above appeal. Hence your appearance is required in person or through pleader on **15/04/2026** at **03:00 PM.** before the Hon'ble Deputy Director of Land Record at Bangalore Rural, Beerasandra to defend the case in default of your appearance on the day specified the case will be heard by placing the Ex-parte.

Given under my hand the seal of the court on this 24/03/2026

By order of the Court, Deputy Director of Land Records, Bengaluru Rural District at Beerasandra

Advocate for Appellants: **B. Mahesh**
Sadashivanagara, Tumakuru

[illegible]

IN THE COURT OF THE JUDGE, PRINCIPAL SMALL CAUSES AT MYSORE

M.V.C. No. 2105 OF 2023

Petitioner : Premkumar

V/S

Respondents : Kumar Nayak and Another

1. Kumar Nayak S/o Siddanayaka R/at: Yechagundlu Village, Nanjangud Taluk, Mysuru District

NOTICE TO RESPONDENT NO-1

Whereas, the petitioners have instituted the petition under Section 166 of the M.V. Act against Respondent No.1 and another, claiming compensation for the death of their father in road traffic accident. The Respondent No.1 is the R.C. owner of the said Vehicle. The Respondent no. 1 is hereby summoning to appear in this court in person or by a pleader on 21-4-26 at 11.00 AM to answer the same, failing which the above petition will be disposed off exparte.

Given under my hand and seal of this court

By Order of the Court
Chief Ministerial officer, Court of Small Causes, Mysuru

M.G. Praveenkumar, B.A., LL.B., Advocates & Legal consultants,
MGP Law Associates, Beside Jain Basadi, Jayalakshmi Kalyanamantapa Road, Srirangapatana Town, Mandya District. Mob: 9740260222

IN THE COURT OF THE JUDGE, PRINCIPAL SMALL CAUSES AT MYSORE

M.V.C. No. 2060 OF 2023

Petitioner : Umer Farooq

-V/S-

Respondents :Gavigowda.M. and Others

4.Abhijith Rabha S/o Arjun Rabha, R/at: # G.F.1, Sanjeevi Reddy Building, 3rd Cross, Manjunatha Layout, Marthalli, Bangalore -560 037

NOTICE TO RESPONDENT NO-1

Whereas, the petitioners have instituted the petition under Section 166 of the M.V. Act against Respondent No.4 and others, claiming compensation for the injuries sustained in road traffic accident. The Respondent No.4 is the R.C. owner of the said Vehicle. The Respondent No. 4 is hereby summoning to appear in this court in person or by a pleader on 18-April-2026 at 11.00 AM to answer the same, failing which the above petition will be disposed off exparte.

Given under my hand and seal of this court 13/03/26.

By Order of the Court
Chief Ministerial officer, Court of Small Causes, Mysuru

M.G. Praveenkumar, B.A., LL.B., Advocates & Legal consultants,
MGP Law Associates, Beside Jain Basadi, Jayalakshmi Kalyanamantapa Road, Srirangapatana Town, Mandya District. Mob: 9740260222

[illegible]

IN THE COURT OF THE SMALL CAUSES JUDGE AT BENGALURU (SCCH-12)

S.C. No. 996/2024

Between : Sri. C. Javerilal Mandot ...Plaintiff

And : Akram Basha ...Defendant

NAME AND ADDRESS

Summons to the Defendant :

Akram Basha, S/o. Basha Jan, R/at: No.38, Kadandaramnagar, Shivajinagar, Bangalore-560002. **And also at: Supervisor** Canteen of Gate No. 1, Bengaluru Turf Club Ltd., Race Course Road, Bengaluru-560001.

Whereas, the Plaintiff have filed the above case against defendant for the Recovery of Money of Rs. 65,000/- and other consequential relief in S.C. No. 996/2024 on the file of the Court of Small Causes (SCCH-12) at Bengaluru. You are hereby summoned to appear in this Hon'ble Court in person or by an advocate duly instructed **on 29.04.2026 at 11-00 a.m.,** to answer the claim. Take notice that in default of your appearance on the day above mentioned the suit will be heard and determined in your absence.

Given under my hand seal on this 23rd day of March 2026 at Bengaluru.

By Order of the Court, Assistant Registrar, Court of Small Causes, Bangalore.

Sri. G.S. Narayanaswamy, Advocate
No. 106, 2nd Cross, Old Police Station Road, K.R. Puram, Bangalore-560 036.

[illegible]

BEFORE THE DEPUTY DIRECTOR OF LAND RECORDS BANGALORE URBAN, AT BANGALORE

APPEAL. No. 156/2025

BETWEEN: MR.N.NARASIMHA MURTHY & OTHERS... **APPELLANTS**

AND: THE ASST.DIRECTOR OF LAND RECORDS... RESPONDENTS

NOTICE TO THE RESPONDENT NOS. 3, 6 TO 13

3) **Mr. L. HANUMANTHARAYAPPA,** S/o late Lakhmaiah. 6) **Mr. THIMMAPPAIAH,** Grand Son of late Make Narasaiah. 7) **Mr. H. Narayanappa,** S/o late V.Hanumanthaiah. 8) **Mr. Veeranjineppa,** S/o late V. Hanumanthaiah. 9) **Mr. H. Ramesh,** S/o late Hanumanthaiah. 10) **Mr. H. Venkatesh,** S/o late Hanumantharayappa. 11) **Mr. H. Rajanna,** S/o late Hanumanthaiah. 12) **Mr. A. Narayanappa,** S/o late Anjinappa. 13) **Mr. Bylanjinappa,** S/o late Thimmaiah, All are R/at: Alur Village, Dasanapura Hobli, Bangalore North-562123.

NOTICE

Notice is hereby given to you, to appear before this Court either in person or through counsel duly instructed or through some one authorized by law, to file your objections in the above Appeal No.156/2025, on **07/04/2026** at 3:00 P.M. If you omit or fail to take any action to represent your case as so required, matter will be proceeded and disposed in accordance with law, in your absence, in respect of the land bearing Sy.No.166/2, 166/4, 166/5 and 166/6 of Alur Village, Dasanapura Hobli, Bangalore North Taluk.

Issued under my hand and seal of this Hon'ble Court on this 24-03-2026.

By order of the Court, Deputy Director of Land Records, Bangalore.

B. KESHAVA MURTY, Advocate
No.12, 1st Floor, Ramanuja Plaza, 5th Cross, Malleshwaram, Bangalore-560003
Mob: 9243116839

IN THE COURT OF THE PRINCIPAL CIVIL JUDGE BENGALURU RURAL DISTRICT AT BENGALURU

O.S. No. 1070/2023

BETWEEN: Sri. D. Raju, S/o A. Daniel, aged about 73 years, R/at No. 12, 11th Main, Vidya Jyothi School Road Hongasandra, Bengaluru-560068... **PLAINTIFF**

AND: Sri. Anand Raj .B and another ... **DEFENDANTS**

SUMMONS/NOTICE TO DEFENDANT No.1

DEFENDANT No.1: Sri. Anand Raj .B, S/o Balaraj, aged about 33 years, R/at No.270, 9th Cross, Vishwa Priya Layout, Begur, Bengaluru-560068.

Whereas the Plaintiff has filed the above suit against the defendants for the relief of permanent Injunction is hereby summoned to appear before this Hon'ble Court, either in person or through the pleader on the **27/04/2026** at **11:00 A.M** to answer the same, failing which the matter will be heard ex-parte.

SCHEDULE PROPERTY

All that piece and parcel of the property bearing V.P. Katha No.647, House List No.1132, measuring East to West (25+40)/2 feet and North to South 54 feet, situated at Begur Village, Begur Hobli, Bengaluru South Taluk, Bengaluru and bounded on: **East by:** House List No.1131, **West by:** House List No.381, **North by:** House List No.1122 and **South by :** Road.

Give under my hand and seal of the Court on this 25/03/2026

By order of the Court, Sheristedar, Prl. Civil Judge's Court, Bangalore Rural District, Bangalore

SRI. S.G. CHAKRAPANI, Advocate
Office at No.8, 4th Floor, Grand Majestic Mall, 2nd Cross, Opp. Gubbi Veeranna Ranga Mandir, Gandhinagar, Bengaluru-560 009.

ಸಾರ್ವಜನಿಕ ಪ್ರಕಟಣೆ

[illegible]

SRINIVASA .T, Advocate

IN THE COURT OF THE CIVIL JUDGE AND JMFC AT KRISHNARAJAPURAM, BENGALURU

O.S. No.2147/2025

BETWEEN: MRS. CHRISTINA MARIA RODRIGUES, W/o Mr. Ajoy Nigel Mascarenhas, aged about 45 years, R/at No. 11/54, 3rd Main Road, Ramaiah Layout, St. Thomas Town, Kammanahalli, Bangalore- 560 084. Rep. by her GPA Holder, Mr. Ajoy Nigel Mascarenhas, R/at No. 11/54, 3rd Main Road, Ramaiah Layout, St. Thomas Town, Kammanahalli, Bangalore-560 084...**Plaintiff**

AND: Mrs. Ruby Francis & others ...**Defendants**

To, Mrs. Ruby Francis, W/o C.L. Francis, aged about 51 years, R/at No.50, 4th Cross Road, Ramesh Nagara, Vimanapura, Bengaluru- 560 037 ...**Defendant No.1**

SUMMONS TO DEFENDANT No. 1 U/o 5 RULE 20 OF CPC

Whereas, the plaintiff has instituted the above suit for permanent injunction in respect of the suit schedule property against you and other defendants. You are hereby summoned to appear in person or through a pleader on **28/04/2026 at 11.00 AM.,** before the Civil Judge and JMFC at Krishnarajapuram, Bengaluru, to answer all the material questions relating to the above case, failing which the matter will be heard and decided in your absence.

SCHEDULE

All that piece and parcel of House property bearing Site No.75, Katha No.200, formed out of property No.272 of Kalkere Village, K.R. Puram Hobli, Bangalore East Taluk, now the said property comes under the jurisdiction of BBMP, Ward No.26, measuring East to West 50 feet and North to South 30 feet, in all measuring 1500 sq ft and bounded on the: **East by:** Site No.74, **West by:** Road, **North by:** Road, **South by:** Site No.76

Given under my hand and seal of the Court on this 18/03/2026

By order of the Court, Sheristedar, Civil Judge & JMFC, Krishnarajapuram

Advocate for Plaintiff: **B.R. Ananda, B.H. Shivakumar**
No.16/2, 2nd Floor, Opp. Ayyappa Temple, 11th Cross, Cubbonpet, Bengaluru- 560 002

IN THE COURT OF THE CIVIL JUDGE AND JMFC AT KRISHNARAJAPURAM, BENGALURU

O.S. No.2145/2025

BETWEEN: MRS. CHRISTINA MARIA RODRIGUES, W/o Mr. Ajoy Nigel Mascarenhas, aged about 45 years, R/at No. 11/54, 3rd Main Road, Ramaiah Layout, St. Thomas Town, Kammanahalli, Bangalore-560 084. Rep. by her GPA Holder, Mr. Ajoy Nigel Mascarenhas, R/at No. 11/54, 3rd Main Road, Ramaiah Layout, St. Thomas Town, Kammanahalli, Bangalore-560 084...**Plaintiff**

AND: Mrs. Ruby Francis & others ...**Defendants**

To, Mrs. Ruby Francis, W/o C.L. Francis, aged about 51 years, R/at No.50, 4th Cross Road, Ramesh Nagara, Vimanapura, Bengaluru-560 037 ...**Defendant No.1**

SUMMONS TO DEFENDANT No. 1 U/o 5 RULE 20 OF CPC

Whereas, the plaintiff has instituted the above suit for permanent injunction in respect of the suit schedule property against you and other defendants. You are hereby summoned to appear in person or through a pleader on **28/04/2026** at **11.00 AM.,** before the Civil Judge and JMFC at Krishnarajapuram, Bengaluru, to answer all the material questions relating to the above case, failing which the matter will be heard and decided in your absence.

SCHEDULE

All that piece and parcel of House property bearing Site No.76, Katha No.200, formed out of property No.272 of Kalkere Village, K.R. Puram Hobli, Bangalore East Taluk, now the said property comes under the jurisdiction of BBMP, Ward No.26, measuring East to West 50 feet and North to South 30 feet, in all measuring 1500 sq ft and bounded on the: **East by:** Site No.74 and 73, **West by:** Road, **North by:** Site No.75 belongs to plaintiff, **South by:** Site No.77

Given under my hand and seal of the Court on this 18/03/2026

By order of the Court, Sheristedar, Civil Judge & JMFC, Krishnarajapuram

Advocate for Plaintiff: **B.R. Ananda, B.H. Shivakumar**
No.16/2, 2nd Floor, Opp. Ayyappa Temple, 11th Cross, Cubbonpet, Bengaluru- 560 002

IN THE COURT OF HON'BLE II ADDITIONAL SENIOR CIVIL JUDGE AND JMFC AT ANEKAL BENGALURU RURAL DISTRICT

O.S. No. 1314/2023

PLAINTIFF/S: Smt. Hemavathi and Others

-V/s-

DEFENDANT/S: N. Suresh Babu and Others

SUMMONS TO DEFENDANT No.11,15,16 & 17

11. Sri S.N. Krishnappa S/o Nagalingamma and Nanjunda Reddy, aged about 41 years, Samanahalli Village, Muthanallur Post, Sarjapura Hobli, Anekal Taluk, Bengaluru Urban District - 560099. **15. Smt. Padmamma** D/o DC. Nanja Reddy, aged about 67 years, residing at Sheetahalli Village, Kasaba Hobli, Anekal Taluk, Bengaluru Urban- 560081. **16. Sri. Ravindra Reddy. N** S/o DC. Nanja Reddy, aged about 64 years, residing at Anekal Town, Anekal Taluk, Bengaluru Urban District-562 106. **17. Smt. Indramma** D/o DC. Nanja Reddy, aged about 59 years, Residing at Vanakanahalli Village, Kasaba Hobli, Anekal Taluk, Bengaluru Urban District - 562106.

Whereas, Smt. Hemavathi and others has instituted the above case against you. You are hereby required to appear before this Hon'ble Court in person or through a duly authorized pleader on **29-06-2026** at **11.00 A.M.** to answer the claim.

Take notice that, in default of appearance on the day before mentioned, the suit will be heard and determined in your absence.

SCHEDULE PROPERTY

All that piece and parcel of the Sy.No.61/4, measuring 1 Acre 12 guntas (including 1 gunta Karab) out of 2 Acres 25 guntas, situated at Samanahalli Village, Sarjapura Hobli, Anekal Taluk, Bengaluru Urban District and bounded on: **East by:** Property belongs to Ajjaianavara Sunkareddy, **West by:** Property belongs to Ajjaianavara Sunkareddy, **North by:** Property belongs to Smt. Chowdamma, **South by:** Road.

Given under my hand and seal of this court on this 23-03-2026.

By order of the Court, Chief Ministerial Officer, Senior Civil Judge & JMFC Court, Anekal.

MURTHY .G, Advocate
No.326, Near Dandumaramma Temple, Muthanallur Village and Post, Sarjapura Hobli, Anekal Taluk, Bangalore Urban District-560099. Mob: 5440372680.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ ಲೋ.ಇ.ಉಡುಪಿ ವಿಭಾಗ- ಉಡುಪಿ 576101

ದೂರವಾಣಿ - ಫ್ಯಾಕ್ಸ್ : (0820) 2531802

ನಂ. [illegible] /2025-26 ಎಂ-2 ದಿನಾಂಕ:24.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2025-26ನೇ ಸಾಲಿನ ರೂ. 8.12 ಲಕ್ಷದಿಂದ 16.38 ಲಕ್ಷದವರೆಗಿನ ಮೊತ್ತದ [illegible] "kppp.karnataka.gov.in" [illegible] "kppp.karnataka.gov.in" [illegible] ಕೊನೆಯ ದಿನಾಂಕ10.04.2026ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ /- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ, ವಿಜಯಪುರ

ಸಂ: ಜಿವಶಿಇ/ವಿ/ಟೆಂಡರ್/01/2025-26 ದಿನಾಂಕ:24.03.2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಟೆಂಡರ್ ಸಂಖ್ಯೆ: DPI/2025-26/SE0436 ರಲ್ಲಿ ಜಿ.ವ.ಶಿ.ಇಲಾಖೆ ವಿಜಯಪುರ ಇಲ್ಲಿ 2026-27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಒಂದು ಬಾಡಿಗೆ ವಾಹನವೊಂದನ್ನು ಪಡೆಯುವ ಸಂಬಂಧ ಅರ್ಹ ವಾಹನ ಏಜೆನ್ಸಿಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಆಹ್ವಾನಿಸಲಾಗಿದೆ. https://eproc.karnataka.gov.in ಮೂಲಕ ಟೆಂಡರ್ ಸಲ್ಲಿಸಲು ಕೋರಲಾಗಿದೆ. ಕೊನೆಯ ದಿನಾಂಕ:01.04.2026 ರ ಸಂಜೆ 5.00 ಘಂಟೆ.

ಸಹಿ/-
ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ವಿಜಯಪುರ

ವಾಣಿಸಂ/ವಿಜಯಪುರ/842/ಸಿಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಉಪನಿರ್ದೇಶಕರ ಕಛೇರಿ, ಕೊಠಡಿ ಸಂಖ್ಯೆ: 266, 2ನೇ ಮಹಡಿ, [illegible] ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ - 562110

ಸಂ:[illegible]/42/2025-26 ದಿನಾಂಕ:24.03.2026

ಇ-ಟೆಂಡರ್ ಪ್ರಕಟಣೆ

ಉಪ ನಿರ್ದೇಶಕರು ಹಾಗೂ ಜಿಲ್ಲಾ ನಿರೂಪಣಾಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಛೇರಿಯ ಉಪಯೋಗಕ್ಕಾಗಿ 02 ಎ.ಸಿ. ಕಾರುಗಳನ್ನು ಹಾಗೂ ಚಾಲಕರನ್ನು ಒಳಗೊಂಡಂತೆ ಬಾಹ್ಯಮೂಲದಿಂದ ಗುತ್ತಿಗೆ ಆಧಾರದ ಮೇಲೆ ಏಪ್ರಿಲ್-2026 ರಿಂದ ಮಾರ್ಚ್-2027 (ಒಂದು ವರ್ಷದ ಅವಧಿಗೆ) ರವರೆಗೆ ಅಥವಾ ಮುಂದಿನ ಆದೇಶದ ವರೆಗೆ ಒದಗಿಸಲು ಕರ್ನಾಟಕ ಅರಳತೆ ಪಾರದರ್ಶಕ ನಿಯಮ-1999ರಡಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ವ್ಯಕ್ತಿ / ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರನ್ನು ಆನ್‌ಲೈನ್‌ನಲ್ಲಿ ಅಪಲೋಡ್ ಮಾಡಲು ದಿನಾಂಕ 24.03.2026 ರಿಂದ 24.04.2026 ರ ಸಂಜೆ 3.00 ಗಂಟೆವರೆಗೆ ಅವಕಾಶವಿರುತ್ತದೆ. ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಕಛೇರಿಯ ವೇಳೆಯಲ್ಲಿ ಖುದ್ದಾಗಿ ಅಥವಾ ವೆಬ್‌ಸೈಟ್: https://kppp.karnataka.gov.in ಸಂಪರ್ಕಿಸಬಹುದಾಗಿದೆ.

ಸಹಿ/-
ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಣಿಸಂ/[illegible]/6451/[illegible]/2025-26

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ: [illegible]/2025-26/[illegible]-1 ದಿನಾಂಕ: 25.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಲೆಕ್ಕಶೀರ್ಷಿಕೆ: 8443 [illegible] ಇಂಡೆಂಟ್ ನಂ: 33890, ಮತ್ತು ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (CMIDP) ಇಂಡೆಂಟ್ ನಂ: 34244, 34264 ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 09.04.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.300.00 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.500.00 ಲಕ್ಷ ಆಗಿರುತ್ತದೆ. [illegible] KW-4 [illegible] (www.kppp.karnataka.gov.in) ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ [illegible] ದೂರವಾಣಿ ಸಂಖ್ಯೆ: 0824-2423169.

DIPR/DK/KSMCA/1815/25-26 dt 25.03.2026

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ

ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು-560 001. ದೂರವಾಣಿ: 080-22133370

ಸಂಖ್ಯೆ: 67/2025-26 ದಿನಾಂಕ: 24.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ದೊಡ್ಡಬಳ್ಳಾಪುರ, ಹೊಸಕೋಟೆ, ಆನೇಕಲ್ ಮತ್ತು ನಂ.2 ಉತ್ತರ ಉಪವಿಭಾಗಕ್ಕೆ** ಸಂಬಂಧಿಸಿದಂತೆ **04 ಸಂಖ್ಯೆಯ (ರೂ. 3.17 ರಿಂದ 60.00 ಲಕ್ಷಗಳ)** ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ **ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸೆಸಿಂಗ್ ಶುಲ್ಕವನ್ನು ಕೆಪಿಪಿ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

ಕ್ರ.ಸಂ: 01 & 02 ಕ್ಕೆ

(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 02.04.2026 ಸಂಜೆ 4.00 ಗಂಟೆಯವರೆಗೆ.** (2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 04.04.2026 ಬೆಳಿಗ್ಗೆ 11.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಕ್ರ.ಸಂ: 03 & 04 ಕ್ಕೆ

(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 08.04.2026 ಸಂಜೆ 4.00 ಗಂಟೆಯವರೆಗೆ.** (2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 09.04.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು.

ವಾಣಿಸಂ/[illegible]/6438/ಸಿಎಸ್‌ಎಂಸಿಎ/2025-26

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಲಯ-1, ರಾಜರಾಜೇಶ್ವರಿ ನಗರ, ಬೆಂಗಳೂರು-560 091.

ಸಂ: [illegible]/ಟೆಂಡರ್/05/2025-26 ದಿನಾಂಕ: 25.03.2026

ಅಲ್ಪಾವಧಿ ಮರು-ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ ಲಕೋಟೆ ಪದ್ಧತಿ) (ಜಿಬಿಎ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

[illegible]

ಕ್ರ.ಸಂ.	ಕಾಮಗಾರಿಯ ಹೆಸರು
1	ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳು, ಮೀಡಿಯನ್‌ಗಳು ಮತ್ತು ವೃತ್ತಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ. **ಅಂದಾಜು ಮೊತ್ತ:** ರೂ.25,00,000/- **ಇಎಂಡಿ ಮೊತ್ತ:** ರೂ.50,000/-. **ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ:** 6 ತಿಂಗಳು. **ಪ್ರವರ್ಗ:** ಇತರರು
2	ಯಶವಂತಪುರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳು, ಮೀಡಿಯನ್‌ಗಳು ಮತ್ತು ವೃತ್ತಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ. **ಅಂದಾಜು ಮೊತ್ತ:** ರೂ.25,00,000/- **ಇಎಂಡಿ ಮೊತ್ತ:** ರೂ.50,000/-. **ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ:** 6 ತಿಂಗಳು. **ಪ್ರವರ್ಗ:** ಇತರರು

ವೇಳಾಪಟ್ಟಿ: (1) ಪ್ರಕಟಣೆ ದಿನಾಂಕ: **25.03.2026.** 2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ: **27.03.2026**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 3) ಪೂರ್ವಭಾವಿ ಸಭೆ ದಿನಾಂಕ: **30.03.2026ರ ಮಧ್ಯಾಹ್ನ 12.30 ಗಂಟೆಗೆ.** 4) ಟೆಂಡರ್ ಮುಕ್ತಾಯದ ದಿನಾಂಕ: **04.04.2026 ಸಂಜೆ 5.00 ಗಂಟೆಗೆ.** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **06.04.2026ರ ಬೆಳಿಗ್ಗೆ 11:00 ಗಂಟೆಗೆ.** 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆ ನಂತರ.**

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಎಲ್ಲಾ ಕೆಲಸದ ದಿನದಂದು ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ರಿಂದ ಪಡೆಯಬಹುದು.

ಸಹಿ/- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವಲಯ-1,
ರಾಜರಾಜೇಶ್ವರಿ ನಗರ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಸಂ: ಬಿಐಎಪಿಪಿಎ/ಟಿಪಿ/ಭೂಉಬ/162/2025-26/3566 ದಿನಾಂಕ : 25.03.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಮಂಜುನಾಥ [illegible] ಶ್ರೀ [illegible]	ದೇವನಹಳ್ಳಿ	ಕುಂದಾಣ	[illegible]	109	0-28	ವ್ಯವಸಾಯ	ವಸತಿ
2.	ಶ್ರೀ ವಿಜಯಕುಮಾರ್ [illegible] ಶ್ರೀ [illegible]	ದೇವನಹಳ್ಳಿ	ಕುಂದಾಣ	[illegible]	113	0-38	ವ್ಯವಸಾಯ	ವಸತಿ

ಷರಾ :- [illegible] 'ವ್ಯವಸಾಯ ಭೂಉಪಯೋಗ ವಲಯ' ದಿಂದ 'ವಸತಿ ವಲಯ'ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಪಿ.ಪಿ.ಎ, ದೇವನಹಳ್ಳಿ

ವಾ.ಸಾ.ಸಂ.ಇ/ವಾತ್ರ/6461/[illegible]/2025-26

ದೇಶದಲ್ಲಿ ಇಂಧನ ಕೊರತೆ ಇಲ್ಲ, ಎಲ್ ಪಿಜಿ ರೀಫಿಲ್ಲಿಂಗ್ ಅವಧಿ ಹೆಚ್ಚಿಸಿಲ್ಲ

ಆತಂಕದಿಂದ ಹೆಚ್ಚುವರಿ ಖರೀದಿ ಮಾಡಬೇಡಿ: ವದಂತಿಗಳ ಹಿನ್ನೆಲೆ ಕೇಂದ್ರ ಸ್ಪಷ್ಟನೆ

ಪೆಟ್ರೋಲ್, ಡೀಸೆಲ್ ಎಲ್‌ಪಿಜಿ ಅಬಾಧಿತ

• **ಹೊಸದಿಲ್ಲಿ:** ದೇಶದಲ್ಲಿ ಪೆಟ್ರೋಲ್, ಡೀಸೆಲ್ ಅಥವಾ ಎಲ್‌ಪಿಜಿ ಕೊರತೆ ಇಲ್ಲ ಎಂದು ಕೇಂದ್ರ ಸರ್ಕಾರ ಬುಧವಾರ ಸ್ಪಷ್ಟಪಡಿಸಿದೆ.

ಗೃಹಬಳಕೆ ಎಲ್‌ಪಿಜಿ ರೀಫಿಲ್ಲಿಂಗ್ ಅವಧಿಯನ್ನು 25ರಿಂದ 35 ದಿನಗಳವರೆಗೆ ಹೆಚ್ಚಿಸಲಾಗಿ ಮತ್ತು ದೇಶದಲ್ಲಿ ಇಂಧನ ಕೊರತೆ ಇದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ವದಂತಿಗಳ ಹಿನ್ನೆಲೆ ಕೇಂದ್ರ ಸರ್ಕಾರ ಈ ಸ್ಪಷ್ಟನೆ ನೀಡಿದ್ದು, ಯಾವುದೇ ಕಾರಣಕ್ಕೂ ಈ ವದಂತಿಗಳನ್ನು ನಂಬಬಾರದು ಮತ್ತು ಜನರು ಆತಂಕದಿಂದ ಹೆಚ್ಚುವರಿ ಖರೀದಿ ಮಾಡಬಾರದು ಎಂದು ಮನವಿ ಮಾಡಿದೆ.

ದೇಶದ ಎಲ್ಲಾ ರಿಫೈನರಿಗಳು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸಾಕಷ್ಟು ಕಚ್ಚಾ ತೈಲ ಸಂಗ್ರಹವಿದೆ ಹಾಗೂ ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ದೇಶಾದ್ಯಂತ ಸಮರ್ಪಕವಾಗಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಕೆಲವು ಪ್ರದೇಶಗಳಲ್ಲಿ ವದಂತಿಗಳ ಪರಿಣಾಮವಾಗಿ ಜನರು ಆತಂಕದಿಂದ ಹೆಚ್ಚುವರಿಯಾಗಿ ತೈಲ ಖರೀದಿ ಮಾಡಿರುವುದು ಕಂಡುಬಂದಿದೆ. ಇದರಿಂದ ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಜನಸಂದಣಿ ಹೆಚ್ಚಾಗಿದೆ. ಆದರೆ ಪ್ರತಿ ಪೆಟ್ರೋಲ್ ಬಂಕ್‌ಗಳಲ್ಲೂ ಸಾಕಷ್ಟು ಇಂಧನ ಲಭ್ಯವಿದೆ ಎಂದು ಅವರು ಭರವಸೆ ನೀಡಿದ್ದಾರೆ.



ನಮ್ಮಲ್ಲಿ ಕಚ್ಚಾತೈಲ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿದೆ. ನಮ್ಮ ತೈಲ ಸಂಸ್ಕರಣಾಗಾರಗಳು ಗರಿಷ್ಠ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ವಾರ್ಷಿಕ 26ಕೋಟಿ ಟನ್‌ಗಳಷ್ಟು ಕಚ್ಚಾತೈಲ ಸಂಸ್ಕರಿಸುವ ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ ಎಂದು ಹೇಳಿದರು.

ಎಲ್‌ಪಿಜಿ ಸರಬರಾಜು ಮೇಲೆ ಭಾಗಶಃ ಪರಿಣಾಮ: ಹಾರ್ಮುಜ್ ಜಲಸಂಧಿಯಲ್ಲಿ ಉಂಟಾದ ಅಂತಾರಾಷ್ಟ್ರೀಯ ಸಮಸ್ಯೆಗಳ ಪರಿಣಾಮವಾಗಿ ಎಲ್‌ಪಿಜಿ ಸರಬರಾಜಿನಲ್ಲಿ ಕೆಲವು ವ್ಯತ್ಯಯ ಉಂಟಾಗಿದೆ. ಆದಾಗ್ಯೂ, ಮನೆಗಳಿಗೆ ಸಿಲಿಂಡರ್ ಸರಬರಾಜು ಎಂದಿನಂತೆ ನಡೆಯುತ್ತಿದೆ ಮತ್ತು ಯಾವುದೇ ಪ್ರದೇಶದಲ್ಲಿ ಸಂಪೂರ್ಣ ಕೊರತೆ ಉಂಟಾಗಿಲ್ಲ ಎಂದು ಸರ್ಕಾರ ತಿಳಿಸಿದೆ. ರಾಜ್ಯಗಳಿಗೆ ಹೆಚ್ಚುವರಿ ಹಂಚಿಕೆ ಮಾಡಲಾಗಿದೆ. ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಸಮುದಾಯ ಅಡುಗೆ ಕೇಂದ್ರಗಳಿಗೆ ವಾಣಿಜ್ಯ ಎಲ್‌ಪಿಜಿ ಸರಬರಾಜನ್ನು ಹಂತ ಹಂತವಾಗಿ ಶೇ.50ರವರೆಗೆ ಹೆಚ್ಚಿಸಲಾಗಿದೆ.



ತೈಲ ಕಂಪನಿಗಳ ಭರವಸೆ

ದೇಶದ ಪ್ರಮುಖ ತೈಲ ಕಂಪನಿಗಳು ಸಹ ಯಾವುದೇ ಇಂಧನ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿವೆ. ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಸರಾಗವಾಗಿ ನಡೆಯುತ್ತಿದ್ದು, ಎಲ್ಲಾ ಔಟ್‌ಲೆಟ್‌ಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿವೆ. ವದಂತಿಗಳು ಅನಗತ್ಯ ಆತಂಕವನ್ನು ಉಂಟುಮಾಡುತ್ತವೆ ಎಂದು ಇದೇ ವೇಳೆ ಎಚ್ಚರಿಕೆ ನೀಡಿವೆ.

ಭಾರತದಿಂದ ಸಕಲ ಸಿದ್ಧತೆ: ಪಶ್ಚಿಮ ಏಷ್ಯಾದ ಸಂಘರ್ಷದ ಪರಿಣಾಮವಾಗಿ ಕಚ್ಚಾ ತೈಲ, ಎಲ್‌ಎನ್‌ಜಿ ಮತ್ತು ಎಲ್‌ಪಿಜಿ ಸರಬರಾಜು ಮೇಲೆ ಪರಿಣಾಮ ಬಿದ್ದಿದೆ. ಆದರೆ, ಭಾರತವು ಪಶ್ಚಿಮ ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ಅಮೆರಿಕದಿಂದ ಪರ್ಯಾಯ ಮೂಲಗಳಿಂದ ತೈಲವನ್ನು ಪಡೆಯುತ್ತಿದೆ.

ಎಲ್‌ಪಿಜಿ ಸರಬರಾಜು ಹೆಚ್ಚು ಪರಿಣಾಮಕ್ಕೊಳಗಾಗಿದ್ದು, ದೇಶದ ಅವಶ್ಯಕತೆಯ ಶೇ.60ರಷ್ಟು ಆಮದುಗಳ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ಗೃಹ ಬಳಕೆಗೆ ಆದ್ಯತೆ ನೀಡಲಾಗಿದ್ದು, ವಾಣಿಜ್ಯ ಬಳಕೆಯನ್ನು ಕಡಿಮೆ ಮಾಡಲಾಗಿದೆ.

ಪಿಎನ್‌ಜಿ, ಪರ್ಯಾಯ ಇಂಧನಗಳಿಗೆ ಒತ್ತು

ಎಲ್‌ಪಿಜಿ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಪೈಪ್ಡ್ ನ್ಯಾಚುರಲ್ ಗ್ಯಾಸ್ (ಪಿಎನ್‌ಜಿ) ಬಳಕೆಯನ್ನು ಸರ್ಕಾರ ವೇಗಗೊಳಿಸಿದೆ. ಗೃಹ ಬಳಕೆ ಮತ್ತು ಸಿಎನ್‌ಜಿ ಸಾರಿಗೆಗೆ ಶೇ.100ರಷ್ಟು ಪೂರೈಕೆ ಮಾಡಲಾಗುತ್ತಿದೆ. ಕೈಗಾರಿಕಾ ಬಳಕೆದಾರರಿಗೆ ಸುಮಾರು ಶೇ.80ರಷ್ಟು ಪೂರೈಕೆ ಮಾಡಲಾಗುತ್ತಿದೆ. ಕಳೆದ 25 ದಿನಗಳಲ್ಲಿ ಸುಮಾರು 2.5 ಲಕ್ಷ ಹೊಸ ಪಿಎನ್‌ಜಿ ಸಂಪರ್ಕಗಳನ್ನು ನೀಡಲಾಗಿದೆ. ಜತೆಗೆ 2.20 ಲಕ್ಷ ಎಲ್‌ಪಿಜಿ ಬಳಕೆದಾರರು ಪಿಎನ್‌ಜಿ ಕಡೆಗೆ ಬದಲಾವಣೆ ಮಾಡಿಕೊಂಡಿದ್ದಾರೆ.

ಅಕ್ರಮ ಸಂಗ್ರಹ, ಕಾಳಸಂತೆ ವಿರುದ್ಧ ಕ್ರಮ: ರಾಜ್ಯ ಸರ್ಕಾರಗಳಿಗೆ ಅಕ್ರಮ ಸಂಗ್ರಹ ಮತ್ತು ಕಪ್ಪು ಮಾರುಕಟ್ಟೆಯನ್ನು ತಡೆಯಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಇದುವರೆಗೆ 2,700ಕ್ಕೂ ಹೆಚ್ಚು ದಾಳಿ ನಡೆಸಿ, 2,000 ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. 650ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, 155 ಜನರನ್ನು ಬಂಧಿಸಲಾಗಿದೆ.

ಜನತೆಗೆ ಸರ್ಕಾರದ ಮನವಿ

ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಸಾಕಷ್ಟು ಲಭ್ಯವಿದೆ. ದಯವಿಟ್ಟು ವದಂತಿಗಳನ್ನು ನಂಬಬೇಡಿ, ಆತಂಕದಿಂದ ಖರೀದಿ ಮಾಡಬೇಡಿ ಮತ್ತು ಇಂಧನವನ್ನು ಮಿತವಾಗಿ ಬಳಸಿ ಎಂದು ಜನತೆಗೆ ಕೇಂದ್ರ ಸರ್ಕಾರ ಮನವಿ ಮಾಡಿದೆ



ಪಿಎನ್‌ಜಿ ಇರುವೆಡೆ ಎಲ್‌ಪಿಜಿ ಇಲ್ಲ

ಪೈಪ್ಡ್ ನ್ಯಾಚುರಲ್ ಗ್ಯಾಸ್(ಪಿಎನ್‌ಜಿ) ಸೌಲಭ್ಯ ಲಭ್ಯವಿರುವ ಪ್ರದೇಶಗಳಲ್ಲಿ ಗೃಹಬಳಕೆ ಎಲ್‌ಪಿಜಿ ಸರಬರಾಜು ನಿಲ್ಲಿಸಲಾಗುವುದು ಎಂದು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಯುದ್ಧದಿಂದ ಎಲ್‌ಪಿಜಿ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುವ ಹಿನ್ನೆಲೆಯಲ್ಲಿ, ಸರ್ಕಾರ ಈ ಕ್ರಮ ಕೈಗೊಂಡಿದೆ. ಅನಿಲ ನಿರಂತರವಾಗಿ ಪೈಪ್ ಮೂಲಕ ಅಡುಗೆಮನೆಗೆ ತಲುಪುವುದರಿಂದ ಸಿಲಿಂಡರ್ ಬುಕ್ಕಿಂಗ್ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿದೆ.

ಭಾರತದಿಂದ ಮಾತ್ರ ಮಧ್ಯಪ್ರಾಚ್ಯ ಉದ್ವಿಗ್ನತೆ ಶಮನ ಸಾಧ್ಯ: ಇರಾನ್

• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಸಂಘರ್ಷ-ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ, ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ಭಾರತ ವಿಶ್ವಾಸಾರ್ಹ ಪಾತ್ರ ವಹಿಸಬಹುದು ಎಂದು ಇರಾನ್ ಪುನರುಚ್ಚರಿಸಿದೆ. ಪ್ರಸ್ತುತ ಅಮೆರಿಕ -ಇಸ್ರೇಲ್ ಮತ್ತು ಇರಾನ್ ಜತೆಗೆ ಐತಿಹಾಸಿಕ ಮತ್ತು ಕಾರ್ಯತಂತ್ರದ ಸಂಬಂಧಗಳನ್ನು ನಿರ್ವಹಿಸಲು ಮತ್ತು ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ಭಾರತವು ಖಂಡಿತವಾಗಿಯೂ ಪರಿಣಾಮಕಾರಿ ಮತ್ತು ಸಕಾರಾತ್ಮಕ ಪಾತ್ರವನ್ನು ವಹಿಸಬಹುದು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ(ಗ್ಲೋಬಲ್ ಸೌತ್) ತನ್ನ ಬಲವಾದ ಸ್ಥಾನ ಮತ್ತು ಸಮತೋಲಿತ, ತಟಸ್ಥ ವಿದೇಶಾಂಗ ನೀತಿಯಿಂದಾಗಿ, ಭಾರತವು ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಬಹುದು. ಇದು ಉದ್ವಿಗ್ನತೆಯನ್ನು ಕಡಿಮೆ ಮಾಡಲು, ಶಾಂತಿಯುತ ಚರ್ಚೆಗಳನ್ನು ಪ್ರೋತ್ಸಾಹಿಸಲು ಮತ್ತು ಎದುರಾಳಿ ದೇಶಗಳ ನಡುವೆ ಸಂವಾದವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ ಎಂದು ಭಾರತಕ್ಕೆ ಇರಾನ್ ರಾಯಭಾರಿಯಾಗಿರುವ ಮೊಹಮ್ಮದ್ ಫತಾಲಿ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಜತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಸಿದ ಮಾತುಕತೆ ಮತ್ತು ಟ್ರಂಪ್ ಅವರು ಇರಾನ್ ಮೇಲಿನ ದಾಳಿಗೆ ತಾತ್ಕಾಲಿಕ ವಿರಾಮ ಘೋಷಿಸಿ, ಮಾತುಕತೆಗೆ ಇರಾನ್‌ಗೆ ಕರೆ ನೀಡಿದ ನಂತರ ಇರಾನ್ ರಾಯಭಾರಿ ಈ ಹೇಳಿಕೆ ನೀಡಿದ್ದಾರೆ.

ಭಾರತದ ಪಾತ್ರ ಬಗ್ಗೆ ಹಲವು ದೇಶಗಳ ನಾಯಕರ ವಿಶ್ವಾಸ

ಒಂದು ಪ್ರಭಾವಶಾಲಿ ದೇಶವಾಗಿ ಭಾರತವು ನಿಶ್ಚಿತವಾಗಿಯೂ ಇಸ್ರೇಲ್ -ಇರಾನ್ ಉದ್ವಿಗ್ನತೆಯನ್ನು ತಗ್ಗಿಸುವಲ್ಲಿ ಮಹತ್ವದ ಪಾತ್ರ ವಹಿಸಬಹುದು ಎಂಬುದಾಗಿ ರಷ್ಯಾದ ವಿದೇಶಾಂಗ ಸಚಿವೆ ಸ್ವಾಕ್ ಜಖರೋವಾ ಈಗಾಗಲೇ ಹೇಳಿದ್ದರೆ, ಅಮೆರಿಕದ ನಿವೃತ್ತ ಸೇನಾಧಿಕಾರಿ ಡೌಗ್ಲಾಸ್ ಮ್ಯಾಕ್‌ಗ್ರೆಗರ್, ಟ್ರಂಪ್ ಅವರು ಪ್ರಧಾನಿ ಮೋದಿ ಅವರಿಗೆ ಕರೆ ಮಾಡಬೇಕು. ಅವರು ಇಸ್ರೇಲ್ ಮತ್ತು ಇರಾನ್‌ಗಳೆರಡರ ಜತೆಗೂ ಉತ್ತಮ ಬಾಂಧವ್ಯ ಹೊಂದಿದ್ದಾರೆ ಎಂದು ಹೇಳಿದ್ದರು.

ಹಾಗೆಯೇ ಫಿನ್ಲ್ಯಾಂಡಿನ ಅಧ್ಯಕ್ಷ ಅಲೆಗ್ಸಾಂಡರ್ ಸ್ಟಬ್ಬ್ ಅವರು ಕೂಡ ಭಾರತವು ಇರಾನ್ ಮತ್ತು ಅಮೆರಿಕ ನಡುವೆ ಕದನ ವಿರಾಮವೊಂದಕ್ಕೆ ಸಂಧಾನಕಾರನ ಪಾತ್ರ ನಿರ್ವಹಿಸಲು ಸಾಧ್ಯವಿದೆ ಎಂದಿದ್ದರು. ಯುಎಇ ರಾಯಭಾರಿ ಹುಸ್ಸೈನ್ ಹಸ್ಸನ್ ಮಿರ್ಜಾ ಅವರು, ಪ್ರಧಾನಿ ಮೋದಿಯವರ ಒಂದು ಫೋನ್ ಕರೆ ಇಸ್ರೇಲ್ ಮತ್ತು ಇರಾನ್ ನಡುವಣ ಯುದ್ಧವನ್ನು ಅಂತ್ಯಗೊಳಿಸಬಹುದು ಎಂದಿರುವುದು ಜಾಗತಿಕ ರಂಗದಲ್ಲಿ ಪ್ರಸ್ತುತ ಬಿಕ್ಕಟ್ಟನ್ನು ಶಮನಗೊಳಿಸುವಲ್ಲಿ ಭಾರತದ ಪಾತ್ರ ಕುರಿತಂತೆ ಇರುವ ವಿಶ್ವಾಸಾರ್ಹತೆಯನ್ನು ವ್ಯಕ್ತಗೊಳಿಸಿದೆ.

ರಷ್ಯಾದಿಂದ ಭಾರತ 600 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಖರೀದಿ

• **ಹೊಸದಿಲ್ಲಿ:** ಭಾರತವು ಮುಂದಿನ ತಿಂಗಳ ವಿತರಣೆಗಾಗಿ ರಷ್ಯಾದಿಂದ ಸುಮಾರು 60 ದಶಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಖರೀದಿಸಿದೆ. ಈ ಖರೀದಿಗಳು ಹಾರ್ಮುಜ್ ಜಲಸಂಧಿಯ ಮೂಲಕ ಸಾಗಣೆ ಹರಿವು ನಿರ್ಬಂಧಿತವಾಗಿರುವುದರಿಂದ ಕಚ್ಚಾ ತೈಲದ ಲಭ್ಯತೆಯ ಬಗೆಗಿನ ಕಳವಳಗಳನ್ನು ಸರಾಗಗೊಳಿಸುವ ಗುರಿ ಹೊಂದಿವೆ.

ವರದಿಯ ಪ್ರಕಾರ, ಸರಕುಗಳನ್ನು ಬ್ರೆಂಟ್‌ಗಿಂತ ಪ್ರತಿ ಬ್ಯಾರೆಲ್‌ಗೆ 5 ಮತ್ತು 15ರ ನಡುವಿನ ಪ್ರೀಮಿಯಂಗಳಲ್ಲಿ ಕಾಯ್ದಿರಿಸಲಾಗಿತ್ತು. ಪೂರೈಕೆ ಪರಿಸ್ಥಿತಿಗಳು ಮತ್ತು ಲಭ್ಯವಿರುವ ಬ್ಯಾರೆಲ್‌ಗಳಿಗೆ ಹೆಚ್ಚಿನ ಬೇಡಿಕೆಯಿಂದ ಈ ಕ್ರಮಕ್ಕೆ ಗೊಳ್ಳಲಾಗಿದೆ.

ಈ ಪ್ರಮಾಣವು ಪ್ರಸ್ತುತ ತಿಂಗಳ ಭಾರತದ ಖರೀದಿಗಳಿಗೆ ಸರಿಸುಮಾರು ಅನುಗುಣವಾಗಿದೆ. ಫೆಬ್ರವರಿಯಲ್ಲಿ ಖರೀದಿಸಿದ ಪ್ರಮಾಣಕ್ಕಿಂತ ಎರಡು ಪಟ್ಟು ಹೆಚ್ಚಾಗಿದೆ ಎಂದು ಡೇಟಾ ಇಂಟೆಲಿಜೆನ್ಸ್ ಸಂಸ್ಥೆ ಕೆಪ್ಲರ್ ವರದಿಯಲ್ಲಿ ಉಲ್ಲೇಖಿಸಿದೆ.

ಪಾಕ್ ಕಂಟೈನರ್‌ಗೆ ಇರಾನ್ ತಡೆ

• **ಟೆಹ್ರಾನ್:** ಮಧ್ಯಪ್ರಾಚ್ಯ ಯುದ್ಧದ ಮಧ್ಯೆ ಹಾರ್ಮುಜ್ ಜಲಸಂಧಿಯಿಂದ ಬರುತ್ತಿದ್ದ ಪಾಕಿಸ್ತಾನದ ಕಂಟೈನರ್ ಅನ್ನು ಇರಾನ್ ಸೇನೆ ತಡೆಹಿಡಿದಿದೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪ್ರಕಾರ, ಯುನೈಟೆಡ್ ಅರಬ್ ಎಮಿರೇಟ್ಸ್‌ನ ಕಾರ್ಜಾದಿಂದ ಕರಾಚಿ ಕಡೆಗೆ ಲಂಗರು ಹಾಕುವ ಸೀಲೆನ್ ಹಡಗು ಜಲಮಾರ್ಗಗಳ ಪ್ರವೇಶದ್ವಾರದಲ್ಲಿ ಮಾರ್ಗದಿಂದಲೇ ಹಿಂತಿರುಗಿದೆ. ಕಾನೂನು ಶಿಷ್ಟಾಚಾರಗಳನ್ನು ಅನುಸರಿಸಲು ವಿಫಲವಾದ ಕಾರಣ ಮತ್ತು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು ಅನುಮತಿಯಿಲ್ಲದ ಕಾರಣ ಐಆರ್‌ಜಿಸಿ ನೌಕಾಪಡೆಯು ಸೀಲೆನ್ ಎಂಬ ಕಂಟೈನರ್ ಹಡಗು ಹಿಂತಿರುಗಿತು ಎಂದು ಐಆರ್‌ಜಿಸಿ ನೌಕಾಪಡೆಯ ಕಮಾಂಡರ್ ಅಲಿರೇಜಾ ಟ್ಯಾಂಗ್ಸಿರಿ ಎಕ್ಸ್‌ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಗ್ಯಾಸ್ ಶುಲ್ಕ ವಸೂಲಿ ಮಾಡಿದರೆ ಕ್ರಮ

• **ಹೊಸದಿಲ್ಲಿ:** ಹೋಟೆಲ್‌ಗಳು ಹಾಗೂ ಉಪಹಾರ ಗೃಹಗಳು ಎಲ್‌ಪಿಜಿ ಅಥವಾ ಗ್ಯಾಸ್ ಶುಲ್ಕ ಹೆಸರಿನಲ್ಲಿ ಹೆಚ್ಚುವರಿ ಹಣ ವಸೂಲಿಸುವುದನ್ನು ತಕ್ಷಣ ನಿಲ್ಲಿಸಬೇಕು ಎಂದು ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರ(ಸಿಸಿಪಿಎ) ಎಚ್ಚರಿಸಿದೆ. ಈ ರೀತಿಯ ಶುಲ್ಕ ವಸೂಲಿ ಗ್ರಾಹಕ ಸಂರಕ್ಷಣಾ ಕಾಯ್ದೆ, 2019ರ ಉಲ್ಲಂಘನೆಯಾಗಿದ್ದು, ಇದು ಅನ್ಯಾಯದ ವ್ಯಾಪಾರ ಕ್ರಮ ಎಂದು ಪ್ರಾಧಿಕಾರ ಸ್ಪಷ್ಟಪಡಿಸಿದೆ. ಮೆನುವಿನಲ್ಲಿ ತೋರಿಸಿರುವ ಬೆಲೆಗಿಂತ ಹೆಚ್ಚುವರಿ ಶುಲ್ಕಗಳನ್ನು ಸ್ವಯಂಚಾಲಿತವಾಗಿ ಸೇರಿಸುವಂತಿಲ್ಲ, ಅನ್ವಯಿಸುವ ತೆರಿಗೆಗಳನ್ನು ಮಾತ್ರ ಸೇರಿಸಬಹುದು ಎಂದು ಸೂಚಿಸಲಾಗಿದೆ. ಇಂಧನ, ವಿದ್ಯುತ್ ಸೇರಿದಂತೆ ವ್ಯವಹಾರ ನಡೆಸುವ ವೆಚ್ಚಗಳನ್ನು ಪ್ರತ್ಯೇಕವಾಗಿ ಗ್ರಾಹಕರಿಂದ ವಸೂಲಿಸುವುದು ಸರಿಯಲ್ಲ, ಇಂತಹ ಕ್ರಮ ಕೈಗೊಂಡರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಸಿಸಿಪಿಎ ತಿಳಿಸಿದೆ.

ತಲೆಮರೆಸಿಕೊಂಡಿದ್ದ ಆಪ್ ಶಾಸಕ ಬಂಧನ

• **ಪಟಿಯಾಲ:** ಅತ್ಯಾಚಾರ ಪ್ರಕರಣದಲ್ಲಿ ಆರು ತಿಂಗಳಿಂದ ತಲೆಮರೆಸಿಕೊಂಡಿದ್ದ ಆಮ್ ಆದ್ಮಿ ಪಕ್ಷದ ಶಾಸಕ ಹರ್ಮೀತ್ ಸಿಂಗ್ ಪಠಾಣ್‌ಮಜ್ರಾನನ್ನು ಪಂಜಾಬ್ ಪೊಲೀಸರು ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಮಂಗಳವಾರ ರಾತ್ರಿ ಬಂಧಿಸಿದ್ದಾರೆ. ತಾಂತ್ರಿಕ ಮಾಹಿತಿ ಮತ್ತು ಮಾನವ ಬುದ್ಧಿಮತ್ತೆಯ ಆಧಾರದ ಮೇಲೆ ಸನೌರ್ ಕ್ಷೇತ್ರದ ಶಾಸಕರನ್ನು ಗ್ವಾಲಿಯರ್‌ನ ಹೊರವಲಯದಲ್ಲಿ ಸೆರೆಹಿಡಿಯಲಾಗಿದೆ. ಪಠಾಣ್‌ಮಜ್ರಾ ಅವರನ್ನು ಪಟಿಯಾಲಕ್ಕೆ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಬಿಗಿ ಭದ್ರತೆಯ ನಡುವೆ ನಾಲ್ಕು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ವರುಣ್ ಶರ್ಮಾ ಖಚಿತಪಡಿಸಿದ್ದಾರೆ.

ಮಾವೋವಾದಿ ಹಿರಿಯ ಕಮಾಂಡರ್ ಶರಣು

• **ರಾಯ್ಪುರ:** ಛತ್ತೀಸ್‌ಗಢದ ನಕ್ಸಲ್ ವಿರೋಧಿ ಕಾರ್ಯಾಚರಣೆಗಳ ಪ್ರಮುಖ ಬೆಳವಣಿಗೆಯಲ್ಲಿ, ಹಿರಿಯ ಮಾವೋವಾದಿ ಕಮಾಂಡರ್ ಪಾಪಾ ರಾವ್ 17 ಕಾರ್ಯಕರ್ತರೊಂದಿಗೆ ಶರಣಾದರು. ಶರಣಾದ ನಕ್ಸಲರು ಜಗದಲ್ಪುರದ ಜಿಲ್ಲಾ ಕೇಂದ್ರಗಳಲ್ಲಿ ಪುನರ್ವಸತಿ ಪಡೆದರು. ಶರಣಾದ ನಕ್ಸಲರು ಎಕೆ-47 ಬಂದೂಕುಗಳು ಮತ್ತು ಇತರ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಅದೇರೀತಿ ಭದ್ರತಾ ಪಡೆಗಳು ಸುಮಾರು 10 ಲಕ್ಷ ನಗದನ್ನು ವಶಪಡಿಸಿಕೊಂಡವು. ಈ ವೇಳೆ, ಅಧಿಕಾರಿಗಳು ಅವರಿಗೆ ಸಂವಿಧಾನದ ಪ್ರತಿಯನ್ನು ನೀಡಿದ್ದಾರೆ. ಇದು ಅವರು ಪ್ರಜಾಪ್ರಭುತ್ವದ ಚೌಕಟ್ಟಿಗೆ ಮರಳುವ ಸಂಕೇತವಾಗಿದೆ.

ಪುರಿ ಜಗನ್ನಾಥನ ರತ್ನ ಭಂಡಾರ ಎಣಿಕೆ ಶುರು

• **ಪುರಿ:** 48 ವರ್ಷಗಳ ನಂತರ ಪುರಿ ಶ್ರೀ ಜಗನ್ನಾಥ ದೇವಾಲಯದಲ್ಲಿ ಬಹುನಿರೀಕ್ಷಿತ ರತ್ನ ಭಂಡಾರದ ಎಣಿಕೆ ಬುಧವಾರ ಪ್ರಾರಂಭವಾಗಿದೆ. ರತ್ನ ಭಂಡಾರವನ್ನು ಪ್ರವೇಶಿಸುವ ಶುಭಸಮಯ ಮಧ್ಯಾಹ್ನ 12.09 ಗಂಟೆಯಿಂದ ಮಧ್ಯಾಹ್ನ 1.45 ಗಂಟೆಯವರೆಗೆ ಇತ್ತು.



ಕಟ್ಟುನಿಟ್ಟಾಗಿ ನಿಯಮ ಪಾಲಿಸುವ ಮೂಲಕ ಅಧಿಕೃತ ಸಿಬ್ಬಂದಿ ಮತ್ತು ಸೇವಕರು ದೇವಾಲಯ ಪ್ರವೇಶಿಸುವುದರೊಂದಿಗೆ ಈ ಪ್ರಕ್ರಿಯೆ ಪ್ರಾರಂಭವಾಯಿತು. ಸೇವಕರು ಸಾಂಪ್ರದಾಯಿಕ ಉಡುಪಿನಲ್ಲಿ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ರತ್ನ ಭಂಡಾರದ ಆಭರಣಗಳನ್ನು ಎಣಿಕೆ ಮತ್ತು ತೂಕ ಮಾಡಲಾಗುತ್ತಿದ್ದು, 1978ರ ದಾಖಲೆಗಳೊಂದಿಗೆ ಈ ಎಣಿಕೆ ಹೊಂದಾಣಿಕೆ ಮಾಡಲಾಗುತ್ತಿದೆ. ಪಾರದರ್ಶಕತೆ ಖಚಿತಪಡಿಸಿಕೊಳ್ಳಲು, ವಿಡಿಯೋಗ್ರಫಿ, ಡಿಜಿಟಲ್ ಛಾಯಾಗ್ರಹಣ ಮತ್ತು 3ಡಿ ಮ್ಯಾಪಿಂಗ್ ಅನ್ನು ಕೈಗೊಳ್ಳಲಾಗಿದ್ದು, ರತ್ನಶಾಸ್ತ್ರಜ್ಞರು ಅಮೂಲ್ಯ ಕಲ್ಲುಗಳನ್ನು ಗುರುತಿಸುವಲ್ಲಿ ಸಹಾಯ ಮಾಡಿದ್ದಾರೆ. ಆಭರಣಗಳನ್ನು ಬಣ್ಣ-ಬಣ್ಣದ ಬಟ್ಟೆಗಳಲ್ಲಿ ಸುತ್ತಲಾಗುತ್ತದೆ. ವಿಶೇಷವಾಗಿ ಸಿದ್ಧಪಡಿಸಿದ ಪೆಟ್ಟಿಗೆಯಲ್ಲಿ ಭದ್ರಪಡಿಸಲಾಗುತ್ತದೆ. ಇದಕ್ಕೂ ಮೊದಲು, ರತ್ನ ಭಂಡಾರ ದಾಸ್ತಾನು ತಂಡದ ಸದಸ್ಯರು ಲಯನ್ ಗೇಟ್‌ನ ಮುಂದೆ ಭಗವಂತನಿಗೆ ತಲೆಬಾಗಿದ ನಂತರ ಶ್ರೀಮಂದಿರವನ್ನು ಪ್ರವೇಶಿಸಿದರು. .

ಐವಿಎಫ್‌ಆರ್‌ಟಿ ಯೋಜನೆ ವಿಸ್ತರಣೆಗೆ ಕೇಂದ್ರ ನಿರ್ಧಾರ

• **ಹೊಸದಿಲ್ಲಿ:** ವಲಸೆ ಮತ್ತು ವೀಸಾ ವ್ಯವಸ್ಥೆಗಳನ್ನು ಆಧುನೀಕರಿಸಲು ಐವಿಎಫ್‌ಆರ್‌ಟಿ ಯೋಜನೆಯನ್ನು ಐದು ವರ್ಷಗಳ ಕಾಲ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಈ ಯೋಜನೆ, ಏ.1, 2026ರಿಂದ ಮಾ.31, 2031 ರವರೆಗೆ ಮುಂದುವರಿಯಲಿದ್ದು, ಇದಕ್ಕೆ 1,800 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ವಲಸೆ, ವೀಸಾ ವಿತರಣೆ ಮತ್ತು ವಿದೇಶಿಯರ ನೋಂದಣಿ ಪ್ರಕ್ರಿಯೆಗಳನ್ನು ಏಕೀಕೃತ ವ್ಯವಸ್ಥೆಯಲ್ಲಿ ತರುವುದು ಇದರ ಉದ್ದೇಶವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ವೇದಿಕೆ, ವಲಸೆ ತಪಾಸಣಾ ಕೇಂದ್ರಗಳು, ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಗಳು(ಎಫ್‌ಆರ್‌ಆರ್‌ಒ) ಮತ್ತು ದತ್ತಾಂಶ ಕೇಂದ್ರಗಳ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲಿದೆ. ಪ್ರಯಾಣಿಕರ ಸಂಚಾರವನ್ನು ಸುಗಮಗೊಳಿಸಲು ಮೊಬೈಲ್ ಆಧಾರಿತ ಸೇವೆಗಳು ಮತ್ತು ಸ್ವಯಂ-ಸೇವಾ ಕಿಯೋಸ್ಕ್‌ಗಳನ್ನು ಪರಿಚಯಿಸಲಾಗುವುದು. ಅಕ್ರಮ ವಲಸೆ ನಿರ್ವಹಣೆ ಸೇರಿದಂತೆ ವಲಸೆ ಮತ್ತು ವಿದೇಶಿಯರ ಕಾಯ್ದೆ 2025ರ ಅಗತ್ಯತೆಗಳನ್ನು ಈ ವ್ಯವಸ್ಥೆ ಪೂರೈಸಲಿದೆ.

ಉಡಾನ್‌ಗೆ 28,840 ಕೋಟಿ ರೂ.: ಪ್ರಾದೇಶಿಕ ವಾಯು ಸಂಪರ್ಕ ಯೋಜನೆ(ಉಡಾನ್) ನವೀಕರಣಕ್ಕೆ ಒಪ್ಪಿಗೆ ನೀಡಿರುವ ಕೇಂದ್ರ ಸಚಿವ ಸಂಪುಟವು, ಈ ಯೋಜನೆಗಾಗಿ ಮುಂದಿನ ವರ್ಷಗಳಿಗೆ 28,840 ಕೋಟಿ ರೂ. ಮೀಸಲಿಡಲು ನಿರ್ಧರಿಸಿದೆ.

ವಿಮಾನನಿಲ್ದಾಣಗಳ ಅಭಿವೃದ್ಧಿ, ಸಂಬಂಧಿತ ಕಾರ್ಯಾಚರಣೆಗಳು ಮತ್ತು ನಿರ್ವಹಣಾ ಚಟುವಟಿಕೆಗಳು, ಹೆಲಿಪ್ಯಾಡ್‌ಗಳು ಮತ್ತು ಭಾರತ ನಿರ್ಮಿತ ವಿಮಾನಗಳ ಖರೀದಿಗೆ ಬೆಂಬಲ ನೀಡುವುದು ಇದರ ಉದ್ದೇಶ.

ಆಯವ್ಯಯದಲ್ಲಿ ಮಧ್ಯಮ ವರ್ಗದವರಿಗೆ ಹಲವು ಕ್ರಮ

• **ಹೊಸದಿಲ್ಲಿ:** ಕೇಂದ್ರ ಬಜೆಟ್‌ನಲ್ಲಿ ಮಧ್ಯಮ ವರ್ಗದವರು ಮತ್ತು ಸಣ್ಣ ಕೈಗಾರಿಕೆಗಳನ್ನು ಬೆಂಬಲಿಸಲು ಹಲವಾರು ಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ತಿಳಿಸಿದ್ದಾರೆ. 32 ತಿದ್ದುಪಡಿಗಳೊಂದಿಗೆ ಹಣಕಾಸು ಮಸೂದೆ 2026 ಅನ್ನು ಲೋಕಸಭೆ ಬುಧವಾರ ಧ್ವನಿ ಮತದ ಮೂಲಕ ಅಂಗೀಕರಿಸಿದೆ. ವಿತ್ತೀಯ ಕೊರತೆ 2020-21ರಲ್ಲಿ ಶೇ.9.3ರಷ್ಟಿತ್ತು, ಇದು 2026-27ರ ಆರ್ಥಿಕ ವರ್ಷದಲ್ಲಿ ಜಿಡಿಪಿಯ ಶೇ.4.3ಕ್ಕೆ ಇಳಿಕೆಯಾಗುವ ನಿರೀಕ್ಷೆಯಿದೆ. ರಾಷ್ಟ್ರೀಯ ಸಾಲ ಮತ್ತು ಜಿಡಿಪಿ ಅನುಪಾತ ಇಳಿಕೆಯ ಹಾದಿಯಲ್ಲಿದೆ ಎಂದು ತಿಳಿಸಲಾಗಿದೆ.

ನಾಗರಿಕರಿಗೆ ವಿನಾಯಿತಿಗಳು: ವಿದೇಶಿ ಪ್ರವಾಸದ ಪ್ಯಾಕೇಜ್‌ಗಳ ಮೇಲಿನ ಮೂಲದಲ್ಲೇ ತೆರಿಗೆ ಸಂಗ್ರಹ(ಟಿಸಿಎಸ್) ದರವನ್ನು ಶೇ.20ರಿಂದ ಶೇ.2ಕ್ಕೆ ಇಳಿಸಲಾಗಿದೆ. 17 ಪ್ರಮುಖ ಔಷಧಿಗಳಿಗೆ ಕಸ್ಟಮ್ಸ್ ಸುಂಕದ ವಿನಾಯಿತಿ ನೀಡಲಾಗಿದೆ ಮತ್ತು ವಿಮಾನ ನಿಲ್ದಾಣದ ಲಗೇಜ್‌ಗಳ ಮೇಲಿನ ಸುಂಕಗಳನ್ನು ತರ್ಕಬದ್ಧಗೊಳಿಸಲಾಗಿದೆ. ಮರುಮೌಲ್ಯಮಾಪನ ಪ್ರಕ್ರಿಯೆಗಳ ಸಮಯದಲ್ಲಿಯೂ ಪರಿಷ್ಕೃತ ಆದಾಯ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸಲು ಈಗ ಅವಕಾಶ ನೀಡಲಾಗಿದೆ. ಸಣ್ಣ ಕೈಗಾರಿಕೆಗಳಿಗೆ(ಎಂಎಸ್‌ಎಂಇ) ಸಂಬಂಧಿಸಿದಂತೆ, ದಂಡ ವಿಧಿಸುವುದಕ್ಕಿಂತ ಹೆಚ್ಚಾಗಿ ಸೌಲಭ್ಯಗಳನ್ನು ಒದಗಿಸುವತ್ತ ನೀತಿಗಳನ್ನು ಬದಲಾಯಿಸಲಾಗಿದೆ. 2025-26ರಲ್ಲಿ ರಾಷ್ಟ್ರೀಯ ಜಿಎಸ್‌ಟಿ ಸಂಗ್ರಹ ಶೇ.8.3ರಷ್ಟು ಬೆಳವಣಿಗೆ ಕಂಡಿದೆ. ತೆರಿಗೆ ಕಡಿತದ ನಂತರ ಈ ಫೆಬ್ರವರಿಯಲ್ಲಿ ಚಿಲ್ಲರೆ ಪ್ರಯಾಣಿಕ ವಾಹನಗಳ ಮಾರಾಟ ಶೇ.26.1ರಷ್ಟು ಏರಿಕೆಯಾಗಿದೆ.

ಎಲ್ಲ ಹೈಸ್ಕೂಲ್‌ಗಳಿಗೆ ಶೀಘ್ರ ಇಂಟರ್ನೆಟ್

• **ಹೊಸದಿಲ್ಲಿ:** ದೇಶದ ಎಲ್ಲಾ ಹೈಸ್ಕೂಲ್‌ಗಳಿಗೆ ಮುಂದಿನ 2-3 ವರ್ಷಗಳಲ್ಲಿ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸಂಪರ್ಕ ಒದಗಿಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ತಿಳಿಸಿದ್ದಾರೆ. ರಾಜ್ಯಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಮಾಹಿತಿ ನೀಡಿದ ಅವರು, ಈಗಾಗಲೇ ದೇಶದ ಸುಮಾರು ಶೇ.60 ಹೈಸ್ಕೂಲ್‌ಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಲಾಗಿದೆ ಎಂದು ಹೇಳಿದರು. ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ(ಎಐ)ಯನ್ನು ಹೆಚ್ಚಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒತ್ತು ನೀಡುತ್ತಿವೆ. ಶಿಕ್ಷಕರಿಗೆ ಎಐ ಜ್ಞಾನ ನೀಡಲು ತರಬೇತಿ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಚಿವರು ವಿವರಿಸಿದರು. ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) 2020 ಪ್ರಕಾರ, ಎಐ ಸೇರಿದಂತೆ ಸಮಕಾಲೀನ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗಿದೆ. 3ನೇ ತರಗತಿಯಿಂದಲೇ ವಿದ್ಯಾರ್ಥಿಗಳಿಗೆ ಎಐ ಮೂಲಭೂತ ಜ್ಞಾನ ನೀಡುವ ಯೋಜನೆಯಿದೆ ಎಂದು ಹೇಳಿದರು. ಕಂಪ್ಯೂಟರ್ ಸೈನ್ಸ್ ಹಾಗೂ ಇನ್ಫರ್ಮ್ಯಾಟಿಕ್ಸ್ ಪಠ್ಯಪುಸ್ತಕಗಳಲ್ಲಿ ಈಗಾಗಲೇ ಎಐ, ಇಂಟರ್‌ನೆಟ್ ಆಫ್ ಥಿಂಗ್ಸ್ ಸೇರಿದಂತೆ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಲಾಗಿದೆ.

80 ಕಿಮೀ ದೂರದ ಗುರಿಗಳನ್ನು ಹೊಡೆದುರುಳಿಸುವ ಸಾಮರ್ಥ್ಯ

ಐಎಎಫ್ ವಾಯು ಬಾಣ ಹೆಲಿಕಾಪ್ಟರ್

• **ಹೊಸದಿಲ್ಲಿ:** ಭಾರತೀಯ ವಾಯುಪಡೆಯು(ಐಎಎಫ್) 'ವಾಯು ಬಾಣ' ಎಂಬ ಹೆಲಿಕಾಪ್ಟರ್‌ನಿಂದ ಹಾರಿಸಬಹುದಾದ ಟಾರ್ಗೆಟಿಂಗ್ ಡ್ರೋನ್‌ಗಾಗಿ ವಿನ್ಯಾಸ ಮತ್ತು ಅಭಿವೃದ್ಧಿಗೆ ವಿನಂತಿಪತ್ರ (ಆರ್‌ಎಫ್‌ಪಿ) ಹೊರಡಿಸಿದೆ. ಇದು ಸ್ಥಳೀಯವಾಗಿ ವಾಯು ದಾಳಿ ಸಾಮರ್ಥ್ಯವನ್ನು ವೃದ್ಧಿಸಲು ಮಹತ್ವದ ಹೆಜ್ಜೆಯಾಗಿದೆ.

ಆರ್‌ಎಫ್‌ಪಿ ಪ್ರಕಾರ, ಒಟ್ಟು 10 ಡ್ರೋನ್ ಘಟಕಗಳು ಅಗತ್ಯವಿದ್ದು, ಜತೆಗೆ ಎರಡು ವಾಯು ನಿಯಂತ್ರಣ ಕೇಂದ್ರಗಳು, ಎರಡು ಭೂ ನಿಯಂತ್ರಣ ಕೇಂದ್ರಗಳು ಹಾಗೂ ಸಂಬಂಧಿತ ಪೇಲೋಡ್‌ಗಳು ಮತ್ತು ಸ್ಪೇರ್‌ಗಳು ಅಗತ್ಯವಿವೆ.

ವಾಯು ಬಾಣವನ್ನು ಗಾಳಿಯಿಂದ ಉಡಾವಣೆ ಮಾಡಬಹುದಾದ ಲೋಯಿಟರಿಂಗ್ ಮ್ಯೂನಿಷನ್ ಮತ್ತು ಕಣ್ಗಾವಲು ವೇದಿಕೆಯಾಗಿ ವಿನ್ಯಾಸಗೊಳಿಸಲಾಗಿದೆ. ಈ ಘಟಕಗಳನ್ನು ಹೆಲಿಕಾಪ್ಟರ್‌ನಿಂದ ಕೆಳಕ್ಕೆ ಹಾಕಿದಾಗ, ಅವು ಸ್ವತಂತ್ರವಾಗಿ ರೆಕ್ಕೆಗಳನ್ನು ತೆರೆದುಕೊಂಡು ನಿಯಂತ್ರಿತ ಹಾರಾಟ ನಡೆಸುತ್ತವೆ. ಈ ವ್ಯವಸ್ಥೆ 15 ನಿಮಿಷಗಳಲ್ಲಿ 80 ಕಿಮೀ ಅಥವಾ 30 ನಿಮಿಷಗಳಲ್ಲಿ 50 ಕಿಮೀ ಹಾರಾಟ ನಡೆಸುವ ಸಾಮರ್ಥ್ಯ ಹೊಂದಿದೆ. ಜಾಗತಿಕ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್ ಲಭ್ಯವಿಲ್ಲದ ಪರಿಸರದಲ್ಲೂ ಕೃತಕ ಬುದ್ಧಿಮತ್ತೆಯ ಮೂಲಕ ಗುರಿ ಗುರುತಿಸುವಿಕೆ ಮತ್ತು ಸಂಚರಣೆ ನಡೆಸುವ ವೈಶಿಷ್ಟ್ಯಗಳನ್ನು ಇದು ಹೊಂದಿದ್ದು, 150 ಅಡಿಗಳಿಂದ 8,000 ಅಡಿ ಎತ್ತರದವರೆಗೆ ಕಾರ್ಯಾಚರಣೆ ನಡೆಸಬಲ್ಲದು.



ಪೇಲೋಡ್ ಮತ್ತು ನಿಯಂತ್ರಣ ವ್ಯವಸ್ಥೆ: ಈ ಖರೀದಿ, ಎರಡು ವಾಯುಗಾಮಿ ಮತ್ತು ಎರಡು ಭೂ-ನಿಯಂತ್ರಣ ಕೇಂದ್ರಗಳನ್ನು ಒಳಗೊಂಡಿದೆ. ಈ ಡ್ರೋನ್‌ಗಳು 500 ರಿಂದ 1,000 ಗ್ರಾಂ ತೂಕದ ಬದಲಾಯಿಸಬಹುದಾದ ಪೇಲೋಡ್‌ಗಳನ್ನು ಹೊರಬಲ್ಲವು. ಇವುಗಳಲ್ಲಿ ಎಲೆಕ್ಟ್ರೋ-ಆಪ್ಟಿಕಲ್ ಸೆನ್ಸರ್‌ಗಳು ಮತ್ತು ಸ್ಟ್ರೈಕ್ ವಾರ್ ಹೆಡ್‌ಗಳು ಸೇರಿವೆ. ಅಲ್ಲದೆ, 57 ಎಂಎಂ ಮತ್ತು 80 ಎಂಎಂ ರಾಕೆಟ್‌ಗಳೊಂದಿಗೆ ಸಂಯೋಜಿಸಲು ಅಗತ್ಯವಾದ ಸೌಲಭ್ಯಗಳನ್ನು ಇದು ಹೊಂದಿರುತ್ತವೆ.

ಯೋಜನೆಯ ಕಾಲಮಿತಿ: ಹೆಲಿಕಾಪ್ಟರ್‌ಗಳ ಆಕ್ರಮಣಕಾರಿ ಸಾಮರ್ಥ್ಯವನ್ನು ಹೆಚ್ಚಿಸಲು ಗಾಂಧಿನಗರದ ಪ್ರಾದೇಶಿಕ ಏರೋಸ್ಪೇಸ್ ಇನ್ನೋವೇಶನ್ ವಿಭಾಗ ಈ ಪ್ರಸ್ತಾವನೆ ಹೊರಡಿಸಿದೆ. ಒಪ್ಪಂದಕ್ಕೆ ಸಹಿ ಹಾಕಿದ 12 ತಿಂಗಳೊಳಗೆ ಈ ಘಟಕಗಳ ಸಂಪೂರ್ಣ ವಿತರಣೆ ಮತ್ತು ಸ್ಥಾಪನೆಯನ್ನು ಪೂರ್ಣಗೊಳಿಸಬೇಕೆಂದು ಸೂಚಿಸಲಾಗಿದೆ.

1971ರ ಮಾ.25 ಕ್ರೂರ ಕರಾಳ ದಿನ: ಬಾಂಗ್ಲಾ ಪ್ರಧಾನಿ

ಪಾಕಿಸ್ತಾನ ಯೋಜಿತ ನರಮೇಧ

• **ಢಾಕಾ:** ಪಾಕಿಸ್ತಾನದ 1971ರ ಆಪರೇಷನ್ ಸರ್ಚ್‌ಲೈಟ್ ಒಂದು ಪೂರ್ವಯೋಜಿತ ಜನಾಂಗೀಯ ನರಮೇಧವಾಗಿದ್ದು, ಚರಿತ್ರೆಯಲ್ಲೇ ತೀರಾ ಕ್ರೂರ ಮತ್ತು ಕರಾಳ ದಿನವಾಗಿದೆ ಎಂದು ಬಾಂಗ್ಲಾ ಪ್ರಧಾನಿ ತಾರಿಖ್ ರಹಮಾನ್ ಟೀಕಿಸಿದ್ದಾರೆ. ಜನಾಂಗೀಯ ನರಮೇಧ ದಿನದ ಹಿನ್ನೆಲೆ ರಹಮಾನ್ ಈ ರೀತಿ ಹೇಳಿಕೆ ನೀಡಿದ್ದಾರೆ.

ಆಪರೇಷನ್ ಸರ್ಚ್‌ಲೈಟ್ ಹೆಸರಲ್ಲಿ 1971ರಲ್ಲಿ ಪಾಕ್‌ನ ಆಕ್ರಮಣಕಾರಿ ಶಕ್ತಿಗಳು ಮತ್ತವರ ಬೆಂಬಲಿಗರು 30 ಲಕ್ಷ ಬಂಗಾಳಿಗಳನ್ನು ನಿರ್ದಯಿಗಳಂತೆ ಹತ್ಯೆಗೈದಿದ್ದರು ಮತ್ತು 2 ರಿಂದ 4 ಲಕ್ಷ ಮಿಗಿಲು ಬಂಗಾಳಿ ಮಹಿಳೆಯರು, ಹುಡುಗಿಯರ ಮೇಲೆ ಬರ್ಬರ ಅತ್ಯಾಚಾರವೆಸಗಿದ್ದರು. ಈ ಪೈಕಿ ಲಕ್ಷಾಂತರ ಹೆಣ್ಣುಗಳನ್ನು ತಥಾಕಥಿತ ರೇಪ್ ಕ್ಯಾಂಪ್‌ಗಳಲ್ಲಿ ನಿರ್ಬಂಧಿಸಿಟ್ಟು ನಂತರವೂ ಅವರಿಗೆ ನಿರಂತರ ಲೈಂಗಿಕ ಕಿರುಕುಳ ನೀಡಿದ್ದರು. ಈ ಅಮಾನುಷ ಜನಾಂಗೀಯ ನರಮೇಧ ಕಾಂಡವಿಡಿದ ಮಾ.25ನ್ನು ಬಾಂಗ್ಲಾ ಇಂದಿಗೂ ಜನಾಂಗೀಯ ನರಮೇಧ ದಿನವಾಗಿ ಸಂಸ್ಮರಿಸುತ್ತಿದೆ.

ಸ್ವಾತಂತ್ರ್ಯಪ್ರೇಮಿ ಬಾಂಗ್ಲಾದೇಶದ ಇತಿಹಾಸದಲ್ಲೇ 1971ರ ಮಾ.25 ತೀರಾ ಕರಾಳ ಮತ್ತು ಕ್ರೂರ ದಿನವಾಗಿದೆ. ಅಂದು ರಾತ್ರಿ ಪಾಕ್‌ನ ಆಕ್ರಮಣಕಾರಿ ಶಕ್ತಿಗಳು ಆಪರೇಷನ್ ಸರ್ಚ್‌ಲೈಟ್ ಹೆಸರಲ್ಲಿ ಬಾಂಗ್ಲಾದ ನಿಶ್ಯಸ್ತ್ರ ಜನರ ವಿರುದ್ಧ ಚರಿತ್ರೆಯಲ್ಲೇ ಕಂಡರಿಯದ ಅತ್ಯಂತ ಹೀನಾಯ ನರಮೇಧ ಕಾಂಡವೆಸಗಿದ್ದರು ಎಂದು ರಹಮಾನ್ ಹೇಳಿಕೆಯಲ್ಲಿ ನೋವು ವ್ಯಕ್ತಪಡಿಸಿದ್ದಾರೆ.



ಬಾಂಗ್ಲಾ ವಿಮೋಚನಾ ಹೋರಾಟದ ಹೆಮ್ಮೆ ಹಾಗೂ ಮಹತ್ವವನ್ನು ಪ್ರಸಕ್ತ ಮತ್ತು ಭಾವೀ ಪೀಳಿಗೆಗಳಿಗೆ ತಲುಪಿಸಲು, ಅವರಲ್ಲಿ ಈ ಬಗ್ಗೆ ಅರಿವು ಮೂಡಿಸುವುದಕ್ಕಾಗಿ, ಮಾ.25ರ ಜನಾಂಗೀಯ ನರಮೇಧದ ಬಗ್ಗೆ ಅರಿತುಕೊಳ್ಳುವುದು ಅತ್ಯವಶ್ಯ. ಬಾಂಗ್ಲಾ ವಿಮೋಚನೆಗೆ ಹೋರಾಡಿ ಹುತಾತ್ಮರಾದವರ ತ್ಯಾಗ ಬಲಿದಾನಗಳ ಗೌರವಿಸುವುದಕ್ಕಾಗಿ ನಾವೆಲ್ಲರೂ ವಿಮೋಚನಾ ಹೋರಾಟದ ಮೂಲ ಸ್ಫೂರ್ತಿಯಾಗಿರುವ ಸಮಾನತೆ, ಮಾನವ ಪ್ರತಿಷ್ಠೆ, ಸಾಮಾಜಿಕ ನ್ಯಾಯದ ಆಧಾರದಲ್ಲಿ ದೇಶ-ಸಮಾಜವನ್ನು ಕಟ್ಟೋಣ. ನ್ಯಾಯೋಚಿತವಾದ, ಅಭಿವೃದ್ಧ, ಸಂಪನ್ನ, ಸ್ವಾವಲಂಬಿ ಮತ್ತು ಪ್ರಜಾತಾಂತ್ರಿಕ ಬಾಂಗ್ಲಾದೇಶವನ್ನು ಕಟ್ಟಲು ನಾವೆಲ್ಲ ಒಟ್ಟಾಗಿ ದುಡಿಯೋಣ ಎಂದು ಪ್ರಧಾನಿ ರಹಮಾನ್ ಹೇಳಿಕೆಯಲ್ಲಿ ಕರೆ ನೀಡಿದ್ದಾರೆ.

ಸಂಪಾದಕೀಯ

ದೂರಗಾಮಿ ಪರಿಣಾಮದ ತೀರ್ಪು

ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಯು ಭಾರತೀಯೇತರ ಮತಗಳಿಗೆ ಮತಾಂತರಗೊಂಡರೆ ಆತನ ಎಸ್‌ಸಿ ಸ್ಥಾನಮಾನ ನಷ್ಟವಾಗಲಿದೆ ಎಂಬುದಾಗಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಅತ್ಯಂತ ಮಹತ್ವದ್ದೂ ಹಾಗೂ ದೂರಗಾಮಿ ಪರಿಣಾಮ ಬೀರುವಂತಹುದೂ ಆಗಿದೆ. ಹಿಂದೂ, ಬೌದ್ಧ ಅಥವಾ ಸಿಖ್ ಧರ್ಮಕ್ಕೆ ಸೇರಿದವರಿಗೆ ಮಾತ್ರ ಪರಿಶಿಷ್ಟ ಜಾತಿಯ ಸ್ಥಾನಮಾನ ಸಿಗುತ್ತದೆ ಎಂಬುದಾಗಿ ನ್ಯಾಯಾಲಯವು ಸ್ಪಷ್ಟಪಡಿಸಿದೆ. ಆಂಧ್ರಪ್ರದೇಶದಲ್ಲಿ ಕ್ರೈಸ್ತ ಮತಕ್ಕೆ ಮತಾಂತರಗೊಂಡ



ವ್ಯಕ್ತಿಯೊಬ್ಬರು ತನಗೆ ಅಕ್ಕಲ ರಾಮಿ ರೆಡ್ಡಿ ಎಂಬ ವ್ಯಕ್ತಿ ಜಾತಿನಿಂದನೆ ಮಾಡಿ ಹಲ್ಲೆ ನಡೆಸಿರುವುದಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರು. ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿಯಲ್ಲಿ ಅವರು ಈ ದೂರು ದಾಖಲಿಸಿದ್ದರು. ಆದರೆ ಆಂಧ್ರ ಹೈಕೋರ್ಟ್ ಅವರ ದೂರನ್ನು ಪುರಸ್ಕರಿಸಲು ನಿರಾಕರಿಸಿತ್ತು. ಅದರ ವಿರುದ್ಧ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಲಾಗಿತ್ತು. ಇದೀಗ ಸುಪ್ರೀಂ ಕೋರ್ಟ್ ಕೂಡಾ ಆಂಧ್ರ ಹೈಕೋರ್ಟಿನ ತೀರ್ಪನ್ನು ಎತ್ತಿ ಹಿಡಿದು, ಒಬ್ಬ ವ್ಯಕ್ತಿಯು 1950ರ ಸಾಂವಿಧಾನಿಕ ಆದೇಶದ ನಿಬಂಧನೆಯಡಿ ಉಲ್ಲೇಖಿಸಲಾದ ಧರ್ಮದ ಬದಲಾಗಿ ಬೇರೊಂದು ಶ್ರದ್ಧೆ ಹೊಂದಿದ್ದಲ್ಲಿ ಆ ಧರ್ಮದ ಜತೆಗೇ, ತಾನು ಎಸ್‌ಸಿ ಸಮುದಾಯಕ್ಕೂ ಸೇರಿದವನೆಂದು ಹೇಳಿಕೊಳ್ಳಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಆಮಿಷಕ್ಕೊಡ್ಡಿ ಕ್ರೈಸ್ತ ಅಥವಾ ಇಸ್ಲಾಮ್ ಮತಕ್ಕೆ ಮತಾಂತರಗೊಳಿಸುವ ಪ್ರಯತ್ನಗಳು ಎಗ್ಗಿಲ್ಲದೆ ನಡೆಯುತ್ತಿರುವುದರ ಮಧ್ಯೆ ನ್ಯಾಯಾಲಯವು ನೀಡಿರುವ ತೀರ್ಪು ಮಹತ್ವದ ಸಂದೇಶರವಾನಿಸಿದೆ. ಮತಾಂತರಗೊಂಡ ನಂತರವೂ ಪರಿಶಿಷ್ಟರಿಗೆ ಸಂವಿಧಾನರೀತ್ಯಾ ದೊರಕುವಂತಹ ಮೀಸಲಾತಿ ಮುಂತಾದ ಸೌಲಭ್ಯಗಳನ್ನು ಪಡೆಯುವುದಕ್ಕೆ ಕೆಲವರು ಯತ್ನಿಸುತ್ತಿದ್ದು, ನ್ಯಾಯಾಲಯದ ತೀರ್ಪು ಅದಕ್ಕೆ ತಡೆಯೊಡ್ಡಿದೆ. ಎಸ್‌ಸಿ ಸ್ಥಾನಮಾನದಲ್ಲಿ ದೊರಕುವ ಸೌಲಭ್ಯಗಳು ಮತಾಂತರವಾದ ಮೇಲೂ ಮುಂದುವರಿಯುವುದೆಂದು ಮತಾಂತರ ಮಾಡುವವರು ತಪ್ಪು ಮಾಹಿತಿ ನೀಡುವುದಿದೆ. ಕೆಲವು ರಾಜಕೀಯ ಪಕ್ಷಗಳೂ ಈ ರೀತಿ ಮತಾಂತರವಾದವರಿಗೆ ಮೀಸಲಾತಿಯಂತಹ ಸೌಲಭ್ಯ ವಿಸ್ತರಿಸಲು ಅವಕಾಶ ಕಲ್ಪಿಸುವುದಿದೆ. ಇದರಿಂದಾಗಿ ಹಿಂದೂ ಧರ್ಮದಿಂದ ಮತಾಂತರವಾಗಲು ಹೆಚ್ಚು ಕುಮ್ಮಕ್ಕು ಕೊಟ್ಟಂತಾಗುತ್ತಿದೆ. ಇದರಿಂದ ಮತಾಂತರ ಪಿಡುಗಿಗೆ ಉತ್ತೇಜನ ನೀಡಿದಂತಾಗಿದೆ.

ಇನ್ನೀಗ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನ ನಂತರವಾದರೂ ಮತಾಂತರ ಪಿಡುಗಿಗೆ ಕಡಿವಾಣ ಬಿದ್ದೀತೆಂದು ಆಶಿಸಬೇಕಾಗಿದೆ.

ಯುದ್ಧ: ಅಂದುಕೊಂಡಿದ್ದು ಬೇರೆ, ಆದದ್ದು ಬೇರೆ!

ಅಮೆರಿಕ ಜಾಗತಿಕ ರಾಜಕಾರಣದಲ್ಲಿ 'ಸರ್ವಶಕ್ತ' ಎಂಬ ಭ್ರಮೆ ಈ ಯುದ್ಧದಲ್ಲಿ ಖಂಡಿತ ಮುರಿದಿದೆ. ಮಿಲಿಟರಿ ಶ್ರೇಷ್ಠತೆ ಮತ್ತು ರಾಜಕೀಯ ಬುದ್ಧಿವಂತಿಕೆ ಒಂದೇ ಅಲ್ಲ ಎಂಬ ಪಾಠ ಅಮೆರಿಕ ಇನ್ನೊಮ್ಮೆ ಕಲಿಯಬೇಕಾಗಿ ಬಂದಿದೆ.

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಈ ಯುದ್ಧ ಆರಂಭಿಸಿದ್ದು ಯಾರು? ಈಗ ನಿಲ್ಲಿಸುವವರು ಯಾರು?

ಯುದ್ಧದ ಆರಂಭ ದಿನಗಳಿಗೆ ಬರೋಣ. 2026ರ ಫೆಬ್ರವರಿ 28ರ ಮುಂಜಾನೆ ಮಧ್ಯಪ್ರಾಚ್ಯದ ಆಕಾಶ ಕೆಂಪಾಯಿತು. ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಅನಿರೀಕ್ಷಿತ ವಾಯು ದಾಳಿ ನಡೆಸಿ, ಸುಪ್ರೀಂ ಲೀಡರ್ ಅಲಿ ಖಮೇನಿ ಸೇರಿದಂತೆ ಹಲವು ಹಿರಿಯ ಮಿಲಿಟರಿ ಅಧಿಕಾರಿಗಳನ್ನು ಹತ್ಯೆ ಮಾಡಿತು. ಒಂದು ತಿಂಗಳಿಗೂ ಹೆಚ್ಚು ಕಾಲ ಕಳೆದ ನಂತರವೂ ಈ ಯುದ್ಧ ನಿಂತಿಲ್ಲ, ನಿಲ್ಲುವ ಲಕ್ಷಣಗಳೂ ಕಾಣಿಸುತ್ತಿಲ್ಲ. ಜಗತ್ತಿನ ಅತ್ಯಂತ ಶಕ್ತಿಶಾಲಿ ರಾಷ್ಟ್ರ ಅಮೆರಿಕ ಈ ಯುದ್ಧದಲ್ಲಿ ಯಾಕೆ ಸಿಲುಕಿತು? ಯಾರ ನಿಯಂತ್ರಣಕ್ಕೂ ನಿಲುಕದ ರೀತಿಯಲ್ಲಿ ಇದು ಮುಂದಕ್ಕೆ ಹೋಗಿರುವುದೇಕೆ? ಕೊನೆಗೆ ಗೆಲ್ಲುವವರು ಯಾರು? ಸೋಲುವವರು ಯಾರು? ಈ ಪ್ರಶ್ನೆಗಳು ಇಂದು ಇಡೀ ಜಗತ್ತನ್ನು ಕಾಡುತ್ತಿವೆ.

ಈ ಯುದ್ಧದ ತಕ್ಷಣದ ಕಾರಣ ಇರಾನಿನ ಪರಮಾಣು ಕಾರ್ಯಕ್ರಮ ಎಂದು ಹೇಳಲಾಗುತ್ತಿದೆ. 2015ರ ಜೆಸಿಪಿಒಎ ಒಪ್ಪಂದದಿಂದ 2018ರಲ್ಲಿ ಟ್ರಂಪ್ ಹೊರಬಿದ್ದ ನಂತರ, ಅಮೆರಿಕ–ಇರಾನ್ ಸಂಬಂಧ ತೀವ್ರ ಹದಗೆಟ್ಟಿತ್ತು. 2024ರಲ್ಲಿ ಇಸ್ರೇಲ್ ಮತ್ತು ಇರಾನ್ ನೇರ ದಾಳಿ–ಪ್ರತಿದಾಳಿಯಲ್ಲಿ ತೊಡಗಿದ ನಂತರ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. 2025ರ ಜೂನ್ ತಿಂಗಳಲ್ಲಿ ಇಸ್ರೇಲ್–ಅಮೆರಿಕ 'ಹನ್ನೆರಡು ದಿನದ ಯುದ್ಧ' ಮಾಡಿ ಇರಾನಿನ ಪರಮಾಣು ಸ್ಥಾಪನೆಗಳ ಮೇಲೆ ದಾಳಿ ನಡೆಸಿದ್ದವು. ಅದಾದ ನಂತರ ತಾತ್ಕಾಲಿಕ ಕದನ ವಿರಾಮ ಉಂಟಾಗಿ ಮತ್ತೆ ಮಾತುಕತೆ ಆರಂಭವಾಗಿತ್ತು. ಆದರೆ ಮಾತುಕತೆ ವಿಫಲಗೊಂಡಿತು.

2026ರ ಜನವರಿಯಲ್ಲಿ ಇರಾನಿನಲ್ಲಿ ಬೃಹತ್ ಪ್ರತಿಭಟನೆಗಳು ಭುಗಿಲೆದ್ದವು. ಐದು ಕೋಟಿ ಮಂದಿ ಬೀದಿಗಿಳಿದ ಆ ಅಭೂತಪೂರ್ವ ಪ್ರತಿಭಟನೆಯಲ್ಲಿ ಸಾವಿರಾರು ಮಂದಿ ಸರ್ಕಾರದ ದಮನ ನೀತಿಗೆ ಬಲಿಯಾದರು. ಇದನ್ನು ನೋಡಿ ಟ್ರಂಪ್ ಅವರಿಗೆ ಒಂದು ಲೆಕ್ಕಾಚಾರ ಹುಟ್ಟಿತು: ಇರಾನ್ ಒಳಗಿನಿಂದ ದುರ್ಬಲಗೊಂಡಿದೆ, ಇದೇ ಸಕಾಲ. ಖಮೇನಿ ಮೃತರಾದರೆ ಇರಾನ್ ಆಡಳಿತ ಕುಸಿಯುತ್ತದೆ, ವೆನೆಜುವೆಲಾ ರೀತಿ 'ರೆಜಿಮ್ ಚೇಂಜ್' ಆಗುತ್ತದೆ ಎಂದು ತಿಳಿದರು. ಅದೇ ಊಹೆಯ ಮೇಲೆ ಫೆಬ್ರವರಿ 28ರಂದು ಅಮೆರಿಕ–ಇಸ್ರೇಲ್ ದಾಳಿ ನಡೆಯಿತು. ಇದೇ ಅಮೆರಿಕದ ಮೊದಲ ತಪ್ಪು ಲೆಕ್ಕಾಚಾರ.

ಖಮೇನಿ ಹತ್ಯೆಯಾಗುತ್ತಿದ್ದಂತೆ ಇರಾನ್ ಕುಸಿಯುತ್ತದೆ ಎಂದು ಅಮೆರಿಕ ನಂಬಿತ್ತು. ಆದರೆ ಆದದ್ದು ತದ್ವಿರುದ್ಧ. ಯಾವ ದೇಶದಲ್ಲಾದರೂ ವಿದೇಶಿ ದಾಳಿ ನಡೆದಾಗ ಜನ ಒಗ್ಗೂಡುತ್ತಾರೆ ಈ ಮೂಲ ಮನೋವಿಜ್ಞಾನ ತತ್ತ್ವವನ್ನೇ ಅಮೆರಿಕ ಮರೆತಿತ್ತು. ಇರಾನ್ ನಾಯಕತ್ವ ಶೂನ್ಯದಲ್ಲಿ ಮುಗ್ಗರಿಸಿ ಮುಳುಗುವ ಬದಲು, ದೇಶಪ್ರೇಮದ ಮೂಲಕ ಒಗ್ಗಟ್ಟು ತೋರಿತು. ಅಮೆರಿಕ–ಇಸ್ರೇಲ್ ಜಂಟಿ ಕಾರ್ಯಾಚರಣೆ ಇರಾನಿನ 31 ಪ್ರಾಂತ್ಯಗಳ ಪೈಕಿ 26ರಲ್ಲಿ ನೂರಾರು ಕಡೆ ದಾಳಿ ನಡೆಸಿದ ಮೇಲೂ ಇರಾನ್, ಇಸ್ರೇಲ್ ಮತ್ತು ಅಮೆರಿಕ ನೆಲೆಗಳ ಮೇಲೆ ಪ್ರತ್ಯಾಘಾತ ಮಾಡುತ್ತಲೇ ಉಳಿಯಿತು. ಇಸ್ರೇಲ್ ದೇಶವು, ಇರಾನಿನ ಬಹುತೇಕ ಬ್ಯಾಲಿಸ್ಟಿಕ್ ಕ್ಷಿಪಣಿ ನೆಲೆಗಳನ್ನು ನಾಶಮಾಡಿದ ನಂತರವೂ, ಇರಾನ್ ದೇಶವು ಇಸ್ರೇಲ್ ಮೇಲೆ ದಾಳಿ ನಿಲ್ಲಿಸಿಲ್ಲ. ಜತೆಗೆ, ಅಮೆರಿಕ ಮಿತ್ರ ದೇಶಗಳ ವಿರುದ್ಧದ ತನ್ನ ದಾಳಿಯ ಪ್ರಮಾಣವನ್ನೂ ಕಡಿಮೆ ಮಾಡಿಲ್ಲ.

ಖುದ್ದು ಟ್ರಂಪ್ ಅವರೇ ಇರಾನ್ ಇಷ್ಟೊಂದು ಪ್ರತಿರೋಧ ತೋರಿಸುತ್ತದೆ ಎಂದು ನಿರೀಕ್ಷಿಸಿರಲಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲ, ಈ ಯುದ್ಧಕ್ಕೆ ಅಮೆರಿಕದ ರಕ್ಷಣಾ ಕಾರ್ಯದರ್ಶಿಯೇ ಕಾರಣ ಎಂದು ಬೇರೆಯವರ ಮೇಲೆ ಜವಾಬ್ದಾರಿ ಹೊರಿಸಲು ಯತ್ನಿಸಿದ್ದಾರೆ. ಇದು ಅಮೆರಿಕ ಯುದ್ಧಕ್ಕೆ ಕೈ ಹಾಕಿ ಎಡವಿದೆ ಎಂಬ ಅನಿವಾರ್ಯ ಸತ್ಯದ ಸ್ಪಷ್ಟ ಸಾಕ್ಷ್ಯ. ಅಮೆರಿಕದ ಇರಾನ್ ಕಡೆ ಇನ್ನೊಬ್ಬ ಸಲಹೆಗಾರ ವಿಟ್ಕಾಫ್ ಮತ್ತು ಕುಶ್ನರ್ ಕೂಡ ಒಂದು ಒಪ್ಪಂದ ತಲುಪುವುದು 'ತೀರಾ ಕಷ್ಟ, ಬಹುತೇಕ ಅಸಾಧ್ಯ' ಎಂದು ಟ್ರಂಪ್‌ಗೆ ಮೊದಲೇ ಎಚ್ಚರಿಸಿದ್ದರು. ಅಷ್ಟಾದರೂ ಯುದ್ಧಕ್ಕೆ ಧುಮುಕಲಾಯಿತು.

ಈ ಯುದ್ಧ ಈಗ ಒಂದೆರಡು ದೇಶಗಳ ನಡುವಿನ ಸಮರ ಉಳಿದಿಲ್ಲ, ಹನ್ನೆರಡಕ್ಕೂ ಹೆಚ್ಚು ದೇಶಗಳಿಗೆ ವ್ಯಾಪಿಸಿ, ಜಗತ್ತಿನ ಪ್ರಮುಖ ತೈಲ ಜಲಮಾರ್ಗ ಹಾರ್ಮೂಜ್ ಜಲಸಂಧಿ ಬಂದ್ ಆಗಿದೆ. 2,300ಕ್ಕೂ ಹೆಚ್ಚು ಮಂದಿ ಈಗಾಗಲೇ ಬಲಿಯಾಗಿದ್ದಾರೆ. ಇರಾನ್ ಅಮೆರಿಕದ ಮೇಲೆ ನೇರ ದಾಳಿ ಮಾಡಲಾಗದ ಕಾರಣ ಅಮೆರಿಕ ಸ್ನೇಹಿ ರಾಷ್ಟ್ರಗಳನ್ನೇ ಗುರಿಯಾಗಿಸಿದೆ. ಸೌದಿ ಅರೇಬಿಯಾ, ಯುಎಇ, ಕತಾರ್, ಕುವೈತ್, ಜೋರ್ಡಾನ್ ಈ ತೈಲ ಸಿರಿವಂತ ದೇಶಗಳು ಯಾವ ತಪ್ಪೂ ಮಾಡದೆ ಯುದ್ಧದ ಕೇಂದ್ರಕ್ಕೆ ಸಿಕ್ಕಿ ಬೆಂದಿವೆ.

ಹಿಂದೆ ಅಮೆರಿಕ ಯುದ್ಧ ಆರಂಭಿಸಿ "ಜೊತೆಗೆ ಬನ್ನಿ" ಎನ್ನುತ್ತಿತ್ತು, ಎಲ್ಲ ದೇಶಗಳು ಅದಕ್ಕೆ ತಲೆ ಬಾಗುತ್ತಿದ್ದವು. ಆದರೆ ಈ ಯುದ್ಧದಲ್ಲಿ ಅಮೆರಿಕದ ಧೋರಣೆ ಉಲ್ಟಾ ಆಗಿದೆ. ಅರಬ್ ರಾಷ್ಟ್ರಗಳ ಬೆಂಬಲ ಸಿಗಲಿಲ್ಲ, ಯೂರೋಪ್ ಬಹಿರಂಗವಾಗಿ ತನ್ನ ಅಸಮ್ಮತಿ ವ್ಯಕ್ತಪಡಿಸಿತು. ವಿಶ್ವಸಂಸ್ಥೆ ಮತ್ತು ಹೆಚ್ಚಿನ ದೇಶಗಳು ಈ ದಾಳಿಯನ್ನು ಖಂಡಿಸಿದವು. ಅಮೆರಿಕ ಪರ ಬಹಿರಂಗವಾಗಿ ನಿಂತದ್ದು ಅರ್ಜೆಂಟೀನಾ, ಜರ್ಮನಿ, ಉಕ್ರೇನ್ ಅಂಥ ಬೆರಳೆಣಿಕೆಯ ದೇಶಗಳು ಮಾತ್ರ. ಇದು ಜಾಗತಿಕ ರಾಜಕಾರಣದಲ್ಲಿ ಅಮೆರಿಕದ ಪ್ರಭಾವ ಎಷ್ಟರ ಮಟ್ಟಿಗೆ ಕ್ಷೀಣಿಸಿದೆ ಎಂಬುದನ್ನು ತೋರಿಸುತ್ತದೆ. ಸ್ಪೇನ್ ಅಂತೂ ನೇರವಾಗಿಯೇ ಅಮೆರಿಕದ ವಿರುದ್ಧ ನಿಂತಿತು. ಆಗ ಟ್ರಂಪ್ ಅವರೇ ಸ್ಪೇನ್ ವಿರುದ್ಧ ಟ್ಯಾರಿಫ್ ಗುಮ್ಮವನ್ನೂ ಹೊರಿಸಿದ್ದರು. ಫ್ರಾನ್ಸ್ ವಿರುದ್ಧವೂ ಟ್ರಂಪ್ ಕಿಡಿಕಾರಿದ್ದರು.

ಮಧ್ಯಪ್ರಾಚ್ಯದ 'ಪೊಲೀಸ್' ಆಗಿ ದಶಕಗಳ ಕಾಲ ವರ್ತಿಸಿದ ಅಮೆರಿಕಕ್ಕೆ ಇಂದು ಮಧ್ಯಸ್ಥಿಕೆಗಾಗಿ ಪಾಕಿಸ್ತಾನ, ಈಜಿಪ್ಟ್, ಒಮಾನ್ ಮತ್ತು ಟರ್ಕಿಗಳ ಮೊರೆ ಹೋಗಬೇಕಾದ ಪರಿಸ್ಥಿತಿ ಎದುರಾಗಿದೆ. ಈ ದೇಶಗಳು ಪರದೆಯ ಹಿಂದೆ ಅಮೆರಿಕ–ಇರಾನ್ ಸಂಧಾನಕ್ಕೆ ಮಧ್ಯಸ್ಥಿಕೆ ವಹಿಸುತ್ತಿವೆ. ಇರಾನ್ ಜತೆ ನೇರ ಮಾತುಕತೆ ನಡೆಸಲಾಗದ, ಸ್ವತಃ ತಾನು ಆರಂಭಿಸಿದ ಯುದ್ಧ ನಿಲ್ಲಿಸಲು ಮತ್ತೊಬ್ಬರ ನೆರವು ಬೇಡಬೇಕಾದ ಈ ಸ್ಥಿತಿ ಅಮೆರಿಕದ ರಾಜತಾಂತ್ರಿಕ ದಿವಾಳಿತನದ ನಿದರ್ಶನ. ಒಂದು ಅರ್ಥದಲ್ಲಿ, ಪ್ರಪಂಚದ ಏಕೈಕ ಮಹಾಶಕ್ತಿ ಎಂದೇ ಹೆಸರಾಗಿದ್ದ ರಾಷ್ಟ್ರ ಇಂದು ತಾನು ಹುಟ್ಟಿಸಿದ ಬೆಂಕಿ ನಂದಿಸಲು ಮತ್ತೊಬ್ಬರ ನೀರಿಗಾಗಿ ಕಾಯುತ್ತಿದೆ.

ಅಮೆರಿಕದ ಇತಿಹಾಸದಲ್ಲಿ ಈ ಯುದ್ಧಕ್ಕೆ ಅತ್ಯಂತ ಹತ್ತಿರದ ಹೋಲಿಕೆ ವಿಯೆಟ್ನಾಂ ಯುದ್ಧ. ಅಲ್ಲಿಯೂ ಅಮೆರಿಕ ತ್ವರಿತ ವಿಜಯ ನಿರೀಕ್ಷಿಸಿ ಯುದ್ಧಕ್ಕೆ ಧುಮುಕಿ, ದಶಕಗಳ ಕಾಲ ಕಾಡಿನಲ್ಲಿ ಬೆಂಡಾಗಿ, ಕೊನೆಗೆ ಮೂಟೆ ಕಟ್ಟಿಕೊಂಡು ಹಿಂದಿರುಗಬೇಕಾಯಿತು. ಇರಾನ್ ಕಡೆಯ ಮೂಲಗಳ ಪ್ರಕಾರ, ಯುದ್ಧ ಆರಂಭದ 15 ದಿನದ ನಂತರವೇ ಅಮೆರಿಕಕ್ಕೆ ಈ ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಅರ್ಥವಾಗಿದೆ. ಆದರೆ ಹೊರಬರುವ ದಾರಿ ಇಲ್ಲದೆ ಸಿಲುಕಿಕೊಂಡಿದೆ. ಟ್ರಂಪ್ ಅವರ ಮೊಗದಲ್ಲಿ ಸಂಧಾನದ ಅಪೇಕ್ಷೆ ಕಂಡಿದ್ದೂ ಇದೇ ಕಾರಣಕ್ಕೆ.

ಆರ್ಥಿಕ ಒತ್ತಡವೂ ಅಮೆರಿಕಕ್ಕೆ ತಟ್ಟಿದೆ. ಹಾರ್ಮೂಜ್ ಜಲಸಂಧಿ ಬಂದ್ ಆಗಿರುವ ಕಾರಣ ಜಾಗತಿಕ ತೈಲ ಮಾರುಕಟ್ಟೆ ಹೊಯ್ದಾಡುತ್ತಿದೆ. ಏಷ್ಯಾ ದೇಶಗಳು ಮಧ್ಯಪ್ರಾಚ್ಯ ತೈಲದ ಮೇಲೆ ಭಾರಿ ಅವಲಂಬಿತವಾಗಿರುವ ಕಾರಣ ಹಲವು ರಾಷ್ಟ್ರಗಳ ಆರ್ಥಿಕತೆ ಸಂಕಷ್ಟಕ್ಕೆ ಸಿಲುಕಿದೆ. ಅಮೆರಿಕದ ಒಳಗೂ ಯುದ್ಧ ವಿರೋಧಿ ದನಿಗಳು ಮೊಳಗುತ್ತಿವೆ. ಟ್ರಂಪ್ ಯುದ್ಧ ನಿಲ್ಲಿಸಲು ಮುಂದಾಗಿದ್ದಾರೆ. ಆದರೆ ಇರಾನ್ ಸಿದ್ಧವಿಲ್ಲ, ಇಸ್ರೇಲ್ ಮಿಲಿಟರಿ ಇನ್ನೂ ಹಲವು ವಾರ ಹೋರಾಡಬೇಕು ಎನ್ನುತ್ತಿದೆ.

ಈ ಯುದ್ಧದಲ್ಲಿ ಸೋಲಿನ ವ್ಯಾಖ್ಯಾನ ಸಂಕೀರ್ಣ. ಮಿಲಿಟರಿ ದೃಷ್ಟಿಯಿಂದ ಅಮೆರಿಕ–ಇಸ್ರೇಲ್ ಇರಾನಿನ ಪರಮಾಣು ಸ್ಥಾಪನೆಗಳು ಮತ್ತು ಮಿಲಿಟರಿ ಸಾಮರ್ಥ್ಯಕ್ಕೆ ಗಣನೀಯ ಹಾನಿ ಮಾಡಿವೆ. ಆದರೆ ರಾಜಕೀಯ ದೃಷ್ಟಿಯಿಂದ ಇರಾನ್ ಒಳಗೆ 'ರೆಜಿಮ್ ಚೇಂಜ್' ಮಾಡಬೇಕೆಂಬ ಅಮೆರಿಕದ ಮೂಲ ಗುರಿ ಈಡೇರಿಲ್ಲ, ಅರಬ್ ಜಗತ್ತಿನ ಬೆಂಬಲ ಸಿಗಲಿಲ್ಲ, ಮಧ್ಯಪ್ರಾಚ್ಯದಲ್ಲಿ ಅಮೆರಿಕದ ವರ್ಚಸ್ಸು ಮತ್ತಷ್ಟು ಕ್ಷೀಣಿಸಿದೆ.

ಇರಾನ್ ಮಿಲಿಟರಿ ಪೆಟ್ಟನ್ನೇ ಅನುಭವಿಸಿರಬಹುದು. ಆದರೆ ಅದು "ಸೋತಿಲ್ಲ". ನಾಶವಾಗಿಲ್ಲ, ರಕ್ಷಣಾ ಇಲಾಖೆ ಅಂದಾಜಿನ ಪ್ರಕಾರ ಇರಾನ್ ತನ್ನ ಮಿಸೈಲ್ ಸಾಮರ್ಥ್ಯ ಮರಳಿ ಕಟ್ಟಿಕೊಳ್ಳಲು ದಶಕ ಬೇಕಾಗಬಹುದು. ಆದರೆ ತನ್ನ ಸೈದ್ಧಾಂತಿಕ ನೆಲೆ ಮಾತ್ರ ಗಟ್ಟಿಯಾಗಿ ಉಳಿದಿದೆ. ಮಧ್ಯಪ್ರಾಚ್ಯದಲ್ಲಿ ಮಾತ್ರ ಅಲ್ಲ, ಜಾಗತಿಕ ಮಟ್ಟದಲ್ಲಿ 'ಅಮೆರಿಕ ವಿರೋಧಿ' ಅಲೆ ಮತ್ತಷ್ಟು ಬಲಗೊಂಡಿದೆ.

ಆದ್ದರಿಂದ ಈ ಯುದ್ಧ ಯಾರಿಗೂ ಪೂರ್ತಿ ಗೆಲುವು ತರದ, ಯಾರಿಗೂ ಪೂರ್ತಿ ಸೋಲು ತರದ ಶೂನ್ಯ ಸಮರವಾಗಿ ಇತಿಹಾಸದ ಪುಟ ಸೇರುವ ಸಾಧ್ಯತೆಯೇ ಹೆಚ್ಚಾಗಿ ಕಾಣಿಸುತ್ತಿದೆ. ಹಾಗಾದರೆ ಈ ಯುದ್ಧ ನಿಲ್ಲುವುದು ಯಾವಾಗ? ಉತ್ತರ ಸದ್ಯಕ್ಕೆ ಯಾರ ಬಳಿಯೂ ಇಲ್ಲ. ಒಂದಂತೂ ಸ್ಪಷ್ಟ ಅಮೆರಿಕ ಜಾಗತಿಕ ರಾಜಕಾರಣದಲ್ಲಿ 'ಸರ್ವಶಕ್ತ' ಎಂಬ ಭ್ರಮೆ ಈ ಯುದ್ಧದಲ್ಲಿ ಖಂಡಿತ ಮುರಿದಿದೆ. ಮಿಲಿಟರಿ ಶ್ರೇಷ್ಠತೆ ಮತ್ತು ರಾಜಕೀಯ ಬುದ್ಧಿವಂತಿಕೆ ಒಂದೇ ಅಲ್ಲ ಎಂಬ ಪಾಠ ಅಮೆರಿಕ ಇನ್ನೊಮ್ಮೆ ಕಲಿಯಬೇಕಾಗಿ ಬಂದಿದೆ.

ಪುರಾಣಗಳ ಕುರಿತು ಕಿಂಚಿತ್

ಮ-ದ್ವಯಂ ಭ-ದ್ವಯಂ ಚೈವ ಬ್ರ-ತ್ರಯಂ ವ-ಚತುಷ್ಟಯಮ್।
ಅ-ನಾ-ಪ-ಲಿಂ-ಗ-ಕೂ-ಸ್ಕಾನಿ ಪುರಾಣಾನಿ ಪ್ರಚಕ್ಷತೇ ॥

ಮ-ದಿಂದ ಆರಂಭವಾಗುವುದು ಎರಡು, ಭ-ದಿಂದ ಆರಂಭವಾಗುವುದು ಎರಡು, ಬ್ರ-ದಿಂದ ಆರಂಭವಾಗುವುದು ಮೂರು, ವ-ದಿಂದ ಆರಂಭವಾಗುವುದು ನಾಲ್ಕು, ಅಕಾರ, ನಕಾರ, ಪಕಾರ, ಲಿಂಕಾರ, ಗಕಾರ, ಕೂಕಾರ, ಸ್ಕಕಾರದಿಂದ ಆರಂಭವಾಗುವುದು ಒಂದೊಂದು. ಹೀಗೆ ಹದಿನೆಂಟು ಪುರಾಣಗಳು -ಎಂಬುದು ಸೂತ್ರರೂಪೀ ಈ ಶ್ಲೋಕದ ಅರ್ಥ. ವಿಷಯವನ್ನು ನೆನಪಿಟ್ಟುಕೊಳ್ಳಲು ಸಂಸ್ಕೃತದಲ್ಲಿ ಸೂತ್ರ ರಚನೆಯನ್ನು ಕಾಣಬಹುದು. ಈ ಶ್ಲೋಕವೂ ಪುರಾಣಗಳ ಹೆಸರನ್ನು ಸುಲಭದಲ್ಲಿ ನೆನಪಿಟ್ಟುಕೊಳ್ಳಲು ರಚಿಸಿದ ಸೂತ್ರರೂಪದ ಶ್ಲೋಕ. ಹದಿನೆಂಟು ಪುರಾಣಗಳ ಮೊದಲ

ಶ್ಲೋಕ ಸಾಗರ
ಡಾ. ಸೋಂದಾ ಭಾಸ್ಕರ ಭಟ್



ಅಕ್ಷರವನ್ನು ಜೋಡಿಸಿ ಈ ಸೂತ್ರ ರೂಪದ ಶ್ಲೋಕವನ್ನು ರಚಿಸಲಾಗಿದೆ. ಇವುಗಳ ಹೆಸರು ಹೀಗಿವೆ.

ಮತ್ಸ್ಯ ಪುರಾಣ (14,000), ಮಾರ್ಕಂಡೇಯ ಪುರಾಣ (9000), ಭವಿಷ್ಯತ್ ಪುರಾಣ (24,500), ಭಾಗವತ ಪುರಾಣ (18,000), ಬ್ರಹ್ಮ ಪುರಾಣ (13,000), ಬ್ರಹ್ಮಾಂಡ ಪುರಾಣ (12,200), ಬ್ರಹ್ಮ ವೈವರ್ತ ಪುರಾಣ (18,000), ವರಾಹ ಪುರಾಣ (24,000), ವಾಯುಪುರಾಣ (24,000), ವಾಮನ ಪುರಾಣ (10,000), ವಿಷ್ಣು ಪುರಾಣ (23,000), ಅಗ್ನಿ ಪುರಾಣ (16,000), ನಾರದ ಪುರಾಣ (25,000), ಪದ್ಮಪುರಾಣ (55,000), ಲಿಂಗ ಪುರಾಣ (11,000), ಗರುಡ ಪುರಾಣ (18,000), ಕೂರ್ಮ ಪುರಾಣ (18,000), ಸ್ಕಂಧ ಪುರಾಣ (81,000). ಇಲ್ಲಿ ಸೂತ್ರ ಶ್ಲೋಕ ಹೇಳಿದ ಪ್ರಕಾರ ಪುರಾಣವನ್ನು ಉಲ್ಲೇಖಿಸಿ ಆಯಾ ಪುರಾಣಗಳಲ್ಲಿರುವ ಶ್ಲೋಕ ಸಂಖ್ಯೆಯನ್ನೂ ನೀಡಲಾಗಿದೆ.

ಭಗವಾನ್ ವೇದವ್ಯಾಸರು ರಚಿಸಿದ ಮಹಾಭಾರತದ ಒಂದು ಲಕ್ಷ ಶ್ಲೋಕಗಳು ಹಾಗೂ ಹದಿನೆಂಟು ಪುರಾಣಗಳಲ್ಲಿರುವ ಒಟ್ಟೂ 4,13,700 ಶ್ಲೋಕಗಳನ್ನು ಸೇರಿಸಿದರೆ ಐದು ಲಕ್ಷಕ್ಕೂ ಹೆಚ್ಚು ಶ್ಲೋಕಗಳಾಗುತ್ತವೆ. ಇವೆಲ್ಲವೂ ವ್ಯಾಸರ ರಚನೆಯೆಂದೇ ಪ್ರಸಿದ್ಧ. ಇಷ್ಟೇ ಪ್ರಮಾಣದ ಉಪಪುರಾಣಗಳಿವೆ. ಇವುಗಳ ರಚನೆಯಲ್ಲೂ ವ್ಯಾಸರ ಯೋಗದಾನವಿದೆ.

ಪ್ರಳಯ ಕಾಲದಲ್ಲಿ ಶತಕೋಟಿ ಗ್ರಂಥ ಪರಿಮಿತವಾದ ಪುರಾಣ ರಾಶಿಯು ಸುಟ್ಟು ಹೋಗಲು ಮಹಾವಿಷ್ಣುವಿನಿಂದ ಇವು ಚತುರ್ಮುಖನಿಗೆ ಉಪದೇಶಿಸಲ್ಪಟ್ಟವಂತೆ. ಕಾಲಕ್ರಮದಲ್ಲಿ ಇವು ಶಿಥಿಲವಾಗಲು, ಮಹಾವಿಷ್ಣುವು ವ್ಯಾಸರೂಪದಿಂದ ಅವತರಿಸಿ, ಇವುಗಳನ್ನು ನಾಲ್ಕು ಲಕ್ಷ ಶ್ಲೋಕಗಳುಳ್ಳ ಹದಿನೆಂಟು ಪುರಾಣಗಳಾಗಿಸಿ ಪ್ರಚಾರ ಪಡಿಸಿದನು ಎಂಬ ಮಾತಿದೆ. ಪುರಾಣಗಳು ಕಥೆಯ ಹಂದರ. ಶಾಶ್ವತ ತತ್ವವನ್ನು, ಜೀವನ ಮೌಲ್ಯವನ್ನೂ, ವ್ಯಾವಹಾರಿಕ ಸಭ್ಯತೆಯನ್ನು ಇವು ಬೋಧಿಸುತ್ತವೆ. ಕ್ಲಿಷ್ಟತರವಾದ ವೇದಾರ್ಥಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಪುರಾಣಗಳ ರಚನೆಯಾಯಿತು ಎಂಬುದು ವಿಮರ್ಶಕರ ಅಭಿಪ್ರಾಯ. ಈ ಹದಿನೆಂಟು ಪುರಾಣಗಳು ಯಾರ ಕುರಿತು ಹೇಳುತ್ತವೆ ಎಂಬುದಕ್ಕೆ ಈ ಮುಂದಿನ ಶ್ಲೋಕದಲ್ಲಿ ವಿವರಣೆಯಿದೆ.

ಅಷ್ಟಾದಶ ಪುರಾಣೇಷು ದಶಭಿಃ ಗೀಯತೇ ಶಿವಃ।
ಚತುರ್ಭಿಃ ಭಗವಾನ್ ಬ್ರಹ್ಮಾ ದ್ವಾಭ್ಯಾಂ ದೇವೀ ತಥಾ ಹರಿಃ॥

ಹದಿನೆಂಟು ಪುರಾಣಗಳಲ್ಲಿ ಹತ್ತು ಪುರಾಣಗಳು ಶಿವನ ಕುರಿತಾಗಿವೆ. ನಾಲ್ಕು ಪುರಾಣಗಳು ಬ್ರಹ್ಮನ ಕುರಿತಾಗಿವೆ. ಎರಡು ದೇವಿಯ ಪರವಾಗಿ, ಮತ್ತೆರಡು ವಿಷ್ಣುವಿನ ಪರವಾಗಿ ಇವೆ.

ಸಾತ್ವಿಕ, ರಾಜಸ, ತಾಮಸ ಪುರಾಣಗಳಾಗಿಯೂ ವಿಂಗಡಿಸುತ್ತಾರೆ.

ಹರಿಮಹಾತ್ಮ್ಯೆಯನ್ನು ವರ್ಣಿಸುವ ಪುರಾಣಗಳು ಸಾತ್ವಿಕ, ಬ್ರಹ್ಮ ಮಹಾತ್ಮ್ಯೆಯನ್ನು ವರ್ಣಿಸುವ ಪುರಾಣಗಳು ರಾಜಸ, ತಾಮಸಾಂಶಗಳನ್ನು ವಿವರಿಸುವ ಪುರಾಣಗಳನ್ನು ತಾಮಸ ಪುರಾಣಗಳು ಎಂದು ಗುರುತಿಸಿದ್ದಾರೆ.

ಶಕ್ತಿ ಎಂಬ ದೌರ್ಬಲ್ಯ

ದುರ್ಬಲನ ಮೇಲೆ ಪ್ರಚಂಡ ಶಕ್ತಿಯುಳ್ಳ ಒಬ್ಬ ಆಕ್ರಮಣ ಮಾಡಿದರೆ ಅದರ ಪರಿಣಾಮವು ಎಲ್ಲರಿಗೂ ಗೊತ್ತಿರುತ್ತದೆ. ಆ ಯುದ್ಧವನ್ನು ಗೆದ್ದರೂ ಶಕ್ತಿವಂತನ ಗೌರವ ಹೆಚ್ಚುವುದಿಲ್ಲ, ಸೋತರಂತೂ ಹೇಗೂ ಗೌರವವಿಲ್ಲ.

ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ಕೆಲವು ಮನುಷ್ಯರಲ್ಲಿ ಭ್ರಮೆಗಳಿರುತ್ತವೆ. ಶಕ್ತಿಯಿದ್ದರೆ ತಾನು ಪರಿಪೂರ್ಣ ಎಂಬುದೂ ಅವುಗಳಲ್ಲಿ ಒಂದು.

ಶಕ್ತಿ ಎಲ್ಲವನ್ನೂ ಸಾಧಿಸಲಾರದು. ವಿಚಿತ್ರ ಅಂದರೆ ಯಾವುದು ಶಕ್ತಿ ಎಂದು ನಾವು ತಿಳಿಯುತ್ತೇವೋ ಅದು ನಮ್ಮ ದೌರ್ಬಲ್ಯವೂ ಆಗಿಬಿಡುವುದು. ಶಕ್ತಿ ಅಂದರೆ ಸಾಮಾನ್ಯ ಗ್ರಹಿಕೆ ಏನು? ದೇಹದಲ್ಲಿ ತುಂಬಿಕೊಂಡ ಬಲ. ಇನ್ನೊಬ್ಬರನ್ನು ಸುಲಭವಾಗಿ ಘಾಸಿಗೊಳಿಸಬಹುದಾದ ಆಯುಧಗಳ ಬಲ. ಹಣ, ಅಧಿಕಾರದ ಬಲ, ಬುದ್ಧಿಯ ಬಲ. ಈಗಲೀಗ ಅತ್ಯಾಧುನಿಕ ತಂತ್ರಜ್ಞಾನದ ಬಲವೂ ಈ ಪಟ್ಟಿಗೆ ಸೇರಿಕೊಂಡಿದೆ. ಮನುಷ್ಯನಿಗೆ ಅಥವಾ ಯಾವುದೇ ಜೀವಿಗೆ ಅನ್ನಿ, ಶಕ್ತಿ ಯಾಕೆ ಬೇಕು? ಒಂದು, ತನ್ನನ್ನು ತಾನು ರಕ್ಷಿಸಿಕೊಳ್ಳುವುದಕ್ಕೆ. ಇನ್ನೊಂದು, ಅನ್ಯರನ್ನು ಅಂಜಿಸುವುದಕ್ಕೆ. ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ಶಕ್ತಿ ಸಂಗ್ರಹ ಬೇಕು ಎನ್ನುವುದಕ್ಕೆ ಸಮರ್ಥನೆಯುಂಟು. ಆದರೆ ಇನ್ನೊಬ್ಬರನ್ನು ಹೆದರಿಸುವುದಕ್ಕೆ ನಮಗೆ ಶಕ್ತಿ ಬೇಕು ಎಂಬುದು ಸಮರ್ಥನೀಯವಲ್ಲ. ಇನ್ನೊಬ್ಬನನ್ನು ಹೆದರಿಸುವುದು ಅನ್ನುವುದು ಅಷ್ಟಕ್ಕೆ ನಿಲ್ಲುವುದಿಲ್ಲ, ಹೆದರಿಸಿ, ಅವನಲ್ಲಿದ್ದ ಏನನ್ನೋ ತನ್ನ ಸ್ವಾಧೀನಕ್ಕೆ ಪಡೆಯುವಲ್ಲಿಗೆ ಮುಟ್ಟುತ್ತದೆ. ಆಗ ದುರ್ಬಲನಿಗೆ ಪ್ರಪಂಚದಲ್ಲಿ ಬದುಕುವ ಅವಕಾಶವನ್ನು ನಿರಾಕರಿಸಿದ ಹಾಗಾಗುತ್ತದೆ.

ಹೀಗೆ ಅನ್ಯರನ್ನು ಪೀಡಿಸಿ, ಹೆದರಿಸಿ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವುದಾಗಲಿ, ಅವರ ಸಂಪತ್ತನ್ನು (ಹೊನ್ನು, ಮಣ್ಣು, ಹೆಣ್ಣು) ಬಲಾತ್ಕಾರದಿಂದ ಸೆಳೆದಿಟ್ಟುಕೊಳ್ಳುವುದಾಗಲಿ, ಶಕ್ತಿಯಿಂದ ಸಾಧ್ಯವಾದೀತು. ಉಳಿದವರ ಬಾಯಿ ಮುಚ್ಚಿಸುವುದೂ ಸಾಧ್ಯವಾದೀತು. ಆದರೆ ಅವರ ಮನಸ್ಸನ್ನು ಮುಚ್ಚಿಸಬಹುದೆ? ನೊಂದವರ ಮೌನವನ್ನು, ಅಸಹಾಯಕರ ತಿರಸ್ಕಾರವನ್ನು ಮುಚ್ಚಬಹುದೆ? ಯಾವ ಶಕ್ತಿಯು ಭೌತಿಕ ಸಂಪತ್ತನ್ನು ಸೆಳೆಯುವುದಕ್ಕೆ ಅನುಕೂಲವಾಯಿತೋ ಅದೇ ಶಕ್ತಿ ಉಳಿದವರಿಂದ ತಿರಸ್ಕರಿಸಲ್ಪಟ್ಟಾಗ ಅದು ಶಕ್ತಿಯಾಗಿ ಉಳಿಯುವುದಿಲ್ಲ, ಅದು ದೌರ್ಬಲ್ಯವಾಗುತ್ತದೆ. ಶಕ್ತನ ಅಹಂಕಾರ ಕರಗುತ್ತದೆ. ಶಕ್ತಿಯು ಹೊರಲಾರದ ಒಜ್ಜೆಯಾಗುತ್ತದೆ.

ಇದಕ್ಕೆ ಉದಾಹರಣೆ ಮಹಾಭಾರತದಲ್ಲಿ ಬರುವ ಒಂದು ಪ್ರಕರಣ. ಪಾಂಡವ ಮತ್ತು ಕೌರವ ಸೇನೆಗಳೆರಡೂ ಯುದ್ಧ ಸನ್ನದ್ಧವಾಗಿ ನಿಂತ ಹೊತ್ತು, ಅವರಿಗೆ ನೆರವನ್ನು ನೀಡುವುದಕ್ಕಾಗಿ ಬಂದವನು ರುಕ್ಮಿ. ರುಕ್ಮಿ ಅಂದರೆ ಕೃಷ್ಣನ ಮಡದಿ ರುಕ್ಮಿಣಿಯ ಅಣ್ಣ. ರುಕ್ಮಿಣಿ ಕೃಷ್ಣನನ್ನು ಮದುವೆಯಾಗುವುದನ್ನು ವಿರೋಧಿಸಿದವನು. ಅವನಿಗೆ ಸ್ನೇಹಿತರಾಗಿದ್ದವರು ದುಷ್ಟರಾದ ಜರಾಸಂಧ, ಶಿಶುಪಾಲ ಮೊದಲಾದವರು. ಹಾಗಾಗಿ ಅವನ ಸ್ವಭಾವವೂ ದುಷ್ಟವೇ. ಅವನಿಗೆ ಈ ಯುದ್ಧದ ವರ್ತಮಾನ ತಿಳಿಯಿತು. ತನ್ನ ಒಂದು ಅಕ್ಷೋಹಿಣಿ ಬಲದೊಂದಿಗೆ ಬಂದ. ಮೊದಲು ಪಾಂಡವರಿಗೆ ಸಹಾಯ ಮಾಡುತ್ತೇನೆ ಅಂದ. ತನ್ನ ಬಲವೇ ಬಲ. ಅದಿಲ್ಲದೆ ನೀವು ಗೆಲ್ಲಲಾರಿರಿ ಎನ್ನುವಂತಿದ್ದ ಅವನ ಅಹಂಕಾರವನ್ನು ಕಂಡು ಪಾಂಡವರು ಅವನ ಸಹಾಯವನ್ನು ನಿರಾಕರಿಸಿದರು.

ರುಕ್ಮಿ ಅಲ್ಲಿಂದ ದುರ್ಯೋಧನನಲ್ಲಿಗೆ ಹೋಗಿ, "ನಿನ್ನ ವಿರೋಧಿಗಳಾದ ಪಾಂಡವರನ್ನು ಗೆದ್ದುಕೊಡುತ್ತೇನೆ" ಅಂದ. ದುರ್ಯೋಧನ ಮತ್ತು ರುಕ್ಮಿ ಇಬ್ಬರ ಸ್ವಭಾವವೂ ಒಂದೇ ರೀತಿ.

ಆದರೂ (ಅಥವಾ ಹಾಗಾಗಿಯೇ) ದುರ್ಯೋಧನನೂ ರುಕ್ಮಿಯ ಸಹಾಯವನ್ನು ತಿರಸ್ಕರಿಸಿದ. ತಾನೊಬ್ಬನೇ ಶಕ್ತ, ತನ್ನ ಸಹಾಯವೇ ಈ ಯುದ್ಧಕ್ಕೆ ಬಹಳ ಮುಖ್ಯ ಎಂಬಂತಿದ್ದ ರುಕ್ಮಿಗೆ ಇದರಿಂದ ನಿರಾಶೆಯಾಗಿರಬಹುದು. ಅವನು ಬಾಯಿ ಮುಚ್ಚಿಕೊಂಡು ಹೊರಟು ಹೋದ. ಮುಂದೊಂದು ಸಂದರ್ಭದಲ್ಲಿ ಅವನ ಸೊಕ್ಕನ್ನು ಕಂಡು ಬಲರಾಮ ಅವನನ್ನು ಹೊಡೆದು ಕೊಂದ.



ರುಕ್ಮಿ ಶಕ್ತನಿದ್ದ, ನಿಜ. ಅವನಿಗೆ ಕೃಷ್ಣನೊಂದಿಗೆ ಇದ್ದ ಪೂರ್ವವಿರೋಧವೂ ಕ್ರಮೇಣ ಶಮನವಾಗಿರಬಹುದು. ಅಂತಹವನ ಸಹಾಯವನ್ನು ಪಡೆದುಕೊಂಡಿದ್ದರೆ ಪಾಂಡವರಿಗೆ ಅನುಕೂಲವೇ ಆಗುತ್ತಿತ್ತು. ದುರ್ಯೋಧನನಿಗಾದರೂ ಅಷ್ಟೇ. ಒಬ್ಬ ಪ್ರಬಲನ ಸಹಾಯ ಪಾಂಡವರನ್ನು ಸೋಲಿಸುವುದಕ್ಕೆ ಪ್ರಯೋಜನಕರವಾಗುತ್ತಿತ್ತು. ಆದರೂ ರುಕ್ಮಿಯಂತಹ ಅಹಂಕಾರಿಯ ಶಕ್ತಿಯನ್ನು ಎರಡೂ ಪಕ್ಷದವರು ತಿರಸ್ಕರಿಸಿದರು. ಅವನ ಸಹಾಯ ಪಡೆದು ಯುದ್ಧವನ್ನು ಗೆದ್ದಿದ್ದರೂ ನೆಮ್ಮದಿ ಇರುತ್ತಿರಲಿಲ್ಲ. "ನನ್ನ ಸಹಾಯವಿಲ್ಲದಿದ್ದರೆ ಅವರು ಗೆಲ್ಲುತ್ತಿರಲಿಲ್ಲ" ಎಂದು ಎಲ್ಲ ಕಡೆ ಪ್ರಚಾರ ಮಾಡಿಕೊಂಡು ಬರುವಂತಹ ವ್ಯಕ್ತಿ ಈ ರುಕ್ಮಿ. ಹೋಗಿ ಹೋಗಿ ಅವನಂತಹವನ ಸಹಾಯವು ಬೇಕೆ? ಒಂದು ವೇಳೆ ಸೋತರಂತೂ ಕೇಳುವುದೇ ಬೇಡ. 'ನೋಣ ತಿಂದು ಜಾತಿ ಕೆಡುವುದು' ಅನ್ನುವ ಮಾತು ಉಂಟಷ್ಟೆ? ಅತ್ತ ಹೊಟ್ಟೆಯೂ ತುಂಬಲಿಲ್ಲ, ಇತ್ತ ಜಾತಿಯೂ ಉಳಿಯಲಿಲ್ಲ, ರುಕ್ಮಿಯ ನೆರವೂ ಅದೇ ರೀತಿಯದು. ಹೀಗೆ ಶಕ್ತಿ ಇದ್ದರೂ ಅದರಿಂದ ರುಕ್ಮಿಗೆ ಗೌರವ ಬರಲಿಲ್ಲ, ಮೇಲಾಗಿ ಅವಮಾನವೇ ಆಯಿತು.

ಸದ್ಯ ಜಾಗತಿಕ ಮಟ್ಟದ ಬೆಳವಣಿಗೆಗಳನ್ನು ಗಮನಿಸಿದರೆ ಈ ಉದಾಹರಣೆ ಎಷ್ಟು ಸಂಗತ ಎನ್ನುವುದು ಸ್ಫುಟವಾಗುತ್ತದೆ. ಒಂದು ಪ್ರಬಲ ರಾಷ್ಟ್ರವಾಗಿ ಅಮೆರಿಕಾದ ಶಕ್ತಿ ಜಗತ್ತನ್ನು ನಡುಗಿಸುವಷ್ಟು ಉಂಟು. ಇಲ್ಲಿಯವರೆಗೂ ಅನೇಕ ಯುದ್ಧಗಳನ್ನು ಮಾಡಿ ಗೆದ್ದ ಅನುಭವವೂ ಅದಕ್ಕಿದೆ. ತಾನು ಗೆಲ್ಲುತ್ತ ಬಂದ ಕಾರಣ ತನಗೆ ಸೋಲೇ ಇಲ್ಲ ಎನ್ನುವ ಭ್ರಮೆಗೆ ಅದು ಈಡಾಗಿದ್ದರೆ ಆಶ್ಚರ್ಯವಲ್ಲ. ಆದರೆ ಅಷ್ಟು ಶಕ್ತಿ ಇದ್ದಾಗ ಸಹಜವಾಗಿ ಬರುವ ಅಹಂಕಾರ ಎಷ್ಟು ಅಪಾಯಕಾರಿ ಎಂಬ ಅರಿವೂ ಇರಬೇಕಿತ್ತು. ದುರ್ದೈವವಶಾತ್ ಅಂತಹ ಅರಿವು ಅದಕ್ಕಿಲ್ಲ. ಎಷ್ಟು ಭಯಂಕರವಾದ ಅಸ್ತ್ರಗಳು, ಪ್ರಪಂಚದ ಯಾವ ಮೂಲೆಯನ್ನಾದರೂ ತಲುಪಿ, ಲಕ್ಷ್ಯವನ್ನು ವಿಧ್ವಂಸ ಮಾಡಬಲ್ಲ ಕ್ಷಿಪಣಿಗಳು, ಅತ್ಯಾಧುನಿಕ ಸಮರ ವಿಮಾನಗಳು, ಬಲಾಢ್ಯ ಸೇನೆ- ಇವೆಲ್ಲ ಇದ್ದಾಗಲೂ ಅದನ್ನು ತಮ್ಮ ಆಪ್ತ ಸ್ನೇಹಿತ ಎಂದು ಯಾವ ರಾಷ್ಟ್ರವೂ ಪರಿಗಣಿಸುವ ಸ್ಥಿತಿ ಇಲ್ಲ, ಯಾರು ಹಾಗೆ ಭಾವಿಸುತ್ತಾರೋ ಅಲ್ಪ ಸಮಯದಲ್ಲೇ ಅವರ ವಿಶ್ವಾಸಕ್ಕೆ ಧಕ್ಕೆ ಬರುವಂತೆ ಆ ದೇಶದ ನಾಯಕತ್ವ ನಡೆದುಕೊಳ್ಳುತ್ತದೆ. ಗೆಳೆಯರ ಬೆನ್ನಿಗೆ ಚೂರಿ ಹಾಕಿದವನನ್ನು ಯಾರು ತಾನೇ ನಂಬುತ್ತಾರೆ?

ಅದು ಹೋಗಲಿ, ಇರಾನಿನಂತಹ ಪುಟ್ಟ ದೇಶವೂ ಅದಕ್ಕೆ ಎದುರು ನಿಂತು ದಿಟ್ಟವಾಗಿ ಹೋರಾಡುತ್ತದೆ. ಅಂತಿಮವಾಗಿ ಯಾವುದು ಗೆಲ್ಲುತ್ತದೆ ಎಂಬುದು ಮುಖ್ಯವಲ್ಲ, ದುರ್ಬಲನ ಮೇಲೆ ಪ್ರಚಂಡ ಶಕ್ತಿಯುಳ್ಳ ಒಬ್ಬ ಆಕ್ರಮಣ ಮಾಡಿದರೆ ಅದರ ಪರಿಣಾಮವು ಎಲ್ಲರಿಗೂ ಗೊತ್ತಿರುತ್ತದೆ. ಆ ಯುದ್ಧವನ್ನು ಗೆದ್ದರೂ ಶಕ್ತಿವಂತನ ಗೌರವ ಹೆಚ್ಚುವುದಿಲ್ಲ, ಸೋತರಂತೂ ಹೇಗೂ ಗೌರವವಿಲ್ಲ. ಅದಕ್ಕಿಂತ ಹೆಚ್ಚಾಗಿ ಒಂದು ಯುದ್ಧವು ಅನಿವಾರ್ಯವಾಗಿತ್ತೇ ಎಂದು ಆತ್ಮ ನಿರೀಕ್ಷಣೆ ಮಾಡಿಕೊಂಡಾಗ (ಅಂತಹ ಸಾಧ್ಯತೆಯೇ ಬಲ ಪ್ರಮತ್ತರಲ್ಲಿ ಇರಲಾರದು. ಆದರೂ) ನಾಚಿಕೊಳ್ಳುವ ಹಾಗಾದರೆ ಶಕ್ತನಿಗೆ ಏನು ಬೆಲೆ?

ತನ್ನಲ್ಲಿ ಅಧಿಕ ಶಕ್ತಿಯಿದೆ ಎಂದು ಯಾವ ದೇಶದ ಮೇಲಾದರೂ ಆಕ್ರಮಣ ಮಾಡುವುದು, ಅಲ್ಲಿನ ನಾಯಕನನ್ನೇ ಅಪಹರಿಸಿ ತಂದು ಸೆರೆ ಮನೆಯಲ್ಲಿ ಇಡುವುದು, ಇನ್ನೊಂದು ದೇಶದ ಸಂಪತ್ತಿನ ಮೇಲೆ ಕಣ್ಣಿಟ್ಟು, ಅದನ್ನು ಪಡೆಯುವುದಕ್ಕಾಗಿ ಸೇನೆ ನುಗ್ಗಿಸುವುದು ಇದೆಲ್ಲ ಯಾರಿಗೆ ಮೆಚ್ಚುಗೆಯಾದೀತು? ಅದನ್ನು ಮಾಡಿದ ಶಕ್ತಿವಂತನನ್ನು ಯಾರಾದರೂ ನಂಬುತ್ತಾರೆಯೆ?

ತೀರ ಹಿಂದಿನ ಕಾಲದಲ್ಲಿ ನಾಗರಿಕತೆ ಬೆಳೆಯದೇ ಇದ್ದಾಗ, ಬಲಿಷ್ಠರು ತಮಗೆ ಬೇಕಾದ ಆಹಾರಕ್ಕಾಗಿಯೋ, ಸಂಪತ್ತಿಗಾಗಿಯೋ, ಹೆಣ್ಣಿಗಾಗಿಯೋ ದುರ್ಬಲರ ಮೇಲೆ ದಾಳಿ ಮಾಡಿ ಬೇಕಾದುದನ್ನು ಕಿತ್ತುಕೊಳ್ಳುತ್ತಿದ್ದರು. ಈಗಲೂ ಅದೇ ಧೋರಣೆಯನ್ನು ಹೊಂದಿದ ಶಕ್ತಿವಂತನಿಗೆ ದುರ್ಬಲ ಎನಿಸಿದವನೂ ಪ್ರತಿಭಟನೆ ತೋರಿಸುತ್ತಾನೆ. ಅಂತಹವನ ಗೆಳೆತನವನ್ನು ಯಾರೂ ಬಯಸುವುದಿಲ್ಲ, ಕ್ರಮೇಣ ಆ ವ್ಯಕ್ತಿಯಾಗಲಿ, ರಾಷ್ಟ್ರವಾಗಲಿ ಏಕಾಂಗಿಯಾಗುವ ಸನ್ನಿವೇಶ ಉಂಟಾಗುತ್ತದೆ. ಮುಂದೆ ಎಂದೋ ಒಂದು ದಿನ ಪ್ರಬಲನೊಬ್ಬ ಅಥವಾ ಹಲವು ಮಂದಿ ದುರ್ಬಲರು ಒಟ್ಟಾಗಿ ಏಕಾಂಗಿಯಾದವನನ್ನು ಬಡಿದು ಹಾಕಿದರೆ ಅದರಲ್ಲಿ ಆಶ್ಚರ್ಯವಿಲ್ಲ. ಶಕ್ತಿಯೇ ದೌರ್ಬಲ್ಯವಾಗುವುದು ಅಂದರೆ ಹಾಗೆ.

ವಾಸನಾಭಂಜಕ ಕೋಸಲಾಧೀಶ ಶ್ರೀರಾಮ

▸ ಕುಮಾರೇಶ್ವರ ಭಟ್ ಮುಂಡಾಜೆ

ರಾಮನಾಮ ಭಜಿಸಿದವಗೆ ಉಂಟೆ ಭವದ ಬಂಧನ
ಕಾಮಹರನ ಸತಿಯು ಸದಾ ಪ್ರೇಮದಿಂದ ಜಪಿಸುವ



ಈ ಪ್ರಸಿದ್ಧ ದಾಸರ ಗೀತೆಯು ಶ್ರೀರಾಮನ ಆರಾಧನೆಯ ಮಹತ್ವವನ್ನು ತುಂಬಾ ಸರಳವಾದ ಭಾಷೆಯಲ್ಲಿ ಛಂದೋಬದ್ಧವಾಗಿಯೂ ಆಕರ್ಷಣೀಯವಾಗಿಯೂ ಸಾರಿದೆ. ಸಾಕ್ಷಾತ್ ಪರಶಿವನ ಪತ್ನಿಯಾದ ಪಾರ್ವತಿಯೇ ಶ್ರೀರಾಮ ನಾಮವನ್ನು ಅತೀವ ಭಕ್ತಿ ಶ್ರದ್ಧೆಯಿಂದ ಜಪಿಸುತ್ತಾಳೆಂದ ಮೇಲೆ ಆ ನಾಮದ ಮಹಿಮೆಯ ಬಗ್ಗೆ ಹೆಚ್ಚು ತಿಳಿದುಕೊಳ್ಳಲೇಬೇಕು.

ಚೈತ್ರ ಶುದ್ಧ ನವಮಿ ಮತ್ತೆ ಬಂದಿದೆ. ಶ್ರೀರಾಮನು ಭೂಮಿಯಲ್ಲಿ ಅವತರಿಸಿದ ದಿನ. ತೇನ ತ್ಯಕ್ತೇನ ಭುಂಜೀಥಾ- ಯಾರು ತ್ಯಾಗಿಗಳೋ ಅವರೇ ಭೋಗಿಗಳು-ಎಂಬರ್ಥದ ಈ ಉಪನಿಷತ್ ಹೇಳಿಕೆ ವಿಚಿತ್ರ ಪರಸ್ಪರ ವಿರೋಧಾಭಾಸದಂತೆಯೂ ತೋರುತ್ತದೆ. ತೇನ ತ್ಯಕ್ತೇನ ಭುಂಜೀಥಾ ಎಂದರೆ ಸಾಮಾನ್ಯವಾಗಿ "ತ್ಯಾಗಭಾವದಿಂದ ಅನುಭವಿಸು" ಅಥವಾ "ನಿನಗೆ ದೊರೆತದ್ದನ್ನು ಆಸಕ್ತಿ-ಆಸೆಯ ಬಂಧನವಿಲ್ಲದೆ ಉಪಯೋಗಿಸು" ಎಂಬುದು ಅರ್ಥ. ಈಶಾವಾಸ್ಯೋಪನಿಷತ್ತಿನ ಮಂತ್ರದ ಭಾಗವಾಗಿರುವ ಈ ಶ್ಲೋಕದ ಜೊತೆಗೆ ಬರುವ 'ಮಾ ಗೃಧಃ ಕಸ್ಯಸ್ವಿದ್ಧನಮ್' (ಯಾರ ಧನವನ್ನೂ ಲೋಭಿಸಬೇಡ) ಎನ್ನುವುದು ಕೂಡ ಅಷ್ಟೇ ಮಹತ್ವಪೂರ್ಣವಾಗಿದೆ. ಈ ವಾಕ್ಯದ ಸಾರವೆಂದರೆ, ಜಗತ್ತಿನ ಎಲ್ಲವನ್ನೂ ಸ್ವಂತದಂತೆ ಕಬಳಿಸುವ ಮನೋಭಾವವಿಲ್ಲದೆ, ಕರ್ತವ್ಯಬುದ್ಧಿಯಿಂದ ಮತ್ತು ತ್ಯಾಗದ ಮನಸ್ಸಿನಿಂದ ಬದುಕಬೇಕು. 'ಭುಂಜೀಥಾ' ಅಂದರೆ ಕೇವಲ 'ತಿನ್ನು' ಎಂದಲ್ಲ; 'ಅನುಭವಿಸು, ಉಪಯೋಗಿಸು, ಜೀವನವನ್ನು ನಡೆಸು' ಎಂಬ ಅರ್ಥವೂ ಇದೆ. ಇದರ ತಾತ್ತ್ವಿಕ ಅರ್ಥದಲ್ಲಿ, ನಿನಗೆ ಬಂದ ಸಂಪತ್ತು, ಅವಕಾಶ, ಶಕ್ತಿ, ಸಮಯ ಎಲ್ಲವೂ ಸಂಪೂರ್ಣವಾಗಿ 'ನನ್ನದೇ' ಎಂದುಕೊಳ್ಳದೆ, ಅದರ ಮೇಲೆ ಆಸಕ್ತಿ ಕಡಿಮೆ ಮಾಡಿ ಬದುಕುವುದು ಮುಖ್ಯ ಎನ್ನುವುದು.

ಬಲಿಜ್ಞಾನಾಂ ಮಾನುಷಂ ಮನ್ಯೇ...' ಎಂದು ಘೋಷಿಸುತ್ತಾ ದೈವತ್ವವನ್ನೇ ತ್ಯಾಗ ಮಾಡಿ ಮಾನವತ್ವವನ್ನು ರೂಢಿಸಿಕೊಂಡವ ಶ್ರೀರಾಮ. ಶ್ರೀರಾಮನ ದಿವ್ಯತ್ವ ಮತ್ತು ಮಾನವೀಯತೆ ಎರಡೂ ಒಂದೇ ವೇಳೆ ಕಾಣಿಸುತ್ತವೆ. ಅವನು ಜನರಿಗೆ ಸುಲಭವಾಗಿ ಅರ್ಥವಾಗುವ, ಅವರ ನಡುವೆಯೇ ಬದುಕುವ, ಧರ್ಮವನ್ನು ಆಚರಿಸುವ ಆದರ್ಶ ವ್ಯಕ್ತಿಯಾಗಿದ್ದ. ದೇವರು ಭೂಮಿಗೆ ಬಂದಾಗಲೂ ಅಹಂಕಾರದಿಂದ ದೂರವಾಗಿ, ಮಾನವನಂತೆ ಸರಳವಾಗಿ, ಶಿಷ್ಟವಾಗಿ, ಧರ್ಮಪರವಾಗಿ ನಡೆಯಬಹುದು ಎಂಬ ಸಂದೇಶವೂ ಇದೆ. ಈ ಮಾತು ಮನುಷ್ಯನಿಗೆ ಒಂದು ಬೋಧನೆಯೂ ಹೌದು. ಹೊರಗಿನ ರೂಪಕ್ಕಿಂತ ಒಳಗಿನ ಸ್ವಭಾವ ಮುಖ್ಯ. ರಾಮನ ಬದುಕು 'ಮನುಷ್ಯನಂತೆ' ಬದುಕುವುದು, ಧರ್ಮ, ಕರುಣೆ, ಶಿಸ್ತು, ಮತ್ತು ಕರ್ತವ್ಯಗಳಿಂದ ಉನ್ನತವಾಗುತ್ತದೆ ಎಂಬುದನ್ನು ತೋರಿಸುತ್ತದೆ. ದೇವತ್ವವನ್ನು ಪ್ರದರ್ಶಿಸುವುದಕ್ಕಿಂತ, ಮಾನವೀಯತೆಯನ್ನು ಜೀವಿಸುವುದೇ ಹೆಚ್ಚಿನ ಮಹತ್ವದ ಸಂಗತಿ ಎನ್ನುವ ಅರ್ಥವೂ ಇದರಲ್ಲಿ ಇದೆ. ಇನ್ನು ಪಿತೃವಾಕ್ಯ ಪರಿಪಾಲನೆಗಾಗಿ ಸಾಕೇತದ ಸಾಮ್ರಾಜ್ಯವನ್ನೇ ತ್ಯಾಗ ಮಾಡಿ ವನವಾಸಕ್ಕೆ ಹೊರಟ ವಿಚಾರವಂತೂ ಜನಜನಿತ.



ಮತ್ತೆ ನಾಮದ ಗರಿಮೆಯನ್ನು ನವಮಿಯ ಜನುಮದಿನದ ಈ ಶುಭ ಸಂದರ್ಭ ಅವಲೋಕಿಸಿದಾಗ ಮೂಡಿಬರುವುದೇ ದಿವ್ಯಾನಂದ. ಸಮಯದ ಕ್ಷಣ ಕ್ಷಣ, ಶರೀರದ ಕಣ ಕಣ ನಾಮ ಸಂಕೀರ್ತನೆಯಲ್ಲಿ ತೊಡಗಿದಾಗ ಅದು ಅಂತಿಮ ಸುಖಕ್ಕೆ ಕಾರಣವಾಗಿ ಆತ್ಮ ಸಾಕ್ಷಾತ್ಕಾರಕ್ಕೆ ಹೇತುವಾಗುತ್ತದೆ. ಶ್ರೀ ರಾಮ ನಾಮ ಸಂಕೀರ್ತನೆ ಅಂತರ್ಯಾದಲ್ಲಿ ಸಾಗುತ್ತಿದ್ದರೆ, ಅಂತಃಚಕ್ಷುಗಳು ರಾಘವನ ರೂಪವನ್ನು ಸದಾ ದರ್ಶಿಸುತ್ತಾ ನಾಮ ಸ್ಮರಣೆಗೆ ಸಾಥ್ ನೀಡಬೇಕು. ಇನ್ನು ಒಳಮನಸ್ಸು ದಾಶರಥಿಯ ಲೀಲೆಗಳನ್ನು ಸದಾ ಮೆಲುಕು ಹಾಕುತ್ತಿರಬೇಕು. ಜೊತೆಗೆ ಗುಣದ ನೆನಪೂ ಯಾವತ್ತೂ ಇದ್ದರೆ ಗುಣಾವಗುಣ ಅತೀತನಾದ ಶ್ರೀರಾಮನು ಒಲಿಯದಿರುವನೇ? ಕಾಲಾಕಾಲದ ಪರಿವೆಯಿಲ್ಲದೆ ಕಾಲಾತೀತನಾದ ಕಾಕುಸ್ಥನನ್ನು ಭಜಿಸಿದರೆ ಅದೇ ಸಾಕು. ಕ್ಷೇತ್ರಾಕ್ಷೇತ್ರಗಳ ಭೇದವಿಲ್ಲದೆ ಕ್ಷೇತ್ರಜ್ಞನಾದ ಸರ್ವಜ್ಞ ಶ್ರೀರಾಮನ ಲೀಲೆಯನ್ನು ಗಮನಿಸಿದಾಗ ಬೇರೇನು ಬೇಕು? ಶ್ರೀರಾಮನ ದಿವ್ಯ ರೂಪವನ್ನು ನಮ್ಮ ಇತಿಮಿತಿಗಳ ನಡುವೆಯೂ ಕಾಣಲು ಮನಮಾಡಿದಾಗ ಸ್ವ ಸ್ವರೂಪ ದರ್ಶನವಾಗದೆ ಇದ್ದೀತೇ?

ಇದನ್ನೇ ರಾಮ ಮಂತ್ರವ ಜಪಿಸೋ ಹೇ ಮನುಜಾ... ಎಂದು ಇನ್ನೊಂದು ಜನಪ್ರಿಯ ಗೀತೆಯಲ್ಲಿ ದಾಸರು ಹಾಡಿದ್ದು! ನವಮಾಸಗಳು ಹೊಲಸಿನಲ್ಲಿ ಬೆಳೆದು ತದನಂತರ ಅಮ್ಮನಿಗೂ ನೋವನ್ನೀಯುತ್ತಾ, ತಾನೂ ನೋವನ್ನನುಭವಿಸುತ್ತಾ ಹೊರಬರುವ ಪಿಂಡಾಂಡ ನಂತರದಲ್ಲಿ ಪ್ರಾಪಂಚಿಕ ವಾಸನೆಗಳ ಪ್ರಭಾವದಲ್ಲಿ ಮುಳುಗಿ ಹೋಗುತ್ತದೆ. ಮಾತ್ರವಲ್ಲ, ನವದ್ವಾರಗಳಿಂದ ಅಕ್ಷರಶಃ ವಾಸನೆ ಹೊರಬರುತ್ತಿರುತ್ತದೆ. ಇನ್ನೂ ಯಥಾರ್ಥ ನುಡಿಯುವುದಾದರೆ ಪ್ರತೀ ರೋಮಕೂಪದಿಂದಲೂ ನಾತ! ಎಷ್ಟೇ ಅತ್ಯಾಧುನಿಕ ದುಬಾರಿ ಸುಗಂಧ ದ್ರವ್ಯಗಳನ್ನು ಬಳಸಿದರೂ, ಬ್ಯೂಟಿ ಪಾರ್ಲರ್‌ಗಳಿಗೆ ಎಡತಾಕಿದರೂ ಅದರ ಅವಧಿ ಮುಗಿಯುವಷ್ಟರಲ್ಲಿ ಮತ್ತೆ ದುಷ್ಟಟ್ಟು ದುರ್ನಾತ ಬೀರುವುದು ಗಮನಿಸಬೇಕಾದ ಸಂಗತಿ. ಅದರೊಂದಿಗೆ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಬೋನಸ್ ಆಗಿ ಬರುತ್ತವೆ. ಮಾನವನ ಕರ್ಮಾನುಸಾರ, ನಿಯತಿಯ ನಿಯಮದಂತೆ ನಿರಂತರ ನಾಮ ಸ್ಮರಣೆಯಿಂದ ಪ್ರಾಪಂಚಿಕ ಹಾಗೂ ದೈಹಿಕ ವಾಸನೆಯಿಂದ ಮುಕ್ತರಾಗಿ ದಿವ್ಯಾನುಭೂತಿಯನ್ನು ಅನುಭವಿಸಬಹುದು ಎಂಬುದು ಯೋಗಿಗಳ ಅನುಭವಜನ್ಯ ನುಡಿ. ಸತತ ಸಾಧನೆಯಿಂದ ಇದು ಅಸಾಧ್ಯವೇನಲ್ಲ. ಆದ್ದರಿಂದ ಆಧುನಿಕ ಬದುಕಿನ ಜಂಜಾಟದಿಂದ ಹೊರಬರಲು ಬಹಾಂಬವದೇವ'ನನ್ನು, ಆಸಹನೆ ನಿವಾರಣೆಗಾಗಿ ಅಹಲ್ಯೋದ್ಧಾರಕನನ್ನು, ಖಿನ್ನತೆಯಿಂದ ಮುಕ್ತಿ ಹೊಂದಲು ಖರ ದೂಷಣ ಮರ್ದನನನ್ನು, ದುಃಖದಿಂದ ಬಿಡುಗಡೆ ಹೊಂದಲು ದುರ್ವಾಸ ಸೇವಿತನನ್ನು, ಕ್ಲೇಶ ಹರಣಕ್ಕಾಗಿ ಕುಶ ಪಿತನನ್ನು, ಒಟ್ಟಾರೆಯಾಗಿ ಭವ ಬಂಧನದಿಂದ ಹೊರಬರಲು ಭವರೋಗ ಭಂಜಕನಾದ ಮಾರುತಿಯೊಡೆಯ ಆ ಶ್ರೀರಾಮ ಚಂದ್ರನ ಇಂಬು ಸಿಗಲೆಂದು ದೃಢವಾಗಿ ನಂಬೋಣ. ಸಮಸ್ತ ಚರಾಚರಗಳಿಗೆ ಶ್ರೀರಾಮ ನವಮಿ ಶುಭ ತರಲಿ.

ಟ್ರಂಪ್ ಕದನ ವಿರಾಮ ತಿರಸ್ಕರಿಸಿದ ಇರಾನ್

ಪುಟ 1➡ ಇತ್ತ ಇರಾನ್ ಕ್ಷಿಪಣಿ ದಾಳಿಗಳನ್ನು ಮುಂದುವರಿಸಿದ್ದು, ಇಸ್ರೇಲ್‌ನಲ್ಲಿ ಎಚ್ಚರಿಕೆ ಸೈರನ್‌ಗಳು ಕೇಳಿಸುತ್ತಿವೆ. ಹೆಜ್ಬೊಲ್ಲಾ ಗುಂಪು ಉತ್ತರ ಇಸ್ರೇಲ್ ಮೇಲೆ ನಿರಂತರ ದಾಳಿ ಮಾಡುತ್ತಿದೆ. ಸೌದಿ ಅರೇಬಿಯಾ ಮತ್ತು ಬಹರೈನ್‌ಗಳಲ್ಲಿಯೂ ಡ್ರೋಣ್ ದಾಳಿಗಳು ನಡೆದಿದೆ.

ಸಾವಿರಾರು ಮಂದಿ ಸಾವು: ಇರಾನ್‌ನಲ್ಲಿ 1,500ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 20 ಮಂದಿ, ಅಮೆರಿಕ ಸೇನೆಯಲ್ಲಿ 13 ಮಂದಿ ಮೃತಪಟ್ಟಿದ್ದಾರೆ. ಲೆಬನಾನ್ ಮತ್ತು ಇರಾಕ್‌ನಲ್ಲೂ ನೂರಾರು ಮಂದಿ ಬಲಿಯಾಗಿದ್ದಾರೆ. ಈ ಯುದ್ಧದ ಪರಿಣಾಮವಾಗಿ ಜಾಗತಿಕ ಆರ್ಥಿಕತೆ, ಆಹಾರ ಬೆಲೆ ಮತ್ತು ಸಾಲದ ದರಗಳ ಮೇಲೆ ಮಾರಕ ಪರಿಣಾಮ ಬೀರುವ ಸಾಧ್ಯತೆ ಇದೆ.

ಪಾಕಿಸ್ತಾನ ದಲ್ಲಾಳಿ ರಾಷ್ಟ್ರ

ಪುಟ 1➡ ಇದಕ್ಕೆ ಪ್ರತಿಯಾಗಿ ವಿರೋಧ ಪಕ್ಷಗಳು ಸರ್ಕಾರದ ಮೇಲೆ ಮೌನದ ಆರೋಪ ಹೇರಿದವು. 'ಪಾಕಿಸ್ತಾನ ಮಧ್ಯಸ್ಥಿಕೆ ಮಾಡುತ್ತಿದೆ. ಆದರೆ ಭಾರತ ಇನ್ನೂ ಕೇವಲ ನೋಡುವುದರಲ್ಲಿ ತೊಡಗಿದೆ' ಎಂದು ಕಾಂಗ್ರೆಸ್ ನಾಯಕ ತಾರಿಕ್ ಅನ್ವರ್ ಆಕ್ರೋಶ ವ್ಯಕ್ತಪಡಿಸಿದರು. ಇರಾನ್ ಪರಮೋಚ್ಚ ನಾಯಕನ ನಿಧನದ ಕುರಿತು ಭಾರತ ತಡವಾಗಿ ಸಂತಾಪ ಸೂಚಿಸಿದೆ ಎಂಬ ಆರೋಪಕ್ಕೂ ಸರ್ಕಾರ ತಿರುಗೇಟು ನೀಡಿ, 'ಇರಾನ್ ರಾಯಭಾರ ಕಚೇರಿ ತೆರೆಯುತ್ತಿದ್ದಂತೆಯೇ ವಿದೇಶ ಕಾರ್ಯದರ್ಶಿ ಭೇಟಿ ನೀಡಿ ಸಂತಾಪ ಪುಸ್ತಕಕ್ಕೆ ಸಹಿ ಹಾಕಿದ್ದಾರೆ' ಎಂದು ಸಮರ್ಥಿಸಿಕೊಂಡಿತು. ಗಲ್ಫ್ ರಾಷ್ಟ್ರಗಳಲ್ಲಿ ಇರುವ ಭಾರತೀಯರ ಭದ್ರತೆ ಹಾಗೂ ದೇಶದ ಇಂಧನ ಅವಶ್ಯಕತೆ ಪೂರೈಕೆ ನಮ್ಮ ಮೊದಲ ಆದ್ಯತೆ ಎಂದು ಸರ್ಕಾರ ಸ್ಪಷ್ಟಪಡಿಸಿತು. 'ಈ ಎರಡೂ ಕ್ಷೇತ್ರಗಳಲ್ಲಿ ನಾವು ಯಶಸ್ವಿಯಾಗಿದ್ದೇವೆ' ಎಂದು ಹೇಳಿಕೊಂಡಿತು. ಆದರೆ, ಸರ್ಕಾರದ ಉತ್ತರಗಳನ್ನು 'ತೃಪ್ತಿಕರವೇ ಅಲ್ಲ' ಎಂದು ವಿರೋಧ ಪಕ್ಷಗಳು ಖಂಡಿಸಿ, ಲೋಕಸಭೆಯಲ್ಲಿ ನಿಯಮ 193 ಮತ್ತು ರಾಜ್ಯಸಭೆಯಲ್ಲಿ ನಿಯಮ 176 ಅಡಿಯಲ್ಲಿ ತಕ್ಷಣ ಚರ್ಚೆ ನಡೆಸಬೇಕು ಎಂದು ಒತ್ತಾಯಿಸಿದವು.

ಭಾರತೀಯ ಸಂಸ್ಕೃತಿಯ ದರ್ಶನ

ಪುಟ 1➡ ದೀನದಯಾಳ ಉಪಾಧ್ಯಾಯರ ಏಕಾತ್ಮ ಮಾನವ ದರ್ಶನ ಕೇವಲ ದಾರ್ಶನಿಕ ಉದಾಹರಣೆ ಮಾತ್ರವಾಗಿರದೆ ಬದಲಾಗಿ ಭಾರತದ ಆತ್ಮ, ಸಂಸ್ಕೃತಿ, ಯೋಚನೆ ಮತ್ತು ಜೀವನ ಪದ್ಧತಿಯ ಮೂಲಾಧಾರವಾಗಿದೆ. ಈ ವಿಚಾರಧಾರೆಯು ಭಾರತೀಯ ಸಂಸ್ಕೃತಿ, ಆಧ್ಯಾತ್ಮಿಕತೆ ಮತ್ತು ಜೀವನ ಮೌಲ್ಯಗಳಾಧಾರಿತ ಸಮಗ್ರದೃಷ್ಟಿಕೋನವನ್ನು ಪ್ರಸ್ತುತ ಪಡಿಸುವ ಏಕಾತ್ಮ ಮಾನವ ದರ್ಶನ ಭಾರತೀಯ ಸಂಸ್ಕೃತಿಯ ಜೀವನದರ್ಶನವಾಗಿದೆ ಎಂದು ತಿಳಿಸಿದರು.

ಕುಶಲ ಸಂಘಟಕ, ದಾರ್ಶನಿಕ, ಪ್ರಖರ ವಾಗ್ಮಿ, ಆರ್ಥಿಕ ತಜ್ಞ, ಕಾರ್ಯಕರ್ತ ಪಂಡಿತ ದೀನ ದಯಾಳ ಉಪಾಧ್ಯಾಯರು ತಮ್ಮ ಐತಿಹಾಸಿಕ ವ್ಯಾಖ್ಯಾನಮಾಲೆಯಲ್ಲಿ ಏಕಾತ್ಮ ಮಾನವದರ್ಶನವೆಂಬ ಸಮಗ್ರದರ್ಶನದ ದೃಷ್ಟಿಕೋನವನ್ನು 60 ವರ್ಷಗಳ ಹಿಂದೆ ನೀಡಿದ್ದರು. ಅದು ವ್ಯಕ್ತಿ, ಸಮಾಜ ಮತ್ತು ಪ್ರಕೃತಿಯ ನಡುವಿನ ಸಮನ್ವಯದ ಕುರಿತು ತಿಳಿಸುವ ಅದ್ಭುತ ದರ್ಶನವಾಗಿದೆ ಎಂದರು. ಶರೀರ, ಮನ, ಬುದ್ಧಿ ಮತ್ತು ಆತ್ಮದಿಂದ ಕೂಡಿದ, ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಚತುರ್ವಿಧ ಪುರುಷಾರ್ಥದ ಸಾಧನೆಯನ್ನು ಮಾಡುವ, ಅವರ ಜತೆ ಕುಟುಂಬ, ಜಾತಿ, ರಾಷ್ಟ್ರವೆಂಬ ಮಾನವ ಸಮಾಜದ ವಿವಿಧ ಏಕಾತ್ಮ ಸಮಷ್ಟಿಯ ಪ್ರತಿನಿಧಿತ ಮಾಡುವ ಕ್ಷಮತೆಯನ್ನು ಇಟ್ಟುಕೊಂಡಿರುವ ಮಾನವ ಈ ದರ್ಶನದ ಕೇಂದ್ರ ಬಿಂದು. ಈ ದರ್ಶನದಲ್ಲಿ ವ್ಯಕ್ತಿ ಸಮಾಜ, ರಾಷ್ಟ್ರ ಮತ್ತು ವಿಶ್ವದ ವಿಕಾಸ ಮತ್ತು ವಿಶ್ವ ಕಲ್ಯಾಣದ ಭಾವವನ್ನು ಮೂಡಿಸಿದ್ದಾರೆ. ಈ ದರ್ಶನದ ಅನುಸಾರ ಸಮಾಜವು ಒಂದು ಜೀವಂತ ಘಟಕ. ಶರೀರದ ಎಲ್ಲಾ ಅಂಗಗಳು ಸೇರಿ ಹೇಗೆ ಕಾರ್ಯನಿರ್ವಹಿಸುತ್ತದೆಯೋ, ಹಾಗೆಯೇ ಸಮಾಜದ ವಿಭಿನ್ನ ವರ್ಗಗಳು ಜೊತೆಯಾಗಿ ಒಂದು ಸಮಗ್ರ ವ್ಯವಸ್ಥೆಯನ್ನು ಮಾಡುತ್ತದೆ. ಎಲ್ಲಾ ವರ್ಗಗಳ ಸಮನ್ವಯ ಮತ್ತು ಸಹಯೋಗ ಅವಶ್ಯವಾದದ್ದು ಎಂದು ಅಭಿಪ್ರಾಯಪಟ್ಟರು.

ವರ್ಚುವಲ್‌ನಲ್ಲಿ ಉಪರಾಷ್ಟ್ರಪತಿ ಮಾತು

ವರ್ಚುವಲ್‌ನಲ್ಲಿ ಮಾತನಾಡಿದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು, ದೀನದಯಾಳ ಉಪಾಧ್ಯಾಯ ಅವರ ಏಕಾತ್ಮ ಮಾನವ ದರ್ಶನದ 60ನೇ ವರ್ಷದ ನಿಮಿತ್ತ ಆಯೋಜಿಸಿರುವ ಈ ಕಾರ್ಯಕ್ರಮ ಒತ್ತಡ ಮತ್ತು ನಂಬಿಕೆಯನ್ನು ಕಳೆದುಕೊಳ್ಳುತ್ತಿರುವ ಇಂದಿನ ದಿನಮಾನಗಳಲ್ಲಿ, ಧರ್ಮದ ಮೂಲಕ ಜೀವನವನ್ನು ಸಮೃದ್ಧಗೊಳಿಸುವ ಕುರಿತು ತಿಳಿಸುತ್ತದೆ. ದೀನ ದಯಾಳರ ಚಿಂತನೆಗಳು ನಮ್ಮ ಹಕ್ಕುಗಳಲ್ಲದೆ, ನಮ್ಮ ಕರ್ತವ್ಯದ ಕುರಿತು ತಿಳಿಸುತ್ತದೆ. 2047ರ ವಿಕಸಿತ ಭಾರತ ಕಲ್ಪನೆಯು ದೀನದಯಾಳ ಉಪಾಧ್ಯಾಯ ಅವರ ಏಕಾತ್ಮ ಮಾನವ ದರ್ಶನದ ಆಶಯವನ್ನು ಹೊಂದಿದೆ. ಅದು ಕೇವಲ ಆರ್ಥಿಕ ಮತ್ತು ತಂತ್ರಜ್ಞಾನದ ಬೆಳವಣಿಗೆಯಾಗಿರದೇ ಸರ್ವಾಂಗೀಣ ವಿಕಾಸವಾಗಿದೆ ಎಂದು ಹೇಳಿದರು.

ದೀನ ದಯಾಳರಲ್ಲಿ ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗಿತ್ತು

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಮಾತನಾಡಿ, ದೀನ ದಯಾಳ ಉಪಾಧ್ಯಾಯರ ಚಿಂತನೆಗಳನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕ ಅನುಷ್ಠಾನಗೊಳಿಸುವುದಕ್ಕಾಗಿ ದೇಶಾದ್ಯಂತ ಕಾರ್ಯಕ್ರಮಗಳು ನಡೆಯುತ್ತಿವೆ. ಅದರ ಭಾಗವಾಗಿ ಮೈಸೂರಿನಲ್ಲಿ ನಡೆಯುತ್ತಿರುವ ಕಾರ್ಯಕ್ರಮ ಶ್ಲಾಘನೀಯ. ಬಾಲ್ಯದಲ್ಲಿ ತಂದೆ ತಾಯಿಯನ್ನು ಕಳೆದುಕೊಂಡರೂ ಜೀವನೋತ್ಸಾಹ ಕಳೆದುಕೊಳ್ಳದೆ ತಮ್ಮ ಜೀವನ ಮುನ್ನಡೆಸಿದರು. ಅವರ ಕನಸು ಮತ್ತು ನಡಾವಳಿಯಲ್ಲಿ ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗಿತ್ತು ಎಂದರು. ಜಗತ್ತಿನಲ್ಲಿ ಶಾಂತಿ ನೆಲೆಸಲು ಪ್ರಗತಿಯ ಜತೆ ಸಮಾನತೆ, ಸಹಕಾರ, ಪ್ರಕೃತಿಯೊಂದಿಗೆ ಸಮನ್ವಯದ ಕುರಿತು ತಿಳಿಸುವ ಭೌತಿಕ ಪ್ರಗತಿಯ ಜತೆ ಆಧ್ಯಾತ್ಮಿಕ ಮೌಲ್ಯಗಳ ಮೇಳೈಸುವಿಕೆಯ ದೀನ ದಯಾಳರ ಏಕಾತ್ಮ ಮಾನವದರ್ಶನದ ಚಿಂತನೆಗಳು ಅತ್ಯಗತ್ಯ. ರಾಜಕೀಯದಲ್ಲಿ ಮೌಲ್ಯಾಧಾರಿತ ಪ್ರಜ್ಞೆಯನ್ನು ಮೂಡಿಸುವುದಕ್ಕೆ, ಗ್ರಾಮದಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಮೂಡಿಸುವುದಕ್ಕೆ ದೀನದಯಾಳರ ಅಂತ್ಯೋದಯದ ಕಲ್ಪನೆ ಸಹಕಾರಿ. ಇಂದು ಇಡೀ ಜಗತ್ತು ಶಾಂತಿಯಿಂದ ಇರಬೇಕು ಎಂದು ಬಯಸುವ ಏಕೈಕ ರಾಷ್ಟ್ರ ಭಾರತ. ಅಂತಹ ಭಾರತೀಯ ಚಿಂತನೆಯ ಮೌಲ್ಯಗಳ ರೂಪ ದೀನದಯಾಳ ಉಪಾಧ್ಯಾಯರಾಗಿದ್ದರು ಎಂದು ನುಡಿದರು. ಪ್ರಜ್ಞಾಪ್ರವಾಹದ ಅಖಿಲ ಭಾರತೀಯ ಟೋಳಿ ಸದಸ್ಯರಾದ ರಘುನಂದನ ಮಾತನಾಡಿ, ಭಾರತ ದರ್ಶನ ಪ್ರದರ್ಶಿನಿ ಇಡೀ ದೇಶದ ಚಿತ್ರಣ ಕಟ್ಟಿಕೊಡುತ್ತದೆ. ಚಿತಿ ಹಾಗೂ ವಿರಾಟ್ ಎಂಬ ಎರಡು ಭಾಗಗಳಿದ್ದು, ಚಿತಿಯು ಆತ್ಮತತ್ವವನ್ನು, ವಿರಾಟ್ ಅದರ ಪ್ರಕಟೀಕರಣವನ್ನು ಹೇಳುತ್ತದೆ. ಭಾರತವನ್ನು ನಾವು ತಿಳಿದು, ಮುಂದಿನ ಪೀಳಿಗೆಗೆ ದಾಟಿಸುವ ಪ್ರಯತ್ನವಾಗಲಿ ಎಂದು ಹೇಳಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರಣಪ್ಪ ವಿ ಹಲಸೆ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪ್ರಜ್ಞಾಪ್ರವಾಹದ ಕರ್ನಾಟಕ ದಕ್ಷಿಣ ಸಂಯೋಜಕ ಡಾ.ಪ್ರದೀಪ ಭಾರದ್ವಾಜ ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ನವೀನಕುಮಾರ ಎಸ್ ಕೆ., ನವದೆಹಲಿಯ ಡಾ.ಶ್ಯಾಮಪ್ರಸಾದ್ ಮುಖರ್ಜಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕ ಡಾ.ವಿನಯಕುಮಾರ್ ಸಿಂಗ್ ಉಪಸ್ಥಿತರಿದ್ದರು.

ದಿನ ಭವಿಷ್ಯ

ಮೇಷ ವಿಶ್ವಾಸ ವೃದ್ಧಿ. ಬಾಕಿ ಇರುವ ಕೆಲಸ ಪೂರ್ಣ. ಹಣದ ವಿಚಾರದಲ್ಲಿ ನೀಡುವ ಹಿತವಚನಕ್ಕೆ ಕಿವಿಗೊಡಿ. ಸಾಂಸಾರಿಕ ಸಾಮರಸ್ಯ ಹೆಚ್ಚಳ.

ವೃಷಭ ಮಹತ್ವದ ಹೊಣೆ ನಿಮ್ಮ ಮೇಲೆ ಬೀಳಲಿದೆ. ತಪ್ಪಾಗದಂತೆ ಎಚ್ಚರ ವಹಿಸಿ. ಶಾಪಿಂಗ್‌ನಲ್ಲಿ ಹೆಚ್ಚು ಕಾಲ ಕಳೆಯದಿರಿ. ಅನವಶ್ಯ ವೆಚ್ಚ ಹೆಚ್ಚಳ.

ಮಿಥುನ ದಿನದಂತ್ಯಕ್ಕೆ ಅನಿರೀಕ್ಷಿತ ಬೆಳವಣಿಗೆ ನಿರೀಕ್ಷಿಸುವಿರಿ. ಹಣದ ಬೆಂಬತ್ತಬೇಡಿ. ಮಾನಸಿಕ ಒತ್ತಡ ಕಡಿಮೆ ಮಾಡಲು ಗಮನ ಕೊಡಿ.

ಕಟಕ ಹಣದ ವಿಚಾರ ಚಿಂತೆ ಕಾರಣವಾಗಲಿದೆ. ವೃತ್ತಿಯಲ್ಲಿ ಕಿರಿಕಿರಿ. ಹಿರಿಯರ ಬೇಡಿಕೆ ಅರಿತು ವ್ಯವಹರಿಸಿ. ಆರೋಗ್ಯ ಸುಸ್ಥಿರ, ಚಿಂತೆ ನಿವಾರಣೆ.

ಸಿಂಹ ಬದುಕು ನೀವು ಬಯಸದ ಕಡೆ ಸಾಗುತ್ತಿದೆ. ಅದರ ಮೇಲೆ ನಿಯಂತ್ರಣ ಸಾಧಿಸಿ. ಇತರರ ಏಳಿಗೆಗೆ ಶ್ರಮಿಸುವ ಮುನ್ನ ನಿಮ್ಮ ಬೇಡಿಕೆಗೆ ಗಮನ ಕೊಡಿ.

ಕನ್ಯಾ ವೃತ್ತಿ ಒತ್ತಡ ಅಧಿಕ. ಆದರೆ ಅಪರಾಹ್ನದ ವೇಳೆ ಒತ್ತಡ ನಿವಾರಣೆ. ಪ್ರೀತಿಯ ವಿಚಾರದಲ್ಲಿ ಪೂರಕ ಪರಿಸ್ಥಿತಿ. ಖರ್ಚು ನಿಯಂತ್ರಿಸಲು ಯತ್ನಿಸಿ.

ತುಲಾ ನಿಮ್ಮ ಕರ್ತವ್ಯ ಪಾಲನೆಗೆ ಗಮನ ಕೊಡಿ. ಇತರ ವಿಷಯ ದೂರವಿಟ್ಟು ಕೂರಬೇಡಿ. ಸಮಸ್ಯೆ ತರುವ ವ್ಯಕ್ತಿಗಳನ್ನು ದೂರ ಇಡಿ. ಆರ್ಥಿಕ ಉನ್ನತಿ.

ವೃಶ್ಚಿಕ ಶುಭ ಬೆಳವಣಿಗೆ. ಉದ್ಯೋಗಾವಕಾಶ ಹೆಚ್ಚಳ. ಸ್ವಂತ ಉದ್ದಿಮೆದಾರರಿಗೆ ಯಶಸ್ಸು. ಬಂಧು ಭೇಟಿ. ದೈಹಿಕ ಆಸೌಖ್ಯ ತುಸು ಕಾಡಬಹುದು.

ಧನು ಇಂದು ಕೆಲವಾರು ಬೆಳವಣಿಗೆ ಉಂಟಾದೀತು. ಹಳೆಯ ವಿಷಯ ಕೆದಕಬೇಡಿ. ಸಮಸ್ಯೆ ಹೆಚ್ಚಬಹುದು. ಕಿರಿಕಿರಿ ವ್ಯಕ್ತಿಗಳಿಂದ ದೂರವಿರಿ.

ಮಕರ ಪಾಲುದಾರರ ಜತೆ ಸಂಘರ್ಷ ಉಂಟಾದೀತು. ಅರಿತು ವ್ಯವಹರಿಸಿ. ಅನೂಹ್ಯ ಪ್ರಸಂಗ ಎದುರಿಸಬೇಕಾದೀತು. ಆರೋಗ್ಯ ಸಮಸ್ಯೆ.

ಕುಂಭ ಹೊಸ ಪ್ರಯೋಗ ಮಾಡಲು ಹೋಗಬೇಡಿ. ಇರುವ ಸ್ಥಿತಿಯನ್ನೇ ಮುಂದುವರಿಸಿ. ದೇಹಾರೋಗ್ಯ ಕಾಯಲು ಆದ್ಯತೆ ಕೊಡಿ.

ಮೀನ ಕಹಿಸಿಹಿ ಬೆಳವಣಿಗೆ ಎರಡೂ ಸಂಭವ. ಕಚೇರಿ ರಾಜಕೀಯ ನೆಮ್ಮದಿ ಕೆಡಿಸುವುದು. ವೆಚ್ಚ ತುಂಬಾ ಹೆಚ್ಚಲಿದೆ. ಹಳೆ ಸ್ನೇಹಿತರ ಸಂಪರ್ಕ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30
ಅದೃಷ್ಟ ಸಂಖ್ಯೆ: 1,7,3,8

ಬಿಸಿಲಿಗೆ ಕಂಗೆಟ್ಟಿದ್ದ ಜನತೆಗೆ ಮಳೆ ತಂಪು | ಗಂಟೆಗೂ ಹೆಚ್ಚು ಕಾಲ ವರುಣ

ಕಲ್ಯಾಣದಲ್ಲಿ ಬಿರುಗಾಳಿ ಮಳೆ



ಕಲಬುರಗಿ ಜಿಲ್ಲೆ ಚಿಂಚೋಳಿ ತಾಲೂಕಿನ ಚನ್ನೂರಲ್ಲಿ ಅಕಾಲಿಕವಾಗಿ ಸುರಿದ ಆಲಿಕಲ್ಲು ಮಳೆ

• **ಹುಬ್ಬಳ್ಳಿ:** ಧಾರವಾಡ, ಕಲಬುರಗಿ, ಗದಗ, ವಿಜಯಪುರ, ಬೆಳಗಾವಿ, ಉತ್ತರ ಕನ್ನಡ ಸೇರಿದಂತೆ ಹಲವೆಡೆ ಬುಧವಾರ ಸಂಜೆ ಗುಡುಗು, ಮಿಂಚು ಹಾಗೂ ಬಿರುಗಾಳಿ, ಆಲಿಕಲ್ಲು ಸಹಿತ ಧಾರಾಕಾರ ಮಳೆ ಸುರಿಯಿತು. ಮಧ್ಯಾಹ್ನದವರೆಗೆ ಸುಡುತ್ತಿದ್ದ ಬಿಸಿಲಿಗೆ ಕಂಗೆಟ್ಟಿದ್ದ ಜನತೆಗೆ ಈ ಮಳೆ ತಂಪು ನೀಡಿದರೂ, ಬಿರುಗಾಳಿಯ ಅರ್ಭಟ ಸಾರ್ವಜನಿಕ ಜೀವನಕ್ಕೆ ಅಲ್ಪಮಟ್ಟಿನ ಅಡ್ಡಿಪಡಿಸಿತು.

ಸಿಡಿಲು-ಮಿಂಚಿನ ಅಬ್ಬರ: ಮಳೆ ಆರಂಭವಾಗುವ ಮುನ್ನವೇ ಭೀಕರ ಸಿಡಿಲು ಮತ್ತು ಮಿಂಚಿನ ಅಬ್ಬರ ಕಂಡುಬಂದಿತು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಯಿಂದಾಗಿ ರಸ್ತೆಗಳು ಜಲಾವೃತಗೊಂಡವು.

ಬಿರುಗಾಳಿ ಹಾವಳಿ: ಬಲವಾದ ಗಾಳಿ ಬೀಸಿದ್ದರಿಂದ ನಗರದ ಹಲವೆಡೆ ಮರಗಳು ಧರೆಗುರುಳಿವೆ. ಕೆಲವು ಕಡೆಗಳಲ್ಲಿ ವಿದ್ಯುತ್ ಕಂಬಗಳು ವಾಲಿ ಹೋಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ನಗರದ ಬಹುತೇಕ ಭಾಗಗಳಲ್ಲಿ ವಿದ್ಯುತ್ ಸ್ಥಗಿತಗೊಳಿಸಲಾಗಿತ್ತು.

ದ್ರಾಕ್ಷಿ ಬೆಳೆಗೆ ಹಾನಿ: ವಿಜಯಪುರ ಜಿಲ್ಲೆಯಲ್ಲಿ ಮಂಗಳವಾರ ಮಧ್ಯಾಹ್ನ ಹಾಗೂ ಬುಧವಾರ ಬೆಳಗ್ಗೆ ಸುರಿದ ಮಳೆಯಿಂದ ದ್ರಾಕ್ಷಿ ಬೆಳೆಗೆ ಹಾನಿ ಉಂಟಾಗಿದೆ. ಕಟಾವಿಗೆ ಬಂದಿದ್ದ ನಾಲ್ಕು ಎಕರೆ ಹಣ್ಣಾದ ದ್ರಾಕ್ಷಿ ನೆಲ ಕಚ್ಚಿದೆ. ಇನ್ನೂ ಕಟಾವು ಮಾಡಿ ಒಣ ಹಾಕಿದ್ದ ದ್ರಾಕ್ಷಿ ತೊಯ್ದು ಹೋಗಿದೆ.

ಆಲಿಕಲ್ಲಿನಿಂದ ನಷ್ಟ: ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಹಾಗೂ ಧಾರವಾಡ ಮತ್ತು ಹುಬ್ಬಳ್ಳಿ ಸೇರಿದಂತೆ ವಿವಿಧೆಡೆ ಆಲಿಕಲ್ಲು ಮಳೆಯಿಂದ ಬೆಳೆಗಳಿಗೆ ಹಾನಿ ಉಂಟಾಗಿದೆ. ಜೋರಾದ ಗಾಳಿಗೆ ಬೆಳೆಗಳು ನೆಲ ಕಚ್ಚಿವೆ. ಕಲಬುರಗಿಯ ಚಿಂಚೋಳಿ ತಾಲೂಕಿನ ವ್ಯಾಪ್ತಿಯಲ್ಲಿ ಮಳೆಯ ಅರ್ಭಟ ಹೆಚ್ಚಾಗಿದ್ದು, ತಾಲೂಕಿನ ಚೆನ್ನೂರು,ಗಡಿಲಿಂಗದಳ್ಳಿ ಹಾಗೂ ರಾಣಾಪುರ ಕ್ರಾಸ್ ಸೇರಿದಂತೆ ಹಲವು ಗ್ರಾಮಗಳಲ್ಲಿ ಆಲಿಕಲ್ಲಿನ ಸಮೇತ ಬುಧವಾರ ಸಂಜೆ ಭಾರೀ ಮಳೆ ಸುರಿದಿದೆ.

ಕಾಶ್ಮೀರವಾದ ಚಿಂಚೋಳಿಯ ಚನ್ನೂರು

• **ಕಲಬುರಗಿ:** ಜಿಲ್ಲೆಯ ಚಿಂಚೋಳಿ ತಾಲೂಕಿನ ಚನ್ನೂರ ಗ್ರಾಮದಲ್ಲಿ ಅಪರೂಪದ ಆಲಿಕಲ್ಲು ಮಳೆ ಸುರಿದು ಸ್ಥಳೀಯರನ್ನು ಅಚ್ಚರಿಗೊಳಿಸಿದೆ. ಇದು ಕಾಶ್ಮೀರ ಅಲ್ಲ, ಚಿಂಚೋಳಿ'' ಎಂದು ಜನರು ಹೇಳುವಂತ ಸ್ಥಿತಿ ನಿರ್ಮಾಣವಾಗಿದ್ದು, ಹಿಮದಂತೆ ಆಲಿಕಲ್ಲುಗಳು ರಸ್ತೆಮೇಲೆ ರಾಶಿಯಾಗಿ ಬಿದ್ದ ದೃಶ್ಯಗಳು ಕಂಡುಬಂದವು. ಸಾಯಂಕಾಲ ಸುಮಾರು 5.30ರಿಂದ 6 ಗಂಟೆಯವರೆಗೆ ಸುರಿದ ಈ ಆಲಿಕಲ್ಲು ಮಳೆ ಗ್ರಾಮದಲ್ಲಿ ವಿಭಿನ್ನ ವಾತಾವರಣವನ್ನು ಸೃಷ್ಟಿಸಿತು. ಆಲಿಕಲ್ಲು ಮಳೆಯ ಪರಿಣಾಮವಾಗಿ ಗ್ರಾಮದಲ್ಲಿನ ರಸ್ತೆಗಳಲ್ಲಿ ಹಿಮದಂತೆ ಬಿಳಿ ಮಂಜು ಹಾಸಿದಂತ ದೃಶ್ಯ ಕಾಣಿಸಿಕೊಂಡಿದ್ದು, ಜನರು ಕುತೂಹಲದಿಂದ ರಸ್ತೆಗಳತ್ತ ಹರಿದು ಬಂದರು. ಈ ಅಪರೂಪದ ದೃಶ್ಯವನ್ನು ಕಂಡು ಹಲವರು ಮೊಬೈಲ್‌ಗಳಲ್ಲಿ ಚಿತ್ರೀಕರಿಸಿ ಸಂಭ್ರಮಿಸಿದರು. ಕೆಲಕಾಲ ಚನ್ನೂರ ಗ್ರಾಮವು ಕಾಶ್ಮೀರದಂತೆ ಕಾಣಿಸಿಕೊಂಡಿತ್ತು ಎಂಬ ಅಭಿಪ್ರಾಯವೂ ಜನರಿಂದ ವ್ಯಕ್ತವಾಯಿತು. ಇನ್ನೊಂದೆಡೆ, ಈ ಅಕಾಲಿಕ ಆಲಿಕಲ್ಲು ಮಳೆಯಿಂದ ರೈತರಿಗೆ ಬೆಳೆ ನಷ್ಟ ಉಂಟಾದ ಮಾಹಿತಿ ಲಭ್ಯವಾಗಿದೆ. ಹವಾಮಾನದಲ್ಲಿ ಏಕಾಏಕಿ ಉಂಟಾದ ಬದಲಾವಣೆ ರೈತರಲ್ಲಿ ಆತಂಕ ಮೂಡಿಸಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಹಾನಿ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದಾರೆ.



ವಿಶೇಷ ಪ್ರವಾಸಿ ರೈಲು

• **ಮಂಗಳೂರು:** ಭಾರತೀಯ ರೈಲ್ವೆ ಸೌತ್ ಸ್ಟಾರ್ ರೈಲ್ ಇಂಡಿಯಾ ಮತ್ತು ಟೂರ್ ಟೈಮ್ಸ್ ಸಹಯೋಗದಲ್ಲಿ ಭಾರತ್ ಗೌರವ್ ರೈಲು ಯೋಜನೆಯಡಿ ಈಶಾನ್ಯ ಭಾರತಕ್ಕೆ ಬೇಸಿಗೆ ವಿಶೇಷ ಪ್ರವಾಸಿ ರೈಲನ್ನು ಘೋಷಿಸಲಾಗಿದೆ. ಈ ಪ್ರಯಾಣವು ಏಪ್ರಿಲ್ 25 ರಂದು ಪ್ರಾರಂಭವಾಗಲಿದ್ದು, ವಿಶಾಖಪಟ್ಟಣಂ ಮತ್ತು ಕೋಲ್ಕತ್ತಾ ಸೇರಿ 14 ದಿನಗಳ ಕಾಲ ಒಂದೇ ರೈಲು ಪ್ರಯಾಣದೊಳಗೆ ಮೂರು ವಿಭಿನ್ನ ಪ್ರವಾಸ ಪ್ಯಾಕೇಜ್‌ಗಳನ್ನು ನೀಡಲಿದೆ.

ವಿಶೇಷವಾಗಿ ವಿನ್ಯಾಸಗೊಳಿಸಲಾದ ಈ ಪ್ರವಾಸಿ ರೈಲು ದೇಶದ ಕೆಲವು ಅತ್ಯಂತ ಸುಂದರವಾದ ಮತ್ತು ಸಾಂಸ್ಕೃತಿಕವಾಗಿ ಮಹತ್ವದ ತಾಣಗಳನ್ನು ಒಳಗೊಂಡಿದೆ. ಮೊದಲ ಪ್ಯಾಕೇಜ್‌ನಲ್ಲಿ ಗ್ಯಾಂಗ್ಟಾಕ್, ಡಾರ್ಜಿಲಿಂಗ್‌ಗೆ ಭೇಟಿ ನೀಡಬಹುದು. ಎರಡನೇ ಪ್ಯಾಕೇಜ್ ಈಶಾನ್ಯದ ಸುಂದರ ತಾಣಗಳಾದ ಗುವಾಹಟಿ, ಶಿಲ್ಲಾಂಗ್, ಚಿರಾಪುಂಜಿ, ಮಾವ್ಲಿನ್ನಾಂಗ್ ಮತ್ತು ದಾವ್ಕಿಗಳನ್ನು ಒಳಗೊಂಡಿದೆ. ಮೂರನೇ ಪ್ಯಾಕೇಜ್ ಭೂತಾನ್‌ಗೆ ಅಂತಾರಾಷ್ಟ್ರೀಯ ಪ್ರವಾಸವಾಗಿದ್ದು, ಇದು ಥಿಂಪು, ಪುನಾಖಾ, ಪಾರೋ ಮತ್ತು ಚೆಲೆ ಲಾ ಪಾಸ್‌ಗಳನ್ನು ಒಳಗೊಂಡಿದೆ ಎಂದು ಭಾರತೀಯ ರೈಲ್ವೆ ಭಾರತ್ ಗೌರವ್ ರೈಲು ಸೌತ್‌ಸ್ಟಾರ್ ರೈಲು ಟೂರ್ ಟೈಮ್ ನಿರ್ದೇಶಕ ವಿಘ್ನೇಶ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಮಾನ್ಯ ರೈಲುಗಳಿಗಿಂತ ಭಿನ್ನವಾಗಿ, ಈ ವಿಶೇಷ ಪ್ರವಾಸಿ ರೈಲು ಐಆರ್‌ಸಿಟಿಸಿ ವೆಬ್‌ಸೈಟ್ ನಲ್ಲಿ ಬುಕಿಂಗ್ ಮಾಡಲು ಲಭ್ಯವಿಲ್ಲ, ಟೂರ್ ಟೈಮ್ಸ್ ಅನ್ನು ನೇರವಾಗಿ 7305858585ಕ್ಕೆ ಸಂಪರ್ಕಿಸುವ ಮೂಲಕ ಅಥವಾ https://www.tourtimes.in ಮೂಲಕ ಮಾತ್ರ ಕಾಯ್ದಿರಿಸಬಹುದಾಗಿದೆ.

ಸೌತ್ ಸ್ಟಾರ್ ರೈಲ್ ಮತ್ತು ಟೂರ್ ಟೈಮ್ಸ್ ಈಗಾಗಲೇ 53 ನಿರ್ಗಮನಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದು, 2,90,229 ರೈಲು ಕಿಲೋಮೀಟರ್ ಗಳನ್ನು ಕ್ರಮಿಸಿವೆ ಮತ್ತು 24,402 ಯಾತ್ರಿಕರು ಮತ್ತು ಪ್ರವಾಸಿಗರಿಗೆ ಪ್ರಯಾಣ ಸೌಲಭ್ಯಗಳನ್ನು ಒದಗಿಸಿವೆ. ಕೇರಳದಲ್ಲಿ ಅನುಕೂಲಕರ ಬೋರ್ಡಿಂಗ್ ಪಾಯಿಂಟ್ ಗಳೊಂದಿಗೆ ಈ ರೈಲು ಮಧುರೈನಿಂದ ಹೊರಡಲಿದೆ. ಮಂಗಳೂರಿನಿಂದ ಪ್ರಯಾಣಿಸುವ ಪ್ರಯಾಣಿಕರಿಗೆ ಅವರ ಆದ್ಯತೆಯ ಆಧಾರದ ಮೇಲೆ ಪಾಲಕ್ಕಾಡ್, ಒತ್ತಪಾಲಂ ಅಥವಾ ತ್ರಿಶೂರ್‌ಗೆ ಪೂರಕ ವರ್ಗಾವಣೆ ನೀಡಲಾಗುವುದು ಎಂದು ವಿವರಿಸಿದರು. ಸಾರ್ವಜನಿಕ ಪ್ರಕಟಣೆ ಮನರಂಜನಾ ವ್ಯವಸ್ಥೆಗಳು, ಪ್ರವಾಸ ವ್ಯವಸ್ಥಾಪಕರು, ವಿಶೇಷ ಕೋಚ್ ಭದ್ರತೆ, ರೈಲಿನ ಒಳಗೆ ಹಾಗೂ ಹೊರಗೆ ಆನಿಯಮಿತ ದಕ್ಷಿಣ ಭಾರತೀಯ ಊಟ ಮತ್ತಿತರ ಸೌಲಭ್ಯಗಳನ್ನು ಹೊಂದಿದೆ.

ಉಪ ಚುನಾವಣೆ ಮುಸ್ಲಿಂ ಆಕ್ರೋಶ

ಪುಟ 1➡ ಕಾಂಗ್ರೆಸ್ ಮತಬ್ಯಾಂಕ್ ಎಂದೇ ಬಿಂಬಿತವಾಗಿರುವ ಮುಸ್ಲಿಮರ ಅಸಮಾಧಾನದಿಂದಾಗಿ ಇಡೀ ರಾಜ್ಯದ ಗಮನ ಸೆಳೆದಿರುವ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ 20ಕ್ಕೂ ಅಧಿಕ ಮುಸ್ಲಿಂ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಹೇಳಿ ಕೇಳಿ, ಕಾಂಗ್ರೆಸ್ ವೋಟ್ ಬ್ಯಾಂಕ್ ಎಂದೇ ಪರಿಗಣಿಸಲ್ಪಟ್ಟಿರುವ ಮುಸ್ಲಿಮರು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉಮೇದುವಾರಿಕೆ ಸಲ್ಲಿಸಿರುವುದು ಕಾಂಗ್ರೆಸ್ ಪಕ್ಷಕ್ಕೆ ತಲೆನೋವಾಗಿ ಪರಿಣಮಿಸಿದೆ.

ಮತ ವಿಭಜನೆಯ ಆತಂಕ: ಸಾಮಾನ್ಯವಾಗಿ ಪ್ರತಿ ಚುನಾವಣೆಯಲ್ಲಿ ಪ್ರಮುಖ ಅಭ್ಯರ್ಥಿಗಳೊಂದಿಗೆ ಚೌಕಾಸಿ ಮಾತುಕತೆ ಮಾಡಿಕೊಳ್ಳಲಿಕ್ಕೋ ಅಥವಾ ತಮಗಿರುವ ಜನಬೆಂಬಲವನ್ನು ತಿಳಿಯುವ ಕುತೂಹಲದಿಂದಲೂ, ಇನ್ನೂ ಕೆಲವರು ಚುನಾವಣೆಯಲ್ಲಿ ಸ್ಪರ್ಧಿಸಿದ ದಾಖಲೆ ಮಾಡಲಿಕ್ಕೋ ನಾಮಪತ್ರ ಸಲ್ಲಿಸುವುದುಂಟು. ಹಾಗೆ ನಾಮಪತ್ರ ಸಲ್ಲಿಸಿದವರಲ್ಲಿ ಕೂಡ ಸಾಕಷ್ಟು ಜನ ಉಮೇದುವಾರಿಕೆ ಹಿಂತೆಗೆದುಕೊಳ್ಳುವುದೂ ಇದೆ. ಅದು ಸಾಧ್ಯವಾಗದ ಅಭ್ಯರ್ಥಿಗಳು ಕಣದಿಂದ ನಿವೃತ್ತಿ ಘೋಷಿಸುವ ಉದಾಹರಣೆಗಳು ಕೂಡ ಇವೆ. ಆದರೆ ಅಹಿಂದ ಕ್ಷೇತ್ರದವರೇ ನಿರ್ಣಾಯಕರಾಗಿರುವ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡ ನಾಯಕ ಸಮುದಾಯದ ಬಿಜೆಪಿ ಅಭ್ಯರ್ಥಿಯನ್ನು ಎದುರಿಸಬೇಕಿರುವ ಕಾಂಗ್ರೆಸ್ ಪಕ್ಷಕ್ಕೆ ಸಾಕಷ್ಟು ಮುಸ್ಲಿಂ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿರುವುದು ನುಂಗಲಾರದ ತುತ್ತಾಗಿದೆ.

ಕಳೆದ 2023ರ ವಿಧಾನಸಭಾ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಜಿಲ್ಲೆಯ ಮಾಯಕೊಂಡ ವಿಧಾನಸಭಾ ಕ್ಷೇತ್ರವು ಅತಿ ಹೆಚ್ಚು ಉಮೇದುವಾರರೊಂದಿಗೆ ರಾಜ್ಯದ ಗಮನ ಸೆಳೆದಿತ್ತು. ಇದೀಗ ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಂ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ನಾಮಪತ್ರ ಸಲ್ಲಿಸಿರುವುದು ವಿಶೇಷವಾಗಿದೆ. ನಾಮಪತ್ರ ಸಲ್ಲಿಸಿರುವ ಅರ್ಧದಷ್ಟು ಮುಸ್ಲಿಂ ಅಭ್ಯರ್ಥಿಗಳು ಕಣದಿಂದ ಹಿಂದೆ ಸರಿದರೂ ಸರಿಸುಮಾರು ಒಂದು ಡಜನ್ ಮುಸ್ಲಿಮ್ ಅಭ್ಯರ್ಥಿಗಳು ಕಣದಲ್ಲಿ ಉಳಿಯುವ ಸಾಧ್ಯತೆ ನಿಚ್ಚಳವಾಗಿದೆ. ಇವರೆಲ್ಲರೂ ಸರಾಸರಿ ಒಂದೊಂದು ಸಾವಿರ ಮತ ಪಡೆದರೂ, ಎಲ್ಲರಿಂದ ಸಾವಿರಾರು ಮತಗಳು ಕಾಂಗ್ರೆಸ್ಸಿಗೆ ಖೋತಾ ಆಗುವುದು ಗ್ಯಾರಂಟಿ.

ಮುಸ್ಲಿಂ ಅಭ್ಯರ್ಥಿಗಳು ಕಾಂಗ್ರೆಸ್ ಮತ ಬುಟ್ಟಿಗೇ ಕೈ ಹಾಕಲಿದ್ದಾರೆ ಎಂಬುದನ್ನು ಅರಿತಿರುವ ಪಕ್ಷದ ನಾಯಕರು, ನಾಮಪತ್ರ ಹಿಂತೆಗೆಸುವ ಕಸರತ್ತು ಶುರುವಿಟ್ಟುಕೊಂಡಿದ್ದಾರೆ. ಕಣದಲ್ಲಿ ಉಳಿಯಬಹುದಾದ ಗಟ್ಟಿ ಅಭ್ಯರ್ಥಿಗಳನ್ನು ಕರೆದು ಮಾತನಾಡುವ ಬಗ್ಗೆ ಯೋಚಿಸುತ್ತಿದ್ದಾರೆ. ಈಗಾಗಲೇ ಕಾಂಗ್ರೆಸ್ಸಿನ ಮುಸ್ಲಿಂ ಮುಖಂಡ ಸಾದಿಕ್ ಪೈಲ್ವಾನ್ ಟಿಕೆಟ್ ಸಿಗದ ಹಿನ್ನೆಲೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಅವರಿಗೂ ಸಹ ತಮ್ಮದೇ ಬೇಡಿಕೆಗಳಿದ್ದು, ಅವುಗಳಿಗೆ ಕಾಂಗ್ರೆಸ್ ವರಿಷ್ಠರು ಸ್ಪಂದಿಸಿದರೆ ಸ್ಪರ್ಧೆಯಿಂದ ಹಿಂದೆ ಸರಿಯಬಹುದು ಎನ್ನಲಾಗಿದೆ. ಆದರೆ ಸದ್ಯಕ್ಕಂತೂ ಕಾಂಗ್ರೆಸ್ ನಾಯಕರ ಸಂಪರ್ಕಕ್ಕೆ ಸಿಗದೆ ಕಣದಲ್ಲಿ ಮುಂದುವರಿಯುವುದಾಗಿ ಸಾದಿಕ್ ಪೈಲ್ವಾನ್ ಘೋಷಿಸಿದ್ದಾರೆ.

ಪ್ರಮುಖಾಂಶ

- 2008ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ 3 ಮುಸ್ಲಿಂ ಅಭ್ಯರ್ಥಿ ಕಣದಲ್ಲಿದ್ದರು
- 2013ರಲ್ಲಿ 9, 2018ರಲ್ಲಿ 7 ಹಾಗೂ 2023ರ ಚುನಾವಣೆಯಲ್ಲಿ 8 ಮುಸ್ಲಿಂ ಅಭ್ಯರ್ಥಿ ಗಳು ಚುನಾವಣಾ ಕಣದಲ್ಲಿದ್ದರು
- ಈ ಬಾರಿ ಉಪ ಚುನಾವಣೆಯಲ್ಲಿ ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಅಭ್ಯರ್ಥಿಗಳು ಕಣದಲ್ಲಿ ಉಳಿಯುವ ಸಾಧ್ಯತೆ

ಸಭಾಪತಿ ಪೀಠದಲ್ಲಿ ಸಾತ್ವಿಕ ವನವಾಸಿ ಶಾಂತಾರಾಮ ಸಿದ್ದಿ

ಪುಟ 1➡ ಕಮಲದಲ್ಲಿ ಅರಳಿದ ಎಂಬ ಶಬ್ದದ ಕಾರಣಕ್ಕೆ ಪರಂಪರೆಯ ಸಂಘ ವಿರೋಧಿಗಳಿಂದ ಕುಚೋದ್ಯಗಳಿಂದ ಬೈಸಿಕೊಂಡಿದ್ದೆ. ನನ್ನ ಪ್ರೀತಿಯ ಶಾಂತಾರಾಮ ಸಿದ್ದಿ ಗಟ್ಟಿ ಧ್ವನಿಯಲ್ಲಿ ಅರಣ್ಯ ವಾಸಿಗಳ ಬದುಕಿನ ಬಗ್ಗೆ, ಸ್ವಂತ ಸೂರಿಲ್ಲದ ಅಲೆಮಾರಿಗಳ ಬಗ್ಗೆ, ನಡೆಯಲು ದಾರಿ ಇಲ್ಲದ, ಕುಡಿಯುವ ನೀರಿಲ್ಲದ ಕಡು ಬಡವರ ಬಗ್ಗೆ ಮಾತನಾಡುವುದನ್ನು ಕೇಳಿ ಖುಷಿಗೊಂಡಿದ್ದೆ.

ಇಂದು ನಾನಿಲ್ಲದ ಮೇಲ್ಮನೆಯ ಸದನದಲ್ಲಿ ಶಾಂತಾರಾಮ ಸಿದ್ದಿ ಎಂಬ ವನವಾಸಿ ಪ್ರತಿನಿಧಿ ಸಭಾಪತಿ ಸ್ಥಾನದಲ್ಲಿ ಕುಳಿತಿದ್ದು ಕಂಡು ರೋಮಾಂಚನಗೊಂಡೆ. ನನ್ನ ದೃಷ್ಟಿಯಲ್ಲಿ ಭಾರತ ದೇಶದ ರಾಷ್ಟ್ರಪತಿಯಾದ ದ್ರೌಪದಿ ಮುರ್ಮುರಿಂದ ಆರಂಭವಾಗಿ ಯಲ್ಲಾಪುರದ ಕಾಡಂಚಿನ ಶಾಂತಾರಾಮ ಸಿದ್ದಿಯವರವರೆಗೆ ಅನೇಕ ಮಂದಿ ಕಮಲದಲ್ಲಿ ಅರಳಿದ ಕಾಡ ಕುಸುಮಗಳು.

ಬಾಬಾ ಸಾಹೇಬರ ಸಂವಿಧಾನದ ಮೂಲ ಆಶಯ ಸಮಾಜದ ಕಟ್ಟ ಕಡೆಯ ಮನುಷ್ಯರು ಮುಖ್ಯವಾಹಿನಿಗೆ ಬರಬೇಕೆಂಬುದು. ಇದರ ಸೃಷ್ಟಿಕರ್ತ ಮೋದಿ ಎಂಬ ಸಾಮಾಜಿಕ ನ್ಯಾಯದ ಹರಿಕಾರ ಎಂದರಷ್ಟೇ ಸಾಕೆ..? ಅಥವಾ ಸಂಘದ ಮೂಲ ಆಶಯವೂ ಇದೇ ಎನ್ನಬೇಕೆ..?

ಕಾಂಗ್ರೆಸ್ ಕಚೇರಿಗಳ ತೆರವಿಗೆ ಗಡುವು

ಪುಟ 1➡ **ರಾಜಕೀಯ ಮಹತ್ವಕ್ಕಾಗಿ ಅಕ್ಬರ್ ರೋಡ್ ಕಟ್ಟಡ ಬಿಟ್ಟಿಲ್ಲ:** ವಾಸ್ತವದಲ್ಲಿ ಕಾಂಗ್ರೆಸ್ ಈಗಾಗಲೆ ತನ್ನ ಕಾರ್ಯ ಚಟುವಟಿಕೆಗಳನ್ನು ಹೊಸ ಪ್ರಧಾನ ಕಚೇರಿ, ಐಟಿಒಗೆ ಸಮೀಪದ ಇಂದಿರಾ ಭವನಕ್ಕೆ ಸ್ಥಳಾಂತರಿಸಿದೆಯಾದರೂ, ರಾಜಕೀಯ ಮಹತ್ವದ ಹಿನ್ನೆಲೆಯಲ್ಲಿ ಅಕ್ಬರ್ ರೋಡ್ ವಿಳಾಸವನ್ನು ತನ್ನಲ್ಲೇ ಉಳಿಸಿಕೊಂಡಿದೆ. ನೋಟಿಸ್ ಜಾರಿಯನ್ನು ಟೀಕಿಸಿರುವ ಕಾಂಗ್ರೆಸ್ ಸಂಸದ ಮತ್ತು ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಇದೊಂದು ಅಕ್ರಮ ಮತ್ತು ರಾಜಕೀಯಪ್ರೇರಿತ ಕ್ರಮವಾಗಿದೆ ಮತ್ತು ಇದರ ವಿರುದ್ಧ ಪಕ್ಷವು ಲಭ್ಯ ಕಾನೂನು ಅವಕಾಶಗಳೆಲ್ಲವನ್ನೂ ಬಳಸಲಿದೆ ಎಂದು ಹೇಳಿದ್ದಾರೆ.

ಅಕ್ಬರ್ ರೋಡ್ ಆಸ್ತಿಯು ಪಕ್ಷ ಸಂಘಟನೆಯ ದಂತಕಥೆಯ ಮಹತ್ವದ ಭಾಗವಾಗಿದೆ, ಕಾಂಗ್ರೆಸ್ ಈ ಬಂಗಲೆಗೆ ಮಾರುಕಟ್ಟೆ ದರದಲ್ಲಿ ಬಾಡಿಗೆ ಬೇರೆ ಪಾವತಿಸುತ್ತಿದೆ. ಕಟ್ಟಡವನ್ನು ಕಾಂಗ್ರೆಸ್‌ನ ಹಿರಿಯ ಸಂಸದರಿಗೆ ನೀಡಲು 2024ರ ಲೋಕಸಭಾ ಚುನಾವಣೆ ನಂತರದಲ್ಲಿ ಪ್ರಯತ್ನಿಸಿದ್ದೆವು. ಆದರೆ ಪ್ರಯತ್ನ ವಿಫಲವಾಯಿತು. ಕಾಂಗ್ರೆಸ್ ಯುವ ಘಟಕದ ಬಳಕೆಗಾಗಿ ರೈಸಿನಾ ರೋಡ್ ಬಂಗಲೆಯನ್ನು ಪಕ್ಷದ ಹೆಸರಿಗೆ ನೀಡಲಾಗಿತ್ತು ಎಂದು ಕಾಂಗ್ರೆಸ್ ನಾಯಕರು ಸಮರ್ಥಿಸಿಕೊಂಡಿದ್ದಾರೆ.



ಕಾಡಾನೆ ತಡೆಗೆ ಕ್ರಮ: ಖಂಡ್ರೆ



• **ಬೆಂಗಳೂರು:** ಭದ್ರಾ ಅಭಯಾರಣ್ಯದ ಪರಿಸರ ಸೂಕ್ಷ್ಮ ವಲಯ ಪ್ರದೇಶವನ್ನು ನಿಗದಿ ಪಡಿಸುವ ಕುರಿತಂತೆ ಚಿಕ್ಕಮಗಳೂರು ಜಿಲ್ಲೆಯ ಜನಪ್ರತಿನಿಧಿಗಳೊಂದಿಗೆ ಸಭೆ ನಡೆಸಲಾಗಿದ್ದು, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದರು. ವಿಕಾಸಸೌಧದಲ್ಲಿಂದು ಚಿಕ್ಕಮಗಳೂರು ಜಿಲ್ಲೆ ಖಾಂಡ್ಯ ಹೋಬಳಿಯ ಗ್ರಾಮಸ್ಥರ ನಿಯೋಗವು ಕಾಡಾನೆ ಸೆರೆ, ಕಾಡುಕೋಣ ಮತ್ತು ಕಾಡುಹಂದಿಗಳ ಉಪಟಳ ನಿಯಂತ್ರಿಸುವಂತೆ ಕೋರಿ ಸಲ್ಲಿಸಿದ ಮನವಿ ಸ್ವೀಕರಿಸಿ ಮಾತನಾಡಿದ ಅವರು, 2011ರಲ್ಲಿ ಹಳ್ಳಿಗಳನ್ನೂ ಬಫರ್ ವಲಯದಲ್ಲಿ ಸೇರಿಸಲಾಗಿದೆ. ಅದೇ ರೀತಿ ಹಿಂದಿನ ಬಿಜೆಪಿ ಸರ್ಕಾರ ಡೀಮ್ಡ್ ಅರಣ್ಯ ವಿಚಾರದಲ್ಲೂ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸದೆ, ಸಲ್ಲಿಸಿರುವ ಪ್ರಮಾಣ ಪತ್ರದಿಂದ ಗೊಂದಲವಾಗಿದ್ದು, ಈಗ ಆ ಸಮಸ್ಯೆಯನ್ನೂ ಪರಿಹರಿಸಲು ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ತಿಳಿಸಿದರು.

ಗೋಪಾಲಕೃಷ್ಣ ನಾಯಕ ಹತ್ಯೆಗೆ ಯತ್ನ

• **ಅಂಕೋಲಾ:** ಕೆ.ಪಿ.ಸಿ.ಸಿ ಮಾಜಿ ಕಾರ್ಯದರ್ಶಿ ಗೋಪಾಲಕೃಷ್ಣ ನಾಯಕ ಅಡ್ಲೂರು ಅವರನ್ನು ದುಷ್ಕರ್ಮಿಗಳು ಚಾಕುವಿನಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ ಘಟನೆ ಬುಧವಾರ ಬೆಳಗ್ಗೆ 10.30 ರ ಸುಮಾರಿಗೆ ಪಟ್ಟಣದ ಕಾರವಾರ ರಸ್ತೆ ಕಾಣಕೇಶ್ವರ ದೇವಾಲಯದ ಪಕ್ಕದಲ್ಲಿ ನಡೆದಿದೆ. ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯರಾಗಿರುವ ಇವರು ಗೃಹ ಸಚಿವ ಜಿ.ಪರಮೇಶ್ವರ ಆಪ್ತ ವಲಯದಲ್ಲಿ ಗುರುತಿಸಿಕೊಂಡವರಾಗಿರುವ ಹಿನ್ನೆಲೆಯಲ್ಲಿ ಈ ಕೃತ್ಯ ತೀವ್ರ ಸಂಚಲನಕ್ಕೆ ಕಾರಣವಾಗಿದೆ. ಹೇರ್ ಕಟಿಂಗ್ ಸೆಲೂನ್ ಒಂದರಿಂದ ಗೋಪಾಲಕೃಷ್ಣ ನಾಯಕ ಹೊರಗೆ ಬರುವುದನ್ನೇ ಕಾದು ಕುಳಿತಿದ್ದ ದುಷ್ಕರ್ಮಿಗಳ ತಂಡ ಅವರನ್ನು ನೆಲಕ್ಕೆ ಬೀಳಿಸಿ ತಲೆ ಮತ್ತು ಕೈ ಭುಜಕ್ಕೆ ಹರಿತವಾದ ಚಾಕುವಿನಿಂದ ಇರಿದಿದ್ದಾರೆ. ಅನಿರೀಕ್ಷಿತವಾಗಿ ಎದುರಾದ ಕೃತ್ಯದಿಂದ ಆಘಾತಕ್ಕೆ ಒಳಗಾದ ಗೋಪಾಲಕೃಷ್ಣ ಅವರು ಎದ್ದು ಓಡಿ ಪಕ್ಕದ ಹಣಕಾಸಿನ ಸಂಸ್ಥೆಯೊಂದಕ್ಕೆ ನುಗ್ಗಿ ಬಾಗಿಲು ಹಾಕಿಕೊಂಡ ಕಾರಣ ಜೀವಾಪಾಯದಿಂದ ಬಚಾವ್ ಆಗಿದ್ದಾರೆ.

ಏನಾಸಂ ಅಂಗೀಕರಿಸಿದ ಗುಜರಾತ್

ಪುಟ 1➡ ಗುಜರಾತ್ ಏಕರೂಪ ನಾಗರಿಕ ಸಂಹಿತೆ 2026 ಹೆಸರಿನ ಪ್ರಸ್ತಾವಿತ ಕಾನೂನು ರಾಜ್ಯದ ಎಲ್ಲಾ ಮತಧರ್ಮಗಳ ಜನರಿಗೆ ಮತ್ತು ಗುಜರಾತ್‌ನ ಭೌಗೋಳಿಕ ಮಿತಿಯಿಂದ ಹೊರಗಿರುವ ಗುಜರಾತಿಗಳಿಗೂ ಸಮಾನವಾಗಿ ಅನ್ವಯವಾಗಲಿದೆ.

ಏಕರೂಪ ನ್ಯಾಯದಾನದ ವೈದಿಕ ಚಿಂತನೆ: ಸಿಎಂ ಸಾಂವಿಧಾನಿಕ ಸಿದ್ಧಾಂತಗಳಿಗೆ ಬದ್ಧವಾಗಿ ಸಂಘಟಿತ ಕಾನೂನು ಚೌಕಟ್ಟೊಂದನ್ನು ಹೊಂದುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ ಎಂದು ಸಿಎಂ ಭೂಪೇಂದ್ರ ಪಟೇಲ್ ಮಸೂದೆ ಮಂಡನೆ ಸಂದರ್ಭ ಬಣ್ಣಿಸಿದ್ದಾರೆ. ಸಂಘಟಿತ ಮತ್ತು ಅವಿಭಜಿತ ರಾಷ್ಟ್ರಕ್ಕೆ ಸಮಾನ ಕಾನೂನು ವ್ಯವಸ್ಥೆ ತೀರಾ ಅಗತ್ಯ ಮತ್ತು ಇದು ವೈದಿಕ ಚಿಂತನೆ ಕೂಡ. ವಿವಿಧ ಮಾರ್ಗಗಳ ಮುಖೇನ ವ್ಯಕ್ತಪಡಿಸಿದರೂ ಸತ್ಯವೆಂಬುದು ಒಂದೇ ಆಗಿದೆ. ಯಾವಾಗ ಸತ್ಯವೆಂಬುದು ಒಂದೇ ಆಗಿರುವುದೋ ಆಗ ಧರ್ಮಗಳು ಹಲವಾರಿದ್ದರೂ ನ್ಯಾಯದಾನ ಕೂಡ ಸಮಾನವಾಗಿರಬೇಕೆಂದು ನಮ್ಮ ಪ್ರಾಚೀನ ವಾಕ್ಯಗಳು ಸಾರಿವೆ.

ಸಂವಿಧಾನದ 14ನೇ ವಿಧಿಯು ಕಾನೂನಿಗೆ ದೇಶದ ಎಲ್ಲಾ ಪ್ರಜೆಗಳು ಸಮಾನರು ಎಂದು ಸಾರಿದೆ. ಸಂವಿಧಾನದ 44ನೇ ವಿಧಿ ಸಮಾನ ನಾಗರಿಕ ಸಂಹಿತೆಯನ್ನು ಹೊಂದುವಂತೆ ರಾಜ್ಯಗಳಿಗೆ ನಿರ್ದೇಶಿಸುತ್ತಿದೆ. ಇದೀಗ ಅನುಷ್ಠಾನಗೊಂಡಿರುವ ಯುಸಿಸಿ ಜಾತಿ ಅಥವಾ ಮತಧರ್ಮಗಳ ಆಧಾರದಲ್ಲಿ ಜನರನ್ನೊಡೆವ ಅಥವಾ ತಾರತಮ್ಯಕ್ಕೆ ಎಡೆ ಮಾಡುವ ಯಾವುದೇ ನೀತಿಗಳನ್ನು ತಿರಸ್ಕರಿಸಲಿದೆ. ಪ್ರಸ್ತುತ ಮಸೂದೆ ದೇಶದ ಎಲ್ಲಾ ಜನರಿಗೆ ಸಮಾನವಾಗಿ ಅನ್ವಯವಾಗಲಿದೆ ಮತ್ತು ಸಮಾನ ನ್ಯಾಯದ ಬಗ್ಗೆ ಗುಜರಾತಿನ ಜನರು ಹೊಂದಿದ್ದ ನಿರೀಕ್ಷೆಗಳು, ಆಶೋತ್ತರಗಳು ಮತ್ತು ಆಕಾಂಕ್ಷೆಗಳು ಪ್ರತಿಫಲಿಸಿವೆ ಎಂದು ಸಿಎಂ ಪಟೇಲ್ ಹೇಳಿದರು.

ಏನಾಸಂ ಜಾರಿಗೊಳಿಸಿದ 2ನೇ ರಾಜ್ಯ ಗುಜರಾತ್

ಪ್ರಸ್ತುತ ಮಸೂದೆ ಅಂಗೀಕರಿಸಿದ ದ್ವಿತೀಯ ರಾಜ್ಯವೆಂಬ ಹೆಗ್ಗಳಿಕೆಗೆ ಗುಜರಾತ್ ಪಾತ್ರವಾಗಿದೆ. ಈ ಮುನ್ನ ಉತ್ತರಾಖಂಡದಲ್ಲಿ ದೇಶದ ಮೊದಲು ಯುಸಿಸಿ ಜಾರಿಯಾಗಿದೆ. ಉತ್ತರಾಖಂಡದಲ್ಲಿ 2024ರ ಫೆಬ್ರವರಿಯಲ್ಲಿ ಯುಸಿಸಿ ಮಸೂದೆ ಅಂಗೀಕರಿಸಲಾಗಿತ್ತು. ಸಮಾನತೆಯ ಖಾತರಿ ನಿಟ್ಟಿನಲ್ಲಿ ಇದೊಂದು ಮೈಲಿಗಲ್ಲಿನ ಮಸೂದೆಯೆಂದು ಬಿಜೆಪಿ ಪ್ರಶಂಸಿಸಿದೆ.

ಬಹುಪತ್ನಿತ್ವಕ್ಕಿಲ್ಲ ಅವಕಾಶ

ಲಿವಿನ್ ಸಂಬಂಧಗಳ ನೋಂದಣಿಗೆ ಮಸೂದೆ ಅವಕಾಶ ನೀಡುತ್ತೆ. ಲಿಖಿತ ಘೋಷಣೆ ಮೂಲಕ ಈ ಸಂಬಂಧವನ್ನು ಮುರಿದುಕೊಳ್ಳಲು ಮಸೂದೆಯಲ್ಲಿ ಅವಕಾಶವಿದೆ. ಇದೇ ವೇಳೆ ಬಹುಪತ್ನಿತ್ವವನ್ನು ಮಸೂದೆ ನಿಷೇಧಿಸಿದೆ. ಅಂದರೆ, ಮೊದಲ ಪತ್ನಿ ಬದುಕಿರುವಾಗ ಗೃಹಸ್ಥ ದ್ವಿತೀಯ ವಿವಾಹವಾಗುವಂತಿಲ್ಲ. ಯುಸಿಸಿ ಪ್ರಕಾರ ವಿವಾಹವಾಗುವ ಯುವಕ-ಯುವತಿಯರು, ವಿವಾಹ ಸಂದರ್ಭ ಜೀವಂತ ಪತಿ ಅಥವಾ ಪತ್ನಿಯನ್ನು ಹೊಂದಿಲ್ಲದಿದ್ದರೆ ಮಾತ್ರ ವಿವಾಹ ವಿಧಿ ಸಿಂಧುವೆಂದು ಪರಿಗಣಿತವಾಗುತ್ತೆ. ಮಸೂದೆ ವಿರೋಧಿಸಿ ಕಾಂಗ್ರೆಸ್‌ನ ಹಿರಿಯ ಶಾಸಕ ಶೈಲೇಶ್ ಪರ್ಮಾರ್, ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ನೀವು ಈ ಮಸೂದೆಯನ್ನು ತರಾತುರಿಯಿಂದ ಜಾರಿಗೊಳಿಸಿದ್ದೀರಿ. ಮಸೂದೆಯನ್ನು ಆಯ್ಕೆ ಸಮಿತಿ ಪರಾಮರ್ಶೆಗೆ ಕಳುಹಿಸಬೇಕು ಎಂದು ಆಗ್ರಹಿಸಿದರು. ಸಂವಿಧಾನ ಕೊಡ ಮಾಡಿರುವ ಮೂಲ ಹಕ್ಕುಗಳನ್ನು ಮಸೂದೆ ಉಲ್ಲಂಘಿಸುತ್ತದೆ ಎಂಬುದು ಕಾಂಗ್ರೆಸ್‌ನ ಇನ್ನೋರ್ವ ಹಿರಿಯ ಶಾಸಕ ಅಮಿತ್ ಛಾವ್ಡಾ ಆರೋಪವಾಗಿತ್ತು.

ಪರಿಪೂರ್ಣ ಬಜೆಟ್

ಪುಟ 1➡ ಇದನ್ನು ಕೇಂದ್ರ ಸರ್ಕಾರ ಅನುಷ್ಠಾನ ಮಾಡಿಲ್ಲ, ಮುಂದಿನ ವರ್ಷಕ್ಕೆ ನಮ್ಮ ವಿತ್ತೀಯ ಕೊರತೆಯು ಶೇ.2.95ರಷ್ಟು ಇರಲಿದೆ ಎಂಬುದು ನಮ್ಮ ಅಂದಾಜಾಗಿದೆ. ಆದರೆ, 2026-27ನೇ ಸಾಲಿಗೆ ಕೇಂದ್ರದ ವಿತ್ತೀಯ ಕೊರತೆ ಜಿಡಿಪಿಯ ಶೇ.4.3 ರಷ್ಟು ಇರಲಿದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ದಕ್ಷಿಣ ಭಾರತದ ನಮ್ಮ ಸುತ್ತಮುತ್ತಲ ಪ್ರಗತಿಶೀಲ ರಾಜ್ಯಗಳಿಗೆ ಹೋಲಿಕೆ ಮಾಡಿದರೂ ನಮ್ಮ ವಿತ್ತೀಯ ಕೊರತೆಯ ಪ್ರಮಾಣ ನಿಗದಿತ ಮಟ್ಟದ ಒಳಗೇ ಇದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಆದಾಯ ಕೊರತೆಗೆ ಕೇಂದ್ರ ಕಾರಣ

ವಾಸ್ತವವಾಗಿ ಆದಾಯ ಕೊರತೆ ಇರಬಾರದು. ಆದರೆ, ಕೇಂದ್ರ ಸರ್ಕಾರ ಒಳಗೊಂಡಂತೆ ಮಹಾರಾಷ್ಟ್ರ ಹಾಗೂ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲೂ ಆದಾಯ ಕೊರತೆಯಿದೆ. ಅದರಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳದ್ದೇ ಕಡಿಮೆ ಇದೆ. ಇದು ಕರ್ನಾಟಕ ರಾಜ್ಯದ್ದೊಂದೇ ಸಮಸ್ಯೆಯಲ್ಲ, ಕೇಂದ್ರ ಸರ್ಕಾರದ ಅವೈಜ್ಞಾನಿಕ ಆರ್ಥಿಕ ನೀತಿಗಳಿಂದ ಉಂಟಾಗುತ್ತಿರುವ ಸಮಸ್ಯೆಯಾಗಿದೆ. ಕೇಂದ್ರ ಸರ್ಕಾರದವರು ಕಳೆದ ವರ್ಷ ವರ್ಷದ ಮಧ್ಯ ಭಾಗದಲ್ಲಿ ಇದ್ದಕ್ಕಿದ್ದಂತೆ ಜಿಎಸ್‌ಟಿ ದರಗಳನ್ನು ತರ್ಕಬದ್ಧಗೊಳಿಸುತ್ತೇವೆಂದು ಹೇಳಿ ಪರಿಷ್ಕರಣೆ ಮಾಡಿದ್ದರಿಂದ ರಾಜ್ಯದ ಆರ್ಥಿಕತೆಯ ಮೇಲೆ ಹೊಡೆತ ಬಿತ್ತು. 2025-26ನೇ ಸಾಲಿನಲ್ಲಿ ಜಿಎಸ್‌ಟಿ ತರ್ಕಬದ್ಧಗೊಳಿಸುವಿಕೆಗೂ ಮುನ್ನ ರಾಜ್ಯದ ಸರಾಸರಿ ಮಾಸಿಕ ಜಿಎಸ್‌ಟಿ ರಾಜಸ್ವ ಸಂಗ್ರಹಣೆಯು ಶೇ.10ರಷ್ಟು ಬೆಳವಣಿಗೆ ದಾಖಲಿಸಿತ್ತು. ಆದರೆ, ದರ ತರ್ಕಬದ್ಧಗೊಳಿಸುವಿಕೆಯ ನಂತರ, ಜಿಎಸ್‌ಟಿ ಸಂಗ್ರಹಣೆಯ ಮಾಸಿಕ ಬೆಳವಣಿಗೆಯು ಶೇ.4ಕ್ಕೆ ಕುಸಿದಂತಾಗಿದೆ.

ಕಿರುಸುದ್ದಿ

ಮಳೆಗಾಲಕ್ಕೂ ಮುನ್ನ ಜಾಗ್ರತೆ ಇರಲಿ

• **ಬೆಂಗಳೂರು:** ಮುಂಬರುವ ಮಳೆಗಾಲದ ಹಿನ್ನೆಲೆಯಲ್ಲಿ ರಸ್ತೆ, ಚರಂಡಿ ಹಾಗೂ ಪಾದಚಾರಿ ಮಾರ್ಗಗಳ ಸಮಗ್ರ ಪರಿಶೀಲನೆ ನಡೆಸಿ ಯಾವುದೇ ತೊಂದರೆ ಉಂಟಾಗದಂತೆ ಮುಂಚಿತವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ತಿಳಿಸಿದರು. ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಮಳೆಗಾಲದ ಸಂದರ್ಭದಲ್ಲಿ ಯಾವುದೇ ಅನಾಹುತಗಳು ಸಂಭವಿಸದಂತೆ ಮುಂಚಿತವಾಗಿ ಅಗತ್ಯ ಕ್ರಮಗಳನ್ನು ಕೈಗೊಂಡು, ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಳೆ ನೀರು ನಿಲ್ಲದೆ ಸರಾಗವಾಗಿ ಹರಿದುಹೋಗುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಯಾವುದೇ ಪ್ರದೇಶದಲ್ಲಿ ಪ್ರವಾಹ ಉಂಟಾಗದಂತೆ ವಿಶೇಷ ಗಮನ ಹರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ರಾಜಕಾಲುವೆ ಹಾಗೂ ಚರಂಡಿಗಳಲ್ಲಿ ನೀರಿನ ಹರಿವಿಗೆ ಅಡ್ಡಿಯಾಗುವ ಹೂಳು ಮತ್ತು ತ್ಯಾಜ್ಯಗಳನ್ನು ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶಿಸಿದರು. ಪಾದಚಾರಿ ಮಾರ್ಗಗಳ ಸ್ಥಿತಿಯನ್ನು ಪರಿಶೀಲಿಸಿ ಅಗತ್ಯವಿರುವ ಸ್ಥಳಗಳಲ್ಲಿ ಸ್ಲ್ಯಾಬ್ ದುರಸ್ತಿ ಅಳವಡಿಸಿ ಸಾರ್ವಜನಿಕರಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಗೇಲ್ ಗ್ಯಾಸ್ ಸಂಸ್ಥೆಗಳ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳನ್ನು ಹಂತಹಂತವಾಗಿ ಹಾಗೂ ನಿಯಮಾನುಸಾರವಾಗಿ ಕೈಗೊಳ್ಳುವಂತೆ ಸೂಚಿಸಿದರು.

ಮಾ. 27ರಂದು ಸಾಮೂಹಿಕ ಶ್ರೀ ಸತ್ಯನಾರಾಯಣ ವ್ರತ

• **ಹೊಸನಗರ:** ಪಟ್ಟಣದ ಕೋಟೆಗಾರ್ ಯುವಕ ಸಂಘ, ಕೋಟೆಗಾರ್ ವಿದ್ಯಾವರ್ಧಕ ಸಂಘ ಹಾಗೂ ಮಹಿಳಾ ಸಂಘದ ಆಶ್ರಯದಲ್ಲಿ ಸೀತಾರಾಮ ಚಂದ್ರ ಸಭಾಭವನದ ಆವರಣದಲ್ಲಿ ರಾಮ ನವಮಿ ಪ್ರಯುಕ್ತ ರಾಮ ವಸಂತ ಪೂಜೆ, ಸಾಮೂಹಿಕ ಶ್ರೀ ಸತ್ಯನಾರಾಯಣ ವ್ರತ ಮತ್ತು ಸಾರ್ವಜನಿಕ ಅನ್ನ ಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಕೋಟೆಗಾರ್ ಯುವಕ ಸಂಘದ ಅಧ್ಯಕ್ಷ ಮಾವಿನಕೊಪ್ಪ ಸತೀಶ್ ತಿಳಿಸಿದರು. ಕಾರ್ಯಕ್ರಮದಲ್ಲಿ ಯುವಕ ಸಂಘದ ಗೌರವಾಧ್ಯಕ್ಷ ಅರುಣ್‌ಕುಮಾರ್, ಕೋಟೆಗಾರ್ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶಶಿಧರ್‌ನಾಯ್ಕ್, ಕೋಟೆಗಾರ್ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಪಿ.ಆರ್. ಸಂಜೀವ, ಮಹಿಳಾ ಸಂಘದ ಅಧ್ಯಕ್ಷೆ ದೇವಿ ಹನುಮಂತ ಪಾಲ್ಗೊಳ್ಳುವರು. ಇದೇ ಸಂದರ್ಭದಲ್ಲಿ ನಾಟಿ ವೈದ್ಯೆ ಪ್ರೇಮ ನಾರಾಯಣ, ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಎಸ್. ನಾಗರಾಜ್, ಅಂಕುಶ್ ಹೆಚ್.ಪಿ ಅವರನ್ನು ಸನ್ಮಾನಿಸಲಾಗುವುದು. ಉದಯಪ್ಪ ಗಣೇಶ್‌ಗೆ ಸೇಫ್ಟಿಟ್ ವಿತರಿಸಲಾಗುವುದು.

ಕುಂದುಕೊರತೆ ಅಹವಾಲು ಸ್ವೀಕಾರ

• **ಶಿವಮೊಗ್ಗ :** ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಮಾ.25 ರ ರಾತ್ರಿ ಶಿವಮೊಗ್ಗಕ್ಕೆ ಆಗಮಿಸಿ, ಮಾ.26 ರಂದು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು. ಮಾ.26 ರ ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ಸಂಘ ಸಂಸ್ಥೆಗಳು ಮತ್ತು ಸಾಮಾನ್ಯ ಜನರಿಂದ ಕುಂದುಕೊರತೆ ಅಹವಾಲುಗಳನ್ನು ಸ್ವೀಕರಿಸುವರು. ಜಿಲ್ಲಾಧಿಕಾರಿಗಳು, ಜಿಲ್ಲಾ ಅನುಷ್ಠಾನ ಸಮಿತಿ ಅಧ್ಯಕ್ಷರು, ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಮತ್ತು ಸಮಾಲೋಚನಾ ಸಭೆಯಲ್ಲಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಸೇವಾದಾರರ ಸಂಸ್ಥೆಗಳಿಗೆ ಬಿಡಬ್ಲ್ಯುಎಂಎಲ್ ಕಾರ್ಯನಿರ್ವಹಣಾಧಿಕಾರಿ ಆದೇಶ

ತ್ಯಾಜ್ಯ ಸಂಗ್ರಹಗಾರರು ಸುರಕ್ಷಿತ ಬಟ್ಟೆ ಧರಿಸಿ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವ್ಯಾಪ್ತಿಯಲ್ಲಿ ಪ್ರತಿ ಮನೆ-ಮನೆಯಿಂದಲೇ ವಿಂಗಡಿಸಿದ ಘನತ್ಯಾಜ್ಯವನ್ನು ತಪ್ಪದೇ, ಎಲ್ಲಾ ಸುರಕ್ಷಾ ಧಿರಿಸು ಬಳಸಿಕೊಂಡು ಸಂಗ್ರಹಿಸುವಂತೆ ಸೇವಾದಾರ ಸಂಸ್ಥೆಗಳಿಗೆ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ(ಬಿಡಬ್ಲ್ಯುಎಂಎಲ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ಆದೇಶ ನೀಡಿದ್ದಾರೆ.

ಜಿಬಿಎ ವ್ಯಾಪ್ತಿಯಲ್ಲಿ ವಿಭಾಗೀಯ ಅಧಿಕಾರಿಗಳು ಆಟೋಟಿಪ್ಪರ್ ವಾಹನಗಳ ಚಾಲಕರು ಮತ್ತು ಸಹಾಯಕರನ್ನು ಒತ್ತಾಯ ಪೂರ್ವಕವಾಗಿ ಕಸ ವಿಂಗಡಿಸುವ ಕಾರ್ಯಕ್ಕೆ ಬಳಪಡಿಸಿಕೊಂಡು ಘನತ್ಯಾಜ್ಯ ವಿಲೇವಾರಿ ನಿಯಮ 2000, 2016ರ ವಿರುದ್ಧವಾಗಿ ನಡೆಸಿಕೊಳ್ಳಲಾಗುತ್ತಿದೆ.

ಕಾರ್ಮಿಕರು ತಮ್ಮ ಉದ್ಯೋಗವನ್ನು ತ್ಯಜಿಸಲು ಸಿದ್ಧರಿರುವ ಬಗ್ಗೆ ಹಾಗೂ ಕಾರ್ಮಿಕರನ್ನು ಚಿಂದಿ ಆಯುವವರೆಂದು ಉಲ್ಲೇಖಿಸಿ, ಸೇವಾ ಕಾರ್ಯವನ್ನು ಸ್ಥಗಿತಗೊಳಿಸುವುದಾಗಿ ತಿಳಿಸಿ ಮುಂಜಾಗ್ರತಾ ಕ್ರಮವಾಗಿ ಘನತ್ಯಾಜ್ಯದ ಸಂಗ್ರಹಣೆ ಮತ್ತು ಸಾಗಾಣೆಗಾಗಿ ಪರ್ಯಾಯ ವ್ಯವಸ್ಥೆಯನ್ನು ಸಿದ್ಧತೆ ಮಾಡಿಕೊಳ್ಳುವಂತೆ ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರ ಹಾಗೂ ಗುತ್ತಿಗೆದಾರರ ಸಂಘ ಪ್ರಧಾನ ಕಾರ್ಯದರ್ಶಿ ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿರುತ್ತದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.



ಘನತ್ಯಾಜ್ಯ ನಿರ್ವಹಣಾ ನಿಯಮಗಳು-2016 ಹಾಗೂ ಘನತ್ಯಾಜ್ಯ ನಿರ್ವಹಣಾ ಉಪವಿಧಿಗಳು-2020ರನ್ವಯ ಹಸಿ, ಒಣ ಮತ್ತು ಇತರೆ ಸ್ಥಳೀಯ ನೈರ್ಮಲ್ಯಗಳಾಗಿ ವಿಂಗಡಿಸಿದ ತ್ಯಾಜ್ಯವನ್ನು ಪ್ರಾಥಮಿಕವಾಗಿ ಸಂಗ್ರಹಿಸಿ ಸಾಗಿಸಬೇಕಾಗಿದ್ದು ಕಾನೂನುಬದ್ಧ ಕರ್ತವ್ಯವಾಗಿರುತ್ತದೆ. ಏ.1ರಿಂದ ಜಾರಿಗೊಳ್ಳುವ ಘನತ್ಯಾಜ್ಯ ನಿರ್ವಹಣಾ ನಿಯಮಗಳು-2026ಗಳನ್ವಯ ಹಸಿ, ಒಣ ಮತ್ತು ಸ್ಥಳೀಯ ನೈರ್ಮಲ್ಯ ವಿಶೇಷ ಕಾಳಜಿಯುಳ್ಳಗಳಾಗಿ ವಿಂಗಡಿಸಿದ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಿಸಬೇಕಾಗಿರುತ್ತದೆ ಮತ್ತು ಇದು ಸಹ ಕಾನೂನುಬದ್ಧ ಜವಾಬ್ದಾರಿಯಾಗಿರುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮಿಶ್ರ ತ್ಯಾಜ್ಯದ ಸಂಗ್ರಹಣೆ ಮತ್ತು ಸಾಗಾಣಿಕೆಯು ಶಾಸನಾತ್ಮಕ ನಿಯಮಗಳಿಗೆ ತದ್ವಿರುದ್ಧವಾಗಿದ್ದು, ಆದಕ್ಕಾಗಿ ದಂಡವನ್ನು ವಿಧಿಸಬಹುದಾಗಿರುತ್ತದೆ. ಮೇಲಾಗಿ, ಸುರಕ್ಷಾ ಧಿರಿಸುಗಳೊಂದಿಗೆಯೇ ವಿಂಗಡಿಸಿದ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಿಸುವುದು ಸೇವಾದಾರರಿಗೆ ನೀಡಲಾಗಿರುವ ಕಾರ್ಯಾದೇಶದ ಭಾಗವಾಗಿರುತ್ತದೆ. ಆದ್ದರಿಂದ ಪ್ರತಿ ಮನೆ-ಮನೆಯಿಂದ ವಿಂಗಡಿಸಿದ ಘನತ್ಯಾಜ್ಯವನ್ನು ಸಂಗ್ರಹಿಸಿದಲ್ಲಿ ಕಪ್ಪು ಚುಕ್ಕೆಗಳು ಉದ್ಭವಿಸುವುದಿಲ್ಲ ಹಾಗೂ ತದನಂತರದ ತ್ಯಾಜ್ಯ ವಿಂಗಡಣೆಯ ಪ್ರಮೇಯವೇ ಬರುವುದಿಲ್ಲ ಆದರೆ, ಸೇವಾದಾರ ಸಂಸ್ಥೆಗಳು ಮಿಶ್ರ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಿಸುತ್ತಿರುವುದನ್ನು ಮತ್ತು ಯಾವುದೇ ಸುರಕ್ಷಾ ಧಿರಿಸು ಧರಿಸದೇ ಕಾರ್ಯನಿರ್ವಹಿಸುತ್ತಿರುವುದನ್ನು ಬಹಳ ಗಂಭೀರವಾಗಿ ಪರಿಗಣಿಸಲಾಗಿರುತ್ತದೆ ಎಂದು ಆದೇಶದಲ್ಲಿ ಎಚ್ಚರಿಕೆ ನೀಡಲಾಗಿದೆ.

ಪ್ರತಿ ಮನೆ-ಮನೆಯಿಂದ ಕಸ ಸಂಗ್ರಹಿಸುವಾಗ ಕಾರ್ಮಿಕರು ಸಮವಸ್ತ್ರ, ಕೈಗವಸು, ಮುಖಗವಸು, ಗಮ್ ಬೂಟ್ ಮತ್ತು ಇತರೆ ಅವಶ್ಯಕ ಸಾಧನ- ಸಲಕರಣೆಗಳೊಂದಿಗೆ ಸಂಗ್ರಹಿಸಿ ಸಾಗಿಸುವಂತೆ ಸೇವಾದಾರ ಸಂಸ್ಥೆಗಳಿಗೆ ಆದೇಶ ನೀಡಲಾಗಿದೆ.

ಪರ್ಯಾಯ ಸಿದ್ಧತೆಗೆ ಕ್ರಮ: ಕಾರ್ಮಿಕರು ತಮ್ಮ ಉದ್ಯೋಗವನ್ನು ತ್ಯಜಿಸಲು ಸಿದ್ಧರಿರುವ ಬಗ್ಗೆ ಹಾಗೂ ಕಾರ್ಮಿಕರನ್ನು ಚಿಂದಿ ಆಯುವವರೆಂದು ಉಲ್ಲೇಖಿಸಿ, ಸೇವಾ ಕಾರ್ಯವನ್ನು ಸ್ಥಗಿತಗೊಳಿಸುವುದಾಗಿ ತಿಳಿಸಿ ಮುಂಜಾಗ್ರತಾ ಕ್ರಮವಾಗಿ ಘನತ್ಯಾಜ್ಯದ ಸಂಗ್ರಹಣೆ ಮತ್ತು ಸಾಗಾಣೆಗಾಗಿ ಪರ್ಯಾಯ ವ್ಯವಸ್ಥೆಯನ್ನು ಸಿದ್ಧತೆ ಮಾಡಿಕೊಳ್ಳುವಂತೆ ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರ ಹಾಗೂ ಗುತ್ತಿಗೆದಾರರ ಸಂಘ ಪ್ರಧಾನ ಕಾರ್ಯದರ್ಶಿ ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿರುತ್ತದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಅಪರಾಧ ತನಿಖೆಗೆ ತಂತ್ರಜ್ಞಾನ ಅಳವಡಿಕೆ

ಬೆಂಗಳೂರು: ರಾಜ್ಯದಲ್ಲಿ ಅಪರಾಧ ತನಿಖಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಮತ್ತು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ರಾಜ್ಯ ಪೊಲೀಸ್ ಇಲಾಖೆಯು ಮಹತ್ವದ ಹೆಜ್ಜೆ ಇಟ್ಟಿದೆ. ನ್ಯಾಯ ವಿಜ್ಞಾನ ಸಾಮರ್ಥ್ಯಗಳ ಆಧುನೀಕರಣ ಯೋಜನೆಯಲ್ಲಿ ಸಿದ್ಧಪಡಿಸಲಾದ 32 ಹೊಸ ಮೊಬೈಲ್ ಫೋರೆನ್ಸಿಕ್ ವ್ಯಾನ್‌ಗಳನ್ನು ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಕಮಿಷನರೇಟ್‌ಗಳಿಗೆ ಹಂಚಿಕೆ ಮಾಡಿ ಪೊಲೀಸ್ ಇಲಾಖೆ ಆದೇಶ ಹೊರಡಿಸಿದೆ.

ಈ ವಿಶೇಷ ವಾಹನಗಳನ್ನು ಕ್ಯಾಮಿಯಲ್ ಆಟೋಮೊಬೈಲ್ ಪ್ರೈ.ಲಿ. ಸಂಸ್ಥೆಯಿಂದ ಖರೀದಿಸಲಾಗಿದ್ದು, ಇವುಗಳಲ್ಲಿ ಅತ್ಯಾಧುನಿಕ ಎಸ್‌ಒಪಿ ಗಳನ್ನು ಅಳವಡಿಸಲಾಗಿದೆ. ಈ ವಾಹನಗಳು ಅಪರಾಧ ನಡೆದ ಸ್ಥಳದಲ್ಲೇ ಪ್ರಾಥಮಿಕ ಸಾಕ್ಷ್ಯಾಧಾರಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಲು ನೆರವಾಗುವ ಚಲಿಸುವ ಪ್ರಯೋಗಾಲಯಗಳಂತೆ ಕಾರ್ಯನಿರ್ವಹಿಸಲಿವೆ. ಇದರಿಂದ ಗಂಭೀರ ಅಪರಾಧ ಪ್ರಕರಣಗಳ ತನಿಖೆಯಲ್ಲಿ ವಿಳಂಬ ತಪ್ಪಿಸಲು ಸಾಧ್ಯವಾಗಲಿದೆ.

ಬೆಂಗಳೂರು ನಗರ ಮತ್ತು ಗ್ರಾಮಾಂತರ, ಮೈಸೂರು, ಮಂಗಳೂರು, ಬೆಳಗಾವಿ ಹಾಗೂ ಹುಬ್ಬಳ್ಳಿ-ಧಾರವಾಡ ಕಮಿಷನರೇಟ್‌ಗಳಿಗೆ ವಾಹನಗಳನ್ನು ನೀಡಲಾಗಿದೆ. ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಹಾಸನ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಸೇರಿದಂತೆ ರಾಜ್ಯದ ಬಹುತೇಕ ಎಲ್ಲಾ ಜಿಲ್ಲಾ ಪೊಲೀಸ್ ಘಟಕಗಳಿಗೆ ತಲಾ ಒಂದು ವ್ಯಾನ್ ಹಂಚಿಕೆಯಾಗಿದೆ. ಬೆಂಗಳೂರಿನ ನ್ಯಾಯ ವಿಜ್ಞಾನ ಪ್ರಯೋಗಾಲಯದ ಬಳಕೆಗೂ ಒಂದು ವಿಶೇಷ ವಾಹನವನ್ನು ಮೀಸಲಿಡಲಾಗಿದೆ. ಈ ಯೋಜನೆಯು ಪೊಲೀಸ್ ಇಲಾಖೆಯ ತನಿಖಾ ಕೌಶಲ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ತಕ್ಷಣವೇ ಈ ವಾಹನಗಳನ್ನು ಪಡೆದುಕೊಂಡು ಕಾರ್ಯಗತಗೊಳಿಸುವಂತೆ ಸಂಬಂಧಪಟ್ಟ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಮತ್ತು ಕಮಿಷನರ್‌ಗಳಿಗೆ ಸೂಚನೆ ನೀಡಲಾಗಿದೆ.

ಉಪಕರಣ ಹೆಚ್ಚಳ ಆದೇಶ ಹಿಂಪಡೆಯಲಿ

• **ಬೆಂಗಳೂರು:** ಪ್ರತಿ ಮೂರು ತಿಂಗಳಿಗೊಮ್ಮೆ ಒಳಚರಂಡಿ ಉಪಕರವನ್ನು ಶೇ. 3 ರಷ್ಟು ಹೆಚ್ಚಿಸುವ ಜಲ ಮಂಡಳಿಯ ಆದೇಶವನ್ನು ಈ ಕೂಡಲೇ ಹಿಂಪಡೆಯಬೇಕೆಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಆಗ್ರಹಿಸಿದ್ದಾರೆ.

ಈ ಬಗ್ಗೆ ದಾಖಲೆ ಬಿಡುಗಡೆ ಮಾಡಿ ಮಾತನಾಡಿದ ಅವರು, 2024ರ ಡಿಸೆಂಬರ್‌ನಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕುಡಿಯುವ ನೀರಿನ ದರವನ್ನು ಏರಿಕೆ ಮಾಡಿದ್ದಲ್ಲದೇ, ಒಳಚರಂಡಿ ಉಪಕರವನ್ನು ಆಯಾ ತಿಂಗಳ ಕುಡಿಯುವ ನೀರಿನ ಶುಲ್ಕದ ಮೇಲೆ ಶೇ. 25 ರಷ್ಟು ಹೆಚ್ಚಳ ಮಾಡಿ ಆದೇಶಿಸಿತ್ತು. ಆದಾದ ನಂತರ 2025 ರ ಪ್ರಾರಂಭದಲ್ಲಿ ಇದರ ಪ್ರಮಾಣವನ್ನು ಶೇ. 31.25 ರಷ್ಟು ಏರಿಕೆ ಮಾಡಿತ್ತು ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಲಮಂಡಳಿಯ ಅಧ್ಯಕ್ಷರು, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಸೇರಿದಂತೆ ಮತ್ತಿತರ ಹಿರಿಯ ಅಧಿಕಾರಿಗಳು ಸಂಸ್ಥೆಯ ಆರ್ಥಿಕ ಸ್ಥಿತಿ ಸುಧಾರಿಸಲು ಕುಡಿಯುವ ನೀರಿನ ಶುಲ್ಕದ ಏರಿಕೆ ಮತ್ತು ಒಳಚರಂಡಿ ಉಪಕರದ ಹೆಚ್ಚಳ ಅನಿವಾರ್ಯ ಎಂಬ ಪ್ರಸ್ತಾವನೆಯನ್ನು ಸರ್ಕಾರದ ಮುಂದಿಟ್ಟಿತ್ತು. ಸಭೆಯ ನಡಾವಳಿಯನ್ನು ಆಧರಿಸಿ, ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ಪ್ರತೀ ವರ್ಷವೊಂದಕ್ಕೆ ಕುಡಿಯುವ ನೀರಿನ ಶುಲ್ಕವನ್ನು ಶೇ. 3ರಷ್ಟು ಹೆಚ್ಚಳ ಮಾಡಬಹುದೆಂದು ಹಾಗೂ ಪ್ರತಿ ಮೂರು ತಿಂಗಳಿಗೊಮ್ಮೆ ಕುಡಿಯುವನೀರಿನ ಶುಲ್ಕದ ಶೇ. 3 ರಷ್ಟು ಪ್ರಮಾಣದಲ್ಲಿ ಒಳಚರಂಡಿ ಉಪಕರವನ್ನು ಏರಿಕೆ ಮಾಡಬಹುದು ಎಂದು ಶಿಫಾರಸ್ಸು ಮಾಡಿತ್ತು. ಆಯೋಗದ ಶಿಫಾರಸಿನಂತೆ ಒಳಚರಂಡಿ ಉಪಕರದ ಪ್ರಮಾಣವನ್ನು ಏರಿಕೆ ಮಾಡುತ್ತಾ ಬಂದಿದೆ. 2026 ರ ಫೆಬ್ರವರಿ ತಿಂಗಳಿನಲ್ಲಿ ಶೇ. 43.75 ರಷ್ಟು ಏರಿಕೆ ಮಾಡುವ ಮೂಲಕ ಬೆಂಗಳೂರಿನ ನಾಗರಿಕರಿಂದ ಹಗಲು ದರೋಡೆ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ.



ನೀರಿನ ಶುಲ್ಕ ಹೆಚ್ಚಳಕ್ಕೆ ಚಿಂತನೆ : ಬರುವ ಏಪ್ರಿಲ್ ತಿಂಗಳಿನಲ್ಲಿ ಕುಡಿಯುವ ನೀರಿನ ಶುಲ್ಕವನ್ನೂ ಸಹ ಶೇ. 3 ರಷ್ಟು ಹೆಚ್ಚಳ ಮಾಡಲು ಜಲಮಂಡಳಿ ಮುಂದಾಗಿದೆ. ಶೇ. 75 ರಷ್ಟು ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗಗಳ ಜನರೇ ತುಂಬಿರುವ ಬೆಂಗಳೂರಿನಲ್ಲಿ, ಜನರು ತಾವು ತಿಂಗಳೆಲ್ಲಾ ಕಷ್ಟಪಟ್ಟು ದುಡಿದ ಹಣದ ಬಹಳಷ್ಟು ಭಾಗವನ್ನು ಜಿಬಿಎ, ಬೆಸ್ಕಾಂ ಮತ್ತು ಜಲಮಂಡಳಿಯಂತಹ ಸಂಸ್ಥೆಗಳ ಶುಲ್ಕಗಳಿಗೆಂದೇ ವೆಚ್ಚ ಮಾಡಬೇಕಾದ ದುರದೃಷ್ಟಕರ ದುಃಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಕೌಶಲಾಭಿವೃದ್ಧಿಗೆ ಎಐ ಉಪಯುಕ್ತ

• **ಬೆಂಗಳೂರು :** ಕೃತಕ ಬುದ್ಧಿಮತ್ತೆ (ಎಐ) ಕೇವಲ ಸಾಧನವಾಗಿರದೆ ಮಾನವ ಕೌಶಲಾಭಿವೃದ್ಧಿಪಡಿಸಲು ಸಹಾಯಕವಾಗುವ ಶಕ್ತಿಯುತ ತಂತ್ರಜ್ಞಾನವಾಗಿದೆ. ಭವಿಷ್ಯದ ದೃಷ್ಟಿಯಿಂದ ಕೃತಕ ಬುದ್ಧಿಮತ್ತೆ ಕಲಿಕೆ ವಿದ್ಯಾರ್ಥಿಗಳಲ್ಲಿ ಹೊಸ ಅವಕಾಶವನ್ನು ಸೃಷ್ಟಿಸಲಿದೆ ಎಂದು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮುಷ್ತಾಕ್ ಚೌದರಿ ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ, ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಚೊಚ್ಚಲ ಏಜೆಂಟಿಕ್ ಎಐ ಸಕ್ಷಮ್ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಬದಲಾಗುತ್ತಿರುವ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಎಐ ಪರಿಕರಗಳು, ಹೊಸ ತಂತ್ರಜ್ಞಾನವನ್ನು ಅರ್ಥಮಾಡಿಕೊಳ್ಳುವುದು ಹಾಗೂ ಅಳವಡಿಸಿಕೊಳ್ಳಬಹುದು ಅಗತ್ಯವಾಗಿದೆ. ಎಐ ವಿಸ್ತಾರವಾಗುತ್ತಿದೆ. ವಿದ್ಯಾರ್ಥಿಗಳು ಆತಂಕಕ್ಕೊಳಗಾಗದೆ ಅದನ್ನು ಸಮರ್ಪಕ ಮತ್ತು ಜವಾಬ್ದಾರಿಯಿಂದ ಬಳಸಿಕೊಂಡು ಭವಿಷ್ಯ ಸೃಷ್ಟಿಸಬಹುದು ಎಂದು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಡಾ.ಜಯಕರ ಎಸ್.ಎಂ ಮಾತನಾಡಿ, ವಿದ್ಯಾರ್ಥಿಗಳು ಮತ್ತು ಯುವ ಸಮೂಹ ಈ ದೇಶದ ಶಕ್ತಿ. ಕೇವಲ ಉದ್ಯೋಗ ಹರಸುವವರಾಗದೆ ಉದ್ಯೋಗ ಸೃಷ್ಟಿಸುವ ದೃಷ್ಟಿಯಲ್ಲಿ ವಿದ್ಯಾರ್ಥಿಗಳು ಚಿಂತಿಸಬೇಕು. ಎಐ ಮೂಲಕ ಹೊಸ ಅವಕಾಶಗಳು ಸೃಷ್ಟಿಯಾಗಲಿದ್ದು, ಅದಕ್ಕೆ ತಕ್ಕ ಕೌಶಲ್ಯ ಮತ್ತು ಕಲಿಕೆಯನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಕುಲಸಚಿವರು ಕೆ.ಟಿ.ಶಾಂತಲಾ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಕೆ.ಜಿ.ಚಂದ್ರಶೇಖರ, ಶಿಕ್ಷಣ ಸಚಿವಾಲಯದ ವಿಭಾಗಾಧಿಕಾರಿ ಡಾ.ಅಮಿತ್ ಸಿಂಗ್ ಸೇರಿದಂತೆ ಇತರರಿದ್ದರು.

ಸೇವಾನ್ಯೂನತೆ: ಪರಿಹಾರ ನೀಡಲು ಆಯೋಗ ತೀರ್ಪು

• **ಶಿವಮೊಗ್ಗ:** ಗಾಜನೂರು ಡಾ. ಕಾರುಣ್ಯ ಜೆ.ಜೆ. ಇವರು ನೀಡಿದ ಬೆಂಗಳೂರಿನ ಅಮೆಜಾನ್ ಸೆಲ್ಲರ್ ಸರ್ವೀಸ್ ಹಾಗೂ ಹರಿಯಾಣ ಗುರುಗಾವ್ ಕ್ಲಿಕ್ ರೀಟೈಲ್ ಇವರ ಮೇಲೆ ಗುಣಮಟ್ಟ ಸರಿಯಿಲ್ಲದ ಲಿಟ್ಮಾನ್ ಸ್ಟೆತೋಸ್ಕೋಪ್ ನೀಡಿ, ಸೇವಾನ್ಯೂನತೆ ಎಸಗಿದ್ದಾರೆಂಬ ದೂರನ್ನು ಆಲಿಸಿದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ದೂರುದಾರರಿಗೆ ಸೂಕ್ತ ಪರಿಹಾರ ನೀಡುವಂತೆ ತೀರ್ಪು ನೀಡಿದೆ.

ದೂರುದಾರರು 2023ರ ನವೆಂಬರ್‌ನಲ್ಲಿ ಅಮೆಜಾನ್ ಸೆಲ್ಲರ್‌ನಿಂದ ಲಿಟ್ಮಾನ್ ಸ್ಟೆತೋಸ್ಕೋಪ್ ಆನ್‌ಲೈನ್ ಮೂಲಕ ಖರೀದಿಸಿ ಕೊಂಡು 10,024 ರೂ. ಗಳನ್ನು ಪಾವತಿಸಿದ್ದರು. ಇದರ ಗುಣಮಟ್ಟ ಸರಿಯಿಲ್ಲದ್ದರಿಂದ ವಾಪಾಸ್ಸು ಮಾಡಿರುತ್ತಾರೆ. ಆದರೆ 3 ರಿಂದ 10 ದಿನಗಳೊಳಗಾಗಿ ಹಣ ವಾಪಾಸ್ ಮಾಡಲಾಗುವುದೆಂದು ತಿಳಿಸಿದ್ದರೂ, ಹಣ ವಾಪಸ್ಸು ಮಾಡದಿದ್ದರಿಂದ ಲೀಗಲ್ ನೋಟಿಸ್‌ಗೂ ಎದುರು ದಾರರು ಯಾವುದೇ ಪ್ರತ್ಯುತ್ತರ ನೀಡದೆ ಸೇವಾನ್ಯೂನತೆ ಎಸಗಿರುತ್ತಾರೆಂದು ಆಯೋಗಕ್ಕೆ ದೂರನ್ನು ಸಲ್ಲಿಸಿರುತ್ತಾರೆ.

IN THE COURT OF THE ASSISTANT COMMISSIONER AT CHICKBALLAPUR
R.A.No.264/2012-13

Appellant : **Sri. Lakshminarayana,** S/o. Late. Ramappa,55 years, Aged about R/at, #34, 1 Cross, 2nd Main, Bagepalli Town, Chickaballapur District. **V/s**
Respondents: Smt. Lakshminarasamma & others,

DRAFT PAPER PUBLICATION

Whereas, the appellant has filed this appeal against the Respondents pertaining to the land bearing old Sy.No.20, New Sy.No.45, measuring 3-28 Acres/Guntas, situated at Nanepalli Village, Kasaba Hobli, Chickaballapur Taluk & District to take notice that you the Appellant is the concerned party in the above appeal.

You the Appelant is hereby directed to appear in the above said court in person or through pleader duly instructed and able to answer all material questions raising in the Petition or to accompanied by some person able to answer all such questions on the day of on 6.04.2026 at 3.00 clock in Afternoon.

Take notice that in default of your appearance on the date before mentioned in the notice, it will be heard and determine ex-parte.

Given under my hand and seal of the court on the day of 25.03.2026

By order of the court
Assistant Commissioner, Chickaballapur
Advocate for Service: **KM Munegowda**
Advocate Chickaballapur.

BEFORE THE HONOURABLE DEPUTY DIRECTOR OF LAND RECORDS BENGALURU URBAN DISTRICT AT BENGALURU
Survey Appeal No. 103/2025-26

Between : SRI. MUNIYAPPA **...Appellant**
And : THE ADDITIONAL DIRECTOR OF LAND RECORDS & others **...Respondents**

The notice of the above appeal against the respondent No.8 by way of paper publication

Respondent No.8 SRI. H K GIRISH Aged about Major, S/o Sri H T Krishnegowda Residing at Seethakempanahalli Village, Hesaraghattahobli, Yelahanka Taluku, Bengaluru -560 064

The named above appellant has challenged the order of 1st respondent authority in respect of land bearing Survey Nos. 19/2, 10/2A & Survey No. 19/5 (new Survey Nos. 19/2A, 19/2B, 19/5 & 19/6) of Seethakempanahalli Village, Hesaraghatta hobli, Yelahanka Taluku. The respondent No.8 is hereby noticed to appear before the Honourable authority either person or his pleador, on **06/04/2026 at 3:00 PM** at the office of Deputy Director of Land Records Bengaluru Urban District to defend the above appeal. If failing to appear before this Honourable authority, which the matter will be heard ex-parte.

Given under my hand & seal of the authority on 24-03-2026

By Order of the Court
Deputy Director of Land Records Bengaluru Urban District, Bengaluru

Advocate for Appellant
PRASANNA KUMAR T.N. Advocate
#04, 1st Floor, Krishna Arcade, Mini Vidhana Soudha Road, NES, Yelahanka, Bengaluru -560 064

IN THE COURT OF THE PRINCIPAL JUDGE FAMILY COURT AT BANGALORE
M.C. No. 6710/2025

BETWEEN : Sri. Anjinappa K.P. S/o Pillappa Aged about 45 years Residing at No.2615/B, 1st Cross, C Block, BBMP office, Gayathrinagar, Bengaluru north, Bengaluru-560021 **PETITIONER**
AND : Smt. Shobha @ Muniyamma W/o Anjinappa K.P. D/o Late Muniyappa Aged about Major R/at Near RTO Office, Yeshwanthpura, Bengaluru-560022 **...RESPONDENT**

Whereas the petitioner above named has instituted the above matrimonial proceedings against you for Dissolution of the marriage between you and the petitioner, Under Section-13 (1)(ia)(ib) of Hindu Marriage Act, 1955 Which was Solemnized on 08.11.2001 at Pallekamma Temple, Kanehosahalli, Aralumallige Post, Kasaba Hobli, Doddaballapura Taluk, Bengaluru Rural District, as per Hindu Rites and Customs. you are hereby summoned to appear in this Court in person on the **27th day of APRIL 2026, at 11. A.M.** to answer the same, failing which, the Petition / application will be disposed of exparte.

Given under my hand and seal of the Court, this 25th day of March 2026.

BY ORDER OF THE COURT
Sd/- Sheristedar,
Family Court, Bangalore

Advocate for Petitioner Kotresh B.Prasadimath
#67, 3rd Floor, Railes Colony, Veerasagara Main Rd., Attur Layout, Yelahanka, Bangalore-01. 9632699405

PUBLIC NOTICE

It is hereby informed to the general public that my clients **Mr. J HUSSAIN AHMED,** S/o. A.R JAMEEL AHMED, Residing at No.41/2, Flat No 102, Lancel Residency, Coles Road, Cleveland Town, Haines Road, Frazer Town Post, Bangalore-560 005, and Mrs. J ARBIYA BANU, W/o. Mohammed Ajeer, Residing at No.8, 1st Cross, Mansoora Lane, Near HMT Dargah, CTC Road, Chickpet Post, Bangalore-560 053, is entered into a registered Agreement of Sale, vide registered Document No.HBB-1-20089/2025-26 of Book-1, dated: 16.03.2026, registered in the office of the Sub-Registrar, Gandhinagar (Hebbal) Bangalore City from Mrs. NOORJAHAN, W/o. Mohammed Musthaffa, Residing at No.14, 3rd Cross, IBS College, Kanakanagar, RT Nagar Post, Bangalore-560 032, and the said NOORJAHAN acquired the same through a registered Sale Deed vide registered Document No.HBB-1-04822/2011-12, stored in CD No.HBBD67 of Book-1, dated 08.03.2012, registered in the Office of the Sub-...

IN THE COURT OF THE PRL SENIOR CIVIL JUDGE & C.J.M AT CHICKBALPUR
O.S. No. 283/2022

Plaintiff: Sri Ravindranath.G S/o late D.Y Gopalaiah Aged about 65 years, R/at. Nayanahalli Village Nandi Hobli, Chikkballapur Taluk & District **Vs**
Defendants: Sri. G. Manjunath & Others
23) Chi. Vishal Gowda S/O BJ Rajashekar, Aged about 4 years, R/at Basavanayakanahalli, Muddenahalli Post, Nandi Hobli, Chikkaballapura Taluk and District **24) Chi. Kishan A** S/o Amaranarayanaswamy Aged about 17 years, R/at Agalagurki village and post, Nandi Hobli, Chikkaballapura Taluk and District **30) Sri. K Gopal Reddy** S/o Late Doddappayya Aged about 78 Years R/at Kambadahalli Malur Post Sidlaghatta (T) Chikballapur (D) Mob: 9972029859

PAPER PUBLICATION

Notice to the Defendant No. 30 Under Order 1 Rule 8. Read with Section 151 of the Code of 23,24 and Proposed defendant No. Civil Procedure.

Whereas, the plaintiff have filed the suit for Partition in respect of the plant schedule property against the defendant in the interest of public.

You the defendant No. 23,24,and Proposed defendant No 30 is hereby directed to appear in the above said court in person or through pleader duly instructed and able to answer all material questions raising in the suit or to accompanied by some person able to answer all ...

IN THE COURT OF THE ASSISTANT COMMISSIONERS, BENGALURU SOUTH SUB-DIVISION AT ANEKAL
R.A (A) NO : 629/2024

Between : Sri. Venkataswamy **...Appellant**
And : The Tahasildar, & others **...Respondent**

NOTICE / SUMMONS TO RESPONDENT NO.2, BY WAY OF PAPER PUBLICATION

R-2.Mohammed Khan S/o late Abdul Khader, Soluru Village, Kasaba Hobli, Anekal Taluk

WHEREAS, the Appellant has filed the above ...

BEFORE THE DEPUTY DIRECTOR OF LAND RECORDS AT BENGALURU
APPEAL No. 37/2026

BEWTEEN: SRI. GANGAIAH **...APPELLANT**
AND: THE ASSISTANT DIRECTOR OF LAND RECORDSAND OTHERS **...RESPONDENTS**

NOTICE TO RESPONDENT NO.3 to 09.

03. SRI. VENKATARAMAIAH, S/O SRI.GANGAIAH, AGED ABOUT 73 YEARS, R/A OF MACHOHALLI VILLAGE, DASANAPURA HOBLI, BENGALURU NORTH TALUK, BENGALURU.
04. SRI. BYRAPPA, S/O NOT KNOWN AGED ABOUT MAJOR, R/A OF MACHOHALLI VILLAGE, DASANAPURA HOBLI, BENGALURU NORTH TALUK, BENGALURU. **05. SRI. NAGANNA** S/O NOT KNOWN, AGED ABOUT MAJOR, R/A OF MACHOHALLI ...

ಆಸಲು ದಾವೆ ಸಂಖ್ಯೆ 33/2024

ಅಸಲು ದಾವೆ ಸಂ 194/2025

ತ್ಯಾಜ್ (Paper Publication)

IN THE COURT OF THE PRINCIPAL SENIOR CIVIL JUDGE AT ANEKAL
O.S.NO. 253/2021

NOTICE TO PROPOSED DEFENDANT NO.3 AND 4 THROUGH PAPER PUBLICATION

ಸಾರ್ವಜನಿಕ ಪ್ರಕಟಣೆ (Paper Publication)

ಕಿರುಸುದ್ದಿ

ಪ್ರದೀಪ್ ಕುಮಾರ್‌ಗೆ ಡಾಕ್ಟರೇಟ್ ಪದವಿ



• **ದೊಡ್ಡಬಳ್ಳಾಪುರ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲೂಕಿನ ಹೊಸದಿಗಂತ ವರದಿಗಾರ ದೊಡ್ಡಬಳ್ಳಾಪುರ ಪ್ರದೀಪ್ ಕುಮಾರ್ ಆರ್. ಅವರು ಗ್ರಾಮೀಣಾಭಿವೃದ್ಧಿ ಮತ್ತು ಮಲ್ಟಿ ಮೀಡಿಯ ಎಂಬ ವಿಷಯದಲ್ಲಿ ಮಂಡಿಸಿದ ಮಹಾ ಪ್ರಬಂಧಕ್ಕೆ ಅಮೆರಿಕಾದ ಬೋಸ್ಟನ್ ಇಂಪೀರಿಯಲ್ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವನ್ನು ಮುನ್ನಡೆಸುವಲ್ಲಿ, ಸಮುದಾಯದೊಂದಿಗೆ ಯುವಕರನ್ನು ಸಬಲೀಕರಣ ಗೊಳಿಸುವಲ್ಲಿ ಮತ್ತು ಸುಸ್ಥಿರ ಭಾರತದ ಬೆಳವಣಿಗೆ ಉತ್ತೇಜಿಸುವಲ್ಲಿ ಅವಿರತ ಪ್ರಯತ್ನಗಳ ಮೂಲಕ ತಮ್ಮನ್ನು ತಾವು ಗುರುತಿಸಿಕೊಂಡಿದ್ದರ ಪರಿಣಾಮವಾಗಿ ಈ ಪ್ರತಿಷ್ಠಿತ ಡಾಕ್ಟರೇಟ್ ಪದವಿ ಲಭಿಸಿದೆ. ಮುಂದಿನ ತಿಂಗಳು ಏಪ್ರಿಲ್ 4ರಂದು ಗೋವಾದಲ್ಲಿ ನಡೆಯುವ ವಿಶ್ವ ವಿದ್ಯಾಲಯದ ಘಟಿಕೋತ್ಸವದಲ್ಲಿ ವಿತರಣೆಯಾಗಲಿದೆ. ಡಾಕ್ಟರೇಟ್ ಪದವಿ ಪಡೆದಿರುವ ಡಾ.ಪ್ರದೀಪ್ ಕುಮಾರ್ .ಆರ್ ಅವರಿಗೆ ಶಾಸಕ ಧೀರಜ್ ಮುನಿರಾಜ್, ಆರ್ಥಿಕ ತಜ್ಞರಾದ ಡಾ.ಎಂ.ಆರ್. ರಂಗನಾಥ, ಅವಧೂತ ಸ್ವಯಂ ಪೂರ್ಣಾನಂದ ಸ್ವಾಮೀಜಿ, ಗ್ಲೋಬಲ್ ಗ್ರೀನ್ ಎನರ್ಜಿ ಪ್ರೈವೆಟ್ ಲಿಮಿಟೆಡ್ ನಿರ್ದೇಶಕ ಡಾ.ಪ್ರವೀಣ್ ನಾಯಕ್, ಸಿಎಂಎಸ್ ಐಟಿ ಪ್ರಾಂಶುಪಾಲ ಡಾ.ಕುಮಾರ್, ಸನಾತನ ಸೇವಾ ಸಂಘ ಕರ್ನಾಟಕ ಘಟಕದ ಅಧ್ಯಕ್ಷ ನಾರಾಯಣ, ನಿವೃತ್ತ ಮುಖ್ಯ ಪಶುವೈದ್ಯಾಧಿಕಾರಿ ಡಾ.ವಿಶ್ವನಾಥ್, ಕುಮುಟಾದ ಶ್ರೀಶಂಕರ ನಾರಾಯಣ ದೇವಾಲಯದ ಪುರೋಹಿತರಾದ ಗುರುದಾಸ್‌ಭಟ್ ಸೇರಿದಂತೆ ಹಲವರು ಅಭಿನಂದಿಸಿದ್ದಾರೆ.

ಕೆಎಸ್‌ಒಯು ಬ್ಯಾಂಕ್ ಖಾತೆ ಹಣ ಡ್ರಾ ತಡೆಗೆ ಸರ್ಕಾರ ಆದೇಶ

• **ಮೈಸೂರು:** ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆಎಸ್‌ಒಯು)ದಲ್ಲಿ ಭ್ರಷ್ಟಾಚಾರ ಹಾಗೂ ಅಗತ್ಯಕ್ಕಿಂತ ಹೆಚ್ಚು ತಾತ್ಕಾಲಿಕ ಸಿಬ್ಬಂದಿ ನೇಮಕಾತಿ ಕುರಿತು ಸರ್ಕಾರ ತನಿಖೆಗೆ ಆದೇಶಿಸಿದ್ದು, ಪ್ರಕರಣದ ತನಿಖೆಗೆ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ್ ಅವರನ್ನು ನೇಮಕ ಮಾಡಲಾಗಿದೆ. ಹೀಗಾಗಿ, ತನಿಖೆ ನಡೆಯುತ್ತಿರುವ ಹಿನ್ನೆಲೆ ಹಣಕಾಸಿನ ದುರುಪಯೋಗ ತಡೆಯಲು ಮುಂದಿನ ಆದೇಶದವರೆಗೂ ಹಣ ಬಿಡುಗಡೆ ತಡೆಹಿಡಿಯುವಂತೆ ಮುಕ್ತ ವಿ.ವಿ ಬ್ಯಾಂಕ್ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಚ್‌ಡಿಎಫ್‌ಸಿ, ಆಕ್ಸಿಸ್ ಬ್ಯಾಂಕ್‌ಗಳ ಶಾಖಾ ವ್ಯವಸ್ಥಾಪಕರಿಗೆ ಉನ್ನತ ಶಿಕ್ಷಣ ಇಲಾಖೆ ಉಪ ಕಾರ್ಯದರ್ಶಿ (ವಿಶ್ವವಿದ್ಯಾನಿಲಯಗಳು) ಎಸ್.ಕುಮಾರ್ ಪತ್ರ ಬರೆದು ಮನವಿ ಮಾಡಿದ್ದಾರೆ.

ವಿದ್ಯಾರ್ಥಿನಿ ಕಾಲಿನ ಮೇಲೆ ಹರಿದ ಸಾರಿಗೆ ಬಸ್

• **ತುಮಕೂರು:** ವಿದ್ಯಾರ್ಥಿನಿಯ ಕಾಲಿನ ಮೇಲೆ ಸರಕಾರಿ ಸಾರಿಗೆ ಬಸ್‌ನ ಟೈರ್ ಹರಿದು ಕಾಲು ಮುರಿದಿರುವ ಘಟನೆ ನಗರದ ಬಸ್ ನಿಲ್ದಾಣದಲ್ಲಿ ನಡೆದಿದೆ. ಹರ್ಷಿತ (17) ಕಾಲು ಮುರಿತಕ್ಕೊಳಗಾದ ಪ್ಯಾರಾಮೆಡಿಕಲ್ ವಿದ್ಯಾರ್ಥಿನಿ. ತುಮಕೂರಿನಿಂದ ಪಾವಗಡಕ್ಕೆ ತೆರಳುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬರುತ್ತಿದ್ದಂತೆಯೇ, ಅಲ್ಲಿದ್ದ ನೂರಾರು ಕಾಲೇಜು ವಿದ್ಯಾರ್ಥಿಗಳು ಸೀಟು ಹಿಡಿಯುವ ತರಾತುರಿಯಲ್ಲಿ ಒಮ್ಮೆಲೇ ಬಸ್‌ನ ಬಾಗಿಲಿನ ಬಳಿ ನುಗ್ಗಿದ್ದಾರೆ. ಈ ನಡುವೆ, ವಿದ್ಯಾರ್ಥಿನಿ ಹರ್ಷಿತ ಆಯತಪ್ಪಿ ಕೆಳಗೆ ಬಿದ್ದಿದ್ದಾಳೆ. ದುರದೃಷ್ಟವಶಾತ್, ಅದೇ ಸಮಯದಲ್ಲಿ ಬಸ್ ಚಲಿಸಿದ್ದರಿಂದ ಆಕೆಯ ಕಾಲು ಬಸ್‌ನ ಹಿಂದಿನ ಚಕ್ರದ ಕೆಳಗೆ ಸಿಲುಕಿ ಸಂಪೂರ್ಣವಾಗಿ ನುಜ್ಜುಗುಜ್ಜಾಗಿದ್ದು, ಆಕೆ ತೀವ್ರವಾಗಿ ಗಾಯಗೊಂಡಿದ್ದಾಳೆ. ತಕ್ಷಣವೇ ಅಲ್ಲಿದ್ದವರು ಮತ್ತು ಬಸ್ ನಿಲ್ದಾಣದ ಸಿಬ್ಬಂದಿ ಗಾಯಾಳು ವಿದ್ಯಾರ್ಥಿನಿಯನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ. ಪ್ರಸ್ತುತ ಆಕೆಗೆ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. ಬಸ್ ನಿಲ್ದಾಣದಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಈ ಇಡೀ ಅಪಘಾತದ ಭೀಕರ ದೃಶ್ಯಗಳು ಸೆರೆಯಾಗಿವೆ. ಬಸ್ ನಿಲ್ದಾಣಕ್ಕೆ ಬರುತ್ತಿದ್ದಂತೆ ವಿದ್ಯಾರ್ಥಿಗಳು ಮುಗಿಬೀಳುತ್ತಿರುವ ಮತ್ತು ವಿದ್ಯಾರ್ಥಿನಿ ಚಕ್ರದ ಅಡಿಗೆ ಬೀಳುತ್ತಿರುವ ದೃಶ್ಯಗಳು ಬೆಚ್ಚಿಬೀಳಿಸಿದೆ. ನಿಲ್ದಾಣಗಳಲ್ಲಿ ವಿದ್ಯಾರ್ಥಿಗಳ ನೂಕುನುಗ್ಗಲು ನಿಯಂತ್ರಿಸಲು ಸೂಕ್ತ ವ್ಯವಸ್ಥೆ ಇಲ್ಲದಿರುವುದೇ ಇಂತಹ ಘಟನೆಗೆ ಕಾರಣ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

21 ಕುರಿ ಕೊಂದ ಚಿರತೆ

• **ತುಮಕೂರು:** ತೋಟದ ಮನೆಯಲ್ಲಿನ ಕುರಿಗಳ ದೊಡ್ಡಿಯ ಮೇಲೆ ಚಿರತೆ ದಾಳಿ ಮಾಡಿರುವ ಘಟನೆ ಕ್ಯಾತ್ಸಂದ್ರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ತಾಲೂಕಿನ ದುರ್ಗದಹಳ್ಳಿ ಬಳಿಯ ಸೇಬುಪಾಳ್ಯದಲ್ಲಿನ ತೋಟದ ಮನೆಯಲ್ಲಿದ್ದ ಕುರಿಗಳ ಮೇಲೆ ಚಿರತೆ ದಾಳಿ ನಡೆಸಿ 35 ಕುರಿಗಳ ಪೈಕಿ 21 ಕುರಿಗಳನ್ನು ಕೊಂದು ಹಾಕಿದೆ. ರೈತ ಹೇಮಂತ್ ಈ ಘಟನೆಯಿಂದ ಕಂಗಾಲಾಗಿದ್ದು, ಲಕ್ಷಾಂತರ ರುಪಾಯಿ ನಷ್ಟವಾಗಿದ್ದು ಕಣ್ಣೀರಿನಲ್ಲಿ ಕೈ ತೊಳೆಯುವ ಸ್ಥಿತಿ ನಿರ್ಮಾಣವಾಗಿದೆ.

ಹೊಸಕೋಟೆ, ಚಿಂತಾಮಣಿ ಹೆದ್ದಾರಿ ಬಳಿ ವೇರ್ ಹೌಸ್ | ಹೆದ್ದಾರಿ ಸೌಂದರ್ಯ, ನೆರಳಿಗಿರುವ ಮರಗಳಿಗೆ ಆಪತ್ತು

ಹೆದ್ದಾರಿ ಬದಿಯ ಗಿಡಮರಗಳಿಗೆ ಬೆಂಕಿ

▸ ತಾವರೆಕೆರೆ ಟಿ.ನಾಗರಾಜ್.

• **ತಾವರೆಕೆರೆ:** ತಾಲೂಕಿನದ್ಯಾಂತ ವೇರ್‌ಹೌಸ್‌ಗಳು ಪ್ರಾರಂಭವಾಗಿವೆ. ರಸ್ತೆ ಬದಿಯಲ್ಲಿನ ಮರಗಳಿಗೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೊಡಲಿ ಪೆಟ್ಟು, ಹೊಸಕೋಟೆ ಹಾಗೂ ಚಿಂತಾಮಣಿ ರಾಜ್ಯ ಹೆದ್ದಾರಿ ರಸ್ತೆ ಬದಿಯ ಮರಗಳು ಪರಿಸರ ಸಮತೋಲನ, ನೆರಳು ಮತ್ತು ಸೌಂದರ್ಯಕ್ಕೆ ಅತ್ಯಗತ್ಯ.

ಇವು ಗಾಳಿಯ ಸವೆತತಡೆದು, ತಾಪಮಾನ ಕಡಿಮೆ ಮಾಡುತ್ತವೆ. ಗಟ್ಟಿ ಮುಟ್ಟಾದ, ಆಳವಾದ ಬೇರು ಹೊಂದಿರುವ ಮರವನ್ನು ಆರಿಸುವುದು ಸುರಕ್ಷಿತ. ಆದರೆ, ಹಳೆಯ ಮರಗಳು ಬೀಳುವ ಆತಂಕವಿದ್ದರೆ, ತೆರುಗೊಳಿಸುವುದು ಸಂಬಂಧಪಟ್ಟ ಇಲಾಖೆಗೆ ಅನ್ವಯಿಸುತ್ತದೆ ಮರಗಳು ನೆರಳು ನೀಡುವುದಲ್ಲದೆ, ರಸ್ತೆಯ ಸುಂದರೀಕರಣಕ್ಕೆ ಕೊಡುಗೆ ನೀಡುತ್ತವೆ. ರಸ್ತೆ ಬದಿಯ ಮರಗಳಿಗೆ ಬಿಳಿ ಬಣ್ಣ ಬಳಿಯುವುದು ರಾತ್ರಿ ವೇಳೆ ಚಾಲಕರಿಗೆ ಗೋಚರತೆಯನ್ನು ಸುಧಾರಿಸುತ್ತದೆ ಮತ್ತು ಕ್ರಿಮಿಕೀಟಗಳಿಂದ ಮರವನ್ನು ರಕ್ಷಿಸುತ್ತದೆ.

ಆದರೆ, ಹೊಸಕೋಟೆ ತಾಲೂಕಿನ ರಾಜ್ಯ ಹೆದ್ದಾರಿ ನಂದಗುಡಿಯಿಂದ ಹೊಸಕೋಟೆ ಹಾದು ಹೋಗುವ ರಸ್ತೆ ಬದಿಯಲ್ಲೇ ಸುಮಾರು ವೇರ್ ಹೌಸ್ ಖಾಸಗಿ ಕಂಪನಿಗಳು ಪ್ರಾರಂಭವಾಗಿವೆ. ಕಂಪನಿಗಳು ಪ್ರಾರಂಭಿಸ ಬೇಕಾದರೆ ಇಲಾಖೆಯವರು ಅನುಮತಿ ಪಡೆದಿರುವರು.

ಸುಮಾರು ಎಂಟು ವೇರ್ ಹೌಸ್‌ಗಳು ಶಿವನಾಪುರ, ಚೊಕ್ಕಹಳ್ಳಿ, ಕಂಬಳಿಪುರ, ಮೂರು ಪಂಚಾಯತಿಗಳಿಂದ ಪರವಾನೆ ಲೈಸೆನ್ಸ್‌ಗಳು ಪಡೆದು ಪ್ರಾರಂಭಿಸಿರುತ್ತಾರೆ ವೇರ್ ಹೌಸ್ ಬಗ್ಗೆ ಮಾಹಿತಿ ಕೇಳಿದರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಒಬ್ಬರ ಮೇಲೆ ಒಬ್ಬರು ಮೀನಾಮೇಷ ಎಣಿಸುತ್ತಿದ್ದಾರೆ.

ಆದರೆ ಕಂಪನಿಗಳ ಮುಂಭಾಗದಲ್ಲಿ, ರಸ್ತೆಯ ಪಕ್ಕದಲ್ಲಿ ಇರುವತನ್ನ ಸ್ವಾರ್ಥಕ್ಕಾಗಿ ಕಂಪನಿಯವರು ಮರ ಗಿಡಗಳನ್ನು ಬೆಂಕಿ ಹಚ್ಚಿ ನಾಶಪಡಿಸುತಿದ್ದರು ಇಲಾಖೆ ಅಧಿಕಾರಿಗಳು ಕಣ್ಮುಚ್ಚಿ ಇರುವುದು ಸಾರ್ವಜನಿಕರ ಮತ್ತು ಪರಿಸರ ಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ರಸ್ತೆ ವಿಸ್ತರಣೆಯ ನೆಪದಲ್ಲಿ ಗಿಡಮರವನ್ನು ಬೆಂಕಿ ಹಚ್ಚಿ ಕಡಿಯಲಾಗುತ್ತಿದೆ. ಇದು ಪರಿಸರಕ್ಕೆ ಹಾನಿಕಾರಕ. ರಸ್ತೆ ಬದಿಯ ಹಸಿರು ಪರಂಪರೆಯನ್ನು ಉಳಿಸಿಕೊಳ್ಳಲು ಹೊಸ ಗಿಡಗಳನ್ನು ನೆಡುವುದು ಮತ್ತು ಅಸ್ತಿತ್ವದಲ್ಲಿರುವ ಮರಗಳನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.





ಸುಮಾರು ವರ್ಷ ಕಾಲ ನೆರಳನ್ನು ನೀಡಿ, ಸಾವಿರಾರು ಪ್ರಯಾಣಿಕರಿಗೆ ರಸ್ತೆ ವಿಸ್ತರಣೆಗಾಗಿ ಧರೆಗುರುಳುತ್ತಿವೆ. ಇದರ ಜೊತೆ ರಸ್ತೆಯ ಉದ್ದಕ್ಕೂ ಇದ್ದ ನೂರಾರು ಮರಗಳ ಮಾರಣ ಹೋಮ ನಡೆಯುತ್ತಿದೆ.

ಒಂದು ಮರ ಬೆಳೆಸಲು 8ರಿಂದ 10 ವರ್ಷ ಕಾಯಬೇಕು. ಒಂದು ಮರಕಡಿದರೆ ಬೇರೆಜಾಗದಲ್ಲಿ 10 ಗಿಡಗಳನ್ನು ನೆಡುವುದರ ಮೂಲಕ ಪರಿಸರ ಸಮತೋಲನ ಕಾಪಾಡಬೇಕು. ಸರ್ಕಾರಗಿಡನೆಡಿ,ಪರಿಸರಉಳಿಸಿ,ಪರಿಸರವಿದ್ದರೆಮೇಲೆನಾಡಿಗೆ ಮಳೆ, ಮಳೆ ಇದ್ದರೆ ಬೆಳೆ ಎಂದು ಪ್ರಚಾರ ಮಾಡುತ್ತದೆ. ಇನ್ನೊಂದೆಡೆ ಗಿಡ-ಮರವನ್ನು ಪರೋಕ್ಷವಾಗಿ ಕಡಿಸುತ್ತಿದೆ. ಹೆದ್ದಾರಿ ಪಕ್ಕದ ಖಾಸಗಿ ಕಂಪನಿ ವಿಸ್ತರಣೆ ಸಲುವಾಗಿ ಮರವನ್ನು ಗಿಡಗಳಿಗೆ ಬೆಂಕಿ ಹಚ್ಚಿ ನಾಶಪಡಿಸುತ್ತಿದ್ದು ಹೀಗಾಗಿ ರಸ್ತೆ ಬದಿಯಲ್ಲಿ ನೆರಳು ಮಾಯವಾಗುತ್ತಿದೆ.

ಇತ್ತೀಚಿನ ವರ್ಷದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ರಸ್ತೆ ವಿಸ್ತರಣೆ ಕಾಮಗಾರಿಯಿಂದ ಹೆಚ್ಚಿನ ಹಾನಿಯಾಗಿರುವುದು ಪರಿಸರ ಸಂರಕ್ಷಣೆಗಾಗಿ, ರಸ್ತೆ ಅಗಲಗೊಳಿಸುವುದಕ್ಕೆ ಎರಡೂ ಬದಿ ಇರುವ ಮರಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿದು ಹಾಕಿರುವುದರಿಂದ ರಾಜ್ಯ ಮತ್ತುರಾಷ್ಟ್ರೀಯ ಹೆದ್ದಾರಿಯಲ್ಲಿ ದೂರ ಪ್ರಯಾಣ ಮರುಭೂಮಿಯಲ್ಲಿ ಸಾಗಿದ ಅನುಭವ ನೀಡುತ್ತದೆ. ರಾಜ್ಯದ ಹೆದ್ದಾರಿಗಳಲ್ಲಿ ಸುಮಾರು ವರ್ಷದಿಂದ ತಂಪು ನೀಡುತ್ತಿದ್ದ ಸಾವಿರಾರು ಮರಗಳನ್ನು ರಸ್ತೆ ವಿಸ್ತರಣೆಗಾಗಿ ಬೆಂಕಿಗೆ ಸುಟ್ಟು ಪರಿಣಾಮ ಹವಾಮಾನ ವೈಪರೀತ್ಯಕ್ಕೂ ಕಾರಣವಾಗಿದೆ. ಮರಗಳನ್ನು ಕಡಿಯುವುದಕ್ಕೆ ಸಂಬಂಧಿಸಿ ಅರಣ್ಯ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳು ನಿಯಮವನ್ನು ರೂಪಿಸಿಕೊಂಡಿವೆಯಾದರೂ ಅವು ಸರಿಯಾಗಿ ಪಾಲನೆಯಾಗುತ್ತಿರುವ ಬಗ್ಗೆ ವಿಶ್ವಾಸ ಮೂಡುತ್ತಿಲ್ಲ.

ವಿದ್ಯುತ್ ತಂತಿಗಳಿಗೆ ಅಡ್ಡ ಬರುವುದನ್ನು ತಪ್ಪಿಸುವ ನೆಪದಲ್ಲಿ ಮರಗಳ ಕೊಂಬೆ ರೆಂಬೆಗಳನ್ನು ಸವರುವಾಗ ನಾಜೂಕುತನವನ್ನು ಪ್ರದರ್ಶಿಸುವುದಿಲ್ಲ, ಮರಗಳಲ್ಲಿ ಹಕ್ಕಿಗಳು ಗೂಡುಕಟ್ಟಿರುವುದನ್ನು ಲಕ್ಷಿಸುವುದಿಲ್ಲ, ಅವುಗಳ ರಕ್ಷಣೆಯ ಚಿಂತನೆಯನ್ನೂ ಮಾಡುವುದಿಲ್ಲ.

ಮರಗಿಡ ತೆರವು ಗೊಳಿಸಬಾರದು

ಹೊಸಕೋಟೆ ಹಾಗೂ ಚಿಂತಾಮಣಿ ರಾಜ್ಯ ಹೆದ್ದಾರಿ ರಸ್ತೆ ಅಜು ಬಾಜು ಖಾಸಗಿ ಕಂಪನಿ ಕಾರ್ಖಾನೆಗಳು ಪ್ರಾರಂಭ ಮಾಡಬೇಕಾದರೆ ನಮ್ಮ ಇಲಾಖೆಯಿಂದ ಅನುಮತಿ ಪತ್ರ ಕಡ್ಡಾಯ. ಆದರೆ, ರಸ್ತೆ ಬದಿಯಲ್ಲಿರುವ ಮರ ಗಿಡವನ್ನು ತೆರವುಗೊಳಿಸಬೇಕಾದರೆ ಅರಣ್ಯ ಇಲಾಖೆಯ ಅನುಮತಿ ಪಡೆದು ತೆರವುಗೊಳಿಸಬೇಕಾಗುತ್ತದೆ ಎಂದು ಪ್ರಕಾಶ್, ಎಇಇ ಪಿಡಬ್ಲ್ಯುಡಿ ಇಲಾಖೆ, ಹೊಸಕೋಟೆ.

ಕಾನೂನು ಕ್ರಮ ಜರುಗಿಸಲಿ

ರಸ್ತೆ ವಿಸ್ತರಣೆಯ ಯಾವುದೇ ಯೋಜನೆ ಮರವನ್ನು ಉಳಿಸಿಕೊಳ್ಳುವುದಕ್ಕೆ ಆದ್ಯತೆ ನೀಡಬೇಕು. ಕಡಿಯುವುದು ಅವರು ಸುಲಭ, ಬೆಳೆಸುವುದು ಕಷ್ಟ ಎಂಬ ಪ್ರಾಥಮಿಕ ಸಂಗತಿ. ಅರಿವು ಸರ್ಕಾರಕ್ಕೆ ಇರಬೇಕು. ತುರ್ತಾಗಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ವೇರ್ ಹೌಸ್ ಕಂಪನಿಗಳ ಮೇಲೆ ಸೂಕ್ತ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು ಎಂದು ದ್ವಿಚಕ್ರ ವಾಹನ ಸವಾರ ನಾಗರಾಜ್ ಒತ್ತಾಯಿಸಿದ್ದಾರೆ.

ಮರ,ಗಿಡ ಕಡಿಯಲು ಅನುಮತಿ ಕಡ್ಡಾಯ

ಮರ-ಗಿಡಗಳನ್ನು ಕಡಿಯಬೇಕಾದರೆ ನಮ್ಮ ಇಲಾಖೆಯಿಂದ ಅನುಮತಿ ಪಡೆಯುವುದು ಕಡ್ಡಾಯ. ಕಂಪನಿಗಳ ಮುಂಭಾಗದಲ್ಲಿ ಬೆಂಕಿ ಆಹುತಿಗೆ ಮರ ಗಿಡಗಳು ನಾಶವಾಗಿರುವುದನ್ನು ಪರಿಶೀಲಿಸಿ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪುಷ್ಪಾ, ಹೊಸಕೋಟೆ ವಲಯಅರಣ್ಯಾಧಿಕಾರಿ.

ಶಿವನಾಪುರದಲ್ಲಿ ದ್ರೌಪದಾಂಬಾ ಹಸಿ ಕರಗೋತ್ಸವ

• **ತಾವರೆಕೆರೆ:** ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿ ವ್ಯಾಪ್ತಿಯ ಶಿವನಾಪುರ ಗ್ರಾಮದಲ್ಲಿ 80ನೇ ವರ್ಷದ ಧರ್ಮರಾಯಸ್ವಾಮಿ ದ್ರೌಪದಾಂಭಾ ದೇವಿಯ ಹಸಿಕರಗ ಮಹೋತ್ಸವ ನಡೆಯಿತು.

ರಾತ್ರಿ ಸುಮಾರು ಒಂದು ಮೂವತ್ತಕ್ಕೆ ಸರಿಯಾಗಿ ಆರಂಭಗೊಂಡು ಗ್ರಾಮದ ಪ್ರಮುಖ ದೇವಾಲಯ ಹಾಗೂ ವಹ್ನಿಕುಲ ಕ್ಷತ್ರಿಯ ಗುರುಪೀಠದ ಶ್ರೀ ಆದಿಶಕ್ತಿ ಮಹಾಸಂಸ್ಥಾನ ಮಠಕ್ಕೆ ಭೇಟಿ ನೀಡಿ ಪೀಠಾಧಿಪತಿಗಳಾದ ಶ್ರೀ ಪ್ರಣವಾನಂದಪುರಿ ಮಹಾಸ್ವಾಮಿಗಳಿಂದ ವಿಶೇಷ ಪೂಜೆ ಸಲ್ಲಿಸಲಾಯಿತು.

ಶಿವನಾಪುರ ಕರಗ ಮಹೋತ್ಸವ ತನ್ನದೇ ಆದ ವೈಶಿಷ್ಟ್ಯ ಹಾಗೂ ವಿಶೇಷ ಸ್ಥಾನಮಾನವನ್ನು ಹೊಂದಿದೆ. ಇಲ್ಲಿನ ಮಹತ್ವ ಎಂದರೆ ಆದಿಕಾಲದಿಂದಲೂ ಶ್ರೀರಾಮ ನವಮಿಯ ದಿನದಂದೇ ಹೂವಿನ ಕರಗ ಮಹೋತ್ಸವ ನಡೆಯಲಿದೆ. ಅದೇ ರೀತಿ ಮಾ.27ರಂದು ಶುಕ್ರವಾರ ಪುರಾಣ ಪ್ರಸಿದ್ಧ ಶ್ರೀ ದ್ರೌಪದಾಂಭಾ ದೇವಿಯ ಹೂವಿನ ಕರಗ ನಡೆಯಲಿದೆ. ಕರಗ ಮಹೋತ್ಸವದ ಮುನ್ನಾದಿನ ಆಚರಿಸುವ ಹಸಿ ಕರಗ ದ್ರೌಪದಿ ದೇವಿಯನ್ನು (ಆದಿಶಕ್ತಿ) ಸಾಂಕೇತಿಕವಾಗಿ ಶಕ್ತಿ ಪೀಠ ದಿಂದ ಆಹ್ವಾನಿಸಿ, ಆಕೆ ಭೂಮಿಗೆ ಇಳಿದು ಬಂದು ಭಕ್ತರಿಗೆ ದರ್ಶನ ನೀಡುವುದನ್ನು ಸ್ಮರಿಸುವ ಮುಖ್ಯ ಆಚರಣೆಯಾಗಿದೆ. ಇದು ಪವಿತ್ರತೆ, ಕೃಷಿ ಸಮೃದ್ಧಿ ಮತ್ತು ಕೆಡುಕಿನ ಮೇಲೆ ಒಳಿತಿನ ವಿಜಯ ವನ್ನು ಸಂಕೇತವಾಗಿದೆ.

ಗ್ರಾಮದ ಮತ್ತೊಂದು ವಿಶೇಷತೆ ಎಂದರೆ ಗ್ರಾಮದಲ್ಲಿ ಹೆಚ್ಚಾಗಿ ಮುಸ್ಲಿಮ್ ಸಮುದಾಯದವರಿದ್ದಾರೆ. ಎಲ್ಲರೂ ಒಗ್ಗಟ್ಟಿನಿಂದ ಕರಗ ಮಹೋತ್ಸವವನ್ನು ಆಚರಿಸುವರು. ತಾಲೂಕಿನ ಎಲ್ಲಾ ವಹ್ನಿಕುಲ ಕ್ಷತ್ರಿಯ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಕರಗ ಮಹೋತ್ಸವವನ್ನು ಯಶಸ್ವಿಗೊಳಿಸಬೇಕು. ಈ ಕಾರಣ ರಾಜ್ಯಮಟ್ಟದ ಸಮುದಾಯದ ಶಕ್ತಿ ಪೀಠ ಮಠದಲ್ಲಿರುವ ಸ್ಥಳ ಶಿವನಾಪುರವಾಗಿದೆ. ಆದಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಕರಗೋತ್ಸವ ಯಶಸ್ವಿಗೊಳಿಸಬೇಕೆಂದು ಶ್ರೀ ಪ್ರಣವಾನಂದಪುರಿ ಮಹಾಸ್ವಾಮಿ ತಿಳಿಸಿದರು.



ಕುಲದ ಯಜಮಾನರು, ಗೌಡರು ಹಾಗೂ ಹಳೆ ಕರಗದ ಪೂಜಾರಿ ಸ್ಥಳೀಯ ನಾಯಕರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

ನಾಡಿನ ಸಾಂಸ್ಕೃತಿಕ ಮೌಲ್ಯ ಸಾರ್ವಕಾಲಿಕ

• **ಮಂಡ್ಯ:** ಪ್ರಸ್ತುತ ಎಲ್ಲದ್ದಕ್ಕೂ ಬೆಲೆ ಕಟ್ಟುವ ಸಂಸ್ಕೃತಿ ಇದೆ. ಇದನ್ನು ಬಿಟ್ಟು ಮೌಲ್ಯ ಕಟ್ಟುವ ಕೆಲಸ ಮಾಡಬೇಕಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅಭಿಪ್ರಾಯಿಸಿದರು.

ತಾಲೂಕಿನ ಸಿದ್ದಯ್ಯನಕೊಪ್ಪಲು ಗೇಟ್‌ನಲ್ಲಿರುವ ರಿಪಬ್ಲಿಕ್ ಸೆಂಟ್ರಲ್ ಸ್ಕೂಲ್‌ನಿಂದ ಜಪಾನ್‌ನಲ್ಲಿ ನಡೆಯಲಿರುವ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಕ್ಕೆ ತೆರಳುತ್ತಿರುವ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿ, ಕನಸುಗಳ ಹಾದಿಯಲ್ಲಿ ಆಸೆಗಳಿಗೆ ಜಾಗ ಇರಬಾರದು. ತಂದೆ ತಾಯಿಗಳು ಮಕ್ಕಳಿಗೆ ಮೌಲ್ಯವನ್ನು ಬಿತ್ತುವ ಕೆಲಸ ಮಾಡಬೇಕು ಎಂದು ಪೋಷಕರಿಗೆ ಸಲಹೆ ನೀಡಿದರು.

ಸಿದ್ದಯ್ಯನಕೊಪ್ಪಲು ಪಬ್ಲಿಕ್ ಸೆಂಟ್ರಲ್ ಶಾಲೆಯಲ್ಲಿ ಕಾರ್ಯಕ್ರಮ

ಭಾರತದಲ್ಲಿ ವ್ಯಕ್ತಿಯ ವಯಸ್ಸು 75 ರಿಂದ 80ವರ್ಷವಾದರೆ, ಅತ್ಯಂತ ಮುಂದುವರಿದ ರಾಷ್ಟ್ರ ಹಾಗೂ ಅತಿ ಹೆಚ್ಚು ವಯಸ್ಸಾದವರೇ ಇರುವ ರಾಷ್ಟ್ರ ಎಂದು ಹೆಸರಾಗಿರುವ ಜಪಾನ್‌ನಲ್ಲಿ ವ್ಯಕ್ತಿಯ ವಯಸ್ಸು ಸುಮಾರು 125ರಿಂದ 130ವರ್ಷ ಕಾಲ ಬದುಕುತ್ತಾರೆ. ಇದಕ್ಕೆ ಶಿಸ್ತು, ಸಂಸ್ಕೃತಿಯ ಜೊತೆಗೆ ಅವರು ಜೀವನದಲ್ಲಿ ಅಳವಡಿಸಿಕೊಂಡಿರುವ ಮೌಲ್ಯಗಳೇ ಕಾರಣ ಎಂದು ಪ್ರತಿಪಾದಿಸಿದರು.

ಇಂತಹ ವಿಭಿನ್ನ ಸಂಸ್ಕೃತಿಯುಳ್ಳ ದೇಶಕ್ಕೆ ಮಕ್ಕಳನ್ನು ಕಳುಹಿಸಿ ಅಲ್ಲಿನ ಸಂಸ್ಕೃತಿ, ಬದುಕು, ಜೀವನ ಎಲ್ಲವನ್ನು ತಿಳಿದುಕೊಂಡು ಇಲ್ಲಿನ ಮಕ್ಕಳಿಗೆ ವಿನಿಮಯ ಮಾಡಿಕೊಳ್ಳುವುದು ಒಳ್ಳೆಯ ಕಾರ್ಯ. ಇಂತಹ ಕೆಲಸವನ್ನು ಈ ಶಾಲೆ ಮಾಡುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಬಾರಿ 6ನೇ ತರಗತಿಯ ವಿಸ್ಮಯ, ನಿಶ್ಚಯ್ ಆರ್, ಸಾನ್ವಿ ಶ್ರೀಧರ್, 8ನೇ ತರಗತಿಯ ಸಿರಿ ಲಕ್ಷ್ಮಿ, 10ನೇ ತರಗತಿಯ ಹಿತೇಶ್‌ಸಿಂಗ್, ಹರಿಣಿ ಜೆ.ಗೌಡ, ಮನ್ವಿತ್‌ರಾಜ್ ದತ್ತಾತ್ರೇಯ, ದುಶ್ಯಂತ್ ಎಂ ಅವರೊಂದಿಗೆ ಮೈಸೂರಿನ ಡಿಪೌಲ್ ಪಾಲ್ ಶಾಲೆಯ 10 ಮಂದಿ ಸೇರಿ ಒಟ್ಟು 18 ಮಂದಿ ವಿದ್ಯಾರ್ಥಿಗಳು ರಾಜ್ಯದಿಂದ ಜಪಾನ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಇದರೊಂದಿಗೆ ಹಿರೋಶಿಮಾ ನಗರಕ್ಕೂ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನೂ ವೀಕ್ಷಿಸಲಿದ್ದಾರೆ ಎಂದು ವಿವರಿಸಿದರು. ಶಾಲೆಯ ಪ್ರಾಂಶುಪಾಲೆ ಸುನೀತಾ ಹಾಗೂ ಪೋಷಕರು ಸಮಾರಂಭದಲ್ಲಿ ಭಾಗವಹಿಸಿದ್ದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಸಹಯೋಗದಲ್ಲಿ ಮೈಸೂರಿನಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಜಾಗೃತಿ ಜಾಥಾ ನಡೆಯಿತು.



ಶಾಲೆಗಳ ಬಲವರ್ಧನೆಗೆ ಪ್ರೋತ್ಸಾಹಿಸಿ

• **ಹೊಸಕೋಟೆ:** ಸರಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳ ಶಿಕ್ಷಣಕ್ಕೆ ಅಗತ್ಯವಾಗಿರುವ ಪ್ರೋತ್ಸಾಹ ಸಹಕಾರವನ್ನು ಸಂಘ ಸಂಸ್ಥೆಗಳು ನೀಡಿದಾಗ ಮಾತ್ರ ಶಾಲೆಗಳು ಮೂಲಭೂತವಾಗಿ ಬಲವರ್ಧನೆ ಹೊಂದಲು ಸಾಧ್ಯವಾಗುತ್ತದೆ ಎಂದು ಮಾನವ ಹಕ್ಕುಗಳ ಜಾಗೃತಿ ಸಮಿತಿ ತಾಲೂಕು ಅಧ್ಯಕ್ಷ ಎಂ.ಆರ್ ಉಮೇಶ್ ಹೇಳಿದರು

▸▸ **ಮಾನವ ಹಕ್ಕು ಜಾಗೃತಿ ಸಮಿತಿಯಿಂದ ಕಲಿಕಾ ಸಾಮಗ್ರಿ ವಿತರಣೆ**

ನಗರದ ಜೆಕೆಬಿಎಂಎಸ್ ಶಾಲೆಯಯ ವಿದ್ಯಾರ್ಥಿಗಳಿಗೆ ಮಾನವ ಹಕ್ಕುಗಳ ಜಾಗೃತಿ ಸಮಿತಿಯಿಂದ ಪರೀಕ್ಷೆ ನೋಟ್ ಪ್ಯಾಡ್ ಹಾಗೂ ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಅವರು ಮಾತನಾಡಿ, ಮಾನವ ಹಕ್ಕುಗಳ ಜಾಗೃತಿ ಸಮಿತಿ ಹಾಗೂ ಕರ್ನಾಟಕ ರಾಜ್ಯ ವೈಜ್ಞಾನಿಕ ಪರಿಷತ್ ವತಿಯಿಂದ ಹೊಸಕೋಟೆ ತಾಲೂಕಿನ ವಿವಿಧ ಸರಕಾರಿ ಶಾಲೆಗಳಲ್ಲಿನ ಮಕ್ಕಳಿಗೆ ಕಲಿಕ ಸಾಮಗ್ರಿಯನ್ನು ವಿತರಿಸಿ ಅವರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆಂದರು.



ಕಳೆದ ಕೆಲ ದಿನಗಳಿಂದ ವಿವಿಧ ಶಾಲೆಗಳ 2 ಸಾವಿರ ಮಕ್ಕಳಿಗೆ ಪರೀಕ್ಷೆ ನೋಟ್ ಪ್ಯಾಡ್ ನೀಡಲಾಗಿದೆ. ಮುಂದಿನ ವರ್ಷದಲ್ಲಿ ಮತ್ತಷ್ಟು ಶಾಲೆಗಳಿಗೆ ಈ ಸೌಲಭ್ಯವನ್ನು ಒದಗಿಸಿ ಮಕ್ಕಳ ಕಲಿಕೆಗೆ ಸಹಾಯ ಮಾಡಲಾಗುವುದು ಎಂದರು.

ಸೂಲಿಬೆಲೆ ಸರಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಪ್ರಕಾಶ್, ರಾಜ್ಯ ವೈಜ್ಞಾನಿಕ ಪರಿಷತ್ ಜಿಲ್ಲಾ ಉಪಾಧ್ಯಕ್ಷ ಮಂಜುನಾಥ್, ಸೂಲಿಬೆಲೆ ಹೋಬಳಿ ಅಧ್ಯಕ್ಷ ನವಾಜ್ ಖಾನ್, ಮುಖ್ಯ ಶಿಕ್ಷಕಿ ಭಾರತಿ ಹಾಗೂ ಸಹ ಶಿಕ್ಷಕರು ಹಾಜರಿದ್ದರು.

ಒಳಮೀಸಲಾತಿ ಮುಂದಿನ ಹೆಜ್ಜೆ ಕುರಿತು ವಿಚಾರ ಸಂಕಿರಣ

ಪೂರ್ಣ ಜನಗಣತಿ ಸಾಧ್ಯವೇ ಇಲ್ಲ

• **ಮಂಡ್ಯ:** ನಾಗಮೋಹನ್‌ದಾಸ ವರದಿಯನ್ನು ಅವೈಜ್ಞಾನಿಕ ಎಂದು ಹೇಳುವವರ ನೈತಿಕತೆಯನ್ನು ಪ್ರಶ್ನೆ ಮಾಡಬೇಕು. ವಿಶ್ವದ ಯಾವುದೇ ಆಯೋಗಗಳು ಎಷ್ಟೇ ನಿಖರವಾಗಿ ಜನಗಣತಿ ಮಾಡಿದರೂ ಶೇ.100ರಷ್ಟು ಸರಿಯಾಗಿ ಮಾಡಲು ಸಾಧ್ಯವಾಗುವುದಿಲ್ಲ ಎಂದು ಮಾಜಿ ಸಂಸದ ಎಲ್. ಹನುಮಂತಯ್ಯ ತಿಳಿಸಿದರು.

ಮಾದಿಗರ ಒಳ ಮೀಸಲಾತಿ ಹೋರಾಟ ಸಮಿತಿ, ಕರ್ನಾಟಕ ಮಾದರ ಮಹಾಸಭಾ, ಡಾ. ಬಾಬು ಜಗಜೀವನರಾಮ್ ಸಂಘಗಳ ಒಕ್ಕೂಟ, ಶಿವಶರಣ ಮಾದಾರ ಚೆನ್ನಯ್ಯ ಸೇವಾ ಸಮಿತಿ ವತಿಯಿಂದ ನಗರದ ಗಾಂಧಿ ಭವನದಲ್ಲಿ ನಡೆದ ಒಳ ಮೀಸಲಾತಿ ಮುಂದಿನ ಹೆಜ್ಜೆಗಳು ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ ಹಾಗೂ ಒಳ ಮೀಸಲಾತಿ ಹೋರಾಟಗಾರರ ಸಮಾಲೋಚನಾ ಸಭೆ ಉದ್ಘಾಟಿಸಿ ಮಾತನಾಡಿ, ಜನರ ವರ್ಗಾವಣೆಯಾಗುತ್ತಿರುತ್ತದೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಜೀವನ ನಡೆಸಲು ಬೇರೆ ಊರಿಗೆ ಹೋಗಿರುತ್ತಾರೆ. ಹೀಗಾಗಿ ಪೂರ್ಣ ಪ್ರಮಾಣದಲ್ಲಿ ಜನಗಣತಿ ಆಗಲು ಸಾಧ್ಯವೇ ಇಲ್ಲ ಎಂದು ಪ್ರತಿಪಾದಿಸಿದರು. ಅತಿ ಹೆಚ್ಚು ಜನಸಂಖ್ಯೆ ಇರುವವರು ನಂಬರ್ ಒನ್ ಎಂದು ಸಾಭೀತು ಮಾಡಿದ್ದಾರೆ. ಈ ವರದಿಯನ್ನು ಹಿಂದಿನ ಸಂಪುಟ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವರದಿಯನ್ನು ರಾಜಕೀಯ ಕಾರಣಗಳಿಗಾಗಿ ಮಾರ್ಪಡಿಸಿ ಪ್ರವರ್ಗ-1, 2, 3 ಎಂಬುದಾಗಿ ಮಾರ್ಪಾಡು ಮಾಡಿದ್ದಾರೆ. ಸುಪ್ರೀಂ ಕೋರ್ಟ್ ಸಹ ಇದರಲ್ಲಿ ಯಾವುದೇ ಗೊಂದಲ ಇಲ್ಲ, ಇದನ್ನು ರಾಜ್ಯ ಸರ್ಕಾರಗಳು ಜಾರಿಗೊಳಿಸಬಹುದು ಎಂದು ಏಳು ಮಂದಿ ನ್ಯಾಯಮೂರ್ತಿಗಳು ತೀರ್ಪು ನೀಡಿದ್ದರು. ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಇಡೀ ದೇಶದಲ್ಲೇ ಒಳ ಮೀಸಲಾತಿ ಜಾರಿಗೊಳಿಸಿ ಅಲ್ಲಿನ ಮಾದಿಗ ಸಮುದಾಯಕ್ಕೆ ಅನೇಕ ಅವಕಾಶಗಳು ಸಿಗುವಂತೆ ಮಾಡಿದ್ದರು ಎಂದು ವಿವರಿಸಿದರು.

ಇದನ್ನು ಪ್ರಶ್ನಿಸಿ ಅಲ್ಲಿನ ವಿರೋಧಿಗಳು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದರು. ಅಲ್ಲಿ ಮಾದಿಗ ಸಮುದಾಯದವರೇ ಆಯೋಗದ ಅಧ್ಯಕ್ಷರಾಗಿದ್ದರು. ಆದರೆ ಅವರೂ ಸಹ ನಮ್ಮ ಕೈಹಿಡಿಯಲಿಲ್ಲ, ಆದರೂ ಸುಪ್ರೀಂ ಕೋರ್ಟ್ ಜಾರಿಗೊಳಿಸುವಂತೆ ತೀರ್ಪು ನೀಡಿದ್ದರು. ಆದರೆ ನಮ್ಮ ರಾಜ್ಯದಲ್ಲಿ ಒಳ ಮೀಸಲಾತಿ ಜಾರಿಗೊಳಿಸುವಲ್ಲಿ ಕಾಂಗ್ರೆಸ್ ಸರ್ಕಾರ ಮೀನ ಮೇಷ ಎಣಿಸುತ್ತಿದೆ ಎಂದು ಆರೋಪಿಸಿದರು.

ಜೋಗಿಪಾಳ್ಯ ಅಂಗನವಾಡಿಗೆ ರೋಟರಿಯಿಂದ ಹೊಸ ರೂಪ

ಶಿಕ್ಷಣ ಕ್ಷೇತ್ರಕ್ಕೆ ರೋಟರಿ ಸೇವೆ ಅಪಾರ

• **ನೆಲಮಂಗಲ:** ರೋಟರಿ ಸಂಸ್ಥೆ ಸಮಾಜದ ಅನೇಕ ಕ್ಷೇತ್ರದಲ್ಲಿ ಸೇವೆ ಮಾಡುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿನ ಸೇವೆ ಹೊಸ ಇತಿಹಾಸ ನಿರ್ಮಾಣವಾಗಿದೆ ಎಂದು ನೆಲಮಂಗಲ ರೋಟರಿ ಅಧ್ಯಕ್ಷ ಜಿ.ಆರ್ ನಾಗರಾಜು ತಿಳಿಸಿದರು.

ತಾಲೂಕಿನ ಜೋಗಿಪಾಳ್ಯ ಗ್ರಾಮದ ಅಂಗನವಾಡಿಯಲ್ಲಿ ರೋಟರಿ ಸಂಸ್ಥೆ ಆಯೋಜಿಸಲಾಗಿದ್ದ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿ, ರೋಟರಿಯ ತಂಡ ಸಹಕರಿಸಿದ ಪರಿಣಾಮ ಅದ್ಭುತ ಕೆಲಸಗಳು ಸಹಕಾರವಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಕೆಲಸ ಕಾರ್ಯಗಳನ್ನು ಮಾಡಲಾಗುತ್ತದೆಂದರು.

ರೋಟರಿ ಎಂದರೆ ನಿಸ್ವಾರ್ಥ ಸೇವೆ ಎಂಬುದನ್ನು ನಾವೆಲ್ಲರೂ ಮನಗಾಣಬೇಕಾಗಿದೆ. ನಾವು ಮಾಡಿದ ಕಾರ್ಯದಿಂದ ನೂರಾರು ಜನರಿಗೆ ಅನುಕೂಲವಾದರೆ ಬಹಳಷ್ಟು ಸಂತೋಷವಾಗುತ್ತದೆ. ರೋಟರಿ ಸಂಸ್ಥೆ ತಾಲೂಕಿನ 14 ಅಂಗನವಾಡಿಗಳಿಗೆ ಹೊಸ ರೂಪ ನೀಡಲಾಗಿದೆ. ಶ್ರೀನಿವಾಸಪುರ ಗ್ರಾಮ ಪಂಚಾಯಿತಿಯ ಜೋಗಿಪಾಳ್ಯ ಅಂಗನವಾಡಿಗೆ ಹೊಸ ರೂಪ ನೀಡಬೇಕು ಎಂಬ ವಿಜಯ್‌ಹೊಸಪಾಳ್ಯ ಮನವಿಯಿಂದ ಈ ಕಾರ್ಯವಾಗಿದೆ ಎಂದರು.

ಸರಕಾರಿ ಪ್ರಥಮ ದರ್ಜೆಕಾಲೇಜು ಸಿಡಿಸಿ ಸದಸ್ಯ,ಪತ್ರಕರ್ತ ವಿಜಯ್‌ಹೊಸಪಾಳ್ಯ ಮಾತನಾಡಿ, ಅಂಗನವಾಡಿ ಮಕ್ಕಳು ಕೇಳಿ,ಓದಿ ಕಲಿಯುವುದಕ್ಕಿಂತ ನೋಡಿ ಕಲಿಯುವುದು ಹೆಚ್ಚು, ಮಕ್ಕಳು ಚಿತ್ರವನ್ನು ಗಮನಿಸಿ ಅದರ ಬಗ್ಗೆ ಹೆಚ್ಚು ತಿಳಿಯುತ್ತಾರೆ. ಈ ನಿಟ್ಟಿನಲ್ಲಿ ನಮ್ಮ ಮನವಿಗೆ ಸ್ಪಂದಿಸಿ ರೋಟರಿ ಸಂಸ್ಥೆ ಪೂರ್ಣ ಅಂಗನವಾಡಿಗೆ ಚಿತ್ತಾರವಿರುವ ಹೊಸ ರೂಪ ನೀಡಿದ್ದಾರೆ ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು.

ಪುಟಾಣಿ ಮಕ್ಕಳು ನೋಡಿ ಕಲಿಯುವುದು ಹೆಚ್ಚು ಎಂಬ ಕಾರಣದಿಂದ ಜೋಗಿಪಾಳ್ಯ ಅಂಗನವಾಡಿಗೆ ಬಣ್ಣ ಹಾಗೂ ಚಿತ್ರಗಳನ್ನು ಬಿಡಿಸುವ ಮೂಲಕ ಹೊಸ ರೂಪ ನೀಡಿ ರೋಟರಿ ಸಂಸ್ಥೆಯಿಂದ ಉದ್ಘಾಟನೆ ಮಾಡಲಾಯಿತು. ಎಲ್ಲಾ ಪುಟಾಣಿ ಮಕ್ಕಳಿಗೆ ಸಿಹಿ ತಿಂಡಿಯನ್ನು ನೀಡುವ ಮೂಲಕ ಮಕ್ಕಳ ಸಂತೋಷ ದುಪ್ಪಟ್ಟು ಮಾಡಿದರು.

ಶ್ರೀನಿವಾಸಪುರ ಗ್ರಾಪಂ ಮಾಜಿ ಅಧ್ಯಕ್ಷೆ ಸವಿತಾ ವೆಂಕಟೇಶ್,ರೋಟರಿಕಾರ್ಯದರ್ಶಿರವಿಕುಮಾರ್, ಖಜಾಂಚಿ ಗಂಗರಾಜು, ಮಾಜಿ ಅಧ್ಯಕ್ಷರಾದ ಎಂ.ಟಿ. ನವೀನ್‌ಕುಮಾರ್, ಟಿ.ನಾಗರಾಜು, ಬಾವಿ ಅಧ್ಯಕ್ಷ ಲೋಕೇಶ್, ನಿರ್ದೇಶಕರಾದ ಚಂದ್ರಕುಮಾರ್, ರುದ್ರೇಗೌಡ, ಶಿವಶಂಕರ್, ಪ್ರಸಾದ್, ರಾಜಶೇಖರ್, ಕಲಾವಿದ ಮೂರ್ತಿ, ಅಂಗನವಾಡಿ ಶಿಕ್ಷಕಿ ದಿನಮಣಿ, ಬಾಲವಿಕಾಸ ಸಮಿತಿ ಗೌರಮ್ಮ ಸೇರಿದಂತೆ ಮಕ್ಕಳ ಪೋಷಕರು, ಗ್ರಾಮಸ್ಥರಿದ್ದರು.



ಹಳೆ ಗ್ರಾಮದ ಜಾಗ ನಮಗೆ ಬಿಟ್ಟು ಕೊಡಿ | ಅಕ್ಕೆ-ಮಲ್ಲೇನಹಳ್ಳಿ ಗ್ರಾಮಸ್ಥರ ಒತ್ತಾಯ

ಮೂಲನೆಲೆಯಿಂದ ಒಕ್ಕಲೆಬ್ಬಿಸುವ ಹುನ್ನಾರ

• **ದೇವನಹಳ್ಳಿ:** ಎಂ.ಎಸ್. ರಾಮಯ್ಯ ಅವರ ಕುಟುಂಬದವರು ತಮ್ಮ ಹಣ-ಅಧಿಕಾರ ಬಳಸಿ ಮೂಲಹಳ್ಳಿಯಿಂದ ರೈತರ ಒಕ್ಕಲೆಬ್ಬಿಸಿ ಬಂಡೆಬಳಿ ಮನೆ ಕಟ್ಟಿಕೊಳ್ಳಿ ಎಂದು ತಿಳಿಸಿದ್ದಾರೆ. ನಾವು ಬಂಡೆ ಪಕ್ಕದಲ್ಲಿದ್ದ ಗೋಮಾಳದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೇವೆಂದು ಪ. ಜಾತಿ, ಪ. ಪಂಗಡ ನಿರಾಶ್ರಿತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎನ್. ನಾಗರಾಜು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇವನಹಳ್ಳಿ ತಾಲೂಕು ಅಕ್ಕೇಶ್ವರ ಗ್ರಾಪಂ ವ್ಯಾಪ್ತಿಯ ಅಕ್ಕೆ ಮಲ್ಲೇನಹಳ್ಳಿ ಗ್ರಾಮದ ಸುಮಾರು 50 ಕುಟುಂಬದ ಜನ ವಾಸ ಮಾಡುತ್ತಿದ್ದಾರೆ. ಅಕ್ಕೆಮಲ್ಲೇನಹಳ್ಳಿ ಗ್ರಾಮದ ಮೂಲ ಜಾಗದಲ್ಲಿ ವಾಸ ಮಾಡುತ್ತಿದ್ದವರನ್ನು ಬೇರೆ ಕಡೆ ವಾಸಿಸಲು ಒತ್ತಾಯ ಮಾಡಲಾಗುತ್ತಿದೆ ಎಂದು ದೂರಿದರು. ಅಕ್ಕೇನಹಳ್ಳಿ ಮಲ್ಲೇನಹಳ್ಳಿ ಗ್ರಾಮದ ಹಳೇ ಗ್ರಾಮಠಾಣಾ 6 ಎಕರೆ 18 ಗುಂಟೆ ಜಮೀನಿನಲ್ಲಿ ನಮ್ಮ ಪೂರ್ವಜರು ಸುಮಾರು ವರ್ಷದಿಂದ ವಾಸಿಸಿಕೊಂಡು ಬಂದಿದ್ದಾರೆ. ಈ ಜಾಗವನ್ನು ಕಬಳಿಸುವ ಹುನ್ನಾರ ನಡೆಸಿ ಸುತ್ತಲೂ ಇರುವ ಖರಾಬು ಜಾಗ ಕಬಳಿಸಲು ನಮ್ಮ ಗ್ರಾಮಕ್ಕೆ ನೀರು ಹರಿಸಿ ರಸ್ತೆ, ದೇವಾಲಯ ಸೇರಿದಂತೆ ಗ್ರಾಮದ ಕುರುಹನ್ನು ನಾಶ ಮಾಡಿ, ನಮ್ಮನ್ನು ಬಂಡೆ ಬಳಿ ಮನೆ ನಿರ್ಮಿಸಿಕೊಳ್ಳಲು ಎಂದು ದರ್ಪದಿಂದ ಒಕ್ಕಲೆಬ್ಬಿಸಿದರು ಎಂದು ಆತಂಕಪಟ್ಟರು.



ಎಂ.ಆರ್.ಜಯರಾಮ್ ಅವರುಶಾಸಕರಾದಮೇಲೆ ಉಳುಮೆ ಮಾಡಿಕೊಂಡಿರುವ ಸರ್ಕಾರಿ ಜಾಗವನ್ನು ದೌರ್ಜನ್ಯ ನಡೆಸಿ 375 ಹೆಕ್ಟೇರ್ ಮತ್ತು ಇದಕ್ಕೆ ಹೊಂದಿಕೊಂಡಿರುವ ಸುಮಾರು 86 ಎಕರೆ ಸರ್ಕಾರಿ ಖರಾಬ್ ಭೂಮಿಯನ್ನು ಕಬಳಿಸಲು ಸಂಚು ರೂಪಿಸಲಾಗಿದೆ ಎಂದು ಆರೋಪಿಸಿದರು. ನಾವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ, ತೀರ್ಪು ಗ್ರಾಮಸ್ಥರ ಪರವಾಗಿದೆ. ಆದರೂ ಇಲ್ಲಿ ಟಾಟಾ, ಬ್ರಿಗೇಡ್ ಕಂಪನಿಗಳಿಗೆ ಜಮೀನು ಪರಭಾರೆ ಮಾಡಲು ಬದಲಿ ನಿವೇಶನ ನೀಡಲು ಬಂದಿದ್ದಾರೆ. ಪಂಚಾಯ್ತಿಯಿಂದಲೂ ನಮ್ಮ ಮೇಲೆ ಕ್ರಮ ಕೈಗೊಳ್ಳಲು ಪ್ರಯತ್ನಿಸಿದರೆಂದು ಕಿಡಿಕಾರಿದರು.

ಆದರೂ ಗ್ರಾಮಸ್ಥರೆಲ್ಲಾ ಒಂದಾಗಿ ಯಾವುದೇ ಕಾರಣಕ್ಕೂ ಮೂಲ ನಿವಾಸಿಗಳಾದ ನಮ್ಮ ಜಮೀನನ್ನು ಬಿಟ್ಟುಕೊಡುವುದಿಲ್ಲ, ಅನೇಕ ಬಾರಿ ಸಾವಿರಾರು ಅರ್ಜಿ ಸಲ್ಲಿಸಿದರೂ ಯಾವುದೇ ಕ್ರಮ ವಹಿಸದ ಅಧಿಕಾರಿಗಳು ಪ್ರಭಾವಿ ಮುಖಂಡರ ಪ್ರಭಾವಕ್ಕೆ ಒಳಗಾಗಿದ್ದಾರೆ. ಇದಲ್ಲದೇ 22 ಎಕರೆ ಕೆರೆ ಜಾಗ ಕಬಳಿಸಿದ್ದಾರೆ ಎಂದರು.

ಕೆಲವು ವರ್ಷದ ಹಿಂದೆ ಇದ್ದ ತಹಸೀಲ್ದಾರ್ ಎಲ್.ಸಿ. ನಾಗರಾಜ್ ಸ್ಥಳ ಪರಿಶೀಲಿಸಿ ಮೂಲ ನಿವಾಸಿಗಳ ಜಾಗ ಎಂದು ತಿಳಿಸಿ ನಾಮ ಫಲಕ ಕೂಡ ಹಾಕಿದ್ದರು. ಎಂದರು.ಕೆಆರ್‌ಎಸ್ ಮುಖಂಡ ನಿಖಿಲ್ ಮಾತನಾಡಿ, ಅಕ್ಕೆ ಮಲ್ಲೇನಹಳ್ಳಿಯ ಮೂಲನಿವಾಸಿಗಳಿಗೆ ಅಧಿಕಾರಿಗಳು ನ್ಯಾಯ ಒದಗಿಸದಿದ್ದಲ್ಲಿ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಉಗ್ರ ಹೋರಾಟ ಮಾಡಲಾಗುವುದೆಂದರು.. ಅಕ್ಕೆ ಮಲ್ಲೇನಹಳ್ಳಿ ಮೂಲ ನಿವಾಸಿಗಳಾದ ಕೆಆರ್‌ಎಸ್ ಪಕ್ಷದ ವೆಂಕಟೇಶ್ ಮೂರ್ತಿ, ನಿಖಿಲ್, ಸುಬ್ರಹ್ಮಣಿ, ಹೋರಾಟಗಾರ ರಾಯಸಂದ್ರ ಸೋಮಶೇಖರ್(ಸೋಮು), ಲಾಯರ್ ಸಿದ್ಧಾರ್ಥ, ಮುನಿರಾಜು, ಆನಂದ್, ಹನುಮಂತಪ್ಪ, ಚಂದ್ರಶೇಖರ್ ಸೇರಿದಂತೆ ಹಲವರಿದ್ದರು.

ಕಿರುಸುದ್ದಿ

ತರಕಾರಿ ಮಾರುಕಟ್ಟೆಗೆ ಕಾಯಕಲ್ಪ



• **ಕೋಲಾರ:** ಜಿಲ್ಲೆಯಲ್ಲಿ 95-96ಕ್ಕಿಂತಲೂ ಮೊದಲು ಇಡೀ ತಾಲೂಕಿನ ರೈತರ ತರಕಾರಿ ಪದಾರ್ಥಗಳ ಮಾರುಕಟ್ಟೆ, ಇದೀಗ ಗುರುವಾರದ ಸಂತೆಯೂ ಆಗಿರುವ ಕೋಲಾರದ ಹೊಸ ಬಸ್ ನಿಲ್ದಾಣದ ಪಕ್ಕದ ಸಂತೆ ಮೈದಾನಕ್ಕೆ ಹೊಸ ರೂಪ ನೀಡಲು ನಗರಸಭೆ ನಿರ್ಧರಿಸಿದೆ. ಇಲ್ಲಿ ಸಕಲ ಸೌಲಭ್ಯದ ಧುನಿಕ ಮಾರುಕಟ್ಟೆ ತಲೆಯೆತ್ತಲಿದೆ. ಸಂತೆ ಮೈದಾನದಲ್ಲಿ ನಗರಸಭೆಯ 1.5 ಕೋಟಿ ಅನುದಾನದಲ್ಲಿ ಮಾರುಕಟ್ಟೆ ನಿರ್ಮಿಸಲಾಗುತ್ತಿದೆ. ಈಗಾಗಲೇ ಡಿಪಿಆರ್ ಮಾಡಲಾಗಿದೆ. ಒಟ್ಟು 107ಮಳಿಗೆಗಳು ತಲೆ ಎತ್ತಲಿವೆ. ಎರಡೂ ಬದಿಕಟ್ಟೆ ಹಾಗೂ ಚಾವಣಿ ನಿರ್ಮಿಸಲಾಗುತ್ತದೆ. ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ, ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಲಾಗುತ್ತದೆ. ಮೂರು ಪ್ರವೇಶದ್ವಾರ ಇರಲಿವೆ. ಹೂವು, ಹಣ್ಣು, ತರಕಾರಿ ವ್ಯಾಪಾರಿಗಳು ಇರುವರು. ಇಲ್ಲಿಯೇ ಸುಮಾರು 83 ಮಂದಿ ಪ್ರಸ್ತುತ ವ್ಯಾಪಾರ ಮಾಡಿಕೊಂಡಿದ್ದು, ಮೊದಲಿಗೆ ಅವರಿಗೆ ಆದ್ಯತೆ ನೀಡಲಾಗುತ್ತದೆ. ಬಸ್ ನಿಲ್ದಾಣ ಸುತ್ತಮುತ್ತ ವ್ಯಾಪಾರ ಮಾಡುವ ಸುಮಾರು 30 ಮಂದಿ ಇದ್ದಾರೆ. ಅವರಿಗೂ ಈ ಮಾರುಕಟ್ಟೆಯಲ್ಲಿ ವ್ಯವಸ್ಥೆ ಮಾಡಿಕೊಡಲಾಗುತ್ತದೆ. ಸಂತೆ ಮೈದಾನ ಬಳಿ ಒತ್ತುವರಿಯಾಗಿರುವ ರಸ್ತೆಯನ್ನು ಪರಿಶೀಲಿಸಿ ತೆರವುಗೊಳಿಸಿ ಕ್ರಮ ವಹಿಸುವಂತೆ ಶಾಸಕ ಕೊತ್ತೂರು ಮಂಜುನಾಥ್ ಈಗಾಗಲೇ ಸೂಚಿಸಿದ್ದಾರೆ ಇದರಿಂದಾಗಿ ಬಿಸಿಲು, ಮಳೆ, ದೂಳು, ಕೆಸರು, ಮಧ್ಯೆ ನಿತ್ಯ ಕಷ್ಟಪಟ್ಟು ತರಕಾರಿ, ಹೂವು, ಹಣ್ಣು ವ್ಯಾಪಾರ ಮಾಡುವ ವ್ಯಾಪಾರಿಗಳಿಗೆ ಸದ್ಯದಲ್ಲೇ ಸುಸಜ್ಜಿತ ವ್ಯವಸ್ಥೆ ಲಭ್ಯವಾಗಲಿದೆ. ಅಜಾರಿ ಬೀದಿಯಲ್ಲಿ ನಗರಸಭೆಯ 80 ಲಕ್ಷ ರೂ ಅನುದಾನದಲ್ಲಿ ನಿರ್ಮಿತಿ ಕೇಂದ್ರದಿಂದ ಆಧುನಿಕ ಮಾರುಕಟ್ಟೆ ನಿರ್ಮಿಸಲಾಗುತ್ತದೆ. 87 ಮಳಿಗೆ ಇರಲಿದ್ದು, ಕಟ್ಟೆ, ಚಾವಣಿ ನಿರ್ಮಿಸಲಾಗುತ್ತದೆ. 76 ಹಣ್ಣು, ತರಕಾರಿ, ವ್ಯಾಪಾರಿಗಳು, 11 ಹೂವು ಮಾರುವವರಿಗೆ ವ್ಯವಸ್ಥೆ ಇರಲಿದೆ. ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಶೌಚಾಲಯ ಈಗಾಗಲೇ ಇವೆ. ದೊಡ್ಡಪೇಟೆಯಿಂದ ಅಜಾರಿ ಬೀದಿಗೆ ಹೋಗುವ ಎಲ್ಲಾ ಪಾದಚಾರಿ ವ್ಯಾಪಾರಿಗಳು, ಎಂ.ಜಿ.ರಸ್ತೆಯಲ್ಲಿರುವವರನ್ನು ಇಲ್ಲಿಗೆ ಸ್ಥಳಾಂತರಿಸಲಾಗುತ್ತದೆ. ಒಂದೇ ಕಡೆ ಹಣ್ಣು, ತರಕಾರಿ, ಹೂವು ಸಿಗುವಂತಾಗುತ್ತದೆ ಈ ಆಶಯ ಬೇಗ ಈಡೇರಲಿ ಎಂಬುದು ನಾಗರಿಕರ ಮನವಿಯಾಗಿದೆ.

ಏ.13ರಿಂದ ಮಕ್ಕಳಿಗೆ ಬೇಸಿಗೆ ಉಚಿತ ಶಿಬಿರ

• **ಬೆಂಗಳೂರು:** ಖ್ಯಾತ ಸಂಗೀತ ವಿದ್ವಾಂಸರು, ವಿದುಷಿಯರ ಸಂಗೀತ ಮಾರ್ಗದರ್ಶನದಲ್ಲಿ ಏ.13 ರಿಂದ 28ರವರೆಗೆ ಮಕ್ಕಳ ಉಚಿತ ಬೇಸಿಗೆ ಸಂಗೀತ ಶಿಕ್ಷಣ ಶಿಬಿರ ಆಯೋಜಿಸಲಾಗಿದೆ. ಜಯನಗರ 9ನೇ ಬಡಾವಣೆಯಲ್ಲಿರುವ ಭಾರತ - ಭಾರತೀ ಸಂಗೀತ ಸೇವಾ ಪ್ರತಿಷ್ಠಾನ (ರಿ). ಜಯನಗರ 8ನೇ ಬಡಾವಣೆಯ ಶ್ರೀ ಜಯರಾಮ ಸೇವಾ ಮಂಡಳಿ (ರಿ.), ಜಯನಗರ 3ನೇ ಬಡಾವಣೆಯ ಸುಸ್ವರ ಭಾರತೀ ಇವರುಗಳ ಸಂಯುಕ್ತಾಶ್ರಯದಲ್ಲಿ ಖ್ಯಾತ ಸಂಗೀತ ವಿದ್ವಾಂಸರು, ವಿದುಷಿಯರು ಕರ್ನಾಟಕ ಶಾಸ್ತ್ರೀಯ ಸಂಗೀತ, ತ್ರಿಮೂರ್ತಿಗಳ ಕೃತಿಗಳು, ಹರಿದಾಸರ ದೇವರನಾಮಗಳು, ಶಿವಶರಣರ ವಚನಗಳು, ದೇಶಭಕ್ತಿಗೀತೆಗಳನ್ನು ಕೃತಿ, ರಾಗ, ತಾಳ ಬದ್ಧವಾಗಿ ಕಲಿಸಲಾಗುವುದು. ಆಸಕ್ತರು ಏ. 4ರ ಸಂಜೆ 8 ಗಂಟೆಯೊಳಗೆ ತಮ್ಮ ಹೆಸರನ್ನು ನೋಂದಾಯಿಸಬಹುದು. ಹೆಚ್ಚಿನ ಮಾಹಿತಿಗಾಗಿ ಬಿ.ಎಸ್. ಹರಿಪ್ರಸಾದ, ಮೋ: 89042-35300 ಅಥವಾ ಅಮಿತ ನಾಗಪ್ರಕಾಶ್ ಮೋ: 93432-95642 ಸಂಪರ್ಕಿಸಬಹುದಾಗಿದೆ.

ದ್ವಿಚಕ್ರವಾಹನ ಕಳವು: 10 ವಾಹನ ವಶ

• **ಬೆಂಗಳೂರು:** ಸಿಲ್ಕ್ ಬೋರ್ಡ್ ಮೆಟ್ರೋ ನಿಲ್ದಾಣದ ಬಳಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನಕ್ಕೆ ಸಂಬಂಧಿಸಿದಂತೆ ಮಡಿವಾಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಭೇದಿಸಿರುವ ಪೊಲೀಸರು, ಓರ್ವ ಆರೋಪಿಯನ್ನು ಬಂಧಿಸಿ ಆತನಿಂದ 6.25 ಲಕ್ಷ ರೂ.ಮೌಲ್ಯದ ಒಟ್ಟು 10 ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಸಿಲ್ಕ್ ಬೋರ್ಡ್ ಬಳಿ ವಾಹನ ಕಳ್ಳತನವಾದ ಬಗ್ಗೆ ಬೆಳ್ಳಂದೂರಿನ ನಿವಾಸಿಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಮಡಿವಾಳ ಪೊಲೀಸರು ತನಿಖೆ ಕೈಗೊಂಡಿದ್ದರು. ಪ್ರಕರಣದ ತನಿಖೆ ನಡೆಸಿದ ಪೊಲೀಸರು ಮಾರುತಿನಗರದ ಮುಖ್ಯ ರಸ್ತೆಯಲ್ಲಿ ಕಳ್ಳತನದ ವಾಹನದೊಂದಿಗೆ ಓಡಾಡುತ್ತಿದ್ದ ಆರೋಪಿಯನ್ನು ವಶಕ್ಕೆ ಪಡೆದಿದ್ದರು. ಆತನನ್ನು ವಿಚಾರಣೆಗೊಳಪಡಿಸಿದಾಗ, ಸಿಲ್ಕ್ ಬೋರ್ಡ್‌ನ ದರ್ಗಾ ಬಳಿಯ ಖಾಲಿ ಜಾಗದಲ್ಲಿ 5 ವಾಹನ ಹಾಗೂ ಹೊಸೂರು ರಸ್ತೆಯ ಕೆಎಆರ್‌ಟಿ ಸಮುದಾಯ ಭವನದ ಬಳಿ 4 ವಾಹನಗಳನ್ನು ಬಚ್ಚಿಟ್ಟಿರುವುದಾಗಿ ಒಪ್ಪಿಕೊಂಡಿದ್ದಾನೆ. ಈ ಮಾಹಿತಿಯ ಮೇರೆಗೆ ಪೊಲೀಸರು ಕಾರ್ಯಾಚರಣೆ ನಡೆಸಿ ಎಲ್ಲಾ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯ ಬಂಧನದಿಂದ ಮಡಿವಾಳ ಪೊಲೀಸ್ ಠಾಣೆಯ 3, ಎಚ್‌ಎಸ್‌ಆರ್ ಲೇಔಟ್ ಠಾಣೆಯ 2, ಹೆಬ್ಬಗೋಡಿ ಮತ್ತು ಬೆಳ್ಳಂದೂರು ಠಾಣೆಗಳ ತಲಾ ಒಂದು ಪ್ರಕರಣ ಸೇರಿದಂತೆ ಒಟ್ಟು 7 ಪ್ರಕರಣಗಳು ಪತ್ತೆಯಾಗಿವೆ. ಇನ್ನುಳಿದ 3 ವಾಹನಗಳ ವಾರಸುದಾರರ ಪತ್ತೆಗಾಗಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಬಂಧಿತ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಳೆ ಮಾಂಸ ಮಾರಾಟ ನಿಷೇಧ

• **ಬೆಂಗಳೂರು:** ಶ್ರೀರಾಮ ನವಮಿ ಹಬ್ಬದ ಪ್ರಯುಕ್ತ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವ್ಯಾಪ್ತಿಯಲ್ಲಿ ಮಾರ್ಚ್ 27 ರಂದು ಪ್ರಾಣಿವಧೆ ಹಾಗೂ ಮಾಂಸ ಮಾರಾಟ ನಿಷೇಧ ಮಾಡಿ ಆದೇಶ ಹೊರಡಿಸಲಾಗಿದೆ. ಜಿಬಿಎ ಪಶುಪಾಲನಾ ವಿಭಾಗದ ಉಪ ನಿರ್ದೇಶಕರು ಆದೇಶ ಹೊರಡಿಸಿದ್ದು, ಜಿಬಿಎ ವ್ಯಾಪ್ತಿಯಲ್ಲಿ ಮಾರ್ಚ್ 27 ರಂದು ಶ್ರೀರಾಮ ನವಮಿ ಹಬ್ಬದ ಪ್ರಯುಕ್ತ ನಗರದಲ್ಲಿರುವ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬರಗೂರು ರಾಮಚಂದ್ರಪ್ಪ; ಬಹುತ್ವದ ಬೇರು ವಿಚಾರ ಸಂಕಿರಣ | ನಟಿ ಭಾವನಾ ರಾಮಣ್ಣ ವಿಶ್ಲೇಷಣೆ

ಭೂತ-ವರ್ತಮಾನದ ಕೊಂಡಿ ಬರಗೂರು

• **ಮೈಸೂರು:** ಬರಗೂರು ರಾಮಚಂದ್ರಪ್ಪ ರವರು ಸಾಹಿತ್ಯ, ಸಿನಿಮಾ, ಹೋರಾಟ ಸೇರಿದಂತೆ ಬರಹಗಾರರಲ್ಲದೇ, ಜ್ಞಾನ ಭಂಡಾರ ಆಗಿದ್ದಾರೆ. ಭೂತಕಾಲ, ವರ್ತಮಾನ ಮತ್ತು ಭವಿಷ್ಯದ ಕೊಂಡಿಯಾಗಿದ್ದಾರೆ ಎಂದು ಚಲನಚಿತ್ರ ನಟಿ ಭಾವನಾ ರಾಮಣ್ಣ ಹೇಳಿದರು.

ಬುಧವಾರ ಮೈಸೂರಿನ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನಸಂಸ್ಥೆ ಮತ್ತು ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನ ಆಯೋಜಿಸಿದ್ದ 'ಬರಗೂರು: ಬಹುತ್ವದ ಬೇರು' ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಬರಗೂರು ರಾಮಚಂದ್ರಪ್ಪರವರ ಆಲೋಚನೆ ಒಂದು ಬಗೆಯ ಕ್ಷೇತ್ರದಲ್ಲದೇ, ಎಲ್ಲಾ ಕ್ಷೇತ್ರಕ್ಕೂ ವಿಸ್ತರಿಸಿಕೊಂಡಿದ್ದಾರೆ. ಬಂಡಾಯ ಅವರ ಮಾತು, ಬರಹದಲ್ಲಿ ಮಾತ್ರವಿದೆ. ಆದರೆ, ಅವರ ಮನಸ್ಸು, ಭಾವಕೋಶ ಮೃದುತ್ವದ ಸೌಹಾರ್ದತೆಯ ಗೂಡು ಎಂದರು.

ಮಾತು, ಬರಹದಲ್ಲಿದ್ದರು, ಅವರ ಭಾವಕೋಶವು ಮೃದುತ್ವದ್ದಾಗಿ ಎಲ್ಲ ಕ್ಷೇತ್ರಗಳಲ್ಲೂ ವಿಸ್ತರಿಸಿದೆ. ಈ ನಿಟ್ಟಿನಲ್ಲಿ ಅವರು ಬಹುತ್ವದ ಬೇರಾಗಿ ಸೌಹಾರ್ದವನ್ನು ಬದುಕಾಗಿಸಿ ಕೊಂಡಿದ್ದಾರೆ ಎಂದು ಬಣ್ಣಿಸಿದರು. ಬರಗೂರು ಅವರು ಡಾ.ರಾಜ ಕುಮಾರ್ ಅವರ ಒಡನಾಡಿಗಳಾಗಿದ್ದರು. ಅವರ ಬರವಣಿಗೆಯ ಚಲನಚಿತ್ರದ ಸಂಭಾಷಣೆಗಳು ಕಾವ್ಯಮಯವಾಗಿವೆ. ಸ್ತ್ರೀ ಸಂವೇದನೆಯ ದೂರ ದೃಷ್ಟಿಯೊಂದಿಗೆ, ಗ್ರಾಮ ಚಲನಚಿತ್ರದಲ್ಲಿ ಪುರುಷಾಹಂಕಾರವನ್ನು ತೋರಿಸಿದ್ದಾರೆ. ಕನ್ನಡ ನೆಲವು ಹೆಣ್ಣಿಗೆ ಮನ್ನಣೆ ನೀಡಿದೆಂದರು. ಇಲ್ಲಿನ ವೈವಿಧ್ಯತೆ, ಹೊಂದಾಣಿಕೆ ಬೇರೆಲ್ಲೂ ಸಿಗದು. ಈ ಭಾಷೆಯಲ್ಲಿಯೇ ತಾಯ್ತನ, ಹೃದಯವಿದೆ.



ಪುರುಷ ಪ್ರಾಧ್ಯಾನ್ಯತೆಯಲ್ಲದೇ, ಹೆಣ್ಣಿನ ನೋವನ್ನು ಅರ್ಥ ಮಾಡಿಕೊಳ್ಳುವ ಪುರುಷರಿದ್ದಾರೆ. ಹೀಗಾಗಿಯೇ ಸಮನ್ವಯದ ಬದುಕು ಇಲ್ಲಿದೆ. ಇದೊಂದು ಸೌಭಾಗ್ಯ, ಈ ಸಮನ್ವಯತೆ ಮತ್ತಷ್ಟು ಹೆಚ್ಚಾಗಬೇಕು ಎಂದರು.

ಬರಗೂರರ ನನ್ನ ಸಂಬಂಧ, ಕಲೆಯ ಸಂಬಂಧವಾಗಿಲ್ಲದೇ, ಅದನ್ನು ಮೀರಿದ ತಂದೆ ಮಗಳ, ಗುರು ಶಿಷ್ಯರ ಸಂಬಂಧವಾಗಿ ನೆಲೆಗೊಂಡಿದೆ. ಬರಗೂರರು ಪುರುಷ ದೃಷ್ಟಿಯಿಂದ ಹೆಣ್ಣಿನ ತನವನ್ನು ಅರಿತವರು. ಬರಹಗಾರರಿಗೆ ಹೆಂಗರುಳು ಇರಬೇಕೆಂದು ಬರಗೂರರು ಹೇಳಿದ್ದರು. ಹೆಣ್ಣಿಗೆ ಪ್ರತಿ ಪದ, ಜೀವ, ಭಾಷೆ, ದೇಶ ಎಲ್ಲದರೊಂದಿಗೂ ಕರುಳುಬಳ್ಳಿಯ ಸಂಬಂಧವಿದೆ. ಅವರ ಸಿನಿಮಾದ ಕಥೆಗಳು ಸ್ತ್ರೀ ಸಂವೇದನೆಯನ್ನೇ ಹೇಳುತ್ತವೆ. ಭಾಗೀರಥಿ ಸಿನಿಮಾ ಕೆರೆಗೆ ಹಾರ ಪದ್ಯದಿಂದ ಸ್ಫೂರ್ತಿ ಪಡೆದಿದ್ದರೂ ಬರಗೂರರ ವಿಮರ್ಶಾ ವಿಸ್ತರಣೆಯು ಎಲ್ಲರನ್ನೂ ಸೆಳೆಯುತ್ತದೆ ಎಂದು ತಿಳಿಸಿದರು. ಮೈಸೂರು ವಿಶ್ವವಿದ್ಯಾಲಯ ಬಡವಾಗಿದೆ ಎಂದು ಹೇಳಿ ಕೊಳ್ಳಲು ನಾಚಿಕೆಯಾಗುತ್ತದೆ. ನಾಡನ್ನು ರೂಪಿಸಿದ ಈ ವಿಶ್ವವಿದ್ಯಾಲಯಗಳು ಬಲಗೊಳ್ಳಬೇಕು. ಜನರ ಧ್ವನಿಯಾಗಿ ವಿಧಾನಮಂಡಲಗಳಲ್ಲಿ ಮಾತನಾಡುವವರು ಹೆಚ್ಚಾಗಲಿ. ಈ ದೃಷ್ಟಿಯಿಂದ ಶಿಕ್ಷಣಕ್ಕೆ, ಕನ್ನಡಕ್ಕೆ ಹೆಚ್ಚಿನ ಮನ್ನಣೆ ದೊರಕಿಸಿಕೊಡುವ ಸೂಕ್ಷ್ಮಮತಿಗಳು ಬೇಕಿದ್ದು, ಅಂತಹ ವೈಶಿಷ್ಟ್ಯತೆ ಬರಗೂರರಲ್ಲಿದೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನದ ವಿಜಾಲಂಬಿ ಲತಾ ಉಪಸ್ಥಿತರಿದ್ದರು.

ಬಹುತ್ವದ ಬೇರು

ಮಾತು, ಬರಹದಲ್ಲಿದ್ದರು, ಅವರ ಭಾವಕೋಶವು ಮೃದುತ್ವದ್ದಾಗಿ ಎಲ್ಲ ಕ್ಷೇತ್ರದಲ್ಲೂ ವಿಸ್ತರಿಸಿದೆ. ಈ ನಿಟ್ಟಿನಲ್ಲಿ ಅವರು ಬಹುತ್ವದ ಬೇರಾಗಿ ಸೌಹಾರ್ದವನ್ನು ಬದುಕಾಗಿಸಿಕೊಂಡಿದ್ದಾರೆ ಎಂದು ಚಲನಚಿತ್ರ ನಟಿ ಭಾವನಾ ರಾಮಣ್ಣ ಬಣ್ಣಿಸಿದರು.

ಬರಗೂರು ಕೃತಿಗಳಲ್ಲಿದೆ ಭ್ರಾತೃತ್ವ, ಸೌಹಾರ್ದ

ಬರಗೂರರ ಕೃತಿಗಳಲ್ಲಿ ಭ್ರಾತೃತ್ವ, ಸೌಹಾರ್ದ ಅಡಕವಾಗಿದೆ. ಅವತ್ತಿನ ಜಾಗತೀಕ ಪ್ರಪಂಚದಲ್ಲಿ ಮನುಷ್ಯ, ಸಂವೇದನೆ, ಹೋರಾಟಗಳು ದಿಕ್ಕೆಟ್ಟಿವೆ. ಅವೆಲ್ಲವನ್ನೂ ಸರಿದಾರಿಗೆ ಕೊಂಡುಯ್ಯುವ, ಬಡಿದೆಬ್ಬಿಸುವ ಕಾರ್ಯ, ಬರಗೂರರ ಸಾಹಿತ್ಯ, ಸಿನಿಮಾಗಳಲ್ಲಿವೆ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವೆ ಎಂ.ಕೆ.ಸವಿತಾ ಹೇಳಿದರು.

ನಾಳೆ ಶ್ರೀರಾಮ ಶೋಭಾಯಾತ್ರೆ



• **ದೊಡ್ಡಬಳ್ಳಾಪುರ:** ನಗರದಲ್ಲಿ ಮಾರ್ಚ್ 27, 28 , 29 ಮೂರು ದಿನಗಳ ಕಾಲ ಶ್ರೀ ರಾಮೋತ್ಸವ ಮತ್ತು ಬೃಹತ್ ಶ್ರೀರಾಮ ಶೋಭಾ ಯಾತ್ರೆಯನ್ನು ಆಯೋಜಿಸಲಾಗಿದೆ ಎಂದು ಬಜರಂಗದಳ ಪ್ರಾಂತ ಬಲೋಪಾಸನ ಪ್ರಮುಖ ನರೇಶ್‌ರೆಡ್ಡಿ ಹೇಳಿದರು

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ವಿಶ್ವ ಹಿಂದೂ ಪರಿಷತ್, ಬಜರಂಗದಳ ದೊಡ್ಡಬಳ್ಳಾಪುರ ಪ್ರಖಂಡದಿಂದ ನಡೆದ ಪೂರ್ವ ಸಿದ್ದತೆ ಮಾಡಿಕೊಳ್ಳಲಾಗಿದೆಂದರು. ಮಾರ್ಚ್ 27ರಂದು ಪಾಲನಜೋಗಿಹಳ್ಳಿಯ ಶ್ರೀವಿನಾಯಕ ದೇವಾಲಯದ ಮುಂಭಾಗದಿಂದ ಆರಂಭವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಬೃಹತ್ ವಾಹನ ಜಾಥ ಹಮ್ಮಿಕೊಳ್ಳಲಾಗಿದೆಂದು ವಿವರಿಸಿದರು. ಮಾ.28ರ ಶನಿವಾರ ಉಚಿತ ಸಂಜೀವಿನಿ ಆರೋಗ್ಯ ತಪಾಸಣೆ ಶಿಬಿರ ಮತ್ತು ಶಸ್ತ್ರಚಿಕಿತ್ಸೆ ಆಯೋಜಿಸಲಾಗಿದೆ. ಅಂದು ಸಂಜೆ ಆನಂದ್ ಗುರೂಜಿ ನೇತೃತ್ವದಲ್ಲಿ ದೊಡ್ಡಬಳ್ಳಾಪುರದ ಎಲ್ಲಾ ಮಹಿಳೆಯರಿಂದ ಶ್ರೀ ದೀಪಾಲಕ್ಷ್ಮಿ ಪೂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಮಾ.29ರಂದು ಭಾನುವಾರ ನಗರದಲ್ಲಿ ಬೃಹತ್ ಶ್ರೀರಾಮ ಶೋಭಾಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ. ನಗರದ ಪ್ರಮುಖ ರಸ್ತೆಯಲ್ಲಿ ಭಾರತ್ ಮಾತೆ, ಶ್ರೀರಾಮ ,ಈಶ್ವರ , ಆಂಜನೇಯ, ಇಮ್ಮಡಿಪುಲಕೇಶಿ, ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮತ್ತು ವಿವಿಧ ವಾದ್ಯಗಳೊಂದಿಗೆ ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಯಾತ್ರೆಯಲ್ಲಿ ದಿಕ್ಸೂಚಿ ಭಾಷಣವನ್ನು ಕರ್ನಾಟಕ ದಕ್ಷಿಣ ಪ್ರಾಂತ ಬಜರಂಗದಳ ಸಂಯೋಜಕ್ ಪ್ರಭಂಜನ್ ಸೂರ್ಯ ಅವರು ನಡೆಸಿಕೊಡಲಿದ್ದಾರೆ. ಅಂದು ಸಂಜೆ ಶೋಭಾ ಯಾತ್ರೆ ನಂತರ ಭಗತ್ ಸಿಂಗ್ ಕ್ರೀಡಾಂಗಣದಲ್ಲಿ ಲೇಸರ್ ಶೋ ರಾವಣನ ದಹನ ಮತ್ತು ಆಕರ್ಷಕ ಸಿಡಿಮದ್ದು ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಮೂರು ದಿನಗಳ ಬೃಹತ್ ಕೇಸರಿ ಹಬ್ಬಕ್ಕೆ ತಾಲೂಕಿನ ಹಾಗೂ ಜಿಲ್ಲೆಯ ಸಮಸ್ತ ನಾಗರಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು. ಗೋಷ್ಠಿಯಲ್ಲಿ ಜಿಲ್ಲಾ ಬಜರಂಗದಳ ಸಂಯೋಜಕ್ ಭಾಸ್ಕರ್, ಜಿಲ್ಲಾ ಕಾರ್ಯದರ್ಶಿ ಶ್ರೀಕಾಂತ್, ತಾಲೂಕು ಸಂಯೋಜಕ್ ವಿರಾಜ್, ವಿಎಚ್‌ಪಿ ನಗರ ಅಧ್ಯಕ್ಷ ರಂಜಿತ್‌ಗೌಡ, ವಿಭಾಗ ಸಹ ಕಾರ್ಯದರ್ಶಿ ರವಿಕುಮಾರ್, ಸ್ವಾಗತ ಸಮಿತಿ ಸದಸ್ಯರಾದ ಮದುಮೇಗಲ, ಕಿರಣ್ ಕುಕ ಇತರರಿದ್ದರು.

ಶ್ರೀಕ್ಷೇತ್ರದಿಂದ ಕೆರೆ ಜೀರ್ಣೋದ್ಧಾರ| ಗ್ರಾಮಸ್ಥರಿಗೆ ಹಸ್ತಾಂತರ

ಚಿಕ್ಕೊಂಡಹಳ್ಳಿ ಕೆರೆಗೆ ಎಚ್.ಎನ್.ವ್ಯಾಲಿ ನೀರು

• **ತಾವರೆಕೆರೆ:** ಸರಕಾರದ ಯೋಜನೆಯಾದ ಎಚ್.ಎನ್. ವ್ಯಾಲಿ ಯೋಜನೆಯಲ್ಲಿ ಚಿಕ್ಕೊಂಡಹಳ್ಳಿ ಕೆರೆಗೆ ನೀರು ಮತ್ತುಎತ್ತಿನ ಹೊಳೆ ಯೋಜನೆಯಲ್ಲಿ 50 ಲಕ್ಷ ರೂ. ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ. ಹೊಸಕೋಟೆ ತಾಲೂಕಿನ ನಂದಗುಡಿ ಸೂಲಿಬೆಲೆ ಹೋಬಳಿಯ 59 ಕೆರೆಗಳಿಗೆ ನೀರು ಹರಿಸುವ ಯೋಜನೆಗೆ ಅನುಮೋದನೆಯಲ್ಲಿ ಚಿಕ್ಕೊಂಡಹಳ್ಳಿ ಕೆರೆಯೂ ಒಂದಾಗಿದೆಂದು ನಿವೃತ್ತ ಕಾರ್ಯ ನಿರ್ವಾಹಕ ಡಾ. ಸಿ.ಎಸ್. ನಾರಾಯಣಸ್ವಾಮಿ ತಿಳಿಸಿದರು.

ಹೊಸಕೋಟೆ ತಾಲೂಕು ನಂದಗುಡಿ ಹೋಬಳಿಯ ನೆಲವಾಗಿಲು ಗ್ರಾಮ ವ್ಯಾಪ್ತಿಯ ಚಿಕ್ಕೊಂಡಹಳ್ಳಿಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಗ್ರಾಮಸ್ಥರ ಪಾಲು ಹಾಗೂ ಎನ್‌ಜಿಒ ಸಂಸ್ಥೆಯಾದ ವಾಟರ್ ರೈಡ್ ಸಹಭಾಗಿತ್ವದಲ್ಲಿ ಒಟ್ಟು 59 ಲಕ್ಷ ರೂ. ಕೆರೆ ಅಭಿವೃದ್ಧಿಗೊಳಿಸಿದ ನಂತರ ಕೆರೆ ಹಸ್ತಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದರು. ಗ್ರಾಮದ ಕೆರೆಯನ್ನು ಹಲವರು ಒತ್ತುವರಿ ಮಾಡಿಕೊಂಡಿದ್ದಾರೆ. ಕೆರೆ ಸ್ವಚ್ಛತೆಯನ್ನು ಕಳೆದುಕೊಂಡು ಕೆರೆಯಲ್ಲಿ ನೀರು ನಿಲ್ಲದೇ, ಇತ್ತೀಚಿನ ದಿನದಲ್ಲಿ ಹವಾಮಾನ ವೈಪರಿತ್ಯ ಸೇರಿದಂತೆ ರೈತಾಪಿ ಜನರು ಜೀವನ ಸಾಗಿಸುವುದೇ ಕಷ್ಟಕರವಾಗಿ ಪರಿಣಮಿಸಿತ್ತು. ಗ್ರಾಮೀಣ ಭಾಗದಲ್ಲಿ ಕೃಷಿ ನಂಬಿ ಜೀವನ ನಡೆಸುತ್ತಿದೆ. ಕೆರೆಗಳು ಅಭಿವೃದ್ಧಿಯಾದಾಗ ಮಾತ್ರ ಅಂತರ್ಜಲ ವೃದ್ಧಿಯಾಗಿ ಕೃಷಿಕರ ಜೀವನ ಹಸನಾಗಲು ಸಾಧ್ಯ ಎಂದರು. ಭಕ್ತರಿಂದ ಸಂಗ್ರಹವಾಗುವ ಹಣದಲ್ಲಿ ಕೆರೆ ಹೂಳೆತ್ತುವ ಸಾಮಾಜಿಕ ಕಾರ್ಯಕ್ಕೆ ಬಳಕೆಯಾಗುತ್ತಿದೆ. ಧರ್ಮಸ್ಥಳ ಧರ್ಮಾಧಿಕಾರಿಗಳು ಕರ್ನಾಟಕ ರಾಜ್ಯದಲ್ಲಿ ಕೆರೆ ಅಭಿವೃದ್ಧಿ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ. ಸ್ಥಳೀಯ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಕೆರೆಗಳ ಸಂರಕ್ಷಣೆಗೆ ಕೈಜೋಡಿಸಿದಾಗ ಗ್ರಾಮಗಳು ಸುಭಿಕ್ಷವಾಗಿರಲೂ ಸಾಧ್ಯವಾಗುತ್ತದೆಂದರು. ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಉಮರಬ್ಬ ಮಾತನಾಡಿ, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರ ಜನಪರ ಕಾಳಜಿಗೆ ಸಾಟಿಯಿಲ್ಲವಾಗಿದೆ. ನಮ್ಮೂರು ನಮ್ಮಕೆರೆ ಯೋಜನೆಯಲ್ಲಿ ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ಕೆ ಮುಂದಾಗಿದೆ. ಗ್ರಾಮಾಭಿವೃದ್ಧಿಯೋಜನೆಯಲ್ಲಿ ಚಿಕ್ಕೊಂಡಹಳ್ಳಿಯಲ್ಲಿ 924ನೇ ಕೆರೆಯನ್ನು ಅಭಿವೃದ್ಧಿಗೊಳಿಸಿ ಗ್ರಾಮಸ್ಥರಿಗೆ ಹಸ್ತಾಂತರ ಕಾರ್ಯಕ್ಕೆ ಮುಂದಾಗಿದೆಂದರು. ಜಿಪಂ ಮಾಜಿ ಅಧ್ಯಕ್ಷೆ ಸವಿತಾಗೋಪಾಲ್, ನೆಲವಾಗಿಲು ಎಂಪಿಸಿಎಸ್ ಸಿಎಸ್‌ನ ಅಧ್ಯಕ್ಷ ಸಿ.ಎಂ. ನಾರಾಯಣಸ್ವಾಮಿ, ನಿರ್ದೇಶಕ ಸಿ.ಎನ್. ದಿನೇಶ್, ಗ್ರಾಪಂ ಮಾಜಿ ಅಧ್ಯಕ್ಷ ಗೋಪಾಲಪ್ಪ, ಪಿಡಿಒ ಮುನಿರಾಜು, ತಾಪಂ ಮಧುಸೂದನ್, ಮುಖಂಡರಾದ ಕಾಬುದ್ದಿನ್, ಚನ್ನರಾಯಪ್ಪ, ಅವಿನಾಶ್, ವೆಂಕಟರಮಣಪ್ಪ, ಧರ್ಮಸ್ಥಳದ ಸಂಘದ ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯ ತರಬಹಳ್ಳಿ ಹರೀಶ್, ವಲಯಮೇಲ್ವಿಚಾರಕ ಯೋಗೇಶ್, ಕೃಷಿ ಮೇಲ್ವಿಚಾರಕ ಚೇತನ್ ಗ್ರಾಮಸ್ಥರಿದ್ದರು.



ಮನುಷ್ಯ ಸಂವೇದನೆ ಅಭಿವ್ಯಕ್ತಿ ರಂಗಕಲೆ



• **ದೊಡ್ಡಬಳ್ಳಾಪುರ:** ಮನುಷ್ಯ ಸಂವೇದನೆಯ ಅಭಿವ್ಯಕ್ತಿ ರಂಗಕಲೆಯ ಅನನ್ಯ ಗುಣವಾಗಿದೆಂದು ಪ್ರೆಸಿಡೆನ್ಸಿ ಕಾಲೇಜಿನ ಪ್ರಾಧ್ಯಾಪಕ ಸಿ.ಪೂಜಾ ಶ್ರೀ ಹೇಳಿದರು.

ಕರ್ನಾಟಕ ನಾಟಕ ಅಕಾಡೆಮಿ, ಶ್ರಮಣ ಸಂಸ್ಕೃತಿ ಟ್ರಸ್ಟ್ ಮತ್ತು ಶ್ರೀ ದೇವರಾಜ ಅರಸ್ ವ್ಯವಹಾರ ನಿರ್ವಹಣಾ ಮಹಾವಿದ್ಯಾಲಯದ ಸಹಯೋಗದಲ್ಲಿ ಬುಧವಾರ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ನಡೆದ ಕುವೆಂಪು ಅವರ ಶೂದ್ರ ತಪಸ್ವಿ ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿ , ರಂಗಕಲೆ ಎಲ್ಲ ವಲಯಗಳನ್ನು ಒಳಗೊಂಡ ಸಮಷ್ಟಿ ರೂಪ. ಬದುಕಿನ ಕಲೆ ಎಂದರೂ ತಪ್ಪಾಗಲಾರದು. ಭಾವಾಭಿವ್ಯಕ್ತಿಯ ಜೊತೆಗೆ ಸಾಮಾಜಿಕ ಕಾಳಜಿ ಮತ್ತು ಸಾಂಸ್ಕೃತಿಕ ಸಂವೇದನೆಯನ್ನು ಒಳಗೊಂಡ ಮಾಧ್ಯಮವಾಗಿ ಹೆಗ್ಗಳಿಕೆ ಪಡೆದಿದೆ ಎಂದರು. ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯ ಡಾ.ಟಿ.ಎಚ್. ಲವಕುಮಾರ್, ಪ್ರಸ್ತುತ ವರ್ಷದ ಅಂತಾರಾಷ್ಟ್ರೀಯ ರಂಗಭೂಮಿ ದಿನಾಚರಣೆಯ ರಂಗ ಸಂದೇಶವನ್ನು ಪ್ರಸ್ತುತಪಡಿಸಿದರು. ಯುವಜನತೆಯನ್ನು ಒಳಗೊಂಡ ರಂಗಪರಂಪರೆಯ ಪರಿಕಲ್ಪನೆಯನ್ನು ನಾಟಕ ಅಕಾಡೆಮಿ ಪ್ರಧಾನ ಆದ್ಯತೆಯಾಗಿ ಪರಿಗಣಿಸಿ ಕಾಲೇಜು ವಿದ್ಯಾರ್ಥಿಗಳಲ್ಲಿ ರಂಗ ಚಟುವಟಿಕೆಗಳ ಬಗ್ಗೆ ಆಸಕ್ತಿ ವೃದ್ಧಿಸುವ ಕೆಲಸ ಮಾಡುತ್ತಿದೆ ಎಂದರು.

ರಂಗ ಕಲಾವಿದರಾದ ಎನ್.ಆನಂದಮೂರ್ತಿ ಮತ್ತು ಜಿ.ಬಿ.ರಂಜಿತ್ ಅವರನ್ನು ಸನ್ಮಾನಿಸಲಾಯಿತು. ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಕೆ.ಎಸ್. ಹರ್ಷಿತ, ಡಿ.ಎ.ಮೌಲ್ಯ ಮತ್ತು ಪಿ.ಸಿಂಧು ಅವರಿಗೆ ಬಹುಮಾನ ನೀಡಲಾಯಿತು. ಉಪಪ್ರಾಂಶುಪಾಲ ಕೆ.ದಕ್ಷಿಣಾಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಬೆಂ.ಗ್ರಾ ಜಿಲ್ಲಾ ರಂಗಭೂಮಿ ಕಲಾವಿದರ ಸಂಘದ ಅಧ್ಯಕ್ಷ ರಾಜ್ಯಗಟ್ಟ ಡಿ.ಕೆಂಪಣ್ಣ, ಬೆಂ.ಗ್ರಾ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಪ್ರೊ.ಕೆ.ಆರ್.ರವಿಕಿರಣ್, ಕಾಲೇಜಿನ ಕನ್ನಡ ವಿಭಾಗ ಮುಖ್ಯಸ್ಥ ಡಾ.ಎಂ.ಚಿಕ್ಕಣ್ಣ, ಕೊನಘಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್.ಕಾಂತರಾಜ್, ಕಲಾವಿದರಾದ ಸಿ.ವಿ.ಲೋಕೇಶ್, ಎಂ.ಪಿ.ನಾಗರಾಜ್ ಮತ್ತಿತರರು ಭಾಗವಹಿಸಿದ್ದರು. ಇದೇ ವೇಳೆ ಯಲಹಂಕದ ರಂಗಾಸಿ ಕಲಾವಿದರು ರಾಷ್ಟ್ರಕವಿ ಕುವೆಂಪು ಅವರು ಬರೆದಿರುವ ಶೂದ್ರ ತಪಸ್ವಿ ನಾಟಕವನ್ನು ಎಂ.ಮಧು ಅವರ ನಿರ್ದೇಶನದಲ್ಲಿ ಪ್ರದರ್ಶಿಸಿದರು.

ಮಾದಿಗ ಸಮುದಾಯದಿಂದ ಪ್ರತಿಭಟನೆ

• **ದೇವನಹಳ್ಳಿ:** ಮಾ.27 ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಾದಿಗ ಸಮುದಾಯಕ್ಕೆ ನ್ಯಾ.ನಾಗಮೋಹನ್ ದಾಸ್ ಅವರ ವರದಿಯಂತೆ ಒಳಮೀಸಲಾತಿಯಲ್ಲಿ ನ್ಯಾಯ ಸಿಗದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ಮಾದಿಗ ದಂಡೋರ ಪ್ರಚಾರ ಸಮಿತಿ ಅಧ್ಯಕ್ಷ ಬುಳ್ಳಹಳ್ಳಿ ರಾಜಪ್ಪ ಎಚ್ಚರಿಕೆ ನೀಡಿದರು.



ಜಿಲ್ಲಾಡಳಿತ ಭವನದ ಮುಂದೆ, ಮಾದಿಗ ಸಮುದಾಯಗಳ ಒಕ್ಕೂಟದಿಂದ ಆಯೋಜಿಸಿದ್ದ ಸಾಂಕೇತಿಕ ಪ್ರತಿಭಟನೆಯಲ್ಲಿ ಜಿಲ್ಲಾಧಿಕಾರಿಯ ಮುಖಾಂತರ ರಾಜ್ಯ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದ ನಂತರ ಮಾತನಾಡಿ, ಒಳಮೀಸಲಾತಿಗಾಗಿ ಮಾದಿಗ ಸಮುದಾಯ 40 ವರ್ಷದ ನಿರಂತರವಾದ ಹೋರಾಟವನ್ನು ಮಾಡಿಕೊಂಡು ಬಂದಿದೆಂದರು.

ನಾವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಮತ್ತು ರಾಜಕೀಯವಾಗಿ ತೀರಾ ಹಿಂದುಳಿದಿದ್ದೇವೆ. ನಮಗೆ ಜನಸಂಖ್ಯಾಧಾರಿತವಾಗಿ ಒಳಮೀಸಲಾತಿ ಕೊಡಿ ಎಂದು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಸುಪ್ರೀಂ ಕೋರ್ಟ್ ಕೂಡಾ, ಒಳಮೀಸಲಾತಿ ನೀಡುವಂತೆ ಆದೇಶ ಮಾಡಿದೆ. ನ್ಯಾಯಾಲಯದ ಆದೇಶದಂತೆ ಒಳಮೀಸಲಾತಿ ಜಾರಿಗೊಳಿಸಲು ಮುಂದಾಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರ, ಈಗ ಬಲಗೈ ಸಮುದಾಯಗಳ ಸಚಿವರ ಕೈಗೊಂಬೆಯಾಗಿ ವರ್ತನೆ ಮಾಡುತ್ತಿದೆ ಎಂದರು. ಮಾದಿಗ ದಂಡೋರ ಜಿಲ್ಲಾಧ್ಯಕ್ಷ ಮಾರಪ್ಪ ಮಾತನಾಡಿ, ಶತಮಾನದಿಂದ ಶೋಷಣೆಗೆ ಒಳಗಾಗಿ, ಅಸ್ಪೃಶ್ಯತೆಯ ನೋವಿನಲ್ಲಿ ಬೆಂದು ಹೋಗಿದ್ದೇವೆ. ಈಗ ಒಳಮೀಸಲಾತಿಗೆ ವಿರೋಧ ಮಾಡುತ್ತಿರುವವರು, ತಮಗೆ ಒಳಮೀಸಲಾತಿಗಾಗಿ ಯಾವತ್ತೂ ಬೀದಿಗಿಳಿದಿಲ್ಲ, ಜಾರಿಯಾಗುವ ಸಮಯದಲ್ಲಿ, ರೋಸ್ಟರ್ ಬಿಂದುಗಳ ನೆಪ ಹೇಳಿ, ನಮ್ಮ ಸಮಾಜದ ವಿರುದ್ಧವಾಗಿ ಮಾತನಾಡುವುದು ಅವರಿಗೆ ಶೋಭೆ ತರುವುದಿಲ್ಲ ಎಂದು ತಿಳಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಮೂರ್ತಿ ಮಾತನಾಡಿ, ಸಮುದಾಯಗಳ ಮೇಲೆ ಸಮುದಾಯವನ್ನು ಎತ್ತಿಕಟ್ಟುವ ಸಚಿವರು, ಒಳಮೀಸಲಾತಿಯಲ್ಲಿನ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು. ನಾವು ಜನಸಂಖ್ಯಾಧಾರಿತವಾಗಿ ಮೀಸಲಾತಿ ಕೊಡಿ, ಅದನ್ನು ಬಿಟ್ಟು, ಮಾದಿಗ ಸಮುದಾಯವನ್ನು ದಿಕ್ಕು ತಪ್ಪಿಸುವ ಕೆಲಸ ಮಾಡಬೇಡಿ ಎಂದರು. ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮುದುಗುರ್ಕಿ ವಿ ನಾರಾಯಣಸ್ವಾಮಿ, ಮಾತನಾಡಿದರು. ಪ್ರತಿಭಟನಾಕಾರರಿಂದ ಮನವಿ ಪತ್ರ ಸ್ವೀಕರಿಸಿದ ಜಿಲ್ಲಾಧಿಕಾರಿ ಡಾ.ಕೆ.ಎನ್.ಅನುರಾಧ ಸರ್ಕಾರಕ್ಕೆ ಮನವಿ ಪತ್ರ ರವಾನೆ ಮಾಡುತ್ತೇನೆ ಎಂದರು.

ಅರುಂಧತಿ ಸೇವಾ ಸಮಿತಿ, ಮಾತಂಗಮಹರ್ಷಿ ಸೇವಾ ಟ್ರಸ್ಟ್, ಜಾಂಬವ ಸೇವಾ ಟ್ರಸ್ಟ್, ಸೇರಿದಂತೆ ಮಾದಿಗ ಸಮುದಾಯಗಳ ಟ್ರಸ್ಟ್ ಗಳ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಮುಖಂಡರಾದ ಚಂದೇನಹಳ್ಳಿ ಮುನಿಯಪ್ಪ, ಕದಿರಪ್ಪ, ಎಂ.ಜಗದೀಶ್, ನರಸಿಂಹಮೂರ್ತಿ, ವೇಣುಗೋಪಾಲ್, ಟಿ.ಭರತ್, ವೆಂಕಟೇಶ್, ಸೋಲೂರು ನಾಗರಾಜ್, ಮುನಿರಾಜು, ಭಟ್ರೇನಹಳ್ಳಿ ನಾರಾಯಣಪ್ಪ ಹಲವರಿದ್ದರು.

ಆಗಮ ಶಾಸ್ತ್ರದ ಪ್ರಕಾರ ಬ್ರಹ್ಮೋತ್ಸವ: ಏ.2ರಂದು ತೀರ್ಥಸ್ನಾನ, ಪಟ್ಟಾಭಿಷೇಕ

ವೈರಮುಡಿ ಬ್ರಹ್ಮೋತ್ಸವಕ್ಕೆ ವಿಧ್ಯುಕ್ತ ಚಾಲನೆ

• **ಮೇಲುಕೋಟೆ:** ಗರುಡಧ್ವಜಾರೋಹಣ ನೆರವೇರುವುದರೊಂದಿಗೆ ಮೃಗಶಿರಾ ನಕ್ಷತ್ರ ಕೂಡಿದ ಶುಭ ದಿನವಾದ ಬುಧವಾರ ಪರಾಭವನಾಮ ಸಂವತ್ಸರದ ವೈರಮುಡಿ ಬ್ರಹ್ಮೋತ್ಸವ ವಿಧ್ಯುಕ್ತವಾಗಿ ಆರಂಭವಾಯಿತು. ಆಗಮ ಶಾಸ್ತ್ರದ ಪ್ರಕಾರ ವೈರಮುಡಿ ಬ್ರಹ್ಮೋತ್ಸವ 9 ದಿನಗಳಕಾಲ ನಡೆಯಲಿದೆ. ಏ.2ತೀರ್ಥಸ್ನಾನ ಮತ್ತು ಪಟ್ಟಾಭಿಷೇಕ ಮಹೋತ್ಸವದೊಂದಿಗೆ ಮುಕ್ತಾಯವಾಗಲಿದೆ

ಸ್ವಾಮಿ ಸ್ವಾಧಿಯ ಅರ್ಚಕರಾದ ವರದರಾಜಭಟ್, ಸ್ವಯಂ ಆಗಮೋಕ್ತವಾಗಿ ಪಂಚಾಯುಧದೊಂದಿಗೆ ಚಿತ್ರಿಸಿದ ಗರುಡದೇವನ ಪಟವನ್ನು ಚಿನ್ನದ ಧ್ವಜಸ್ತಂಭದ ಮೇಲೆ ಆರೋಹಣ ಮಾಡಲಾಯಿತು. ಬ್ರಹ್ಮೋತ್ಸವಕ್ಕೆ ಗರುಡದೇವ ದೇವಾನುದೇವತೆಗಳು ಹಾಗೂ ಭಕ್ತರನ್ನು ಚೆಲುವನಾರಾಯಣಸ್ವಾಮಿ ಕೃಪೆಗೆ ಪಾತ್ರರಾಗಬೇಕೆಂದು ಆಹ್ವಾನಿಸುತ್ತಾನೆಂಬ ನಂಬಿಕೆಯಿದೆ. ಧ್ವಜಾರೋಹಣದ ಅಂಗವಾಗಿ ಚೆಲುವನಾರಾಯಣಸ್ವಾಮಿಯ ಮಂಟಪವಾಹನೋತ್ಸವದೊಂದಿಗೆ ಗರುಡಪಟದ ಮೆರವಣಿಗೆ ನೆರವೇರಿಸಿ, ಸ್ಥಾನೀಕರಿಂದ ಗರುಡಪಾಮದ ಪಾರಾಯಣ ನಡೆದ ನಂತರ ಗರುಡ ಧ್ವಜಾರೋಹಣ ನೆರವೇರಿಸಲಾಯಿತು ಇದರೊಂದಿಗೆ ವೈರಮುಡಿ ಜಾತ್ರಾಮಹೋತ್ಸವವಿಧ್ಯುಕ್ತವಾಗಿ ಆರಂಭವಾಗಿದೆ. ಚತುರ್ವೀದಿಗಳಲ್ಲಿ ಗರುಡನೊಂದಿಗೆ ಪುಷ್ಪಮಂಟಪವಾಹನೋತ್ಸವ ಅದ್ದೂರಿಯಾಗಿ ನೆರವೇರಿತು. ರಾತ್ರಿ ಹಂಸವಾಹನೋತ್ಸವ ತಿರುಪ್ಪಳ್ಳಿ ಹಾಗೂ ಬೇರಿತಾಡನ ನೆರವೇರಿತು ಎಸ್.ಎಸ್‌ಬಿ ಸಾಂಸ್ಕೃತಿಕ ವೇದಿಕೆಯ 11ನೇವರ್ಷದ ನಾದೋಪಾಸನ ಸೇವೆಯಲ್ಲಿ ಕಲಾವಿದರಾದ ಪ್ರಮೋದ್,ಪದ್ಮನಾಭ ಸುಬ್ಬಣ್ಣ ಸುಶ್ರಾವ್ಯವಾಗಿ ಸ್ಯಾಕ್ಸೋಫೋನ್ ನುಡಿಸಿದರೆ ಕುಮಾರ್ ಮತ್ತು ಸಂಜಯ್ ಡೋಲು ನುಡಿಸಿ ಸಹಕಾರ ನೀಡಿದರು. ಮೀನ-ಚೈತ್ರಮಾಸದ ಹಸ್ತಾನಕ್ಷತ್ರದ ದಿನ ಪ್ರಮುಖವಾದ ಚೆಲ್ವ ತಿರುನಾರಾಯಣಸ್ವಾಮಿ ಭೂಲೋಕಕ್ಕೆ ಅವಿರ್ಭವಿಸಿದ ದಿನ ಏ.2 ರಂದು ಜಯಂತ್ಯುತ್ಸವ ನೆರವೇರುತ್ತದೆ ಅಂದೇ ಕಲ್ಯಾಣಿಯಲ್ಲಿ ತೀರ್ಥಸ್ನಾನ, ಪಟ್ಟಾಭಿಷೇಕ ಮಹೋತ್ಸವ ಸ್ವಾನಾಚಾರ್ಯರಿಗೆ ಮಾಲೆ ಮರ್ಯಾದೆ ನಡೆಯಲಿದೆ. ಅಂದಿನ ಶುಭದಿನ ಪ್ರಧಾನವಾಗಿ ಪರಿಗಣಿಸಿ ಹಿಂದಿನ 9 ದಿನಗಳಕಾಲ ವೈರಮುಡಿ ಬ್ರಹ್ಮೋತ್ಸವ ನಡೆಯಲಿದ್ದು ಶಾಸ್ತ್ರಪ್ರಕಾರ ವೈರಮುಡಿ, ತೀರ್ಥಸ್ನಾನ, ತೆಪ್ಪೋತ್ಸವ ಹಾಗೂ ರಥೋತ್ಸವಗಳು ಅತ್ಯಂತ ಪ್ರಮುಖ ಉತ್ಸವಗಳಾಗಿವೆ .



ವೈರಮುಡಿ ಬ್ರಹ್ಮೋತ್ಸವದಲ್ಲಿಂದು

ವೈರಮುಡಿ ಬ್ರಹ್ಮೋತ್ಸವದ 2ನೇ ತಿರುನಾಳ್ ದಿನವಾದ ಗುರುವಾರ ಬೆಳಗ್ಗೆ ಆರಿದ್ರಾ, ಮೂಲ ತಿರುನಕ್ಷತ್ರದ ಅಂಗವಾಗಿ ರಾಮಾನುಜಾಚಾರ್ಯರಿಗೆ ಅಭಿಷೇಕ ನಡೆಯಲಿದೆ. ರಾಮಾನುಜರು ಆದಿಶೇಷನ ಅವತಾರವಾದ ಕಾರಣ ಸಂಜೆ ಶೇಷವಾಹನೋತ್ಸವ ವಿಶೇಷ ಪಡಿಯೇತ್ತ ನೆರವೇರಲಿದೆ.

ವೈರಮುಡಿ ಉತ್ಸವದ ವಿವರ

- ಮಾ.28ಕ್ಕೆ ವೈರಮುಡಿ ಕಿರೀಟಧಾರಣ ಮಹೋತ್ಸವ
- ಮಾ. 27ಕ್ಕೆ ಶ್ರೀರಾಮನವಮಿ ನಾಗವಲ್ಲೀ ಮಹೋತ್ಸವ
- ಮಾ.29ರ ಸಂಜೆ ಗಜೇಂದ್ರಮೋಕ್ಷ ಉತ್ಸವ
- ಮಾ.31ಕ್ಕೆ ಚೆಲುವನಾರಾಯಣಸ್ವಾಮಿಗೆ ರಥೋತ್ಸವ
- ಏ. 1ರಂದು ಕಲ್ಯಾಣಿಯಲ್ಲಿ ತೆಪ್ಪೋತ್ಸವ
- ಏ.2 ರಂದು ತೀರ್ಥಸ್ನಾನ ಪಟ್ಟಾಭಿಷೇಕ ವೈರಮುಡಿ ಬ್ರಹ್ಮೋತ್ಸವ ಮುಕ್ತಾಯ



IN THE COURT OF THE SENIOR CIVIL JUDGE AT TIPTUR
O.S. No: 190/2025

PLAINTIFFS: 1. Ruthvik Gowda G.P. S/o Prakash.G.P. Minor, Aged about 10 years. 2. Divya.D.R. W/o Prakash.G.P. Aged about 41 years, Plaintiff No 1 is the Minor Represented by his mother And natural guardian, i.e. 2 plaintiff both of them are residing at Gungurumale village, Noravinakere Hobli, Tiptur Taluk. ......V/S......

DEFENDANTS: 1.G.P.Prakasha S/o G.T.Puttaswamy gowda, Aged about 48 years. 2. G.T.Puttaswamy Gowda S/o Late Thopegowda, Aged about 78 years. 3. G.P.Mynavathi W/o Chandrashekar.G. Aged about 50 years. All are residents of Gungurumale village, Noravinakere Hobli, Tiptur Taluk. Defendant No 3 presently Residing at No. 621, Old No 8/3, 7th Cross, 8th Main, K.N.Extension, Yashwanthapura, Bengaluru-22.

Whereas the plaintiff have instituted the above suit for partition and separate possession, you are the defendants are hereby summoned to appear in this Court in person or by a pleader duly instructed and able to answer all material questions relating to the suit on 06-06-2026 at 11.00 am, to answer the suit and directed to produce on all the documents upon which you are intended to rely in support of your suit. Take notice that in default of your appearance on earlier days mentioned, the case will be heard and determined in your absence. Given Under my hand with seal of Court, this dated

SCHEDULE

1. That the land bearing Sy. No. 1/10 measuring 0.03.08.00 gts, Assessed at Rs. 0.27 paisa bounded by East: Property of Venkategowda, West: Property of Ramegowda, North: Property of Javaregowda & South: own property
2. That the land bearing Sy. No. 1/11 measuring 0.04.00.00 gts, Assessed at Rs. 0.86 paisa bounded by East: Property of Ramaswamy, West: Property of Sheshanna, North: Property of Ramegowda & South: property of Ramaswamy.
3. That the land bearing Sy. No. 89/7 measuring [illegible]

[illegible]

17. That the land bearing Sy. No. 134/3 measuring 0.03.08.00 gts, Assessed at Rs. 3.93 paisa bounded by East: Property of Manjegowda, West: Property of Hongegowda, North: Property of Ramegowda & South: property of Govindegowda.
18. That the land bearing Sy. No. 2/1 measuring 0.17.00.00 gts, out of 0.08.08 gts Assessed at Rs. 0.59 paisa bounded by East & West: Property of Ramegowda, North: Property of Ananthegowda & South: property of Ramaswamy.
19. That the land bearing Sy. No. 219/3 measuring 0.08.00.00 gts, Assessed at Rs. 0.21 paisa bounded by East: Property of Shettegowda & sons, West: Property of Sheshanna, North: Property of Javaregowda & sons & South: property of Vijaykumar.
20. That the land bearing Sy. No. 44/1 measuring 0.25.00.00 gts, Assessed at Rs. 4.67 paisa bounded by East: Own property & West: Property of Krishnegowda, North: Properties of Kumar & Shankaregowda & South: property of Basavegowda.
21. House bearing Khaneshumari No 114, House list No 132, janjar No 43, sheet house East: West: 38 feet North: South: 63 feet, bounded by: East: Own house, West: Property of Sheshanna, North: Own house & South: Road.

All the properties are situated at Gungurumale village, Noravinakere Hobli, Tiptur Taluk.

By the Order of the Court, Sr. Sheristedar senior Civil Judge and JMFC Tiptur

Advocate for Plaintiff
M.D.Krishnappa

IN THE COURT OF DEPUTY COMMISSIONER AT KOLAR
R.A.P. No.388/2025

BETWEEN : M. SRIRAM SUBRAHMANYAM & M.GOPAL SUBRAHMANYAM ......APPELLANTS

AND : 1. SMT. POORNIMA, aged Major, wife of Late M.R. Prasanna, Avani Village, Avani Hobli, (opp. to Nada Kacheri), Mulabagilu Taluk, Kolar District ....RESPONDENT No.6

2. SMT. A.R. MANGALA, aged about 51 years, D/o Late Smt. Ranganayakamma wife of N.P.Ramesh, No.5, 1st Main, NTI Layout, RMV Extension, Bengaluru-560 094 ... RESPONDENT No.7

WHEREAS, above named Appellants have filed the above Appeal UNDER SECTION 136 (3) READWITH SECTION 50 OF THE KARNATAKA LAND REVENUE ACT, 1964 to set aside Order of the 1st Respondent in R.A. No. 220/2020 dated 17.02.2025.

WHEREFORE, above named Respondents are hereby summoned to appear on 21-04-2026 at 3.00 P.M. before DEPUTY COMMISSIONER AT KOLAR, in person or through their authorized Advocate and file their Statement of objections if any, failing which the matter will be heard and determined ex-parte.

Given under my hand and the seal of the Court this 24-03-2026

By order of the court , The Court Of Deputy Commissioner At Kolar

M/s. SHASTRI LAW ASSOCIATES, ADVOCATES, No.24/D, First Floor, Koteshwara Road, Off D.V.G. Road, Basavanagudi, BENGALURU-560004.

ಮಾನ್ಯ ... ನ್ಯಾಯಾಧೀಶರ ನ್ಯಾಯಾಲಯ ...

ಸಿ.ಮಿಸ್ಕ್. ನಂ. 125/2026

[illegible]

O.S ನಂ 2[illegible]**/2025**

[illegible]

ಬೆಂಗಳೂರು – 560080. ಮೊ. 9480092567

IN THE COURT OF CCH-87 LXXXVI ADDL. CITY CIVIL AND SESSIONS JUDGE AT BENGALURU
COM. O.S. 301/2025

BETWEEN : 1. Bharath Electronics Limited Govt. of India (Min. of Defence Enterprise) Having their Registered and Corporate office at Nagawara, Opp. Outer Ring Road, Bengaluru-560045 and also at Bharath Nagar, Ghaziabad, P.O.-201010, represented by their Subrogee / Power Agent M/s United India Insurance Co Ltd, LCB, having office at 3rd Floor, India Mutual Building, N.R. Square, Bengaluru-560002, Who are in turn represented by its Principal Officer Smt. Vineeta Pandey, D/o Girish Chander Pandey, aged 34 years ...Plaintiffs-1

2. M/s United India Insurance Co Ltd, LCB, 3rd Floor, India Mutual Building, N.R. Square, Bengaluru-560002, Who are in turn represented by its Principal Officer Smt. Vineeta Pandey D/o Girish Chander Pandey, aged 34 years ...Plaintiffs-2

AND : 1. Aramex represented by Indian Venture M/S Global Transportation Service Private Limited & others ...Defendants

NOTICE TO DEFENDANT No. 1

Aramex represented by Indian Venture M/s Global Transportation Service Private Limited & others Plot No.13, Mohit Nagar, old Palam Road, 2nd Floor, Sector-14, Also at Dwaraka, New Delhi-110078, Also at 22, 6th Cross, 3rd Main Road, Indiranagar, 1st Stage, J.P. Nagar, Bangalore -560078, Also at 113, Gurudwara Rakabganj Road, Airline House, New Delhi-110001, Rep by its Manager.

NOTICE TO DEFENDANT No. 1

AND WHEREAS, the above named Plaintiffs have filed the above suit against you and others for the relief of recovery in the sum of Rs.798253.00 with interest at 12% P.A. and for such other relief. Hence you are hereby directed to appear before this Hon'ble Court on the said date 15th day of April 2026 at 11.00 A.M. either in person or through counsel duly instructed., failing which the above case will be heard and determined in your absence placing you exparte. Given under my hand and seal of this court on this the 25.03.2026.

By Order of the Court, Senior Sheristedar, Commercial Court Unit, City Civil Court, Bengaluru.

P.S. Ranganathan & R. Ramesh, Advocates 1655/A, 4th Main Road, II Stage, Rajajinagar, Bengaluru-560010.

IN THE COURT OF THE 3rd ADDITIONAL CIVIL JUDGE, BENGALURU RURAL AT BENGALURU
O.S. No. 1246/2023

BETWEEN : Prema ...Plaintiff
AND : Yashoda and others ...Defendants

SUIT SUMMONS TO DEFENDANT No. 21 to 24

21. Smt. Sharadamma, D/o Late Narayanappa, Aged about 70 years, R/at. No. 88, 1st Main Road, Karivalu, Kamakshipalya, Near Sneha Sadana Mini Hall, Bengaluru - 560079. [illegible]

[illegible]

ಮಾನ್ಯ ... ನ್ಯಾಯಾಧೀಶರ ನ್ಯಾಯಾಲಯ ...

ಓ.ಎಸ್ ನಂ. 229 / 2026

[illegible]

IN THE COURT OF CITY CIVIL JUDGE, MAYOHALL UNIT AT BANGALORE
FDP. No. 25029/2024 In O.S. No. 26457/2021 (CCH75)

BETWEEN: 1. SRI. SUNDARAJU, SON OF ANAJAPPA, AGED ABOUT 69 YEARS, 2. SMT. BHAGYA, WIFE OF SUNDARAJU, AGED ABOUT 59 YEARS, BOTH RESIDING AT: NO.34/2, 2ND MAIN ROAD, 3RD CROSS, AVALLAHALLI, BANGALORE-560 026 ...PETITIONERS

AND: SRI. SRIKANTH SON OF SUNDARAJU, AGED ABOUT 32 YEARS, RESIDING AT: NO.8/2, 2ND CROSS, 19TH MAIN, MUNESHWARA BLOCK, NEAR GIRINAGAR TEMPLE STREET, BANGALORE-560 026 ...RESPONDENTS

NOTICE TO THE RESPONDENT

[illegible]

SCHEDULE PROPERTY

[illegible]

ALLAH BAKASH .M., Advocate No. 19, 2nd Road, Gokul Buildings, 4th Cross, 6th Main, Gandhinagar, Bangalore-560 009. Mob: 9886177282.

IN THE COURT OF THE HON'BLE SENIOR CIVIL JUDGE AND JMFC AT HOSAKOTE
MIS.No.16/2025

BETWEEN: 1. Smt.Tulasamma, W/o Late Govindappa, Aged about 60 years, 2.Smt.Nagamani, W/o Nanjundappa, Aged about 39 years, 3.Smt.Savitha @ Sarala, D/o Late Govindappa, Aged about 37 years, 4. Sri.Prashanth, S/o Late Govindappa, Aged about 34 years, R/at: Nandagudi Village and Hobli, Hosakote Taluk, Bengaluru Rural District-562 122. ...PETITIONERS

AND: Sri. Venkateshappa and Ors ...RESPONDENTS

NOTICE TO RESPONDENT No.2

2.Sri.M.Shaji, S/o. Madavan, Aged about 65 years, Residing at: No.59, Koundige Road, Bengaluru-560 004.

Whereas, the Petitioners have filed the above Mis Petition for the recall of the RA No.33/2022 and other reliefs with respect to suit schedule property against the Respondent No.1 to 3.

Whereas, in the above case you are hereby present/called upon to appear before the Hon'ble Senior Civil Judge and JMFC at Hosakote in personally or by a pleader on 23-04-2026 at 11:00 A.M to answer the same, failing which the suit filed by Petitioners will be decided in your absence.

Given under my hand and seal of court on 24-03-2026.

By order of the court, Sheristedar, Senior Civil Judge & JMFC Court Hosakote.

M.SUBRAMANYA, Advocate No.71, 1st main, 3rd Cross, Thyagaraja Layout, Hosakote Town, Bangalore Rural District- 562 114. Mob: 9945782522

ಕರ್ನಾಟಕ ... ನ್ಯಾಯಾಲಯ ...

[illegible]

IN THE COURT OF THE HON'BLE PRL DISTRICT AND SESSIONS JUDGE AT KOLAR III ADDL SESSIONS JUDGE SITTING AT K.G.F P & SC No : 170/2025

PETITIONER: Sri. Somoji Rao S/o Late Lakshmoji Rao, Aged about 68 years, R/at Yargolu Village Budikote Hobli Bangarpet Taluk.

RESPONDENTS: Sri. Venkob Rao

NOTICE TO THE INTERESTED PERSONS

Where as the petitioner herein above named filed in this petition under section 276 of Indian succession act before his honble court in P & SC NO. /2025, in favor of the petitioner in respect of the schedule properties pertaining to the Deceased Late Lakshanoji Rao S/o Late Somoji Rao who he was died on ; 01/11/2013 at Yargolu village Budikote Hobli Bangarpet Taluk Kolar District.

SCHEDULE

1. All the piece and parcel of the Land bearing Sy No.35 measuring 2.27 acre out of 5 Acre 27 gunta, situated at Yargolu Village, Budikote Hobli Bangarpet Taluk Kolar District same is bounded on ; East by : Manoji Rao property, West by : Somoji Rao property, North By:Somoji Rao Property, South by : Annanama property
2. All the piece and parcel of the Land bearing Sy.No.40 measuring 2 acre 14 guntas out of 5 acre 14 guntas, situated at Yargolu Village, Budikote Hobli Bangarpet Taluk Kolar District, and same is bounded [illegible]

[illegible]

Somoji Rao R/at Yargolu village Budikote Hobli Bangarpet Taluk, Kolar District, If so any interested person/persons failed on 27.04.2026 appearance before this honble court, party in person or their council for filling objections or not filed the matter will be taken as exparte. Given under my hand and seal of this court at 25.03.2026.

BY ORDER OF THE COURT
C A O, IIIrd Addition District and sessions Judge at KOLAR (SIT AT KGF)
Advocate for petitioner : S.NARAYANAPPA

CHANGE OF NAME

I, VINCENT GERALD ANTHRAJ (Old Name), S/o ANTHONY ANTHARAJ, Aged about 62 years, Resident at NO.90/91, ZION VILLA SINDHU SIRI, G.S.S. LAYOUT, SINDHU VALLI, KADAKOLA, MYSURU-571311, KARNATAKA, PRESENTLY CAMPED AT BENGALURU CITY, declare that I have changed my name from VINCENT GERALD ANTHRAJ (Old Name) to VINCENT GERALD ANTHARAJ (New Name), henceforth I shall be known and called as VINCENT GERALD ANTHARAJ (New Name) for all my personal, official & legal purpose, vide Affidavit dated : 25/03/2026 before Notary GANGARAJU B.N. at BENGALURU

CHANGE OF NAME

I, Mr. OJAS SAHU, S/o. Ashish Kumar Sahu, resident of # 1411, B1 Block, 14th Floor, Windsor Troika Apartment, Akshaynagar, Yelenahalli, Bengaluru-560114, do hereby declare that I have changed my name from OJAS ASHISH KUMAR SAHU to OJAS SAHU, vide affidavit dated 24.03.2026, sworn to before Jain Swarnamala, Advocate & Notary, Govt. of India, Bengaluru.

IN THE COURT OF THE HON'BLE SENIOR CIVIL JUDGE AND JMFC AT HOSAKOTE
O.S.No.253/2023

BETWEEN: 1. Smt.Nagamma, W/o Late Munisiddappa, Aged about 73 years, 2. Smt.Akkayamma, D/o Late Munisiddappa, Aged about 58 years, 3. Sri.Siddeshappa, S/o Late Munisiddappa, Aged about 55 years, 4. Sri.Shivanna, S/o Late Munisiddappa, Aged about 49 years, 5. Smt.Gowramma, D/o Late Munisiddappa, Aged about 45 years, 6. Smt.Munirathnamma, D/o Late Munisiddappa, Aged about 38 years, 7. Smt.Eshwari, D/o Late Munisiddappa, Aged about 35 years, 8. Sri.Lingesh Kumar, S/o Siddeshappa, Aged about 30 [illegible] ...PLAINTIFFS

AND: Sri.Appanna and Ors ...DEFENDANTS

SUIT SUMMONS TO DEFENDANT No.1 TO 6

[illegible]

... Represented by its Managing Director, Whereas, the Plaintiffs have filed the above suit for Declaration and other relief with respect to suit schedule property against the defendant No.1 to 6. Whereas, in the above case you all are hereby called upon to appear before the Hon'ble Senior Civil Judge and JMFC at Hosakote in personally or by a pleader on 23-04-2026 at 11:00 A.M to answer the same, failing which the suit filed by Plaintiffs will be decided in your absence.

SCHEDULE PROPERTY

All that piece and parcel of property bearing Old Sy.No.16 and Now new Sy.No.16/1 of Ekarajapura Village, Sulibele Hobli, Hosakote Taluk and, Bengaluru Rural District measuring with an total extent of 8 acres 0-22 guntas, and also karab of 0.5 guntas out of that 0-9 guntas the Plaintiffs herein have claiming and bounded on; East by: Shidlagatta-Hosakote Road; West by: Sadappanahalli appayanna land; North by: vacant Land; South by: Appayanna Land,

Given under my hand and seal of court on 24-03-2026.

By order of the court, Sheristedar, Senior Civil Judge & JMFC Court Hosakote.

M.SUBRAMANYA, Advocate No.71, 1st main, 3rd Cross, Thyagaraja Layout, Hosakote Town, Bangalore Rural District- 562 114. Mob: 9945782522

IN THE COURT OF THE PRINCIPAL SENIOR CIVIL JUDGE BANGALORE RURAL DISTRICT AT BANGALORE
O.S. No. 521/2019

Smt. R. KOMALA AND ANOTHER ...PLAINTIFFS
V/s.
Sri R. PRAKASH AND OTHERS ...DEFENDANTS

(Suit summons to the DEFENDANTS No. ... under order V rule 20 (1-A) of the Code of Civil Procedure)

01. Sri R. PRAKASH Aged about 50 years S/o. Late Sri Ramakrishna Reddy Residing at No. 28/29, Maruthi Nagar, Near Mohan Nursing Home, Kaikondrahalli Village, Carmelaram Post, Sarjapura Road, Bangalore - 560035.

05. Smt. ANUSUYAMMA, Aged about 63 years, D/o. Late Sri Narayana Reddy, W/o. H.G. [illegible]

[illegible]

... relating to the suit on this 22.06.2026 to answer the same, failing which the suit will be disposed off exparte in your absence.

SCHEDULE 'A' PROPERTY

All that piece and parcel of Property bearing Survey No. 38/10, situated at Doddanagamangala Village, Beguru Hobli, Bangalore South Taluk measuring 11 guntas of land and bounded on the East by: Land Bearing Survey No. 38/5, West by : Property belong to Sri Rajappa, North by : property belong to K.B. Narayana Reddy and South by : Property belong to Srinivas Reddy.

SCHEDULE 'B' PROPERTY

All that piece and parcel of Property bearing Survey No. 37/1, situated at Doddanagamangala Village, Beguru Hobli, Bangalore South Taluk measuring 07 ½ guntas of land and bounded on the East by : Raja Kaluve, West by : Property belong to Sri Srinivas Reddy, North by : property belong to K.B. Narayana Reddy and Anand Reddy and South by : Property belong to Srinivas Reddy.

Given under my hand and seal of the court on this 24th day of March 2026.

BY ORDER OF THE COURT, Chief Ministerial Officer, Senior Civil Judge Court, Bengaluru Rural Dist., Bengaluru.

ADVOCATE FOR THE PLAINTIFFS: ANUPAMA. M.V. B.A.L., L.L.M., Advocate No. G-5, Gokula Residency, G.S. Palya Main Road, Konappana Agrahara, Electronic City Post Bangalore - 560 100, PH: 9901423129

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ವನ್ಯಜೀವಿ ಉಪ ವಿಭಾಗ, ಕುಂಬಾರವಾಡಾ–581187 email: acfanshiwl@gmail.com

ಕ್ರಸಂ: ಸ.ಅ.ಸಂ/ಕುಂಬಾರವಾಡಾ/ಪಿ.ಪಿ.ಸಿ & ಪಿ.ಸಿ.ಪಿ/939/2025–26 ದಿನಾಂಕ: 18/03/2026

ಇ–ಟೆಂಡರ್ ಮರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2026–27ನೇ ಸಾಲಿನಲ್ಲಿ [illegible] 2026–27 ನೇ ಸಾಲಿಗೆ [illegible] ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು [illegible] ದಿನಾಂಕ: 18–03–2026 [illegible] ದಿನಾಂಕ: 18–04–2026 ರಂದು ಬೆಳಿಗ್ಗೆ 11.00 ಗಂಟೆ [illegible] https://kppp.karnataka.gov.in ಮೂಲಕ [illegible]

ಅನುಸೂಚಿ ವಿವರಗಳು: 1) [illegible] (1) ಕುಶಲ (Skilled) ಕೆಲಸಗಾರರು– 160 ಸಂಖ್ಯೆ (2) ಅಕುಶಲ (Un Skilled) ಕೆಲಸಗಾರರು– 120 ಸಂಖ್ಯೆ, ಒಟ್ಟು ಸಂಖ್ಯೆ: 280 ಸಂಖ್ಯೆ, ಟೆಂಡರ್ ಮೊತ್ತ: 854785.92, ಇ.ಎಂ.ಡಿ: 1282180.00

(1) ಟೆಂಡರ ಪ್ರಶ್ನೆಗಳು / ಸ್ಪಷ್ಟತೆಗಳ ಕೊನೆಯ ದಿನಾಂಕ: 18–04–2026 ಸಾಯಂಕಾಲ 04.00 ಗಂಟೆ (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19–04–2026 ಬೆಳಿಗ್ಗೆ 11.00 ಗಂಟೆ (3) ತಾಂತ್ರಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 20–04–2026 ಬೆಳಿಗ್ಗೆ 11.30 ಗಂಟೆಗೆ (4) ಆರ್ಥಿಕ ಬಿಡ್‌ಗಳನ್ನು ತೆರೆಯಲು ದಿನಾಂಕ: 21–04–2026 ಬೆಳಿಗ್ಗೆ 11.30 ಗಂಟೆಗೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಟೆಂಡರ್‌ದಾರರು ಈ ಕೆಳ ಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ ಕುಂಬಾರವಾಡಾ

DIPR/KWR/KSMCA/1246/25-26 dt.25.03.26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ:ಬೆಂಅಪ್ರಾ/ನಯೋಸ/CLU-534/4538/2025–26 (E-206388) ದಿನಾಂಕ: 25.03.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು [illegible] 15 ದಿವಸಗಳೊಳಗಾಗಿ [illegible]

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	M/s AVS Enterprises Managing Partner Venugopal A.V. Srinivas C. # 213, Adakamaranahalli Village, Dasanapura Hobli, Bengaluru North Taluk	ಬೆಂಗಳೂರು ಉತ್ತರ	ದಾಸನಪುರ	ಕದರನಹಳ್ಳಿ	43/4	3–0	ವ್ಯವಸಾಯ ವಲಯ	ವಸತಿ

[illegible]

ಸಹಾಯವಾಣಿ/ವಾಟ್ಸ್ಆಪ್: 9483166622 (24x7) @BDAOfficialGok

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಮಂಡ್ಯ– 571401
(Autonomous Medical Institution, Government of Karnataka)
Fax & Phone No: 08232-231001, 222086, E-mail: mimsmandya@gmail.com),
Website: www.mimsmandya.org

ಇ–ಟೆಂಡರ್ ಪ್ರಕಟಣೆ (ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹಾಗೂ, ಸರ್ಕಾರದಿಂದ ಮ್ಯಾಪ್ ಮಾಡಿರುವ ಆದಿಚುಂಚನಗಿರಿ, ಬೆಳ್ಳೂರು ಕ್ರಾಸ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು ಚಾಮುಂಡೇಶ್ವರಿ ಮೆಡಿಕಲ್ ಚನ್ನಪಟ್ಟಣ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ವೈದ್ಯ ವಿದ್ಯಾರ್ಥಿಗಳಿಗೆ Tablet, Laptop, ಸಂಸ್ಥೆಯ ಕಛೇರಿಗಳಿಗೆ ಕಂಪ್ಯೂಟರ್‌ಗಳನ್ನು ಹಾಗೂ ಮಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಪಿಠೋಪಕರಣಗಳನ್ನು ಪಡೆಯಲು ನೋಂದಾಯಿಸಲ್ಪಟ್ಟ ಅರ್ಹ ಉತ್ಪಾದಕ ಮತ್ತು Distributors ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್ ಅಂದಾಜು ಮೊತ್ತ ರೂ.ಗಳಲ್ಲಿ	ಇ.ಎಂ.ಡಿ ಮೊತ್ತ ರೂ.
1	ಸಂ:ಮಿಮ್ಸ್/ಸ.ಪಾ/ಪ.ಪಂ/ ಟ್ಯಾಬ್‌ಲೆಟ್ 19/ಇ–ಟೆಂಡರ್ /2025–26 ದಿನಾಂಕ: 23.03.2026	ವೈದ್ಯ ವಿದ್ಯಾರ್ಥಿಗಳಿಗೆ 2024–25 ನೇ ಸಾಲಿಗೆ Tablet ಗಳನ್ನು, 2025–26ನೇ ಸಾಲಿಗೆ Laptop ಗಳನ್ನು ಹಾಗೂ ಮಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಕಂಪ್ಯೂಟರ್‌ಗಳನ್ನು ಅಲ್ಪಾವಧಿ ಮರು ಇ–ಟೆಂಡರ್ ಮೂಲಕ ಪಡೆಯುವ ಬಗ್ಗೆ	ರೂ.47.00 ಲಕ್ಷಗಳು (ರೂ.ನಲವತ್ತೇಳು ಲಕ್ಷಗಳು ಮಾತ್ರ)	2%
2	ಸಂ:ಮಿಮ್ಸ್/ಸರಬ/ಪೀಠೋಪಕರಣಗಳು 19/ಇ–ಟೆಂಡರ್/ 2024–25, ದಿನಾಂಕ:23.03.2026	ಮಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಪಿಠೋಪಕರಣಗಳನ್ನು ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸುವ ಬಗ್ಗೆ	ರೂ.16.00 ಲಕ್ಷಗಳು (ರೂ. ಹದಿನಾರು ಲಕ್ಷಗಳು ಮಾತ್ರ)	2.5%

ಟೆಂಡರ್‌ನ್ನು ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಂದಿಗೆ ಸಲ್ಲಿಸುವುದು ಇತರೆ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ http://kppp.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ

ವಾಐಸಂ/ಮಂಡ್ಯ/ಜಾಹೀರಾತು/911/2025–26

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ,ಕಾವೇರಿ ನೀರಾವರಿ ನಿಗಮ, (ನಿ), ನಾಗಮಂಗಲ. ದೂರವಾಣಿ ಸಂಖ್ಯೆ: 08234–200058
ಫ್ಯಾಕ್ಸ್ ಸಂಖ್ಯೆ: 08234–286019
ಇ–ಮೇಲ್: eeno7nag@gmail.com

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:06/2025–26 ದಿನಾಂಕ:23.03.2026 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ದ್ವಿ ಲಕೋಟೆ ಪದ್ಧತಿಯಲ್ಲಿ) – (ಕೆರೆ ಅಭಿವೃದ್ಧಿ ಕಾಮಗಾರಿಗಾಗಿ)

ಕೆರೆ ಅಭಿವೃದ್ಧಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ 3 ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಅಲ್ಪಾವಧಿ ಟೆಂಡರ್‌ನ್ನು (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಆಹ್ವಾನಿಸಲಾಗಿದೆ. 01 ಕಾಮಗಾರಿಯ ಟೆಂಡರ್‌ನ್ನು ಹಾಗೂ ಇ.ಎಂ.ಡಿ ಶೇವಣಿಯನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸುವ ದಿನಾಂಕ: 24.03.2026 ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.04.2026 ರ ಸಂಜೆ 16.00 ಘಂಟೆಯವರೆಗೆ, ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.04.2026 ರ ಬೆಳಿಗ್ಗೆ 11.00 ಘಂಟೆಗಳು ನಂತರ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.04.2026 ರ ಬೆಳಿಗ್ಗೆ 12.00 ಘಂಟೆಗೆ. ಟೆಂಡರ್ ಆಹ್ವಾನಿಸಿರುವ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.82.04 ಲಕ್ಷಗಳು ಹಾಗೂ ಕಾಮಗಾರಿಯ ಇ.ಎಂ.ಡಿ ಮೊತ್ತ ರೂ. 1,64,100.00 ಗಳಾಗಿದ್ದು, ಸದರಿ ಕಾಮಗಾರಿಯ ವಿವರ, ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ, ಟೆಂಡರ್ ಫಾರಂ ಬೆಲೆ ಹಾಗೂ ಕಾಲಮಿತಿ ಮುಂತಾದ ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ, ನಾಗಮಂಗಲ

ವಾಐಸಂ/ಓಸಿ–ಮಂ/ಕೆಪಿಆರ್/915/2025–26

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ನಂ:ದಾಹನಪ್ರಾ/ತಾಶಾ:ಎಂಇ:ಕಸಾಕಂಹೋ:ಟೆಂಪ್ರ:12:2025–26/3845 ದಿನಾಂಕ:25–03–2026.

ಟೆಂಡರ್ ಪ್ರಕಟಣೆ–2ನೇ ಕರೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್)

ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳಿಗೆ [illegible] ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಗಳಲ್ಲಿ	ಮುಂಗಡ ಹಣ ಠೇವಣಿ (ಇ.ಎಂ.ಡಿ.) ರೂ.ಗಳಲ್ಲಿ	ಗುತ್ತಿಗೆ ದಾರರ ದರ್ಜೆ	ಟೆಂಡರ್ ಮಾದರಿ	ಪೂರ್ಣ ಗೊಳಿಸಲು ನಿಗದಿಪಡಿಸಿದ ಅವಧಿ (ಮಳೆಗಾಲ ಸೇರಿ)
1	DHUDA/ 2025-26/ RD/ WORK_INDENT61/ CALL-2	[illegible] 76 ವರೆಗೆ ರಸ್ತೆ ನಿರ್ಮಾಣ.	100.00	82,89,303.00	1,65,786/–	3ನೇ ದರ್ಜೆ ಮೇಲ್ಪಟ್ಟು (ಸಿವಿಲ್)	ಕೆಡಬ್ಲ್ಯು –3	5 ತಿಂಗಳು
2	DHUDA/ 2025-26/ EL/ WORK_INDENT62 /CALL-2	[illegible]	60.00	49,99,617.93	1,00,000/–	3ನೇ ದರ್ಜೆ ಮೇಲ್ಪಟ್ಟು (ವಿದ್ಯುತ್)	ಕೆಡಬ್ಲ್ಯು –3	4 ತಿಂಗಳು
3	DHUDA/ 2025-26/ OW/ WORK_INDENT63 /CALL-2	[illegible]	48.00	40,06,324.00	80,200/–	3ನೇ ದರ್ಜೆ ಮೇಲ್ಪಟ್ಟು (ಸಿವಿಲ್)	ಕೆಡಬ್ಲ್ಯು –2	3 ತಿಂಗಳು

Last date & time for tender queries /clarifications 01-04-2026 upto 17.00 hours
Last date and time for receipt of tender 10-04-2026 upto 17.00 hours
Date & time for opening of (Technical bids) 13-04-2026 at 11.00 hours
Note: The rates quoted, whether specified or not, in the tender as per sanctioned estimate are inclusive of all lead and lifts and all other incidental charges to complete the work successfully.

1) [illegible] 2) [illegible] 3) [illegible] ಹೆಚ್ಚಿನ ವಿವರಗಳನ್ನು [illegible] ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ದಾಹನಪ್ರಾ/ಡಿಐಪಿಆರ್/847/ಕೆಪಿಎಂಸಿಎ/2025–26 ಸಹಿ/– ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಬಜೆಟ್ ಮಂಡನೆಗೂ ಮುನ್ನ ಡಿಸಿಎಂ ಡಿ.ಕೆ.ಶಿವಕುಮಾರ್ ಭರವಸೆ

ಪಾಲಿಕೆ ಹಣಕಾಸು ಕೊರತೆ ನೀಗಲು ಕ್ರಮ

• **ಬೆಂಗಳೂರು:** ಬಜೆಟ್ ಮಂಡನೆಗೆ ಹಣಕಾಸಿನ ಕೊರತೆ ಇರುವ ಬೆಂಗಳೂರು ನಗರ ಪಾಲಿಕೆಗಳಿಗೆ ರಾಜ್ಯ ಸರ್ಕಾರ ನೆರವು ನೀಡಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.



ವಿಧಾನಸೌಧದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನ ಐದು ಪಾಲಿಕೆಗಳು ಪ್ರತ್ಯೇಕ ಬಜೆಟ್ ಮಂಡಿಸಲಿವೆ. ಉತ್ತಮ ಯೋಜನೆ ರೂಪಿಸಲಾಗಿದೆ. ಈ ಬಗ್ಗೆ ಶಾಸಕರ ಜತೆಗೂ ಚರ್ಚೆ ಮಾಡಲಾಗಿದೆ. ವಿಕೇಂದ್ರೀಕರಣದಿಂದಾಗಿ ಆಯಾ ಪಾಲಿಕೆಗಳ ಅನುದಾನ ಬೇರೆಡೆಗೆ ವರ್ಗಾವಣೆ ಆಗುವುದಿಲ್ಲ. ಬಜೆಟ್ ಮಂಡನೆಗೆ ಹಣಕಾಸಿನ ಕೊರತೆ ಇರುವ ಪಾಲಿಕೆಗಳಿಗೆ ರಾಜ್ಯ ಸರ್ಕಾರ ನೆರವು ನೀಡಲಿದೆ ಎಂದು ತಿಳಿಸಿದರು.

27-28 ಕ್ಕೆ ಪಂಚ ಪಾಲಿಕೆ ಬಜೆಟ್: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ರಚನೆಯಾಗಿ, ಐದು ಪಾಲಿಕೆಗಳು ಅಸ್ತಿತ್ವಕ್ಕೆ ಬಂದ ನಂತರ ಮೊದಲ ಬಾರಿಗೆ ಪಂಚ ಪಾಲಿಕೆಗಳ ಬಜೆಟ್ ಮಂಡನೆ ಮುಹೂರ್ತ ನಿಗದಿಯಾಗಿದ್ದು, ಮಾರ್ಚ್ 27,28 ಕ್ಕೆ ಬಜೆಟ್ ಮಂಡನೆಗೆ ಪಾಲಿಕೆಗಳು ತಯಾರಿ ನಡೆಸಿವೆ. ಮೊದಲ ದಿನವಾದ ಮಾ.27 ರಂದು ಬೆಳಗ್ಗೆ 9:30ಕ್ಕೆ ಎಂ.ಎಲ್.ಆರ್ ಕನ್ವೆನ್ಷನ್ ಸೆಂಟರ್, ವೈಟ್‌ಫೀಲ್ಡ್, 4ನೇ ಕ್ರಾಸ್, ಗರುಡಾಚಾರ್ ಪಾಳ್ಯ, ಮಹದೇವಪುರದಲ್ಲಿ ಪೂರ್ವ ನಗರ ಪಾಲಿಕೆ, ಮಧ್ಯಾಹ್ನ 12:30ಕ್ಕೆ ಟೌನ್ ಹಾಲ್‌ನಲ್ಲಿ ಕೇಂದ್ರ ನಗರ ಪಾಲಿಕೆ ಬಜೆಟ್ ಮಂಡನೆಯಾಗಲಿದೆ. ಎರಡನೇ ದಿನವಾದ ಮಾ.28 ರಂದು ಬೆಳಗ್ಗೆ 9:30ಕ್ಕೆ ಯಲಹಂಕ ನ್ಯೂ ಟೌನ್ ಅಂಬೇಡ್ಕರ್ ಭವನದಲ್ಲಿ ಉತ್ತರ ನಗರ ಪಾಲಿಕೆ, ಮಧ್ಯಾಹ್ನ 12:30ಕ್ಕೆ ಮಲ್ಲೇಶ್ವರಂನ ಐಪಿಪಿ ಸೆಂಟರ್ ನಲ್ಲಿ, ಬಿ.ಡಬ್ಲ್ಯು.ಎಸ್.ಎಸ್.ಬಿ ಸುವರ್ಣ ಭವನ (ಅಮ್ಮಣ್ಣಿ ಕಾಲೇಜು ಹತ್ತಿರ), ಮಲ್ಲೇಶ್ವರದಲ್ಲಿ ಪಶ್ಚಿಮ ನಗರ ಪಾಲಿಕೆ ಬಜೆಟ್, ಜಿಲ್ಲಾ ಪಂಚಾಯ್ತಿ ಸಭಾಂಗಣ, ಬನಶಂಕರಿ ದೇವಸ್ಥಾನ ಹತ್ತಿರ, ಮಧ್ಯಾಹ್ನ 2:30 ಕ್ಕೆ ದಕ್ಷಿಣ ನಗರ ಪಾಲಿಕೆ ಬಜೆಟ್ ಮಂಡನೆಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚುನಾಯಿತ ಪ್ರತಿನಿಧಿಗಳು ಇಲ್ಲದ ಕಾರಣ ಅಧಿಕಾರಿಗಳೇ ಐದು ಪಾಲಿಕೆಗಳ ಬಜೆಟ್ ಮಂಡನೆ ಮಾಡುತ್ತಿದ್ದು, ಪ್ರತಿ ಪಾಲಿಕೆ ಬಜೆಟ್ ಗಾತ್ರ 3,00 ರಿಂದ 4,000 ಕೋಟಿ ತಲುಪುವ ಸಾಧ್ಯತೆಯಿದೆ. ಒಟ್ಟಾರೆ ಐದು ಪಾಲಿಕೆಯಿಂದ ಸುಮಾರು 20,000 ಕೋಟಿ, ಬಜೆಟ್ ಗಾತ್ರ ಇರಲಿದೆ ಎಂದು ಹೇಳಲಾಗುತ್ತಿದೆ.

ಮಧುಮೇಹ ಚಿಕಿತ್ಸೆ ದೊಡ್ಡ ಸವಾಲು

• **ಬೆಂಗಳೂರು:** ಮಧುಮೇಹ ಚಿಕಿತ್ಸೆಯ ವೈದ್ಯಕೀಯ ತಂತ್ರಜ್ಞಾನದಲ್ಲಿ ಮಹತ್ತರ ಪ್ರಗತಿ ಸಾಧಿಸಿದ್ದರೂ, ಎಲ್ಲಾ ವರ್ಗದ ಜನರಿಗೆ ಈ ಸೇವೆಗಳು ಸಮಾನವಾಗಿ ಲಭ್ಯವಾಗುವಂತೆ ಮಾಡುವುದು ಒಂದು ದೊಡ್ಡ ಸವಾಲಾಗಿದೆ ಎಂದು ಅಂತಾರಾಷ್ಟ್ರೀಯ ಮಧುಮೇಹ ಒಕ್ಕೂಟದ ದಕ್ಷಿಣ-ಪೂರ್ವ ಏಷ್ಯಾ ಅಧ್ಯಕ್ಷ ಡಾ.ಬಂಶಿ ಸಬೂ ಕಳವಳ ವ್ಯಕ್ತಪಡಿಸಿದರು. ಬ್ಯಾಟರಾಯನಪುರ ಕ್ಷೇತ್ರದ ಸಹಕಾರನಗರದಲ್ಲಿ ಆಯೋಜಿಸಿದ್ದ ಹೃದಯ ಮತ್ತು ಚಯಾಪಚಯ ಕುರಿತ ರಾಷ್ಟ್ರೀಯ ವೈದ್ಯಕೀಯ ಸಮಾವೇಶ ಐಲೆಟ್-2026 ಉದ್ಘಾಟಿಸಿ ಮಾತನಾಡಿದ ಅವರು, ನವೀನ ಆವಿಷ್ಕಾರಗಳನ್ನು ಕೇವಲ ಅಭಿವೃದ್ಧಿಪಡಿಸಿದರಷ್ಟೇ ಸಾಕಾಗುವುದಿಲ್ಲ, ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವುದು ಅಗತ್ಯವಾಗಿದೆ. ನಗರ, ಗ್ರಾಮೀಣರ ನಡುವೆ ಇರುವ ಅಂತರ ಕಡಿಮೆಮಾಡಿ, ಪ್ರತಿಯೊಬ್ಬ ರೋಗಿಗೂ ಗುಣಮಟ್ಟದ ಆರೋಗ್ಯಸೇವೆ ಹಾಗೂ ಆರೈಕೆ ಒದಗಿಸುವ ಅಗತ್ಯವಿದೆ ಎಂದರು.



ವಾಹನ ವಿತರಣೆ



ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ವಿವಿಧ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ವಿಧಾನಸೌಧದ ಮೆಟ್ಟಿಲು ಬಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ವಾವಲಂಬಿ ಸಾರಥಿ ಯೋಜನೆಯಲ್ಲಿ ಫಲಾನುಭವಿಗಳಿಗೆ ವಾಹನ ವಿತರಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕನ್ನಡ ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಇತರರಿದ್ದರು.

ಕಿರುಸುದ್ದಿ

ಅಮೇಜಾನ್ ವಿವಿಧ ಸಂಗ್ರಹ ಮಾರುಕಟ್ಟೆಗೆ

• **ಬೆಂಗಳೂರು:** ಅಮೇಜಾನ್ ಫ್ಯಾಷನ್ ಮತ್ತು ಬ್ಯೂಟಿ ಸಂಸ್ಥೆಯು ತನ್ನ ಗ್ರಾಹಕರು ಹೊಸ ಶೈಲಿಯನ್ನು ಅನ್ವೇಷಿಸುವ ಮತ್ತು ಖರೀದಿಸುವ ರೀತಿಯನ್ನು ಬದಲಾಯಿಸುತ್ತಿದೆ. ಎಐ-ಚಾಲಿತ ಪರಿಕರಗಳ ಮೂಲಕ ಫ್ಯಾಷನ್ ಅನ್ವೇಷಣೆಯನ್ನು ಈಗ ಅತ್ಯಂತ ಸರಳಗೊಳಿಸಲಾಗಿದೆ. ರೂಫಸ್ ಜೊತೆಗಿನ ಸಂಭಾಷಣೆಯ ಮೂಲಕ ಶಾಪಿಂಗ್ ಮಾಡುವುದರಿಂದ ಹಿಡಿದು ಅಮೇಜಾನ್ ಲೆನ್ಸ್ ಎಐ ಮೂಲಕ ದೃಶ್ಯ ಅನ್ವೇಷಣೆಯವರೆಗೆ, ಗ್ರಾಹಕರು ಈಗ ಕೇವಲ ಒಂದು ಫೋಟೋ ಅಥವಾ ಸರಳ ಪ್ರಶ್ನೆಯ ಮೂಲಕ ತಮ್ಮ ಸ್ಫೂರ್ತಿಯನ್ನು ವಾಸ್ತವ ಶೈಲಿಯನ್ನಾಗಿ ಪರಿವರ್ತಿಸಬಹುದು. ಸ್ಪ್ರಿಂಗ್ ಸಮ್ಮರ್ 26 ಸಂಗ್ರಹ ಉಡುಪುಗಳು, ಪಾದರಕ್ಷೆಗಳು, ವಾಚ್, ಲಗೇಜ್ ಮತ್ತು ಸೌಂದರ್ಯವರ್ಧಕಗಳ ವಿಭಾಗದಲ್ಲಿ 200ಕ್ಕೂ ಹೆಚ್ಚು ಪ್ರಮುಖ ಬ್ರ್ಯಾಂಡ್‌ಗಳಿಂದ ಒಂದು ಲಕ್ಷಕ್ಕೂ ಹೆಚ್ಚು ಶೈಲಿಯನ್ನು ಒಳಗೊಂಡಿದೆ. ಸಮ್ಮರ್ ಆಫ್ ಲವ್, ಇಂಡಿ ಸಮ್ಮರ್, ಹೆರಿಟೇಜ್ ಗೆಟವೇ, ಬೀಚ್ ಡ್ರೀಮ್ ಸಂಗ್ರಹ ಮಾರುಕಟ್ಟೆಗೆ ಬಂದಿದೆ.

ಹೈಕೋರ್ಟ್ ಮೆಟ್ಟಿಲೇರಿದ ಸ್ನೇಹಮಯಿ ಕೃಷ್ಣ

• **ಬೆಂಗಳೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪ ಸಂಬಂಧ ಮೈಸೂರಿನ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸಲ್ಲಿಸಿದ ಬಿ ರಿಪೋರ್ಟ್ ಅನ್ನು ಅಂಗೀಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಕ್ರಮ ಪ್ರಶ್ನಿಸಿ, ಪ್ರಕರಣದ ಖಾಸಗಿ ದೂರುದಾರ ಸ್ನೇಹಮಯಿ ಕೃಷ್ಣ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಕುರಿತು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಸ್ನೇಹಮಯಿ ಕೃಷ್ಣ, ಪ್ರಕರಣದ ತನಿಖೆ ನಡೆಸಿದ್ದ ಮೈಸೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ 2025ರ ಫೆ.12ರಂದು ಬೆಂಗಳೂರಿನ 82ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯಕ್ಕೆ (ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ) ಬಿ ರಿಪೋರ್ಟ್ ಸಲ್ಲಿಸಿದ್ದರು. ಅದನ್ನು ಅಂಗೀಕರಿಸಿ ವಿಶೇಷ ನ್ಯಾಯಾಲಯ 2026ರ ಜ.28ರಂದು ಆದೇಶ ಹೊರಡಿಸಿದೆ. ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸಲ್ಲಿಸಿರುವ ಬಿ ರಿಪೋರ್ಟ್ ಅನ್ನು ತರೆದು ಪರಿಶೀಲಿಸಬೇಕು. ಬಿ ರಿಪೋರ್ಟ್ ಅಂಗೀಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು. ಅಲ್ಲದೇ, ಸ್ವತಂತ್ರ ತನಿಖಾ ಸಂಸ್ಥೆಗೆ ಪ್ರಕರಣದ ತನಿಖೆ ವರ್ಗಾಯಿಸಬೇಕು. ತನಿಖೆ ನಡೆಸಿ ಹೊಸದಾಗಿ ವರದಿ ಸಲ್ಲಿಸಲು ಸ್ವತಂತ್ರ ತನಿಖಾ ಸಂಸ್ಥೆಗೆ ನಿರ್ದೇಶಿಸಬೇಕು ಎಂದು ಕೋರಿದ್ದಾರೆ. ಅರ್ಜಿಯಲ್ಲಿ ಮೈಸೂರು ಜಿಲ್ಲಾ ಲೋಕಾಯುಕ್ತದ ಪೊಲೀಸ್ ಅಧೀಕ್ಷಕರು, ಬಿ.ಎಂ.ಪಾರ್ವತಿ, ಮಲ್ಲಿಕಾರ್ಜುನ ಸ್ವಾಮಿ, ವಿವಾದಿತ ಜಮೀನಿನ ಮೂಲ ಮಾಲೀಕ ಜೆ.ದೇವರಾಜು, ಮುಡಾ ಮಾಜಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಜಾರಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕರನ್ನು ಪ್ರತಿವಾದಿಗಳನ್ನಾಗಿ ಮಾಡಿದ್ದಾರೆ. ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

ಸೈಬರ್ ಸುರಕ್ಷತೆಗೆ ತರಬೇತಿ

• **ಬೆಂಗಳೂರು:** ಹಿರಿಯ ನಾಗರಿಕರಿಗೆ ಇಂದಿನ ಡಿಜಿಟಲ್ ಯುಗದಲ್ಲಿ ಅತ್ಯಗತ್ಯವಾಗಿರುವ ಡಿಜಿಟಲ್ ಸಾಕ್ಷರತೆ ಹಾಗೂ ಸೈಬರ್ ಸುರಕ್ಷತೆ ಕುರಿತು ವಿಶೇಷ ತರಬೇತಿಯನ್ನು ನೀಡಲಾಯಿತು. ಚಂದ್ರಾ ಲೇಔಟ್ ಪೊಲೀಸ್ ಠಾಣೆಯ ವತಿಯಿಂದ ಹಿರಿಯ ನಾಗರಿಕರಿಗೆ ಮತ್ತು ಸಾರ್ವಜನಿಕರಿಗೆ ಪೊಲೀಸ್ ಇಲಾಖೆಯಿಂದ ಸಿಗುವ ಸೌಲಭ್ಯ, ಹಿರಿಯ ನಾಗರಿಕರಿಗಾಗಿ ಇರುವ ವಿವಿಧ ಯೋಜನೆಗಳ ಬಗ್ಗೆ ಸಮಗ್ರವಾಗಿದೆ.

ವಿದ್ಯಾರ್ಥಿ ಸಾಹಿತ್ಯ ಸಂಭ್ರಮ-2026 ಕಾರ್ಯಕ್ರಮ | ಇಸ್ರೋ ಮಾಜಿ ಅಧ್ಯಕ್ಷ ಎಸ್.ಸೋಮನಾಥ್

ಬಾಹ್ಯಾಕಾಶದಲ್ಲಿ ಅಪೂರ್ವ ಸಾಧನೆ

• **ಬೆಂಗಳೂರು:** ಭಾರತ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಅಭೂತಪೂರ್ವ ಸಾಧನೆ ಮಾಡುತ್ತಿದೆ. ಈ ಯಶಸ್ಸಿನ ಪಯಣದಲ್ಲಿ ಯುವ ವಿಜ್ಞಾನಿಗಳ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಮಾಜಿ ಅಧ್ಯಕ್ಷ ಎಸ್. ಸೋಮನಾಥ್ ಅಭಿಪ್ರಾಯಪಟ್ಟರು.



ಜಯನಗರದ ಯುವಪಥದಲ್ಲಿ ಯುವಕ ಸಂಘದ ಫ್ರೀ ಸ್ಪೇಸ್, ಫ್ರಾನ್ಸ್ ಸೀಡೆಲ್ ಫೌಂಡೇಶನ್ ಇಂಡಿಯಾ ಹಾಗೂ ಸೇಸ್‌ನ ಸಹಯೋಗದೊಂದಿಗೆ ಆಯೋಜಿಸಿದ್ದ ವಿದ್ಯಾರ್ಥಿ ಸಾಹಿತ್ಯ ಸಂಭ್ರಮ-2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಚಂದ್ರನ ದಕ್ಷಿಣ ಧ್ರುವಕ್ಕೆ ಕಾಲಿಟ್ಟ ಈ ಸಾಧನೆ ಇಡೀ ದೇಶದ ಹೆಮ್ಮೆ. ವಿಜ್ಞಾನದಲ್ಲಿ ಸೋಲು ಎಂಬುದು ಅಂತಿಮವಲ್ಲ, ಅದು ಕಲಿಕೆಯ ಒಂದು ಭಾಗ. ಚಂದ್ರಯಾನ-2ರ ಸಂದರ್ಭದಲ್ಲಿ ಎದುರಾದ ತಾಂತ್ರಿಕ ಅಡೆತಡೆಗಳೇ ನಮಗೆ ಚಂದ್ರಯಾನ-3ರ ಯಶಸ್ಸಿಗೆ ಭದ್ರ ಬುನಾದಿ ಹಾಕಿಕೊಟ್ಟವು. ವಿಜ್ಞಾನಿಗಳ ಸತತ ಪರಿಶ್ರಮದಿಂದಲೇ ಇಂದು ಚಂದಿರನ ಅಂಗಳದಲ್ಲಿ ಭಾರತದ ಬಾವುಟ ಹಾರಾಡುತ್ತಿದೆ ಎಂದು ತಿಳಿಸಿದರು.

ತಂತ್ರಜ್ಞಾನದ ಸ್ವಾವಲಂಬನೆ : ಭಾರತವು ಇಂದು ಉಪಗ್ರಹ ಉಡಾವಣೆಯಲ್ಲಿ ಸಂಪೂರ್ಣ ಸ್ವಾವಲಂಬನೆಯತ್ತ ಹೆಜ್ಜೆ ಹಾಕುತ್ತಿದೆ. ಖಾಸಗಿ ಸಹಭಾಗಿತ್ವ ಮತ್ತು ನವೋದ್ಯಮಗಳಿಗೆ ಬಾಹ್ಯಾಕಾಶ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆ. ಯುವಜನರು ಕೇವಲ ಉದ್ಯೋಗಾಕಾಂಕ್ಷಿಗಳಾಗದೆ, ಹೊಸ ಆವಿಷ್ಕಾರಗಳ ಮೂಲಕ ಉದ್ಯಮಶೀಲರಾಗಬೇಕು. ವಿಜ್ಞಾನವು ಸಮಾಜದ ಕಟ್ಟಕಡೆಯ ವ್ಯಕ್ತಿಯ ಸಮಸ್ಯೆಗಳಿಗೂ ಪರಿಹಾರ ನೀಡುವಂತಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಪದ್ಮಶ್ರೀ ಪುರಸ್ಕೃತ ಡಾ. ಎಂ.ಕೆ.ಶ್ರೀಧರ್ ಮಾತನಾಡಿ, ಇಂದಿನ ಡಿಜಿಟಲ್ ಯುಗದಲ್ಲಿ ವಿದ್ಯಾರ್ಥಿಗಳು ಮೊಬೈಲ್ ಪರದೆಯ ಮೇಲಿನ ಸ್ಕ್ರೀನ್ ಟೈಮ್ ಕಡಿಮೆ ಮಾಡಿ, ಮೆದುಳಿನ ಆಲೋಚನಾ ಸಾಮರ್ಥ್ಯ ಅಥವಾ ಮೆಂಟಲ್ ಸ್ಕ್ರೀನ್ ಟೈಮ್ ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸಬೇಕು. ಯುವಪಥದಲ್ಲಿ ನಡೆಯುತ್ತಿರುವ ಈ ಸಾಹಿತ್ಯ ಸಂಭ್ರಮವು ಯಾವುದೇ ರಿಯಾಯಿತಿಗಳ ಆಮಿಷವಿಲ್ಲದೆ, ಕೇವಲ ಮೌಲ್ಯವರ್ಧನೆ ಎನ್ನುವ ಅಮೂಲ್ಯ ಪ್ರೀಮಿಯಂ ನೀಡುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಷಾ ಸುಬ್ರಮಣ್ಯ, ಅನಂತ್ ಅಯ್ಯರ್ ಕುಮಾರ್, ಸಾಯಿ ಸ್ವರೂಪ ಅಯ್ಯರ್ ಉಪಸ್ಥಿತರಿದ್ದರು.

ಯುವಕರು ವಿಜ್ಞಾನ, ಗಣಿತದಲ್ಲಿ ಆಸಕ್ತಿ ಹೆಚ್ಚಿಸಿಕೊಳ್ಳಲಿ

ಜಗತ್ತು ಇಂದು ಭಾರತದ ತಂತ್ರಜ್ಞಾನದ ಕಡೆಗೆ ಆಶ್ಚರ್ಯದಿಂದ ನೋಡುತ್ತಿದೆ. ಈ ವೇಗವನ್ನು ಕಾಯ್ದುಕೊಳ್ಳಲು ಯುವಶಕ್ತಿಯು ವಿಜ್ಞಾನ ಮತ್ತು ಗಣಿತದಂತಹ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಬೇಕು. ಕೇವಲ ಕನಸು ಕಾಣುವುದು ಮುಖ್ಯವಲ್ಲ, ಅದನ್ನು ನನಸಾಗಿಸಲು ಶಿಸ್ತುಬದ್ಧ ಪರಿಶ್ರಮ ಅಗತ್ಯ. ಜಾಗತಿಕ ಮಟ್ಟದಲ್ಲಿ ಭಾರತವನ್ನು ವಿಶ್ವಗುರುವನ್ನಾಗಿ ಮಾಡುವ ಶಕ್ತಿ ಯುವಜನತೆಯ ಕೈಯಲ್ಲಿದೆ ಎಂದು ಇಸ್ರೋ ಮಾಜಿ ಅಧ್ಯಕ್ಷ ಎಸ್.ಸೋಮನಾಥ್ ತಿಳಿಸಿದರು.

> **ಹಿಂದೆ ಸಾಹಿತ್ಯವು ಕೆಲವರಿಗೆ ಮಾತ್ರ ಸೀಮಿತವಾಗಿತ್ತು. ಆದರೆ, ಇಂದು ಸಾಮಾಜಿಕ ಜಾಲತಾಣದ ಮೂಲಕ ಸಾಹಿತ್ಯದ ವ್ಯಾಪ್ತಿ ಹೆಚ್ಚಾಗಿದೆ. ವಿಜ್ಞಾನ ಅಥವಾ ಅರ್ಥಶಾಸ್ತ್ರ ಓದುತ್ತಿರುವ ವಿದ್ಯಾರ್ಥಿಯೂ ಸಾಹಿತ್ಯ ಲೋಕದಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಇಂದಿನ ಶಿಕ್ಷಣ ಪದ್ಧತಿಯಲ್ಲಿ ಮುಕ್ತ ಅವಕಾಶವಿದೆ.**
>
> ■ ಡಾ. ಎಂ.ಕೆ.ಶ್ರೀಧರ್, ಪದ್ಮಶ್ರೀ ಪುರಸ್ಕೃತ

ನೆಲಗದರನಹಳ್ಳಿಯಲ್ಲಿ ಕುಂದುಕೊರತೆ ಸಭೆ: ಶಾಸಕ ಸೂಚನೆ

ಮನೆ ಕಟ್ಟುವವರು ಟ್ಯಾಂಕ್ ನೀರು ಬಳಸಿ

• **ದಾಸರಹಳ್ಳಿ:** ನೆಲಗದರನಹಳ್ಳಿಯಲ್ಲಿ ಅನೇಕ ಕುಂದುಕೊರತೆಯನ್ನು ಬಗೆಹರಿಸಲು ಎಲ್ಲಾ ವಿಭಾಗದ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಗಳಿಗೆ ಸೂಕ್ತ ಕ್ರಮವಹಿಸಬೇಕು ಎಂದು ಶಾಸಕ ಮುನಿರಾಜು ಅಧಿಕಾರಿಗಳಿಗೆ ಸೂಚಿಸಿದರು.



ನೆಲಗದರನಹಳ್ಳಿಯ ನಿವಾಸಿಗಳು ನೀಡಿದ ದೂರಿನ ಮೇರೆಗೆ ಶಾಸಕ ಮುನಿರಾಜು ಅವರು ಸ್ಥಳ ಪರಿಶೀಲಿಸಿ, ಸಭೆ ನಡೆಸಿ ಮಾತನಾಡಿದ ಅವರು, ಸಭೆಯಲ್ಲಿ ನೂತನ ಮನೆ ಕಟ್ಟುವವರು ಟ್ಯಾಂಕರ್ ನೀರು ಹೊಡೆಸಿಕೊಳ್ಳಬೇಕು. ಕಾವೇರಿ ನೀರು ಬಳಸಬಾರದು, ಮನೆ ಕಟ್ಟುವವರು ಚರಂಡಿಯಲ್ಲಿ ಮಣ್ಣು ಸುರಿದು ಚರಂಡಿ ಮುಚ್ಚುತ್ತಾರೆ ಅಂತಹವರ ವಿರುದ್ಧ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಡಾವಣೆಯಲ್ಲಿನ ಸ್ಯಾನಿಟರಿ ಚೇಂಬರ್ ತುಂಬಿ ನೀರು ಪದೇ ಪದೇ ರಸ್ತೆಗೆ ಹರಿಯುತ್ತಿದ್ದ ಕಾರಣ ಮೂರ್ನಾಲ್ಕು ಚೇಂಬರಗಳನ್ನು ಪರಿಶೀಲಿಸಿ, ಕಸ ತೆಗೆಯುವಂತೆ ಸೂಚಿಸಿದರು. ಬೇಸಿಗೆ ಆದ್ದರಿಂದ ವಾಟರ್ ಮ್ಯಾನ್‌ಗಳು ನೀರನ್ನು ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು. ವಿದ್ಯುತ್ ದೀಪದ ಸಮಸ್ಯೆ ಕೂಡಲೇ ಬಗೆಹರಿಸುವಂತೆ ಸೂಚಿಸಿ, ಇನ್ನು ಮುಂತಾದ ಅನೇಕ ಸಮಸ್ಯೆಗಳನ್ನು ಬಗೆಹರಿಸಲು ಆಯಾ ವಿಭಾಗದ ಅಧಿಕಾರಿಗಳಿಗೆ ಶಾಸಕ ಎಸ್.ಮುನಿರಾಜು ಸೂಚಿಸಿದರು. ಈ ಬಡಾವಣೆಯ ರಸ್ತೆಗಳಿಗೆ ಡಾಂಬರೀಕರಣಕ್ಕೆ ಮುಂಚೆ ಚೇಂಬರ್‌ಗಳನ್ನು ಸರಿಪಡಿಸಿ ಎಂದು ಜಲ ಮಂಡಳಿ ಅಧಿಕಾರಿಗೆ ತಿಳಿಸಿದರು.

ಆಟೋ ಡಿಕ್ಕಿಗೆ ಮಹಿಳೆ ಸಾವು: ಚಾಲಕ ಬಂಧನ

• **ಬೆಂಗಳೂರು:** ಆಟೋ ರಿಕ್ಷಾ ಡಿಕ್ಕಿಯಾಗಿ ಗಾಯಗೊಂಡ ಮಹಿಳೆ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ ಬಳಿಕ ಹೆದರಿ ಆಕೆಯ ಮೃತದೇಹವನ್ನು ಕಸದ ರಾಶಿಯಲ್ಲಿ ಎಸೆದು ಪರಾರಿಯಾಗಿದ್ದ ಆಟೋ ಚಾಲಕನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆಂಪಮ್ಮ (50) ಎಂಬಾಕೆಯ ಸಾವಿಗೆ ಕಾರಣವಾಗಿದ್ದಲ್ಲದೇ, ಅಮಾನವೀಯವಾಗಿ ನಡೆದುಕೊಂಡಿದ್ದ ಆಟೋ ಚಾಲಕ ಬಸವೇಗೌಡ ಎಂಬಾತನನ್ನು ಬಂಧಿಸಲಾಗಿದೆ. ಕೆಂಗೇರಿ ಉಪನಗರದ ಮುಖ್ಯ ರಸ್ತೆಯಲ್ಲಿ ಭಾನುವಾರ ರಾತ್ರಿ ರಸ್ತೆ ದಾಟುವಾಗ ಅಪಘಾತ ಸಂಭವಿಸಿತ್ತು.

ಮಂಡ್ಯ ಮೂಲದ ಕೆಂಪಮ್ಮ ತಮ್ಮ ಕುಟುಂಬದ ಜತೆ ಕೆಂಗೇರಿ ಉಪನಗರದ ವಿನಾಯಕ ಲೇಔಟ್‌ನಲ್ಲಿ ವಾಸವಿದ್ದರು. ಭಾನುವಾರ ರಾತ್ರಿ ಕೆಲಸ ಮುಗಿಸಿ ಮನೆಗೆ ಮರಳಲು ರಸ್ತೆ ದಾಟುತ್ತಿದ್ದಾಗ ಅವರಿಗೆ ಆಟೋ ಡಿಕ್ಕಿಯಾಗಿತ್ತು. ಕೂಡಲೇ ಆರೋಪಿ ತನ್ನ ಆಟೋದಲ್ಲೇ ಗಾಯಾಳುವನ್ನು ಆಸ್ಪತ್ರೆಗೆ ಕರೆದೊಯ್ದಿದ್ದ. ಆದರೆ, ಮಾರ್ಗಮಧ್ಯದಲ್ಲಿ ಕೆಂಪಮ್ಮ ಮೃತಪಟ್ಟಿದ್ದರು. ಇದರಿಂದ ಭಯಗೊಂಡಿದ್ದ ಆರೋಪಿ ರಸ್ತೆ ಬದಿಯ ಕಸದ ರಾಶಿಗೆ ಮೃತದೇಹವನ್ನು ಎಸೆದು ಪರಾರಿಯಾಗಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮರುದಿನ ಕಸದ ರಾಶಿಯಲ್ಲಿ ಮೃತದೇಹ ಕಂಡ ಸ್ಥಳೀಯರು ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು. ಆರಂಭದಲ್ಲಿ ಮಹಿಳೆ ಹತ್ಯೆಯಾಗಿದೆ ಎಂಬ ಶಂಕೆ ವ್ಯಕ್ತವಾಗಿತ್ತು. ಆದರೆ, ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಸಾವಿನ ರಹಸ್ಯ ಬಯಲಾಗಿದೆ. ಇದು ಕೊಲೆಯಲ್ಲ, ಅಪಘಾತ ಎಂಬುದನ್ನು ಖಚಿತಪಡಿಸಿಕೊಂಡ ಪೊಲೀಸರು ಆರೋಪಿ ಚಾಲಕನನ್ನು ಪತ್ತೆಹಚ್ಚಿ ಬಂಧಿಸಿರುವುದಾಗಿ ತಿಳಿಸಿದ್ದಾರೆ.

ಕೆಂಪೇಗೌಡ ಪ್ರತಿಮೆ ಸುತ್ತ ಗಿಡಗಂಟಿ: ಎತ್ತರದಲ್ಲಿ ಪ್ರತಿಷ್ಠಾಪಿಸಲು ಆಗ್ರಹ

• **ಬೆಂಗಳೂರು:** ನಗರದ ಉತ್ತರ ಭಾಗದ ಹೆಬ್ಬಾಳ ಮೇಲ್ಸೇತುವೆಯ ಮಧ್ಯಭಾಗದಲ್ಲಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆಯು ಗಿಡಗಂಟೆಗಳಿಂದ ಅವ್ಯಕ್ತವಾಗಿದ್ದು, ಅದನ್ನು ಸೂಕ್ತ ಎತ್ತರದ ಜಾಗದಲ್ಲಿ ಮರುಸ್ಥಾಪಿಸಬೇಕೆಂದು ರಾಜ್ಯ ಒಕ್ಕಲಿಗರ ಮಹಾಸಭಾ ಆಗ್ರಹಿಸಿದೆ.

ಈ ಕುರಿತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಎನ್.ಎ. ಹ್ಯಾರಿಸ್‌ಗೆ ಮನವಿ ಸಲ್ಲಿಸಿದ್ದಾರೆ. ಹೆಬ್ಬಾಳ ಮೇಲ್ಸೇತುವೆ ಬೆಂಗಳೂರು ನಗರದ ಪ್ರಮುಖ ಕೊಂಡಿಯಾಗಿದ್ದು, ಇಲ್ಲಿರುವ ಕೆಂಪೇಗೌಡರ ಪ್ರತಿಮೆಯ ಸುತ್ತಲೂ ಮರಗಳು ಅತಿಯಾಗಿ ಬೆಳೆದು ನಿಂತಿವೆ. ಇದರಿಂದಾಗಿ ಅಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಪ್ರತಿಮೆಯ ದರ್ಶನವಾಗುತ್ತಿಲ್ಲ. ಅಲ್ಲದೆ, ಪ್ರತಿಮೆಯ ಆವರಣದಲ್ಲಿ ಕಸದ ರಾಶಿ ಸೇರಿಕೊಂಡಿದ್ದು, ಸ್ವಚ್ಛತೆಯ ಕೊರತೆ ಎದ್ದು ಕಾಣುತ್ತಿದೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಬಿಡಿಎ ಅಧ್ಯಕ್ಷರು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಪ್ರತಿಮೆಯ ಕೆಳಗಿನ ವೇದಿಕೆಯನ್ನು ಎತ್ತರಿಸಿ ಪುನರ್ ಸ್ಥಾಪಿಸಬೇಕು. ಇದೇ ಪ್ರದೇಶದಲ್ಲಿ ವಿಶೇಷ ಪ್ರಭೇದದ ಗಿಡಗಳನ್ನು ಬೆಳೆಸಿ ಸುಂದರವಾದ ಕಿರು ಉದ್ಯಾನವನ ನಿರ್ಮಿಸಲು ತುರ್ತು ಕ್ರಮ ಕೈಗೊಳ್ಳಬೇಕೆಂದು ಮನವಿಯಲ್ಲಿ ಆಗ್ರಹಿಸಲಾಗಿದೆ.



ಒಳಮೀಸಲು ಕುರಿತು ಸಂಪುಟದಲ್ಲಿ ಚರ್ಚೆ

• **ಬೆಂಗಳೂರು:** ಒಳಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಸಂಬಂಧಿಸಿದ ಎಲ್ಲಾ ಒಳಪಂಗಡಗಳ ಹಿತಾಸಕ್ತಿಯನ್ನೂ ಪರಿಗಣನೆಗೆ ತೆಗೆದುಕೊಳ್ಳಲಿದೆ. ಸಂಪುಟ ಸಭೆಯಲ್ಲಿ ಈ ವಿಚಾರವಾಗಿ ಪ್ರತಿಯೊಂದು ಸಾಧಕಬಾಧಕವನ್ನು ವಿಸ್ತೃತವಾಗಿ ಚರ್ಚಿಸಲಾಗುವುದು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.



ಒಳಮೀಸಲಾತಿ ಇಲ್ಲದ ಹಳೆಯ ಮೀಸಲಾತಿ ಪದ್ಧತಿಯನ್ನೇ ಮುಂದುವರಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟವು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟ ನಡೆಸುತ್ತಿದ್ದು, ಬುಧವಾರ ಅವರು ಅದರ ಮನವಿ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರವು ಬುದ್ಧ, ಬಸವ ಮತ್ತು ಅಂಬೇಡ್ಕರ್ ತತ್ತ್ವಗಳಲ್ಲಿ ನಂಬಿಕೆಯಿಟ್ಟುಕೊಂಡಿದೆ. ಹೀಗಾಗಿ ನಾವು ಯಾವುದೇ ಸಮುದಾಯಕ್ಕೂ ಅನ್ಯಾಯವಾಗಲು ಬಿಡುವುದಿಲ್ಲ. ಆದರೆ ಯಾವುದೇ ಉಪಕ್ರಮವನ್ನು ಜಾರಿಗೆ ತರುವ ಮೊದಲು ಎಲ್ಲ ಮಗ್ಗುಲುಗಳಿಂದಲೂ ಚರ್ಚಿಸಬೇಕಾಗುತ್ತದೆ ಎಂದು ಅವರು ಪ್ರತಿಭಟನಾನಿರತರಿಗೆ ಆಶ್ವಾಸನೆ ನೀಡಿದ್ದಾರೆ.

ಧರಣಿನಿರತರ ಪರವಾಗಿ ಜ್ಞಾನಪ್ರಕಾಶ ಸ್ವಾಮೀಜಿ, ಸಮುದಾಯದ ಹಲವು ಸ್ವಾಮೀಜಿಗಳು ಮತ್ತು ಮುಖಂಡರು ಇದ್ದರು. ಸಚಿವರುಗಳ ಜತೆಯಲ್ಲಿ ಬಿಬಿಎಂಪಿ ಮಾಜಿ ಮೇಯರ್ ಸಂಪತ್ ರಾಜ್ ಇದ್ದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ್ ವಿರುದ್ಧ ಕೇಸ್ ರದ್ದು

• **ಬೆಂಗಳೂರು:** ದಕ್ಷಿಣ ತಾಲೂಕಿನ ಉತ್ತರಹಳ್ಳಿ ಹೋಬಳಿಯ ಕಗ್ಗಲೀಪುರ ಗ್ರಾಮದಲ್ಲಿ ಸರ್ಕಾರಿ ಜಮೀನು ಒತ್ತುವರಿ ಮಾಡಿದ ಆರೋಪದ ಸಂಬಂಧ ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ಹೈ ಕೋರ್ಟ್ ಬುಧವಾರ ರದ್ದುಪಡಿಸಿದೆ.



ಬೆಂಗಳೂರು ಮೆಟ್ರೊಪಾಲಿಟನ್ ಟಾಸ್ಕ್ ಫೋರ್ಸ್ (ಬಿಎಂಟಿಎಫ್) ದಾಖಲಿಸಿರುವ ಎಫ್‌ಐಆರ್ ಪ್ರಶ್ನಿಸಿ ರವಿಶಂಕರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ. ರವಿಶಂಕರ್ ವಿರುದ್ಧ ಪ್ರಕರಣ ರದ್ದುಪಡಿಸಲಾಗಿದೆ. ಆದೇಶದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯ ಬಿಎನ್‌ಎಸ್‌ಎಸ್ 528ರ ಅಡಿ ಅರ್ಜಿದಾರರ ವಿರುದ್ಧದ ಪ್ರಕರಣವನ್ನು ಪರಿಗಣಿಸುವುದಕ್ಕೆ ಮಾತ್ರ ಸೀಮಿತವಾಗಿದೆ. ಯಾವುದೇ ಸಕ್ಷಮ ನ್ಯಾಯಾಲಯದ ಮುಂದೆ ಬಾಕಿ ಇರುವ ಯಾವುದೇ ಆರೋಪಿಗೆ ಆದೇಶ ಅನ್ವಯಿಸುವುದಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

ಅರ್ಜಿದಾರರ ಪರ ಹಿರಿಯ ವಕೀಲ ಎಸ್. ಶ್ರೀರಂಗ ಮತ್ತು ವಕೀಲ ಪಿ.ಪ್ರಸನ್ನ ಕುಮಾರ್ ಅವರು ಒತ್ತುವರಿಗೆ ಸಂಬಂಧಿಸಿದ ವರದಿಯಲ್ಲಿ ಎಲ್ಲಿಯೂ ಸಹ ರವಿಶಂಕರ್ ಯಾವುದೇ ಆಸ್ತಿ ಹೊಂದಿರುವುದು ಅಥವಾ ಯಾವುದೇ ಭೂಮಿಯನ್ನು ಅತಿಕ್ರಮಿಸಿರುವುದನ್ನು ತೋರಿಸುವುದಿಲ್ಲ, ಖಾಸಗಿ ರಿಯಲ್ ಎಸ್ಟೇಟ್ ಕಂಪನಿ ಸೇರಿ ಕೆಲವರ ವಿರುದ್ಧ ಒತ್ತುವರಿ ಮಾಡಿರುವ ಆರೋಪವಿದೆ.

ಆದರೆ, ಈ ಯಾವುದೇ ಪ್ರದೇಶ ರವಿಶಂಕರ್ ಆಶ್ರಮದ ಕಾಂಪೌಂಡ್ ಒಳಗೆ ಬರುವುದಿಲ್ಲ ಎಂದು ಪೀಠಕ್ಕೆ ವಿವರಿಸಿದ್ದರು. ಸರ್ಕಾರದ ಪರ ವಾದಿಸಿದ ಹೆಚ್ಚುವರಿ ಸರ್ಕಾರಿ ಅಭಿಯೋಜಕ ಬಿ.ಎ. ಬೆಳ್ಳಿಯಪ್ಪ ಅವರು ರವಿಶಂಕರ್ ವಿರುದ್ಧ ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಆರೋಪಗಳಿದ್ದು, ಈ ಹಂತದಲ್ಲಿ ತನಿಖೆಯನ್ನು ತಡೆಯಬಾರದು. ತನಿಖೆ ಮುಂದುವರಿಸಲು ಅನುಮತಿ ನೀಡಬೇಕು ಎಂದು ಕೋರಿದ್ದರು.

ಕಾಣೆಯಾಗಿದ್ದ ಬುದ್ಧಿಮಾಂದ್ಯನ ಪತ್ತೆ ಹಚ್ಚಿದ ಪೊಲೀಸ್: ಮೆಚ್ಚುಗೆ

• **ಬೆಂಗಳೂರು:** ಗೋವಿಂದಪುರ ಪೊಲೀಸ್ ಠಾಣಾ ವ್ಯಾಪ್ತಿಯ ವೀರಣ್ಣಪಾಳ್ಯದಲ್ಲಿ ಕಾಣೆಯಾಗಿದ್ದ ಬುದ್ಧಿಮಾಂದ್ಯತೆಯುಳ್ಳ 82 ವರ್ಷದ ವೃದ್ಧರನ್ನು ಪೊಲೀಸರು 25 ದಿನಗಳ ನಿರಂತರ ಕಾರ್ಯಾಚರಣೆಯ ನಂತರ ಯಶಸ್ವಿಯಾಗಿ ಪತ್ತೆಹಚ್ಚಿ ಕುಟುಂಬದವರ ವಶಕ್ಕೆ ಒಪ್ಪಿಸಿದ್ದಾರೆ.

ಕಳೆದ ಫೆ.19ರಂದು ಬೆಳಗ್ಗೆ 11 ಗಂಟೆಯ ಸುಮಾರಿಗೆ ವೃದ್ಧರೊಬ್ಬರು ಮನೆಯಿಂದ ಹೊರಗೆ ಹೋದವರು ವಾಪಸ್ ಬಾರದೆ ಕಾಣೆಯಾಗಿದ್ದರು. ಈ ಸಂಬಂಧ ಅವರ ಪುತ್ರ ಗೋವಿಂದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣದ ಗಾಂಭೀರ್ಯವನ್ನು ಅರಿತ ಪೊಲೀಸರು ತಕ್ಷಣವೇ ವಿಶೇಷ ತಂಡವನ್ನು ರಚಿಸಿ ತನಿಖೆ ಆರಂಭಿಸಿದ್ದರು.

ತನಿಖೆಯ ಭಾಗವಾಗಿ ನಗರದಾದ್ಯಂತ ಎಲ್ಲಾ ಪೊಲೀಸ್ ಠಾಣೆಗಳಿಗೆ ಮಾಹಿತಿ ರವಾನಿಸಲಾಗಿತ್ತು. ಅಲ್ಲದೆ, ಸಾಮಾಜಿಕ ಜಾಲತಾಣಗಳು, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಹಾಗೂ ಜನನಿಬಿಡ ಪ್ರದೇಶಗಳಲ್ಲಿ ವೃದ್ಧರ ಭಾವಚಿತ್ರವಿರುವ ಭಿತ್ತಿಪತ್ರಗಳನ್ನು ಪ್ರಕಟಿಸಿ ಸಾರ್ವಜನಿಕರ ನೆರವು ಕೋರಲಾಗಿತ್ತು. ತನಿಖಾ ತಂಡವು ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸುವುದರ ಜತೆಗೆ ನಗರದ ವಿವಿಧ ಆಸ್ಪತ್ರೆಗಳು ಮತ್ತು ನಿರಾಶ್ರಿತರ ಕೇಂದ್ರಗಳನ್ನು ಸಂಪರ್ಕಿಸಿ ಮಾಹಿತಿ ಕಲೆಹಾಕುವಲ್ಲಿ ಯಶಸ್ವಿಯಾಗಿದೆ.

ಪೂರ್ವ ವಿಭಾಗದ ಡಿಸಿಪಿ ಡಾ. ವಿಕ್ರಮ ಅಮಟೆ ಹಾಗೂ ಕೆ.ಜಿ ಹಳ್ಳಿ ಉಪವಿಭಾಗದ ಎಸಿಪಿ ಶ್ರೀನಿವಾಸ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ. ಗೋವಿಂದಪುರ ಪೊಲೀಸ್ ಇನ್ಸ್‌ಪೆಕ್ಟರ್ ಕಿರಣ್ ಪಿ.ಬಿ ಅವರ ನೇತೃತ್ವದ ತಂಡ ಯಶಸ್ವಿಯಾಗಿದೆ.

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ

• **ಬೆಂಗಳೂರು:** ಕರ್ನಾಟಕ ಸಾಹಿತ್ಯ ಅಕಾಡೆಮಿಯು 2025ನೇ ವರ್ಷದ ಗೌರವ ಮತ್ತು ಸಾಹಿತ್ಯಶ್ರೀ ಹಾಗೂ 2024ನೇ ವರ್ಷದ ಪುಸ್ತಕ ಮತ್ತು ದತ್ತಿ ಬಹುಮಾನ ಪ್ರಶಸ್ತಿ ಪಟ್ಟಿ ಘೋಷಣೆಯ ಮಾಡಿದೆ.



ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಅಮೂಲ್ಯವಾದ ಸೇವೆಯನ್ನು ಪರಿಗಣಿಸಿ ಬೆಂಗಳೂರಿನ ಪ್ರೊ.ಶಿವರಾಮಯ್ಯ, ಚಿತ್ರದುರ್ಗದ ಚಂದ್ರಶೇಖರ ತಾಳ್ಯ, ಬೆಳಗಾವಿಯ ಡಾ. ಚಂದ್ರಕಾಂತ ಪೋಕಳೆ, ಬಳ್ಳಾರಿಯ ಡಾ.ವಸುಂಧರಾ ಭೂಪತಿ, ಮೈಸೂರಿನ ಡಾ.ಎಸ್. ತುಕಾರಾಂ ಅವರಿಗೆ 2025ನೇ ವರ್ಷದ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಪ್ರಶಸ್ತಿಯು 50 ಸಾವಿರ ನಗದು ಹಾಗೂ ಪ್ರಶಸ್ತಿಫಲಕವನ್ನು ಒಳಗೊಂಡಿರುತ್ತದೆ.

2025ನೇ ವರ್ಷದ ಸಾಹಿತ್ಯಶ್ರೀ ಪ್ರಶಸ್ತಿ ಪುರಸ್ಕೃತರಾದ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಅಮೂಲ್ಯವಾದ ಸೇವೆಯನ್ನು ಪರಿಗಣಿಸಿ 50 ರಿಂದ 60ರ ವಯೋಮಾನದ ಬಳ್ಳಾರಿಯ ಡಾ. ನಿಷ್ಠಿ ರುದ್ರಪ್ಪ, ಬಾಗಲಕೋಟೆಯ ಡಾ. ವೀರೇಶ ಬಡಿಗೇರ, ತುಮಕೂರಿನ ಡಾ. ಸಿ.ಜಿ.ಲಕ್ಷ್ಮೀಪತಿ, ಕಂಠಾಡಿಗ ನಾರಾಯಣ, ರೂಪಾಹಾಸನ, ಜಯರಾಮ್ ರಾಯಪುರ, ಕುಮುದಾ ಸುಶೀಲ್, ತುಮಕೂರಿನ ಡಾ.ಓ.ನಾಗರಾಜು, ಬಿ.ಎಂ. ಬಷೀರ್ ಹಾಗೂ ಡಾ. ಜ್ಯೋತಿ ಸೇರಿದಂತೆ 10 ಮಂದಿ ಸಾಹಿತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ 025ನೇ ವರ್ಷದ ಸಾಹಿತ್ಯಶ್ರೀ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಪುಸ್ತಕ ಬಹುಮಾನ: 2024ರಲ್ಲಿ ಪ್ರಕಟವಾದ ವಿವಿಧ 17 ಸಾಹಿತ್ಯ ಪ್ರಕಾರದ ಕೃತಿಗಳಿಗೆ ವಿಮರ್ಶಕರ ಅಭಿಪ್ರಾಯ ಆಧರಿಸಿ ವರ್ಷದ ಅತ್ಯುತ್ತಮ ಕೃತಿಗಳೆಂದು ಪರಿಗಣಿಸಿ ಕೃತಿ ಆಯ್ಕೆ ಮಾಡಲಾಗಿದೆ. ಭಾರತೀದೇವಿ ಪಿ., ಶಶಿ ತರೀಕೆರೆ, ವೈ.ಎಸ್. ಹರಗಿ, ಅನಿಲ್ ಗುನ್ನಾಪೂರ, ಡಾ. ಚಂದ್ರು ಕಾಳೇನಹಳ್ಳಿ, ಡಾ.ಶಿವರಾಜ ಬ್ಯಾಡರಹಳ್ಳಿ, ಮಲ್ಲಿಕಾರ್ಜುನ ಹುಲಗಬಾಳಿ, ಎಂ.ಜಿ. ಜೋಷಿ, ಮಹಾಂತೇಶ ಪಾಟೀಲ, ರಾಜಶೇಖರ ಕುಕ್ಕುಂದಾ, ಶ್ರೀಧರಕುಮಾರಿ, ಡಾ.ಎಸ್.ಎಸ್.ಚಿಕ್ಕಮಾದು, ಡಾ. ಹಂಪನಹಳ್ಳಿ ತಿಮ್ಮೇಗೌಡ, ದು. ಸರಸ್ವತಿ, ಡಾ. ಹುಲಿಕುಂಟೆ ಮೂರ್ತಿ, ಲಕ್ಷ್ಮಣ ಶರೆಗಾರ, ಡಾ. ಪ್ರದೀಪ್ ಕೆಂಜಿಗೆ ಅವರ ಕೃತಿ ಆಯ್ಕೆ ಮಾಡಲಾಗಿದೆ.

ಇಂದು ನಗರದಲ್ಲಿ...

- ವಿದ್ಯಾರ್ಥಿ ಸಾಹಿತ್ಯ ಸಂಭ್ರಮ 2026, ಸ್ಥಳ: ಜಯನಗರದ ಯುವಪಥ. 10.00
- ಶ್ರೀರಾಮ ಸೇವಾ ಮಂಡಳಿಯಿಂದ 70ನೇ ಶ್ರೀರಾಮೋತ್ಸವಕ್ಕೆ ಚಾಲನೆ, ಸ್ಥಳ: ಶ್ರೀರಾಮ ಮಂದಿರ ಆಟದ ಮೈದಾನ, ರಾಜಾಜಿನಗರ, 11.00
- ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ ತಿಂಗಳ ಉಪನ್ಯಾಸ ಕಾರ್ಯಕ್ರಮ. ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ ಆವರಣ ಮಲ್ಲತ್ತಹಳ್ಳಿ, ಕಲಾಗ್ರಾಮ, 5.00

ಕಿರುಸುದ್ದಿ

ಒಳಾಂಗಣ ಅಥ್ಲೆಟಿಕ್: ಸಲೋನಿ ದಾಖಲೆ

• **ಹೊಸದಿಲ್ಲಿ:** ಉತ್ತರ ಪ್ರದೇಶದ ಸಲೋನಿ ಕುಮಾರಿ ಭುವನೇಶ್ವರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮಹಿಳೆಯರ 400 ಮೀಟರ್ ಇಂಡೋರ್ ಸ್ಪರ್ಧೆಯಲ್ಲಿ ಹೊಸ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದಾರೆ. 21 ವರ್ಷದ ಸಲೋನಿ ಕುಮಾರಿ 53.73 ಸೆಕೆಂಡ್‌ನಲ್ಲಿ ಗುರಿ ತಲುಪಿ, ಪಿಂಕಿ ಪ್ರಮಾಣಿಕ್ ಅವರ ಹೆಸರಿನಲ್ಲಿದ್ದ 53.89 ಸೆಕೆಂಡ್ ಹಳೆಯ ದಾಖಲೆಯನ್ನು ಮುರಿದಿದ್ದಾರೆ. ಔಟ್‌ಡೋರ್ 400 ಮೀಟರ್ ಸ್ಪರ್ಧೆಯಲ್ಲಿ ಸಲೋನಿ ಅವರ ವೈಯಕ್ತಿಕ ಅತ್ಯುತ್ತಮ ಸಮಯ 57.16 ಸೆಕೆಂಡ್ ಆಗಿದ್ದು, 2025ರ ಜುಲೈನಲ್ಲಿ ಸಂಗೂರುನಲ್ಲಿ ನಡೆದ ಇಂಡಿಯನ್ ಓಪನ್ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಈ ಸಾಧನೆ ಮಾಡಿದ್ದಾರೆ. ಇದೇ ವೇಳೆ ಪುರುಷರ ಅಂಡರ್-20 ಹೈಜಂಪ್ ವಿಭಾಗದಲ್ಲಿ ರಾಜಸ್ಥಾನದ ಬಸಂತ್ 2.16 ಮೀಟರ್ ಜಿಗಿದು ವಿಶ್ವ ಅಂಡರ್-20 ಚಾಂಪಿಯನ್‌ಶಿಪ್‌ಗೆ ಅರ್ಹತಾ ಮಾನದಂಡವನ್ನು ತಲುಪಿದ್ದಾರೆ.

ವಿಶ್ವಗೆಲುವಿನಿಂದ ಹೆಚ್ಚಿದ ವಿಶ್ವಾಸ: ಕೌರ್

• **ಮುಂಬೈ:** ಕಳೆದ ವರ್ಷ ದೇಶದಲ್ಲಿ ಗೆದ್ದ ಏಕದಿನ ವಿಶ್ವಕಪ್ ಪ್ರಶಸ್ತಿ ತಂಡಕ್ಕೆ ಆತ್ಮವಿಶ್ವಾಸ ಹೆಚ್ಚಿಸಿದೆ ಎಂದು ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ತಿಳಿಸಿದ್ದಾರೆ. ನವೀ ಮುಂಬೈನಲ್ಲಿ ನಡೆದ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಭಾರತ ತನ್ನ ಮೊದಲ ಐಸಿಸಿ ಪ್ರಶಸ್ತಿಯನ್ನು ಕಳೆದ ನವೆಂಬರ್‌ನಲ್ಲಿ ಗೆದ್ದಿತ್ತು. ಈ ಜಯದಿಂದ ತಂಡಕ್ಕೆ ಮತ್ತಷ್ಟು ಉತ್ಸಾಹ ಸಿಕ್ಕಿದ್ದು, ಜೂನ್ 12ರಿಂದ ಜುಲೈ 5ರವರೆಗೆ ಯುನೈಟೆಡ್ ಕಿಂಗ್ಡಮ್‌ನಲ್ಲಿ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಮತ್ತೊಂದು ಪ್ರಶಸ್ತಿ ಗೆಲ್ಲುವ ವಿಶ್ವಾಸ ವ್ಯಕ್ತವಾಗಿದೆ. ದ್ವಾರಕಾದ ಓಮ್ಯಾಕ್ಸ್ ಕ್ರೀಡಾಂಗಣದಲ್ಲಿ ತಮ್ಮ ಹೆಸರಿನ ಸ್ಟ್ಯಾಂಡ್ ನಾಮಕರಣ ಸಮಾರಂಭದ ವೇಳೆ ಹರ್ಮನ್‌ಪ್ರೀತ್ ಮಾತನಾಡಿ, ಯಾವ ಕ್ಷೇತ್ರದಲ್ಲಾದರೂ ಗುರುತಿಸಿಕೊಳ್ಳಲು ವಿಶೇಷ ಸಾಧನೆ ಅಗತ್ಯ. ಪ್ರಶಸ್ತಿ ಗೆದ್ದಾಗ ಮಾತ್ರ ನಿಜವಾದ ಮಾನ್ಯತೆ ಸಿಗುತ್ತದೆ. ಇಲ್ಲದಿದ್ದರೆ ನಮ್ಮ ಪರಿಶ್ರಮ ವ್ಯರ್ಥವಾಗಿದೆಯೆನ್ನಿಸುತ್ತದೆ ಎಂದು ಹೇಳಿದರು. ನಮ್ಮ ತಂಡ ಮಾತ್ರವಲ್ಲ, ನಮ್ಮ ಹಿಂದಿನ ಮಹಿಳಾ ಕ್ರಿಕೆಟಿಗರೂ ಸಾಕಷ್ಟು ತ್ಯಾಗ ಮಾಡಿದ್ದಾರೆ. ಕೆಲವೊಮ್ಮೆ ತಮ್ಮ ಖರ್ಚಿನಿಂದಲೇ ಆಡಿದ್ದಾರೆ. ಆದ್ದರಿಂದ ಪ್ರಶಸ್ತಿ ಗೆಲ್ಲುವುದು ಬಹಳ ಮುಖ್ಯವಾಗಿತ್ತು. ಈಗ ನಾವು ಪಡೆಯುತ್ತಿರುವ ಅಭಿಮಾನಿಗಳ ಹಾಗೂ ಮಾಧ್ಯಮದ ಪ್ರತಿಕ್ರಿಯೆ ತುಂಬಾ ದೊಡ್ಡದು ಎಂದು ಅವರು ಹೇಳಿದ್ದಾರೆ.

ಆಫ್ರಿಕಾ ಸರಣಿಗೆ ಭಾರತ ಮಹಿಳಾ ತಂಡ

• **ಮುಂಬೈ:** ಐದು ಪಂದ್ಯಗಳ ದ.ಆಫ್ರಿಕಾ ಟಿ20 ಸರಣಿಗಾಗಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದಲ್ಲಿ 15 ಆಟಗಾರ್ತಿಯರ ತಂಡವನ್ನು ಬಿಸಿಸಿಐ ಪ್ರಕಟಿಸಿದೆ. ಕಾಶ್ವಿ ಗೌತಮ್ ಮತ್ತು ಅನುಷ್ಕಾ ಶರ್ಮಾ ಮೊದಲ ಬಾರಿಗೆ ಅವಕಾಶ ಪಡೆದಿದ್ದಾರೆ. ಸರಣಿಯು ಏಪ್ರಿಲ್ 17 ರಿಂದ 27 ರವರೆಗೆ ನಡೆಯಲಿದೆ.

ಭಾರತ ಮಹಿಳಾ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ, ಶೆಫಾಲಿ ವರ್ಮಾ, ಜೆಮಿಮಾ ರಾಡ್ರಿಗ್ಸ್, ದೀಪ್ತಿ ಶರ್ಮಾ, ರಿಚಾ ಘೋಷ್, ಅರುಂಧತಿ ರೆಡ್ಡಿ, ರೇಣುಕಾ ಠಾಕೂರ್, ಕ್ರಾಂತಿ ಗೌಡ್, ಶ್ರೀ ಚರಣಿ, ಶ್ರೇಯಾಂಕಾ ಪಾಟೀಲ್, ಕಾಶ್ವಿ ಗೌತಮ್, ಭಾರತಿ ಫುಲ್ಮಾಲಿ, ಉಮಾ ಛೆಟ್ರಿ, ಅನುಷ್ಕಾ ಶರ್ಮಾ.

ಪಂದ್ಯಗಳು ಯಾವಾಗ?: ಭಾರತೀಯ ಮಹಿಳಾ ಕ್ರಿಕೆಟ್ ತಂಡದ ದಕ್ಷಿಣ ಆಫ್ರಿಕಾ ಪ್ರವಾಸ ಏಪ್ರಿಲ್ 17 ರಂದು ಪ್ರಾರಂಭವಾಗಲಿದೆ. ಪ್ರವಾಸವು ಐದು ಪಂದ್ಯಗಳ ಟಿ20 ಸರಣಿಯನ್ನು ಒಳಗೊಂಡಿದ್ದು, ಅಂತಿಮ ಪಂದ್ಯ ಏಪ್ರಿಲ್ 27 ರಂದು ನಡೆಯಲಿದೆ. ಮೊದಲ ಎರಡು ಪಂದ್ಯಗಳು ಏಪ್ರಿಲ್ 17 ಮತ್ತು 19 ರಂದು ಡರ್ಬನ್‌ನಲ್ಲಿ ನಡೆಯಲಿವೆ. ಮುಂದಿನ ಎರಡು ಪಂದ್ಯಗಳು ಏಪ್ರಿಲ್ 22 ಮತ್ತು 25 ರಂದು ಜೋಹಾನ್ಸ್‌ಬರ್ಗ್‌ನಲ್ಲಿ ನಡೆಯಲಿವೆ. ಸರಣಿಯ ಅಂತಿಮ ಪಂದ್ಯ ಏಪ್ರಿಲ್ 27 ರಂದು ಬೆನೋನಿಯಲ್ಲಿ ನಡೆಯಲಿದೆ.

ಏ.5ಕ್ಕೆ ಕ್ರೀಡಾಭಾರತಿ ಚೆಸ್ ಕೂಟ

• **ಬೆಂಗಳೂರು:** ಕ್ರೀಡಾ ಭಾರತಿ ವಾರ್ಷಿಕ ಸಮಾರೋಪ ಸಮಾರಂಭ ಬೆನ್ನಲ್ಲೇ ಚೆಸ್ ಪಂದ್ಯಾವಳಿ ಆಯೋಜನೆ ಮಾಡಿದ್ದು ಕೂಟ ಏ.5ರಂದು ನಡೆಯಲಿದೆ. ನಗದು ಬಹುಮಾನದ ಪಂದ್ಯಾವಳಿಯು ಯಲಹಂಕದ ಮಂಗಳ ವಿದ್ಯಾಮಂದಿರದಲ್ಲಿ ನಡೆಯಲಿದ್ದು, ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳಬಹುದೆಂದು ಆಯೋಜಕರು ತಿಳಿಸಿದ್ದಾರೆ. ಪಂದ್ಯಾವಳಿಯಲ್ಲಿ ಮೂರು ವಿಭಾಗಗಳಿರುತ್ತವೆ. ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಬೇರೆ ವಿಭಾಗ, ಮಧ್ಯಮ-ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಬೇರೆ ವಿಭಾಗ ಮತ್ತು ಮುಕ್ತ ವಿಭಾಗವೂ ಇರಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ವಿಜೇತರಿಗೆ ನಗದು ಬಹುಮಾನಗಳೊಂದಿಗೆ ಟ್ರೋಫಿಗಳನ್ನೂ ನೀಡಲಾಗುವುದು.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ವೇದಿಕೆ ಸಜ್ಜಾಗಿದೆ. ಎಲ್ಲಾ ತಂಡಗಳು ಸಿದ್ಧತೆಗಳೊಂದಿಗೆ ಪಂದ್ಯಾವಳಿಗಿಳಿಯಲು ಅಣಿಯಾಗಿವೆ. ಈ ನಡುವೆ ಮುಂಬೈನಲ್ಲಿ ಬುಧವಾರದಂದು ನಾಯಕರ ಸಮಾಗಮ ಮತ್ತು ಫೋಟೋಶೂಟ್ ಕಾರ್ಯಕ್ರಮ ನಡೆಯಿತು. ಬುಧವಾರದಂದು ನಾಯಕನಿಲ್ಲದಿದ್ದರೂ ಅಭ್ಯಾಸಕ್ಕೆ ಯಾವುದೇ ಅಡೆತಡೆ ಇಲ್ಲದಂತೆ ಎಲ್ಲಾ ತಂಡಗಳು ಅಭ್ಯಾಸ ನಡೆಸಿದವು. ಗಾಯದ ಹಿನ್ನಡೆಯ ಕಹಿ ತಂಡಗಳೊಂದಿಗಿದ್ದರೆ ಯುವ ಆಟಗಾರರ ಭರವಸೆ ಬಲವಾಗಿದೆ. ಇದೇ ಮೊದಲ ಬಾರಿಗೆ ಹತ್ತೂ ತಂಡದ ನಾಯಕರು ಭಾರತೀಯರೇ ಆಗಿದ್ದರು. ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮ್ಮಿನ್ಸ್ ಇದ್ದರೂ ಅವರ ಅಲಭ್ಯತೆಯಿಂದಾಗಿ ಇಶಾನ್ ಕಿಶನ್ ಅವರು ತಾತ್ಕಾಲಿಕ ನಾಯಕರಾಗಿ ನಾಯಕರ ಸಮಾಗಮದಲ್ಲಿ ಕಾಣಿಸಿಕೊಂಡಿದ್ದರು.

ಬಹು ನಿರೀಕ್ಷಿತ ಐಪಿಎಲ್‌ಗೆ ಅಖಾಡ ಸಿದ್ಧ

ಕಳೆದ ಎರಡು ವಾರದ ಹಿಂದೆ ಟಿ20 ವಿಶ್ವಕಪ್ ಪಂದ್ಯಾವಳಿ ನಡೆದಿತ್ತು. ಎಲ್ಲಾ ತಂಡಗಳಲ್ಲಿ ಒಬ್ಬರಾದರೂ ವಿಶ್ವಕಪ್‌ನಲ್ಲಿ ಮಿಂಚಿದ ಆಟಗಾರರಿದ್ದಾರೆ. ಎಲ್ಲರಿಗೂ ಟಿ20 ಪಂದ್ಯಾವಳಿಯ ಆವೇಗವಿರುವುದು ಈ ಬಾರಿಯ ವಿಶೇಷ. ಹೀಗಿರುವಾಗ ಆಟಗಾರರ ಅಲಭ್ಯತೆಗಾಗಿ ಹೊಸ ಆಟಗಾರರನ್ನೂ ತಂಡಗಳು ಬರಮಾಡಿಕೊಂಡಿವೆ. ವಿವಿಧ ಫ್ರಾಂಚೈಸಿಗಳು ಹಾಗೇ ಬಟ್ಟಿವೆ. ಹಾಗಾದರೆ ಪಂದ್ಯಾವಳಿಗಾಗಿ ತಂಡಗಳ ಸಿದ್ಧತೆ ಹೇಗಿವೆ?



ಆರ್‌ಸಿಬಿ

ಹಾಲಿ ಚಾಂಪಿಯನ್ ಆಗಿ ಕಣಕ್ಕಿಳಿಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಫಿಲ್ ಸಾಲ್ಟ್, ಟಿಮ್ ಡೇವಿಡ್, ವಿರಾಟ್ ಕೊಹ್ಲಿ ಅಂತಹ ಪ್ರಮುಖ ಆಟಗಾರರೊಂದಿಗೆ ಮೈದಾನಕ್ಕಿಳಿಯಲಿದೆ. ಪಾಟಿದಾರ್ ಮತ್ತು ಜೋಕಬ್ ಬ್ಯಾಥೆಲ್ ಈ ಬಾರಿ ಗಮನ ಸೆಳೆಯಲು ಸಿದ್ಧರಾಗಿದ್ದಾರೆ. ಹರಾಜಿನಲ್ಲಿ ಹೆಚ್ಚಿನ ಆಟಗಾರರನ್ನು ಆಯ್ಕೆ ಮಾಡಿಕೊಂಡಿರುವ ತಂಡವು, ಲಿವಿಂಗ್‌ಸ್ಟೋನ್ ಅಂಥ ಆಟಗಾರರನ್ನು ಬಿಡುಗಡೆ ಮಾಡಿತ್ತು. ಸಮತೋಲಿತ ಬ್ಯಾಟಿಂಗ್ ಹೊಂದಿದ್ದು, ಭುವನೇಶ್ವರ್ ಕುಮಾರ್, ಮಂಗೇಶ್ ಯಾದವ್ ಅಂತಹ ಬೌಲರ್‌ಗಳನ್ನು ಹೊಂದಿದೆ. ಸ್ಪಿನ್ ವಿಭಾಗದಲ್ಲಿ ಸುಯಶ್, ಕೃಣಾಲ್ ಅಂಥವರಿದ್ದಾರೆ. ಜೋಶ್ ಹ್ಯಾಜೆಲ್‌ವುಡ್ ತಾತ್ಕಾಲಿಕವಾಗಿ, ಯಶ್ ದಯಾಳ್ ಪೂರ್ಣವಾಗಿ ಹೊರಬಿದ್ದಿದ್ದಾರೆ.

ಅಲಭ್ಯ ಆಟಗಾರರು: ಜೋಶ್ ಹ್ಯಾಜೆಲ್‌ವುಡ್, ಯಶ್ ದಯಾಳ್

ಚೆನ್ನೈ

ರುತುರಾಜ್ ಗಾಯಕ್ವಾಡ್ ಅವರ ನೇತೃತ್ವದಲ್ಲಿ ಆಡುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಈ ಬಾರಿ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಹೊಂದಿದೆ. ಸಂಜು ಸ್ಯಾಮ್ಸನ್, ಶಿವಂ ದುಬೆ ಭರ್ಜರಿ ಲಯದಲ್ಲಿರುವುದು ಭರವಸೆ ಹೆಚ್ಚಿಸಿದೆ. ಡೆವಾಲ್ಡ್ ಬ್ರೆವಿಸ್ ಹಾಗೂ ಆಯುಷ್ ಮಾತ್ರೆ ಅವರನ್ನು ತಂಡದಲ್ಲಿದ್ದು ಸ್ಫೋಟಕ ಬ್ಯಾಟಿಂಗ್ ಮಾಡುವ ಭರವಸೆಯಿದೆ. ನಾಥನ್ ಎಲ್ಲಿಸ್ ತಂಡದಲ್ಲಿಲ್ಲ, ಧೋನಿ ಅವರ ಮಾರ್ಗದರ್ಶನ ತಂಡದ ಪ್ರಮುಖ ಬಲವಾಗಿರಲಿದೆ. ಹರಾಜಿನಲ್ಲಿ ದೇಶಿ ಯುವ ಆಟಗಾರರ ಮೇಲೆ ಹೆಚ್ಚಿನ ಗಮನ ಹರಿಸಿರುವ ಸಿಎಸ್‌ಕೆ ಯುವ ಬಲದೊಂದಿಗೆ ಮೈದಾನಕ್ಕಿಳಿಯಲಿದೆ.

ಅಲಭ್ಯ: ನಾಥನ್ ಎಲ್ಲಿಸ್, ಬದಲಿ ಆಟಗಾರ: ಸ್ಪೆನ್ಸರ್ ಜಾನ್ಸನ್

ಮುಂಬೈ

ಪಾಂಡ್ಯ ನೇತೃತ್ವದಲ್ಲಿ ಆಡಲಿರುವ ಮುಂಬೈ ಬಲಿಷ್ಠ ಪಡೆಯನ್ನು ಹೊಂದಿದೆ. ಸೂರ್ಯಕುಮಾರ್, ರಿಕೆಲ್ಟನ್, ತಿಲಕ್ ವರ್ಮಾ ಅಂತಹ ಬ್ಯಾಟಿಂಗ್ ಪಡೆಗೆ ರೋಹಿತ್ ಶರ್ಮಾ ಅವರ ಅನುಭವದ ಬಲ ಸಿಗಲಿದೆ. ಸ್ಯಾಂಟ್ನರ್, ಪಾಂಡ್ಯ, ಸೂರ್ಯ ಹಾಗೂ ರೋಹಿತ್ ಅಂತಹ ನಾಯಕತ್ವ ಬಲವಿದ್ದ ತಂಡದಲ್ಲಿ ಟ್ರೆಂಟ್ ಬೋಲ್ಟ್, ಬೂಮ್ರಾ, ದೀಪ್ ಚಾಹರ್ ಅಂತಹ ಬೌಲರ್‌ಗಳಿರುವುದು ವಿಶೇಷ.

ಅಲಭ್ಯ: ಅಥರ್ವ ಅಂಕೋಲೇಕರ್

ರಾಜಸ್ಥಾನ

ಸಂಜು ಸ್ಯಾಮ್ಸನ್ ಅವರನ್ನು ಬಿಟ್ಟುಕೊಟ್ಟ ನಂತರ ಜಡೇಜಾ ಹಾಗೂ ಸ್ಯಾಮ್ ಕರ್‍ರನ್ ಅವರನ್ನು ಪಡೆದ ರಾಜಸ್ಥಾನ ತಂಡ ಬದಲಾವಣೆಯೊಂದಿಗೆ ಕಣಕ್ಕಿಳಿಯಲಿದೆ. ರಿಯಾನ್ ಪರಾಗ್ ನಾಯಕತ್ವ ವಹಿಸಲಿದ್ದಾರೆ. ಆಲ್‌ರೌಂಡರ್‌ಗಳ ಭರಾಟೆಯೊಂದಿಗೆ ಯುವ ಆಟಗಾರರ ಬಲಿಷ್ಠ ಪಡೆ ತಂಡದಲ್ಲಿದೆ. ವಿಶ್ವಕಪ್‌ನಲ್ಲಿ ಮಿಂಚಿರುವ ಹಲವು ಆಟಗಾರರೊಂದಿಗೆ ವೈಭವ್ ಸೂರ್ಯವಂಶಿ ಅವರನ್ನು ಹೊಂದಿರುವ ತಂಡವು ಸ್ಯಾಮ್ ಕರ್‍ರನ್ ಅವರ ಅಲಭ್ಯತೆಯ ಹಿನ್ನಡೆಯೊಂದಿಗೆ ಕಣಕ್ಕಿಳಿಯಲಿದೆ.

ಅಲಭ್ಯ: ಸ್ಯಾಮ್ ಕರ್‍ರನ್
ಬದಲಿ ಆಟಗಾರ: ಶನಕ

ಲಖನೌ

ಪಂತ್ ಅವರ ನಾಯಕತ್ವದಲ್ಲಿ ಬದಲಾದ ತಂಡದೊಂದಿಗೆ ಲಖನೌ ಕಣಕ್ಕಿಳಿಯಲಿದೆ. ಅರ್ಜುನ್ ತೆಂಡೂಲ್ಕರ್, ರಾಥಿ, ಬದೋನಿ ಅಂಥ ಯುವಕರು ತಂಡದಲ್ಲಿದ್ದಾರೆ. ಯಾವುದೇ ಗಾಯದ ಚಿಂತೆ ತಂಡಕ್ಕಿಲ್ಲ, ವಿಶ್ವಕಪ್‌ನಲ್ಲಿ ಮಿಂಚಿರುವ ಏಡನ್ ಮಾರ್ಕ್ರಂ ಕೂಡ ಭರವಸೆ ಹೆಚ್ಚಿಸಿದ್ದು, ಪಂತ್, ಮಾರ್ಷ್, ಪೂರನ್ ಅಂತವರು ಬಲ ತುಂಬಿದ್ದಾರೆ. ಮೊದಲಿನ ನಾಲ್ಕು ಪಂದ್ಯಗಳಲ್ಲಿ ಜೋಶ್ ಇಂಗ್ಲಿಸ್ ಕೂಡ ಆಡಲಿದ್ದಾರೆ. ಬೌಲಿಂಗ್ ವಿಭಾಗವನ್ನು ಶಮಿ ಬಲಪಡಿಸಿದ್ದಾರೆ.

ದಿಲ್ಲಿ

ಕೆ.ಎಲ್.ರಾಹುಲ್, ಅಕ್ಷರ್ ಪಟೇಲ್ ಅಂತಹ ಪ್ರಮುಖರಿರುವ ತಂಡಕ್ಕೆ ಈ ಬಾರಿ ಸ್ಟಾರ್ಕ್, ಡಕೆಟ್ ಅಲಭ್ಯತೆಯ ಬಿಸಿ ತಟ್ಟಿದೆ. ತಂಡದಲ್ಲಿ ಬಲಿಷ್ಠ ಬ್ಯಾಟರ್‌ಗಳಿದ್ದಾರೆ. ಬೌಲಿಂಗ್‌ನಲ್ಲೂ ಅಚ್ಚುಕಟ್ಟಾದ ದಾಳಿ ಸಂಘಟಿಸುವ ಮುಕೇಶ್ ಕುಮಾರ್ ಅಂತಹ ಆಟಗಾರರಿದ್ದು ವಿಶ್ವಾಸದಲ್ಲಿದೆ.

ಅಲಭ್ಯ: ಸ್ಟಾರ್ಕ್(ಕೆಲವು ಪಂದ್ಯಗಳಿಗೆ), ಡಕೆಟ್

ಪಂಜಾಬ್

ಶ್ರೇಯಸ್ ಅಯ್ಯರ್ ಅವರ ನಾಯಕತ್ವದಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಹಾಲಿ ರನ್ನರ್-ಅಪ್ ಪಂಜಾಬ್ ತಂಡವು ಈ ಬಾರಿ ಜೋಶ್ ಇಂಗ್ಲಿಸ್ ಅವರಿಲ್ಲದೆ ಕಣಕ್ಕಿಳಿಯಲಿದೆ. ಆದಾಗ್ಯೂ ನೆಹಾಲ್ ವಧೇರಾ, ಪ್ರಿಯಾಂಶ್ ಆರ್ಯ, ಪ್ರಭ್‌ಸಿಮ್ರನ್, ಶಶಾಂಕ್ ಸಿಂಗ್ ಅಂತಹ ಯುವಕರು ತಂಡದಲ್ಲಿದ್ದಾರೆ. ಯಾವುದೇ ಅಲಭ್ಯತೆಯ ಕಾಟ ತಂಡಕ್ಕಿಲ್ಲ, ಬೌಲಿಂಗ್‌ನಲ್ಲಿ ಅರ್ಷದೀಪ್ ಸಿಂಗ್ ಅಂಥವರನ್ನು ತಂಡ ಹೊಂದಿದೆ.

ಗುಜರಾತ್

ಯಾವುದೇ ಅಲಭ್ಯತೆಯ ಚಿಂತೆ ತಂಡಕ್ಕಿಲ್ಲ, ಗಿಲ್, ಸುದರ್ಶನ್ ಅಂತಹ ಪ್ರಮುಖ ಆಟಗಾರರು ತಂಡದಲ್ಲಿದ್ದು, ಜಾಸ್ ಬಟ್ಲರ್ ಕೂಡ ತಂಡದ ವಿಶ್ವಾಸ ಹೆಚ್ಚಿಸಿದ್ದಾರೆ. ಶಮಿ ಅವರ ಬಲ ಕಳೆದುಕೊಂಡರೂ ಸಿರಾಜ್, ರಬಾಡ, ರಶೀದ್ ಖಾನ್ ಅವರನ್ನು ಹೊಂದಿದ್ದು ವಿಶ್ವಾಸದಲ್ಲಿದೆ.

ಹೈದರಾಬಾದ್

ಪ್ಯಾಟ್ ಕಮ್ಮಿನ್ಸ್ ತಂಡದಲ್ಲಿಲ್ಲ, ಇಶಾನ್ ಕಿಶನ್ ತಾತ್ಕಾಲಿಕ ನಾಯಕರಾಗಿ ಕಾಣಿಸಿಕೊಂಡಿದ್ದಾರೆ. ಹೆಡ್, ಕಿಶನ್, ಅಭಿಷೇಕ್, ಕ್ಲಾಸೆನ್, ನಿತೀಶ್‌ಕುಮಾರ್ ರೆಡ್ಡಿ ಅಂತಹ ಸ್ಫೋಟಕ ಬ್ಯಾಟಿಂಗ್ ಪಡೆ ಉಳ್ಳ ತಂಡಕ್ಕೆ ಬೌಲಿಂಗ್‌ನಲ್ಲೂ ಇಶಾನ್ ಮಾಲಿಂಗಾ, ಉನಾದ್ಕಟ್, ಅಂತವರು ವಿಶ್ವಾಸ ಹೆಚ್ಚಿಸಿದ್ದಾರೆ.

ಅಲಭ್ಯ: ಪ್ಯಾಟ್ ಕಮ್ಮಿನ್ಸ್(ಕೆಲವು ಪಂದ್ಯಗಳ ಮಟ್ಟಿಗೆ ಮಾತ್ರ), ಜ್ಯಾಕ್ ಎಡ್ವರ್ಡ್ಸ್.



ಕೋಲ್ಕತ್ತಾ

ಹರಾಜಿನಲ್ಲಿ ಆಯ್ಕೆ ಮಾಡಿಕೊಂಡವರು ತಂಡದಲ್ಲಿಲ್ಲ, ರಸೆಲ್ ಅಂತಹ ಪ್ರಮುಖ ಆಟಗಾರರು ನಿವೃತ್ತರಾಗಿದ್ದಾರೆ. ಹತ್ತಾರು ಹಿನ್ನಡೆಗಳ ನಡುವೆಯೂ ದೊಡ್ಡ ದೊಡ್ಡ ಆಟಗಾರರ ಬಲದೊಂದಿಗೆ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ ಕೆಕೆಆರ್. ಅಜಿಂಕ್ಯಾ ರಹಾನೆ, ರಿಂಕು ಸಿಂಗ್, ರಘುವಂಶಿ ಅವರೊಂದಿಗೆ ಬ್ಯಾಟಿಂಗ್ ಪಡೆಯಿದ್ದರೆ, ಅವರಿಗೆ ಕ್ಯಾಮರೂನ್ ಗ್ರೀನ್ ಬಲ ತಂದಿದ್ದಾರೆ. ಫಿನ್ ಅಲೆನ್, ಟಿಮ್ ಸೈಫರ್ಟ್ ತಂಡದಲ್ಲಿದ್ದು ಬ್ಯಾಟಿಂಗ್ ಪಡೆ ವಿಶ್ವಕಪ್‌ನಲ್ಲಿ ಮಿಂಚಿದ ಆಟಗಾರರನ್ನೇ ಹೊಂದಿದೆ. ಆದರೆ ಬೌಲಿಂಗ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ತಂಡವು ವೈಭವ್ ಅರೋರಾ, ಸುನಿಲ್ ನರೈನ್ ಚಕ್ರವರ್ತಿ ಅವರ ಅನುಭವದೊಂದಿಗೆ ಮಾತ್ರ ಕಣಕ್ಕಿಳಿಯಲಿದೆ.

ಅಲಭ್ಯ: ಹರ್ಷಿತ್ ರಾಣಾ, ಮುಸ್ತಾಫಿಜುರ್ ರೆಹಮಾನ್, ಆಕಾಶ್‌ದೀಪ್
ಬದಲಿ: ಸೌರಭ್ ದುಬೆ, ನವದೀಪ್ ಸೈನಿ

ಟಿಸಿಐ ಘೋಷಣೆ | ಪ್ರತಿಭಾನ್ವಿತರಿಗೆ ತರಬೇತಿ
ವಿಶ್ವ ಕಾರ್ ರೇಸಿಂಗ್‌ನಲ್ಲಿ ಟಿಸಿಐ ತಂಡ

• **ಬೆಂಗಳೂರು:** ಹದಿನೆಂಟು ವರ್ಷಗಳ ಬಳಿಕ ಟಿಸಿಐ ರೇಸಿಂಗ್ ಮತ್ತೊಮ್ಮೆ ಜಾಗತಿಕ ವೇದಿಕೆಯಲ್ಲಿ ಮಿಂಚಲು ಸಜ್ಜಾಗಿದ್ದು, ವರ್ಲ್ಡ್ ರ್‍ಯಾಲಿ ಚಾಂಪಿಯನ್‌ಶಿಪ್‌ನಲ್ಲಿ ಈ ಬಾರಿ ಭಾರತದ ಅತ್ಯುತ್ತಮ ಯುವ ರ್‍ಯಾಲಿ ಪ್ರತಿಭೆಗಳನ್ನು ಡಬ್ಲ್ಯುಆರ್‌ಸಿಯಲ್ಲಿ ಟಿಸಿಐ ಕಣಕ್ಕಿಳಿಸಲಿದೆ.

2025ನೇ ಸಾಲಿನ ಐಎನ್‌ಆರ್‌ಸಿ ಡಬಲ್ ಚಾಂಪಿಯನ್ ಡೀನ್ ಮಸ್ಕರೇನಸ್ ಮತ್ತು ಕೋ-ಡ್ರೈವರ್ ಗಗನ್ ಕರುಂಬಯ್ಯ ಅವರು ಏಪ್ರಿಲ್‌ನಲ್ಲಿ ನಡೆಯಲಿರುವ ರ್‍ಯಾಲಿ ಇಸ್ಲಾಸ್ ಕ್ಯಾನಾರಿಯಾಸ್ ಚಾಂಪಿಯನ್‌ಶಿಪ್‌ನ ಡಬ್ಲ್ಯುಆರ್‌ಸಿ 3 ಕ್ಲಾಸ್ ರ್‍ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆಂದು ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಲಾಯಿತು. ಬೆಂಗಳೂರು ಮೂಲದ ತಂಡವು ರೇಸಿಂಗ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಳ್ಳುತ್ತಿರುವುದು ಕರ್ನಾಟಕಕ್ಕೆ ಮಾತ್ರವಲ್ಲ, ಭಾರತೀಯ ಮೋಟರ್‌ಸ್ಪೋರ್ಟ್‌ಗೆ ಹೆಮ್ಮೆಯ ವಿಷಯವಾಗಿದೆ. ಜಾಗತಿಕ ವೇದಿಕೆಯಲ್ಲಿ ಭಾರತದ ನರೇನ್ ಕುಮಾರ್ ಮತ್ತು ಗೌರವ್ ಗಿಲ್ ಬಳಿಕ ಟಿಸಿಐ ರೇಸಿಂಗ್ ಧ್ವಜವನ್ನು ಹಾರಿಸುತ್ತಿರುವ ಮೂರನೇ ರೇಸ್ ಕಾರ್ ಚಾಲಕನಾಗಿ ಡೀನ್ ಮಸ್ಕರೇನಸ್ ಹೊರಹೊಮ್ಮಲಿದ್ದಾರೆ. ಈ ಚಾಂಪಿಯನ್‌ಶಿಪ್‌ಗಾಗಿ ಯುರೋಪ್‌ನ ಅತ್ಯಂತ ಪ್ರತಿಷ್ಠಿತ ರ್‍ಯಾಲಿ ಸ್ಪೆಷಲಿಸ್ಟ್ ಸಂಸ್ಥೆಯಾಗಿರುವ ಪಿಎಚ್ ಸ್ಪೋರ್ಟ್ ಸಂಸ್ಥೆಯ ಜೊತೆ ಟಿಸಿಐ ರೇಸಿಂಗ್ ಪಾಲುದಾರಿಕೆ ಮಾಡಿಕೊಂಡಿದೆ. ಡೀನ್ ಮತ್ತು ಮತ್ತು ಗಗನ್ ಅವರು ಫೋರ್ಡ್ ಫಿಯೆಸ್ಟಾ ರ್‍ಯಾಲಿ 3 ಕಾರನ್ನು ಡಬ್ಲ್ಯುಆರ್‌ಸಿಯಲ್ಲಿ ಓಡಿಸಲಿದ್ದಾರೆ.

ನಾವು ಸನ್ನದ್ಧ: ಟಿಸಿಐ ರೇಸಿಂಗ್ ಜೊತೆ ಕೈಜೋಡಿಸಿರುವ ಸಿಟ್ರಿನ್ ಎನರ್ಜಿ ಎಂಜಿನಿಯರಿಂಗ್‌ನ ಚೇರ್ಮನ್ ಮೋಹನ್ ನಾಗರಾಜನ್ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾತನಾಡಿ, ನಾವು ಟಿಸಿಐ ರೇಸಿಂಗ್ ತಂಡವನ್ನು ಕೇವಲ ಸ್ಪರ್ಧೆಯಲ್ಲಿ ಗೆಲ್ಲುವುದಕ್ಕಾಗಿ ಕಟ್ಟಿಲ್ಲ, ಈವರೆಗೆ ಭಾಗವಹಿಸಿದ ಪ್ರತಿ ಸ್ಪರ್ಧೆ, ಪ್ರತಿ ಸೀಸನ್, ನಮ್ಮೊಂದಿಗಿದ್ದ ಪ್ರತಿ ಡ್ರೈವರ್ ಕೂಡ ನಮ್ಮ ತಂಡ ಇಲ್ಲಿಯವರೆಗೆ ಬರುವುದಕ್ಕೆ ಕೊಡುಗೆ ನೀಡಿದ್ದಾರೆ. ಡೀನ್ ಮತ್ತು ಗಗನ್ ಇದೀಗ ಡಬ್ಲ್ಯುಆರ್‌ಸಿಗೆ ಸಿದ್ಧರಾಗಿದ್ದಾರೆ. ಜಗತ್ತನ್ನು ಎದುರಿಸಲು ನಾವು ಸನ್ನದ್ಧರಾಗಿದ್ದೇವೆ ಎಂದು ಹೇಳಿದರು.

ಟಿಎಸ್‌ಐ-ಪಿಎಚ್ ಸಹಭಾಗಿತ್ವ

ಡಬ್ಲ್ಯುಆರ್‌ಸಿ ಸ್ಪರ್ಧೆಗಾಗಿ ಟಿಸಿಐ ರೇಸಿಂಗ್ ತಂಡವು ಪಿಎಚ್ ಸ್ಪೋರ್ಟ್ ಜೊತೆಗೆ ಒಪ್ಪಂದ ಮಾಡಿಕೊಂಡಿದೆ. ಯುರೋಪ್ ಮೂಲದ ಪಿಎಚ್ ಸ್ಪೋರ್ಟ್ ಸಂಸ್ಥೆಯು ಮೋಟರ್ ಕಾರ್ ರ್‍ಯಾಲಿಗೆ ಕಾರುಗಳನ್ನು ಸಿದ್ಧಪಡಿಸುವ ವಿಷಯದಲ್ಲಿ ಜಗತ್ತಿಗೇ ಹೆಸರುವಾಸಿಯಾಗಿದೆ. ಸೆಬಾಸ್ಟಿಯನ್ ಲಿಯೋಬ್, ಸೆಬಾಸ್ಟಿಯನ್ ಓಜಿಯೆರ್, ಡ್ಯಾನಿ ಸೋರ್ಡೋ, ಥಿಯೆರಿ ನ್ಯೂವಿಲ್ಲೆ ಹಾಗೂ ಕಿಮಿ ರೈಕ್ಕೋನೆನ್‌ರಂತಹ ದಿಗ್ಗಜ ರೇಸರ್‌ಗಳಿಗೆ ಈ ಸಂಸ್ಥೆಯು ಕಾರುಗಳನ್ನು ಸಿದ್ಧಪಡಿಸಿಕೊಟ್ಟಿದೆ.

ಕ್ರೀಡಾಂಗಣ ಆವರಣದಲ್ಲಿ ಮೃತರ ಸ್ಮಾರಕ!



• **ಬೆಂಗಳೂರು:** ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತದಿಂದ ಪ್ರಾಣ ಕಳೆದುಕೊಂಡ 11 ಜನ ಆರ್‌ಸಿಬಿ ಅಭಿಮಾನಿಗಳ ಸ್ಮರಣಾರ್ಥವಾಗಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಹೊರ ಆವರಣದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ 11 ಜನರ ಸ್ಮಾರಕ ನಿರ್ಮಿಸಿದೆ. ಮೈದಾನದ ಹಳೆಯ ಎನ್‌ಸಿಎ ಬಳಿ ಈ ಸ್ಮಾರಕ ನಿರ್ಮಿಸಲಾಗಿದ್ದು, ಬುಧವಾರದಂದು ವಿವಿಧ ಧಾರ್ಮಿಕ ಚಟುವಟಿಕೆಗಳ ನಂತರ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಅನಾವರಣಗೊಳಿಸಿದರು. ಇದಲ್ಲದೆ, ಕ್ರೀಡಾಂಗಣದ ಸುರಕ್ಷತಾ ಮತ್ತು ತಯಾರಿ ಬಗ್ಗೆ ಮಾಹಿತಿ ಪಡೆದುಕೊಂಡು ಸಭೆ ನಡೆಸಿದರು. ಸುಮಾರು 8 ತಿಂಗಳ ನಂತರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯುತ್ತಿದೆ. ಎರಡು ದಿನಗಳು ಬಾಕಿ ಇದ್ದಂತೆ ಕ್ರೀಡಾಂಗಣದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ಎಲ್ಲೆಲ್ಲೂ ಕ್ರಿಕೆಟ್ ಕಳೆ ಮೂಡಿತ್ತು. ಕ್ರೀಡಾಂಗಣದ ಶೀಘ್ರ ಬಳಿಗೆ ಪಿಚ್ ಸುತ್ತುಗೊಳ್ಳುತ್ತಿತ್ತು. ಗೇಟುಗಳ ನವೀಕರಣ ಕಾಣಿಸಿಕೊಳ್ಳುತ್ತಿತ್ತು. ಇದಲ್ಲದೆ, ಮೈದಾನದ ಹೊರಗೆ ಸಂಪೂರ್ಣವಾಗಿ ಹೊಸ ಪದ್ಧತಿ, ಎಲ್ಲೆಲ್ಲೂ ಅಭಿಮಾನಿಗಳಿಗಾಗಿ ಬ್ಯಾರಿಕೇಡ್ ಸೇರಿದಂತೆ ಅಭಿಮಾನಿಗಳಿಗೆ ಹೊಸ ಪ್ಲಾನ್ ಕುರಿತ ಮಾಹಿತಿ ನೀಡುವ ಬೋರ್ಡ್‌ಗಳಿದ್ದವು.

ಸ್ಮಾರಕ ನಿರ್ಮಾಣ: ಮಂಗಳವಾರದಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 11 ಮೃತ ಅಭಿಮಾನಿಗಳಿಗಾಗಿ ವಿಶೇಷ ನಿರ್ಧಾರವನ್ನು ತೆಗೆದುಕೊಂಡಿತ್ತು. ಇದೀಗ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಕೂಡ 11 ಅಭಿಮಾನಿಗಳ ಸ್ಮರಣಾರ್ಥವಾಗಿ ಕ್ರೀಡಾಂಗಣದ ಮುಂಭಾಗದಲ್ಲಿ ಸ್ಮಾರಕ ಕಟ್ಟಿದೆ. ಬುಧವಾರದಂದು ಪ್ರತಿಯೊಂದು ಧರ್ಮದ ಗುರುಗಳು ಶಾಂತಿ ಮಾಡಿದ ನಂತರ ರಾಜ್ಯ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಸ್ಮಾರಕ ಅನಾವರಣ ಮಾಡಿದರು.

11 ಆಸನ ಎಂದೆಂದಿಗೂ ಖಾಲಿ: ವೆಂಕಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಎಲ್ಲಾ ಆರ್‌ಸಿಬಿ ಪಂದ್ಯಗಳಲ್ಲಿ 11 ಅಭಿಮಾನಿಗಳ ನೆನಪಿಗಾಗಿ 11 ಆಸನಗಳನ್ನು ಖಾಲಿ ಬಿಡುವುದಾಗಿ ಬೆಂಗಳೂರು ಫ್ರಾಂಚೈಸಿ ನಿರ್ಧರಿಸಿತ್ತು. ಈಗ ಕೆಎಸ್‌ಸಿಎ ಕೂಡ ಇಂಥದ್ದೇ ನಿರ್ಧಾರ ಕೈಗೊಂಡಿದ್ದು, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಯಾವುದೇ ಅಂತಾರಾಷ್ಟ್ರೀಯ, ದೇಶೀಯ ಹಾಗೂ ರಾಜ್ಯ ಕ್ರಿಕೆಟ್ ವೇಳೆ ಕೂಡ 11 ಆಸನಗಳು ಖಾಲಿ ಬಿಡಲಾಗುವುದು ಎಂದು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಘೋಷಿಸಿದ್ದಾರೆ.

ಎಲ್ಲಾ ಧರ್ಮದ ಪದ್ಧತಿಯಲ್ಲಿ ಶಾಂತಿ

ಮೈದಾನದ ಹೊರಗಡೆ ನಿರ್ಮಿಸಲಾಗಿರುವ ಸ್ಮಾರಕ ಉದ್ಘಾಟನೆಗೂ ಮುನ್ನ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಜೈನ್ ಸಂಪ್ರದಾಯದಲ್ಲಿ ಶಾಂತಿ ಮಾಡಿಸಲಾಯಿತು. ವೆಂಕಟೇಶ್ ಪ್ರಸಾದ್ ಮತ್ತು ಕೆಎಸ್‌ಸಿಎದ ಪ್ರಮುಖ ಸದಸ್ಯರ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಿತು. ಅರ್ಚಕರು, ಮೌಲ್ವಿಗಳು, ಸಿಖ್ ಗುರುಗಳು ಮತ್ತು ಚರ್ಚ್‌ನ ಫಾದರ್ ಕೂಡ ಈ ವೇಳೆ ಇದ್ದರು. ಇದಕ್ಕೂ ಮುನ್ನವೇ ಮೈದಾನದ ಕಚೇರಿಯ ಎದುರಿಗೆ ಗಣಹೋಮ ಕೂಡ ಮಾಡಲಾಗಿದೆ.

» ಪ್ರಾಣ ಕಳೆದುಕೊಂಡವರ ಸ್ಮರಣಾರ್ಥವಾಗಿ ನಿರ್ಮಾಣ
» ಭದ್ರತಾ ಕ್ರಮಗಳ ಕುರಿತು ಮಾಹಿತಿ ಪಡೆದ ಸಚಿವ

ಐಐಎಸ್‌ನೊಂದಿಗೆ ಎಂ ರಿಸೋರ್ಸಸ್ ಸಹಭಾಗಿತ್ವ

• **ಬೆಂಗಳೂರು:** ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ ತನ್ನ ಸ್ಕ್ವಾಷ್ ಎಕ್ಸಲೆನ್ಸ್ ಕಾರ್ಯಕ್ರಮಕ್ಕೆ ಜಾಗತಿಕ ಸಹಭಾಗಿ ಎಂ ರಿಸೋರ್ಸಸ್ ಜೊತೆ ಪಾಲುದಾರಿಕೆಯನ್ನು ಘೋಷಿಸಿದೆ. 2028ರ ಒಲಿಂಪಿಕ್ಸ್‌ನಲ್ಲಿ ಸ್ಕ್ವಾಷ್ ಪ್ರವೇಶದ ಹಿನ್ನೆಲೆಯಲ್ಲಿ ಭಾರತದ ಪ್ರತಿಭಾವಂತ ಆಟಗಾರರನ್ನು ತಯಾರಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಸ್ಕ್ವಾಷ್ ಎಕ್ಸಲೆನ್ಸ್ ಕಾರ್ಯಕ್ರಮವು ಉದಯೋನ್ಮುಖ ಕ್ರೀಡೆಗಳಿಗೆ ಬೆಂಬಲ ನೀಡುವ ಐಐಎಸ್‌ನ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿದೆ. ಜಾಗತಿಕ ಮಟ್ಟದಲ್ಲಿ ಸ್ಕ್ವಾಷ್‌ಗೆ ಹೆಚ್ಚುತ್ತಿರುವ ಮಹತ್ವ ಹಾಗೂ ಒಲಿಂಪಿಕ್ಸ್‌ನಲ್ಲಿ ಅದರ ಸೇರ್ಪಡೆ ಹಿನ್ನೆಲೆಯಲ್ಲಿ ಈ ಹೆಜ್ಜೆ ಮಹತ್ವದ್ದಾಗಿದೆ ಎಂದು ಸಂಸ್ಥೆ ತಿಳಿಸಿದೆ. ಐಐಎಸ್ ಮತ್ತು ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ಸ್ಥಾಪಕ ಪಾರ್ಥ್ ಜಿಂದಾಲ್ ಅವರು, ನಮ್ಮ ಆಟಗಾರರಿಗೆ ವಿಶ್ವಮಟ್ಟದ ಅವಕಾಶಗಳನ್ನು ನೀಡುವುದು ನಮ್ಮ ಉದ್ದೇಶ. ಏಷ್ಯನ್ ಗೇಮ್ಸ್ ಮತ್ತು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ದೃಷ್ಟಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಅನಾಹತ್ ಸಿಂಗ್ ಸೇರಿದಂತೆ ಹಲವು ಯುವ ಆಟಗಾರರು ವಿಶ್ವದ ಟಾಪ್ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಎಂ ರಿಸೋರ್ಸಸ್‌ನ ಸಹಕಾರದಿಂದ ದೊಡ್ಡ ಟೂರ್ನಿ ಆಯೋಜಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಏಷ್ಯಾ ಕಪ್ ವರ್ಲ್ಡ್ ರ್‍ಯಾಂಕಿಂಗ್ ಟೂರ್ನಿ | ಮಿಂಚಿದ ಭಾರತೀಯರು
ಆರ್ಚರಿ ಭಾರತಕ್ಕೆ 2 ಕಂಚು, ಇನ್ನೂ 2 ಪದಕ ಖಚಿತ

• **ಹೊಸದಿಲ್ಲಿ:** ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಆರ್ಚರಿ ಏಷ್ಯಾ ಕಪ್ ವರ್ಲ್ಡ್ ರ್‍ಯಾಂಕಿಂಗ್ ಟೂರ್ನಿ ಮೊದಲ ಹಂತದ ಎರಡನೇ ದಿನ ಭಾರತ ಭರ್ಜರಿ ಪ್ರದರ್ಶನ ನೀಡಿದ್ದು, ಎರಡು ಕಂಚಿನ ಪದಕಗಳನ್ನು ಗೆದ್ದು, ಎರಡು ವಿಭಾಗಗಳ ಫೈನಲ್‌ಗೆ ಪ್ರವೇಶಿಸಿದೆ.

ಮಹಿಳಾ ಕಾಂಪೌಂಡ್ ತಂಡ ಫೈನಲ್‌ಗೆ ಪ್ರವೇಶಿಸುವ ಮೂಲಕ ಕಳೆದ ಆವೃತ್ತಿಯ ಕಂಚಿನ ಸಾಧನೆಯನ್ನು ಮತ್ತಷ್ಟು ಉತ್ತಮಗೊಳಿಸಿದೆ. ಚಿಕಿತಾ ತನಿಪಾರ್ತಿ, ರಾಜ್ ಕೌರ್ ಮತ್ತು ತೇಜಲ್ ಸಾಳ್ವೆ ತ್ರಯ ಥೈಲ್ಯಾಂಡ್ ತಂಡವನ್ನು 229-226 ಅಂತರದಲ್ಲಿ ಸೋಲಿಸಿ ಕಝಕಿಸ್ತಾನ್ ವಿರುದ್ಧ ಅಂತಿಮ ಪಂದ್ಯಕ್ಕೆ ಪ್ರವೇಶಿಸಿತು.

ಪುರುಷರ ಕಾಂಪೌಂಡ್ ವಿಭಾಗದಲ್ಲಿ ಸ್ವಲ್ಪ ನಿರಾಸೆ ಎದುರಾಯಿತು. ಅರ್ಹತಾ ಸುತ್ತಿನಲ್ಲಿ ಅಗ್ರ ನಾಲ್ಕು ಸ್ಥಾನಗಳನ್ನು ಭಾರತ ಕಬಳಿಸಿದ್ದರೂ, ಸೆಮಿಫೈನಲ್‌ನಲ್ಲಿ ವಿಯೆಟ್ನಾಂ ವಿರುದ್ಧ 233-234 ಅಂತರದಲ್ಲಿ ಸೋತು ಪ್ರಶಸ್ತಿ ರಕ್ಷಣೆ ವಿಫಲವಾಯಿತು. ರಾಜತ್ ಚೌಹಾಣ್, ರಿಷಭ್ ಯಾದವ್ ಮತ್ತು ಉದಯ್ ಕಾಂಬೋಜ್ ಉತ್ತಮ ಆರಂಭ ಪಡೆದರೂ ನಂತರ ಮುನ್ನಡೆಯನ್ನು ಕಳೆದುಕೊಂಡರು.



ಆದರೆ ಕಂಚಿನ ಪದಕ ಪಂದ್ಯದಲ್ಲಿ ಭೂತಾನ್ ವಿರುದ್ಧ 234-232 ಅಂತರದಲ್ಲಿ ಜಯ ಸಾಧಿಸಿ ಮೂರನೇ ಸ್ಥಾನ ಪಡೆದರು.

ರಿಕರ್ವ್ ವಿಭಾಗದಲ್ಲಿ: ರಿಕರ್ವ್ ವಿಭಾಗದಲ್ಲಿ ಭಾರತ ಪುರುಷರ ತಂಡ ಮಲೇಷಿಯಾ ವಿರುದ್ಧ 5-1 ಅಂತರದಲ್ಲಿ ಗೆದ್ದು ಫೈನಲ್‌ಗೆ ಪ್ರವೇಶಿಸಿದೆ. ದೇವಾಂಗ್ ಗುಪ್ತಾ, ಸುಖ್‌ಚೈನ್ ಸಿಂಗ್ ಮತ್ತು ಜುಯೆಲ್ ಸರ್ಕಾರ್ ತ್ರಯ ಯಾವುದೇ ಸೆಟ್ ಕಳೆದುಕೊಳ್ಳದೆ ಸುಲಭವಾಗಿ ಜಯ ಸಾಧಿಸಿತು. ಫೈನಲ್‌ನಲ್ಲಿ ಕಝಕಿಸ್ತಾನ್ ಎದುರಾಗಲಿದೆ. ಇದೇ ವೇಳೆ ಮಹಿಳಾ ರಿಕರ್ವ್ ತಂಡವೂ ಕಂಚಿನ ಪದಕ ಜಯಿಸಿದೆ. ರೂಮಾ ಬಿಸ್ವಾಸ್, ಕೀರ್ತಿ ಮತ್ತು ರಿಧಿ ಫೋರ್ ತ್ರಯ ಮಲೇಷಿಯಾ ವಿರುದ್ಧ 5-1 ಅಂತರದಲ್ಲಿ ಗೆದ್ದು ಮೂರನೇ ಸ್ಥಾನ ಪಡೆದಿದೆ. ಒಟ್ಟಿನಲ್ಲಿ ಭಾರತ ಎರಡು ಕಂಚಿನ ಪದಕಗಳೊಂದಿಗೆ, ಇನ್ನೂ ಎರಡು ವಿಭಾಗಗಳಲ್ಲಿ ಚಿನ್ನದ ಅವಕಾಶವನ್ನು ಜೀವಂತವಾಗಿರಿಸಿದೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5934

ಎಡದಿಂದ ಬಲಕ್ಕೆ
2. ಮನೆಯ ಹಿರಿತನದ ಪಟ್ಟ (5)
4. ನಡೆಯುತ್ತಿರುವ ಜೀವನ (2)
5. ಆ ವಲಯದಲ್ಲಿ ಕಂಡ ನ್ಯಾಯವಾದಿ (3)
6. ಮನೋಹರವಾಗಿ ಚಲಿಸುವ ಪಕ್ಷಿ-ಹಂಸ (4)
8. ಇದು ಮೂಲಿಕದ್ದ ಅಧಿಕಾರ (2)
9. ವಾಸಸ್ಥಳವಿದು (2)
14. ಆರೋಪ ಮಾಡದೆ ಕಾರ್ಯಕ್ರಮ ಮುಕ್ತಾಯ ಗೊಳಿಸುವುದು (4)
16. ಕೂಡಲು ನಿಮಿರುವಂತಹ ವಿಸ್ಮಯ (3)
17. ದೇಹದ ನಿರ್ದಿಷ್ಟ ಕಾರ್ಯ ನಿರ್ಧರಿಸುವ ಭಾಗ (2)
18. ನಡವಳಿಕೆಯನ್ನು ಕಲಿಸಿಕೊಳ್ಳು (5)

ಮೇಲಿನಿಂದ ಕೆಳಕ್ಕೆ
1. ನಾಳೆ ಒಳಗೊಂಡ ವರ್ಣನೆ (5)
3. ಲಕ್ಷ್ಮಿಯ ಒಡೆಯ-ವಿಷ್ಣು (3)
4. ಮಕ್ಕಳಿಗೆ ಕಾಟ ಕೊಡುವ ಆಕಾಶಕಾಯ (4)
6. ಮುಖದಲ್ಲಿ ಆನಂದ ವ್ಯಕ್ತಪಡಿಸುವ ಕ್ರಿಯೆ (2)
7. ಛತ್ರದ ಕಾಲು ತಲೆಕೆಳಗಾಗಿದೆ (2)
10. ಇದು ಮೂರ್ಛೆ ಬರುವ ಕಾಯಿಲೆ (4)
11. ಹಳೆಯದನ್ನು ಹೊಸತು ಮಾಡುವವರು (5)
12. ನಾಶ ಮಾಡುವುದು-ಹಾಳು ಮಾಡುವಿಕೆ (2)
13. ಭೌತಿಕವಾದ ಬಿಸಿ-ಮಾಪನ ಸಂಕೇತ (2)
15. ಅಧಿಕೃತವಾಗಿ ಗುರುತಿಸಿ ಗೌರವಿಸುವುದು (3)

5933 ಉತ್ತರ

ಎಡದಿಂದ ಬಲಕ್ಕೆ:
1. ಏಕನಾದ 3. ಗಜಾನನ
5. ಕಮಲಾಕರ 6. ತಮ
8. ಬಂಧು 9. ಮಣಸು
12. ರವಿ 14. ಲೋಕಾಭಿರಾಮ
15. ನವಪಾಕ 16. ಹರೋಹರ

ಮೇಲಿನಿಂದ ಕೆಳಕ್ಕೆ:
1. ಏಕ್ಸಾರ್ಜಿತ 2. ರಸಮಂಯ
3. ಗಜಕರ್ಣ 4. ನವವಧು
7. ಮನಸು 8. ಬಂಗಾರ
9. ಮೂಲಮಾನ 10. ಸಕಾಲಿಕ
11. ವಿರಾಜಿತ 12. ವಿದ್ಯಾಧರ

ರಾಮ ರಾಮದೇವ ಬೃಂದಾವಿಹಾರಿಯ ಮೊದಲಹಾಡು..



ಗೋಲ್ಡನ್‌ಸ್ಟಾರ್ ಗಣೇಶ್ ಹಾಗೂ ನಿರ್ದೇಶಕ ಶ್ರೀನಿವಾಸ್ ರಾಜು ಜೋಡಿಯಲ್ಲಿ ಮೂಡಿಬಂದಿದ್ದ 'ಕೃಷ್ಣಂ ಪ್ರಣಯ ಸಖಿ' ಚಿತ್ರವು ತನ್ನ ಹಾಡುಗಳಿಂದಲೇ ದೊಡ್ಡಮಟ್ಟದ ಜನಪ್ರಿಯತೆಯನ್ನು ಗಳಿಸಿತ್ತು. ಚಿತ್ರದ ಹಾಡುಗಳು ಹಿಟ್ ಆದಂತೆ ಸಿನಿಮಾ ಕೂಡ ಸೂಪರ್‌ಹಿಟ್ ಆಗಿತ್ತು. ಈಗ ಅದೇ ಜೋಡಿ ಮತ್ತೊಂದು ಸಿನಿಮಾದೊಂದಿಗೆ ಪ್ರೇಕ್ಷಕರ ಮುಂದೆ ಬರಲು ಸಿದ್ಧವಾಗುತ್ತಿದೆ. ಅದರ ಹೆಸರು ಬೃಂದಾವಿಹಾರಿ. ಈ ಸಲವೂ ಸಹ ಹಾಡುಗಳ ಮೂಲಕವೇ ಚಿತ್ರವನ್ನು ಪ್ರೇಕ್ಷಕರಿಗೆ ತಲುಪಿಸುವುದಕ್ಕೆ ಚಿತ್ರತಂಡ ಮುಂದಾಗಿದೆ.

ಬೃಂದಾವಿಹಾರಿ ಕೂಡ ಕೃಷ್ಣಂ ಪ್ರಣಯ ಸಖಿ ಚಿತ್ರದಂತೆಯೇ ಫ್ಯಾಮಿಲಿ ಓರಿಯೆಂಟೆಡ್ ಸಿನಿಮಾ ಅನ್ನೋದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಮಾರ್ಚ್ 26ರಂದು ರಾಮನವಮಿ ಹಬ್ಬದ ವಿಶೇಷವಾಗಿ ಈ ಸಿನಿಮಾದ ರಾಮ ರಾಮ ದೇವ... ಎನ್ನುವ ಹಾಡನ್ನು ರಿಲೀಸ್ ಮಾಡಲಾಗಿದೆ. ಗೋಲ್ಡನ್‌ಸ್ಟಾರ್ ಗಣೇಶ್ ಹೆಜ್ಜೆ ಹಾಕಿರುವ ಈ ಹಾಡು ಈಗಾಗಲೇ ಸೋಶಿಯಲ್ ಮೀಡಿಯಾಗಳಲ್ಲಿ ಸಿಕ್ಕಾಪಟ್ಟೆ ವೈರಲ್ ಆಗಿದ್ದು ಟ್ರೆಂಡ್ ಆಗುತ್ತಿದೆ.

ಗೋಲ್ಡನ್‌ಸ್ಟಾರ್ ಗಣೇಶ್ ಹಾಗೂ ನಿರ್ದೇಶಕ ಶ್ರೀನಿವಾಸ್‌ರಾಜು ಇಬ್ಬರ ಜೋಡಿ ಮತ್ತೊಮ್ಮೆ ಕನ್ನಡಿಗರನ್ನು ಮೋಡಿ ಮಾಡೋದು ಗ್ಯಾರಂಟಿ ಅನ್ನೋ ಅಭಿಪ್ರಾಯ ಈಗಾಗಲೇ ವ್ಯಕ್ತವಾಗುತ್ತಿದೆ. 'ಬೃಂದಾವಿಹಾರಿ' ಚಿತ್ರದಲ್ಲಿ ಮಾಳವಿಕಾ ಶರ್ಮ ಹಾಗೂ ದೇವಿಕಾ ಭಟ್ ನಾಯಕಿಯರಾಗಿ ನಟಿಸಿದ್ದಾರೆ. ರಾಮ ರಾಮದೇವ.. ಒಂದು ಲಿರಿಕಲ್ ಹಾಡಾಗಿದ್ದರೂ, ಮಧ್ಯದಲ್ಲಿ ಹಾಡಿನ ದೃಶ್ಯದ ತುಣುಕುಗಳನ್ನು ರಿವೀಲ್ ಮಾಡಲಾಗಿದೆ. ಇದು ಕನ್ನಡಿಗರಿಗೆ ತುಂಬಾನೇ ಇಷ್ಟ ಆಗಿದ್ದು, ಸಂಗೀತ, ಸಾಹಿತ್ಯ ಸೇರಿದಂತೆ ಹಾಡಿನ ಬಗ್ಗೆ ಎಲ್ಲಾ ಕಡೆಯಿಂದ ಸಿಕ್ಕಾಪಟ್ಟೆ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಗಣೇಶ್ ನಟಿಸಿರುವ 'ಬೃಂದಾವಿಹಾರಿ' ಚಿತ್ರದ ಹಾಡಿನಲ್ಲಿ, ಸಾಕಷ್ಟು ವಿಶೇಷತೆಗಳಿವೆ.

ಬೃಂದಾವಿಹಾರಿ ಸಿನಿಮಾದ ಟೈಟಲ್ ನೋಡಿದ ಕೂಡಲೇ ಇದೊಂದು ರೊಮ್ಯಾಂಟಿಕ್ ಲವ್‌ಸ್ಟೋರಿ ಕಥೆಯಿರಬಹುದು ಅಂತ ಅನಿಸುತ್ತದೆ. ಇನ್ನು ಅದ್ದೂರಿಯಾಗಿರುವ ಈ ಹಾಡನ್ನು ನೋಡಿದ ಬಳಿಕ 'ಬೃಂದಾವಿಹಾರಿ' ಎಂಬ ಟೈಟಲ್ ಈ ಚಿತ್ರಕ್ಕೆ ಟೈಟಲ್ ಸೂಕ್ತವಾಗಿದೆ ಅಂತಲೂ ಅನಿಸಬಹುದು, 'ಕೃಷ್ಣಂ ಪ್ರಣಯ ಸಖಿ' ಚಿತ್ರದ ನಂತರ ಅದೇ ಜೋಡಿ ಮತ್ತೊಮ್ಮೆ ಒಟ್ಟಿಗೆ ಕೆಲಸ ಮಾಡಿರುವ ಚಿತ್ರ 'ಬೃಂದಾವಿಹಾರಿ' ಆಗಿದ್ದರಿಂದ ಹಾಡುಗಳ ಬಗ್ಗೆ ಸಿಕ್ಕಾಪಟ್ಟೆ ನಿರೀಕ್ಷೆಯಿತ್ತು. ಅದಕ್ಕೆ ತಕ್ಕಂತೆ ಈಗ ಮೊದಲ ಹಾಡು ರಾಮ ರಾಮ ದೇವ ಕ್ಲಿಕ್ ಆಗಿದೆ. ಗಣೇಶ್ ಹಾಗೂ ಶ್ರೀನಿವಾಸ್‌ರಾಜು ಕಾಂಬಿನೇಷನ್‌ನ ಬೃಂದಾವಿಹಾರಿ ಚಿತ್ರವನ್ನು ಹಯಗ್ರೀವ ಖ್ಯಾತಿಯ ಸಮೃದ್ಧಿ ವಿ.ಮಂಜುನಾಥ್ ಅವರು ನಿರ್ಮಾಣ ಮಾಡುತ್ತಿದ್ದಾರೆ.





ಸಾಕಷ್ಟು ಸೂಪರ್‌ಹಿಟ್ ಮೆಲೋಡಿ ಹಾಡುಗಳನ್ನು ನೀಡಿರುವ ಮಲಯಾಳಂನ ಹೆಶಮ್ ಅಬ್ದುಲ್ ವಹಾಬ್ ಅವರು ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿರುವುದೂ ಕುತೂಹಲ ಹೆಚ್ಚಲು ಕಾರಣವಾಗಿದೆ. ಈಗಾಗಲೇ ದಕ್ಷಿಣ ಭಾರತದ ಬಹುತೇಕ ಎಲ್ಲಾ ಪ್ರಮುಖ ಭಾಷೆಯ ಸಿನಿಮಾಗಳಿಗೆ ಮ್ಯೂಸಿಕ್ ನೀಡಿರುವ ಹೆಶಮ್ ಅಬ್ದುಲ್ ವಹಾಬ್ ಅವರೀಗ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಬೃಂದಾವಿಹಾರಿ ಚಿತ್ರಕ್ಕೆ ಮ್ಯೂಸಿಕ್ ಮಾಡುವ ಮೂಲಕ ಮೊದಲ ಹಾಡಿನಲ್ಲಿಯೇ ಗಮನ ಸೆಳೆದಿದ್ದಾರೆ.

'ಬೃಂದಾವಿಹಾರಿ' ಸಿನಿಮಾದ ರಾಮ ರಾಮದೇವ.. ಹಾಡಿಗೆ ಡಾ.ವಿ.ನಾಗೇಂದ್ರಪ್ರಸಾದ್ ಅವರು ಸಾಹಿತ್ಯ ರಚಿಸಿದ್ದಾರೆ. ಈ ಹಿಂದೆ 'ಕೃಷ್ಣಂ ಪ್ರಣಯ ಸಖಿ' ಸಿನಿಮಾದ ದ್ವಾಪರಾ.. ಹಾಡಿಗೆ ಸಾಹಿತ್ಯ ರಚಿಸಿದ್ದ ನಾಗೇಂದ್ರಪ್ರಸಾದ್ ಅವರೇ ಈಗ ಮತ್ತೊಂದು ಸಾಂಗ್ ರಚಿಸಿದ್ದಾರೆ. ಈಗಾಗಲೇ ಹಾಡಿಗೆ ಎಲ್ಲಾ ಕಡೆಯಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಬಹುಶ: ರಾಮನೂ ಸಹ ಸೀತೆಯ ವರ್ಣನೆಯಲ್ಲಿ ಸೋಲುತ್ತಿದ್ದನೇನೋ, ಅಷ್ಟು ಚೆನ್ನಾಗಿ ನಾಗೇಂದ್ರಪ್ರಸಾದ್ ಅವರು ಸೀತೆಯನ್ನು ವರ್ಣಿಸಿದ್ದಾರೆ ಎಂದು ಪ್ರೇಕ್ಷಕರು ಕಮೆಂಟ್ ಮಾಡಿದ್ದಾರೆ.

ಬೃಂದಾವಿಹಾರಿ' ಸಿನಿಮಾದ ಮೊದಲ ಹಾಡು ಕನ್ನಡಿಗರಿಗೆ ಸಿಕ್ಕಾಪಟ್ಟೆ ಇಷ್ಟ ಆಗಿದೆ. ಇದೇ ಗುಂಗಿನಲ್ಲಿ ಕನ್ನಡಿಗರು ಈ ಚಿತ್ರವನ್ನು ನೋಡಲು ಕಾದುಗಾಲಲ್ಲಿ ನಿಂತಿದ್ದಾರೆ. ಇನ್ನು 2025ರಲ್ಲಿ ಸದ್ದಿಲ್ಲದೆ ಗೋಲ್ಡನ್‌ಸ್ಟಾರ್ ಗಣೇಶ್ ಹಾಗೂ ಶ್ರೀನಿವಾಸ್‌ರಾಜು ಇಬ್ಬರೂ ಹೊಸ ಸಿನಿಮಾಗೆ ಕೈಹಾಕಿದ್ದರು. ಆದರೆ, ಚಿತ್ರದ ಟೈಟಲ್‌ನ್ನು ಈವರೆಗೆ ರಿವೀಲ್ ಮಾಡಿರಲಿಲ್ಲ, ಯುಗಾದಿ ಹಬ್ಬದ ಶುಭ ಸಂದರ್ಭದಲ್ಲಿ ಸಿನಿಮಾದ ಟೈಟಲ್‌ನ್ನೂ ರಿವೀಲ್ ಮಾಡಿ, ಚಿತ್ರದ ಪ್ರಚಾರ ಆರಂಭಿಸಿದ್ದರು.

ಕನ್ನಡದ ಜಿ ಸಿನಿಮಾಸ್ ಗುರು ದೇಶಪಾಂಡೆ ಪ್ರೊಡಕ್ಷನ್ಸ್ ಮತ್ತು ಸೆವೆನ್ ಸ್ಟಾರ್ ಮೂವೀಸ್ ಜಂಟಿಯಾಗಿ ನಿರ್ಮಿಸುತ್ತಿರುವ ಮೈಥಿಕಲ್ ಫ್ಯಾಂಟಸಿ ಡ್ರಾಮಾ ಹಿನ್ನೆಲೆಯ ರಾಮರಸ ಚಿತ್ರತಂಡ ಇದೀಗ ಮತ್ತೊಂದು ಕುತೂಹಲಕಾರಿ ಅಪ್ಡೇಟ್ ನೀಡುತ್ತಿದೆ. ರಾಜಾಹುಲಿ ಖ್ಯಾತಿಯ ಗುರು ದೇಶಪಾಂಡೆ ಅವರ ನಿರ್ಮಾಣ ಹಾಗೂ ಜಟ್ಟ, ಮೈತ್ರಿ ಖ್ಯಾತಿಯ ಬಿ.ಎಂ.ಗಿರಿರಾಜ್ ಅವರ ನಿರ್ದೇಶನ ಸಾರಥ್ಯದಲ್ಲಿ ಮೂಡಿಬರುತ್ತಿರುವ ಈ ಚಿತ್ರದಲ್ಲಿ ಪ್ರಜ್ವಲ್ ದೇವರಾಜ್ ಅವರ ವಿಶೇಷ ಪಾತ್ರದ ಪೋಸ್ಟರನ್ನು ಬಿಡುಗಡೆ ಮಾಡಿದೆ,

ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಅವರು ಈ ಚಿತ್ರದಲ್ಲಿ ಅತ್ಯಂತ ಶಕ್ತಿಯುತ

ರಾಮರಸ ಗುರುಸಿದ್ದನಾಗಿ ಪ್ರಜ್ವಲ್ ದೇವರಾಜ್



ಹಾಗೂ ವಿಭಿನ್ನವಾದ ಗುರುಸಿದ್ದ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕರ್ನಾಟಕದ ಅಲೆಮಾರಿ ಪರಂಪರೆಯಾದ 'ಸುಡುಗಾಡು ಸಿದ್ದ' ಸಮುದಾಯದ ಹಿನ್ನೆಲೆಯನ್ನು ಈ ಪಾತ್ರ ಹೊಂದಿದೆ. ಸ್ಮಶಾನ ನಿವಾಸಿಗಳಾದ ಇವರು ಭಗವಾನ್ ಶಿವನ ಭಕ್ತರು. ಸಿದ್ದರು ಹಳ್ಳಿ ಹಳ್ಳಿಗೆ ಸಂಚಾರ ಮಾಡುತ್ತ ಭವಿಷ್ಯ ನುಡಿಯುವುದು, ಜನರಿಗೆ ನಗು ಹಂಚುವುದು ಮತ್ತು ಅಪರೂಪದ ಗಿಡಮೂಲಿಕೆಗಳ ಮೂಲಕ ಚಿಕಿತ್ಸೆ ನೀಡುವುದರಲ್ಲಿ ಇವರು ನಿಸ್ಸೀಮರು. ಹಳ್ಳಿಗಳನ್ನು ದುಷ್ಟ ಶಕ್ತಿಗಳಿಂದ ರಕ್ಷಿಸುವ ಈ ಸಮುದಾಯದ ಸಂಸ್ಕೃತಿಯನ್ನು ಪ್ರಜ್ವಲ್ ದೇವರಾಜ್ ಅವರ ಪಾತ್ರದ ಮೂಲಕ ಬೆಳ್ಳಿತೆರೆಯ ಮೇಲೆ ತರಲಾಗುತ್ತಿದೆ.

ಈ ಚಿತ್ರವನ್ನು ಗುರು ದೇಶಪಾಂಡೆ ಹಾಗು ವಿಕ್ರಂ ಆರ್ಯ ಜಂಟಿಯಾಗಿ ನಿರ್ಮಿಸುತ್ತಿದ್ದು, ಚಿತ್ರದ ಕ್ರಿಯೇಟಿವ್ ಹೆಡ್ ಗುರು ದೇಶಪಾಂಡೆ ಮತ್ತು ಬಿ.ಎಂ. ಗಿರಿರಾಜ್ ಅವರ ನಿರ್ದೇಶನದಲ್ಲಿ ಪ್ರತಿಭಾವಂತ ನಟರಾದ ಕಾರ್ತಿಕ್ ಮಹೇಶ್, ಶರಣ್ ಮತ್ತು ನಟಿ ಹೆಬ್ಬಾಪಟೇಲ್, ಬಾಲಾಜಿ ಮನೋಹರ, ನಟಿ ವೈಶಾಲಿ ಹಾಗೂ ಇತರರು ಪ್ರಮುಖ ತಾರಾಗಣದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರಕ್ಕೆ ಎ.ವಿ. ಕೃಷ್ಣಕುಮಾರ್(ಕೆಕೆ) ಅವರ ಛಾಯಾಗ್ರಹಣ, ಭರತ್ ಬಿ.ಜೆ. ಅವರ ಸಂಗೀತ, ಹೊಸ್ಮನೆ ಮೂರ್ತಿ ಅವರ ಕಲೆ, ಕಾಂತಾರ ಖ್ಯಾತಿಯ ಅರ್ಜುನ್‌ರಾಜ್ ಅವರ ಸಾಹಸ ಸಂಯೋಜನೆ ಮುರುಳಿ ಮಾಸ್ಟರ್ ಅವರ ನೃತ್ಯ ಸಂಯೋಜನೆ, ಮತ್ತು ಅರ್ಜುನ್ ಕಿಟ್ಟು ಅವರ ಸಂಕಲನ ಈ ಚಿತ್ರಕ್ಕಿದೆ. ಈಗಾಗಲೇ ಚಿತ್ರತಂಡವು ತನ್ನ ಚಿತ್ರೀಕರಣ ಮುಗಿಸಿಕೊಂಡು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಆದಷ್ಟು ಬೇಗನೇ ಚಿತ್ರವನ್ನು ಜನರ ಮುಂದೆ ತರಲು ಚಿತ್ರತಂಡ ಪ್ರಯತ್ನಿಸುತ್ತಿದೆ. ಈ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಬೆಂಗಳೂರು ಮತ್ತು ಚೆನ್ನೈನಲ್ಲಿ ನಡೆಯುತ್ತಿದೆ.

ಫಸ್ಟ್‌ನೈಟ್ ವಿತ್ ದೆವ್ವ ಟ್ರೈಲರ್ ಬಿಡುಗಡೆ



ಬಿಗ್‌ಬಾಸ್ ಖ್ಯಾತಿಯ ಪ್ರಥಮ್ ನಾಯಕನಾಗಿ ನಟಿಸಿರುವ, ಪಿ.ವಿ.ಆರ್. ಸ್ವಾಮಿ ಗೂಗಾರೆದೊಡ್ಡಿ ಅವರ ನಿರ್ದೇಶನದ ಬಹು ನಿರೀಕ್ಷಿತ ಚಿತ್ರ ಫಸ್ಟ್‌ನೈಟ್ ವಿತ್ ದೆವ್ವ ಬಿಡುಗಡೆಗೆ ಸಿದ್ಧವಾಗಿದೆ, ಇತ್ತೀಚೆಗೆ ಈ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ನೆರವೇರಿತು. ಈ ಚಿತ್ರಕ್ಕೆ ಕಥೆ, ಚಿತ್ರಕಥೆಯನ್ನು ಕೂಡ ಪ್ರಥಮ್ ಅವರೇ ರಚಿಸಿದ್ದಾರೆ, ಇದೇ ಚಿತ್ರದಲ್ಲಿ ನಟಿಸಿರುವ ಹಿರಿಯನಟ ಶ್ರೀನಿವಾಸಮೂರ್ತಿ ಅವರು ಟ್ರೈಲರ್‌ಗೆ ಚಾಲನೆ ನೀಡಿದರು,

ಈ ಸಂದರ್ಭದಲ್ಲಿ ನಾಯಕ ಪ್ರಥಮ್ ಮಾತನಾಡುತ್ತ ನಮ್ಮ ಚಿತ್ರದ ಡಬ್ಬಿಂಗ್, ಸ್ಯಾಟಲೈಟ್ ರೈಟ್ಸ್ ಒಳ್ಳೇ ಮೊತ್ತಕ್ಕೆ ಸೇಲಾಗಿದೆ, ಮನರಂಜನೆಯನ್ನೇ ಪ್ರಧಾನವಾಗಿಟ್ಟುಕೊಂಡು ಮಾಡಿರೋ ಹಾರರ್ ಕಾಮಿಡಿ ಚಿತ್ರವಿದು, ಚಿತ್ರದ ನಾಯಕನಿಗೆ ಮದುವೆಯಾಗುತ್ತದೆ, ಆತನಿಗೆ ತನ್ನ ಹೆಂಡತಿ ದೆವ್ವ ಎಂಬುದು ಮದುವೆಯಾದ ಕೂಡಲೇ ಗೊತ್ತಾಗುತ್ತೆ, ನಂತರ ಆತನ ಫಸ್ಟ್‌ನೈಟ್ ಆಗುತ್ತಾ ಇಲ್ಲಾ ಎನ್ನುವುದೇ ನಮ್ಮ ಚಿತ್ರದ ಕಥಾಹಂದರ. ನಾನೇ ಈ ಚಿತ್ರಕ್ಕೆ ಕಥೆ ಹಾಗೂ ಚಿತ್ರಕಥೆ ಬರೆದಿದ್ದೇನೆ. ಚಿತ್ರದಲ್ಲಿ ನಾಯಕಿಯಾಗಿ ನಿವಿಶಾಸ್ವಾಮಿ ಅವರು ನಟಿಸಿದ್ದಾರೆ, ಡೆವಿಲ್ ಚಿತ್ರದ ಜತೆಗೇ ನಮ್ಮ ಚಿತ್ರವನ್ನು ರಿಲೀಸ್ ಮಾಡುತ್ತೇನೆಂದು ಹೇಳಿದ್ದೆ, ಆದರೆ ವಿತರಕರ ಸಲಹೆ ಮೇರೆಗೆ ಪೋಸ್ಟ್‌ಪೋನ್ ಮಾಡಬೇಕಾಯಿತು ಎಂದು ಈ ಹಿಂದೆ ಹಾಡಿದ್ದ ಮಾತಿಗೆ ಸಮಜಾಯಿಷಿ ನೀಡಿದರು,

ನಿರ್ದೇಶಕ ಪಿ.ವಿ.ಆರ್. ಸ್ವಾಮಿ ಮಾತನಾಡುತ್ತ ನನ್ನ ಮೊದಲ ಚಿತ್ರ ರಾಜತಂತ್ರ ರಿಲೀಸ್ ಮಾಡಿದಾಗ ಚೆನ್ನಾಗಿ ಹೋಗಿತ್ತು. ಪ್ರಥಮ್ ಅವರು ಒಳ್ಳೇ ಮಾತುಗಾರ ಎನ್ನುವುದು ಎಲ್ಲರಿಗೂ ಗೊತ್ತು. ಆದರೆ ಈ ಚಿತ್ರದಲ್ಲಿ ಅವರ ಪಾತ್ರಕ್ಕೆ ಮಾತು ತುಂಬಾ ಕಮ್ಮಿ. ಎಲ್ಲರ ಸಹಕಾರದಿಂದ ಒಂದೊಳ್ಳೆ ಚಿತ್ರ ನಿರ್ಮಾಣವಾಗಿದೆ. ನಾನು ಛಾಯಾಗ್ರಾಹಕನಾಗಿ ಬಹಳ ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿದ್ದೇನೆ. ಈ ಚಿತ್ರಕ್ಕೂ ನಾನೇ ಛಾಯಾಗ್ರಹಣದ ಜೊತೆಗೆ ನಿರ್ದೇಶನವನ್ನೂ ಮಾಡಿದ್ದೇನೆ. ಇದು ನಾನು ಕ್ಯಾಮೆರಾ ವರ್ಕ್ ನಿರ್ವಹಿಸಿರುವ 53ನೇ ಸಿನಿಮಾ. ಫಸ್ಟ್‌ನೈಟ್ ವಿತ್ ದೆವ್ವ ನನ್ನ ನಿರ್ದೇಶನದ ಐದನೇ ಚಿತ್ರ. ಮಿಮಿಕ್ರಿ ಗೋಪಿ, ತುಕಾಲಿ ಸಂತು, ಸುಷ್ಮಿತಾ ಇವರೆಲ್ಲರ ಪಾತ್ರಗಳು ಪ್ರಭಾವ ಬೀರುತ್ತವೆ, ಒಟ್ಟು 30 ದಿನಗಳ ಕಾಲ ಚಿತ್ರೀಕರಣ ನಡೆಸಿದ್ದೇವೆ, ಇಡೀ ಚಿತ್ರತಂಡದ ಸಹಕಾರದಿಂದ ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದು ತಿಳಿಸಿದರು.

ನಾಯಕಿ ನಿವಿಶಾಸ್ವಾಮಿ ಮಾತನಾಡುತ್ತ ಇದು ಕಾಮಿಡಿ ಹಾರರ್ ಚಿತ್ರ, ಪ್ರಥಮ್ ಅವರ ಪತ್ನಿಯಾಗಿ ನಾನು ನಟಿಸಿದ್ದೇನೆ, ಇನ್ನೋಸೆಂಟ್ ಹುಡುಗಿ, ಅಂಥವಳ ಪಾತ್ರ ಹೇಗೆ ಚೇಂಜ್ ಆಗುತ್ತಾ ಹೋಗುತ್ತೆ ಎನ್ನುವುದೇ ವಿಶೇಷ, ಎರಡು ರೀತಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು.

ಹಿರಿಯನಟ ಶ್ರೀನಿವಾಸಮೂರ್ತಿ ಮಾತನಾಡುತ್ತ ನಾನು ಆಗಿನ ಕಾಲದ ನಟರ ಜತೆಗೂ ನಟಿಸಿದ್ದೇನೆ, ಈಗಿನ ಕಾಲದ ನಟರ ಜತೆಗೂ ನಟಿಸಿದ್ದೇನೆ, ನನಗೆ ಅಂಥಾ ಬದಲಾವಣೆ ಏನೂ ಕಾಣಿಸುತ್ತಿಲ್ಲ, ಎಂದು ಹೇಳಿದರು, ಮಿಮಿಕ್ರಿ ಗೋಪಿ ಮಾತನಾಡಿ ಪ್ರಥಮ್ ಹಾಗೂ ಸ್ವಾಮಿ ಇಬ್ಬರೂ ಸೇರಿ ನನ್ನನ್ನು ಚೆನ್ನಾಗಿ ದುಡಿಸಿದ್ದಾರೆ, ಬೆಳಗಿನ ಜಾವದವರೆಗೂ ಕೆಲಸ ಮಾಡಿಸಿದ್ದಾರೆ, ಮಿಮಿಕ್ರಿ ಕೂಡ ಮಾಡಿಸಿದ್ದಾರೆ ಎಂದು ಹೇಳಿದರು,

ಅದ್ವಿಕ್ ವರ್ಮ ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಚಿತ್ರದ ಹಾಡುಗಳನ್ನು ಪ್ರೇಕ್ಷಕರು ಇಷ್ಟಪಟ್ಟಿದ್ದಾರೆ, ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಚಿತ್ರಕ್ಕೆ ಯು/ಎ ಪ್ರಮಾಣಪತ್ರ ನೀಡಿದೆ. ಹರೀಶ್ ರಾಜ್ ಅವರದು ವಿಲನ್ ಪಾತ್ರವಾದರೂ ಸ್ಪೆಷಲ್ ಆಗಿದೆ, ಸುಷ್ಮಿತಾ, ಶ್ರೀನಿವಾಸಮೂರ್ತಿ, ರಮೇಶ್ ಭಟ್, ತುಕಾಲಿ ಸಂತೋಷ್ ಇವರೆಲ್ಲ, ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿ ನವೀನ್, ಪುನೀತ್ ಕಾರ್ಯನಿರ್ವಹಿಸಿದ್ದಾರೆ.

ಫಸ್ಟ್‌ನೈಟ್ ವಿತ್ ದೆವ್ವ ಚಿತ್ರದಲ್ಲಿ, ನಟಿ ತುಕಾಲಿ ಸಂತೋಷ್ ಅಲ್ವಾಡ್‌ನಿಂದ ಬಂದ ಹುಡುಗನ ಪಾತ್ರ ಮಾಡಿದ್ದಾರೆ. ನಾಯಕನ ಜೊತೆಗೆ ಸಾಗುವ ಪಾತ್ರವದು, ನಟಿ ಸುಷ್ಮಿತಾ ಇಲ್ಲಿ, ದೆವ್ವದ ರೂಪದಲ್ಲಿ, ಕಾಣಿಸಿಕೊಂಡಿದ್ದಾರೆ, ನಾಗೇಶ್ ನಾರಾಯಣ್ ಅವರು ಸಂಕಲನಕಾರ್ಯ ನಿರ್ವಹಿಸುವ ಜತೆಗೆ ಸಂಭಾಷಣೆಯನ್ನೂ ಬರೆದಿದ್ದಾರೆ.

ಕರಳಿ ಪ್ರತಿ ಮಹಿಳೆಯೂ ತನ್ನ ಕಥೆಗೆ ತಾನೇ ನಾಯಕಿ

ಕಲಿವೀರ, ಕನ್ನಡ ದೇಶದೊಳ್ ಎಂಬ ಚಿತ್ರಗಳನ್ನು ನಿರ್ದೇಶನ ಮಾಡಿ ಗುರುತಿಸಿಕೊಂಡಿದ್ದ ಯುವ ನಿರ್ದೇಶಕ ಅವಿರಾಮ್ ಕಂಠೀರವ ಅವರ ನಿರ್ದೇಶನದ ಮತ್ತೊಂದು ವಿಭಿನ್ನ ಕಥಾಹಂದರ ಒಳಗೊಂಡ ಚಿತ್ರ, ಕರಳೆ. ಇದೊಂದು ನೈಜ ಘಟನೆ ಆಧಾರಿತ ಚಿತ್ರವಾಗಿದ್ದು, ಇತ್ತೀಚೆಗೆ ನಿರ್ದೇಶಕರು ಬಿಡುಗಡೆ ಮಾಡಿದ್ದ ಪೋಸ್ಟರ್ ಕಾರಣದಿಂದ ದೊಡ್ಡ ಮಟ್ಟದ ವಿವಾದ ಸೃಷ್ಟಿಸುವ ಮೂಲಕ ಸುದ್ದಿಯಾಗಿತ್ತು,





ಇದೊಂದು ಮಹಿಳಾ ಪ್ರಧಾನ ಕಥಾಹಂದರ ಒಳಗೊಂಡ ಚಿತ್ರವಾಗಿದ್ದು, ಈ ಚಿತ್ರದ ಮತ್ತೊಂದು ಪೋಸ್ಟರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಇದರಲ್ಲಿ ನಾಯಕಿ ಕುಂಕುಮ್ ಹರಿಹರ ಅವರ ಪಾತ್ರವನ್ನು ಪರಿಚಯಿಸಲಾಗಿದೆ, ಈ ಚಿತ್ರದಲ್ಲಿ, ಬೇಬಿ ಶ್ರಿಯ ನಂಬಿಯಾರ್ ಎಂಬ ಮಗು ಕೂಡ ಪ್ರಮುಖ ಪಾತ್ರದಲ್ಲಿ, ಕಾಣಿಸಿಕೊಂಡಿದೆ, ಈ ಚಿತ್ರವನ್ನು ಸಮಾಜದ ವಾಸ್ತವ ಅಂಶಗಳೊಂದಿಗೆ ಚಿತ್ರೀಕರಿಸಲಾಗಿದ್ದು, ಎಮೋಷನಲ್, ರಾ, ಮನಕಲಕುವ ದೃಶ್ಯಗಳು ಈ ಚಿತ್ರದಲ್ಲಿರಲಿವೆ. ಚಿಂತಾಮಣಿ, ಮದ್ದೂರು, ಹುಲಿರಾಯನದುರ್ಗ ಸೇರಿದಂತೆ ಹಲವು ಲೊಕೇಶನ್‌ಗಳಲ್ಲಿ ಚಿತ್ರದ ಶೂಟಿಂಗ್ ನಡೆಸಲಾಗಿದೆ. ಇದೀಗ ನಮ್ಮ ಚಿತ್ರದ ಡಬ್ಬಿಂಗ್ ಕಾರ್ಯ ಶುರುವಾಗಿದೆ, ಎಂದು ನಿರ್ದೇಶಕ ಅವಿರಾಮ್ ಕಂಠೀರವ ಅವರು ತಿಳಿಸಿದ್ದಾರೆ.

ಭಾರತ ಹಾಗೂ ಚೀನಾ ದೇಶಕ್ಕೆ ಸಾಮ್ಯತೆ ಹೊಂದಿರುವ ಕಥೆಯನ್ನು ಈ ಚಿತ್ರದ ಮೂಲಕ ಹೇಳಲಾಗಿದೆ, ಹೀಗಾಗಿ ಈ ಚಿತ್ರವನ್ನು ಕನ್ನಡ ಹಾಗೂ ಚೈನೀಸ್ ಭಾಷೆಯಲ್ಲಿ ತೆರೆಗೆ ತೆರೆಗೆ ತರಲು ನಿರ್ದೇಶಕ ಅವಿರಾಮ್ ಕಂಠೀರವ ಅವರು ಸಿದ್ಧತೆ ನಡೆಸುತ್ತಿದ್ದಾರೆ. ಎರಡು ದೇಶಗಳಲ್ಲಿ ನಡೆಯುವ ಘಟನೆಗಳಿಗೆ ಸಾಮ್ಯತೆ ಇರುವ ಕಾರಣ ಕನ್ನಡ ಮತ್ತು ಚೈನೀಸ್ ಭಾಷೆಯಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಇನ್ನು ಕನ್ನಡ ಜೊತೆಗೆ ಚೈನೀಸ್ ಭಾಷೆಯಲ್ಲಿ ತಯಾರಾಗುತ್ತಿರುವ ಮೊದಲ ಭಾರತದ ಸಿನಿಮಾ ಎಂಬ ಹೆಗ್ಗಳಿಕೆಗೆ ಕರಳೆ ಚಿತ್ರ ಪಾತ್ರವಾಗಿದೆ. ಡಾರ್ಕ್‌ಶೇಡ್‌ನಲ್ಲಿ, ಈ ಚಿತ್ರವನ್ನು ನಿರ್ಮಿಸಲಾಗಿದೆ.

ಮ್ಯಾಕ್ಸ್ ವಿವಾದ; ಕಲೈಪುಲಿ ತನು ಅವರಿಗೆ ಕೋರ್ಟ್ ನೋಟಿಸ್

2024ರ ಡಿಸೆಂಬರ್‌ನಲ್ಲಿ ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಚಿತ್ರ ಬಿಡುಗಡೆಯಾಗಿ ಯಶಸ್ವಿ ಪ್ರದರ್ಶನ ಕಂಡಿತ್ತು. ವಿಜಯ್ ಕಾರ್ತಿಕೇಯನ್ ಅವರ ನಿರ್ದೇಶನ ಹಾಗೂ ಸುದೀಪ್ ಅವರ ಅದ್ಭುತ ಅಭಿನಯಕ್ಕೆ ಸಿನಿರಸಿಕರು ಫಿದಾ ಆಗಿದ್ದರು. 15 ತಿಂಗಳ ಬಳಿಕ ಈ ಚಿತ್ರ ವಿವಾದಕ್ಕೆ ಕಾರಣವಾಗಿದೆ.



ಮ್ಯಾಕ್ಸ್ ಚಿತ್ರದ ವಿತರಣೆಯ ಹಕ್ಕು ಕುರಿತಾಗಿ ತಮಿಳು ನಿರ್ಮಾಪಕ ಕಲೈಪುಲಿ ತನು ಹಾಗೂ ಕೆಆರ್‌ಜಿ ಸ್ಟುಡಿಯೋಸ್ ನಡುವೆ ಒಪ್ಪಂದವಾಗಿತ್ತು. ಚಿತ್ರದ ವಿತರಣೆ, ಆದಾಯದ ಬಗ್ಗೆ ಕೆಆರ್‌ಜಿ ಸಂಸ್ಥೆ ಸರಿಯಾದ ಲೆಕ್ಕ ಕೊಟ್ಟಿಲ್ಲ, ಬಾಕಿ ಹಣ ಸಂದಾಯವಾಗಿಲ್ಲ ಎಂದು ಕಲೈಪುಲಿ ತನು ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಇದೀಗ ಕೆಆರ್‌ಜಿ ಸಂಸ್ಥೆಯ ಮನವಿಯ ಮೇರೆಗೆ ಹೈಕೋರ್ಟ್ ಆ ನಿರ್ಮಾಪಕರಿಗೆ ನೋಟಿಸ್ ನೀಡಿದೆ.

18% ಬಡ್ಡಿ ಹಣದ ಜೊತೆ ಬಾಕಿ ಹಣವನ್ನೂ ಕೊಡಬೇಕು ಅಲ್ಲದೆ 1 ಕೋಟಿ ರೂ. ನಷ್ಟ ಪರಿಹಾರ ನೀಡಬೇಕು ಎಂದು ಕೆಆರ್‌ಜಿ ಸಂಸ್ಥೆ ಬಳಿ ಆಗ್ರಹಿಸಿದ್ದಾರೆ. ವಿವಾದ ಬಗೆಹರಿಯುವವರೆಗೂ ಕೆಆರ್‌ಜಿ ಸ್ಟುಡಿಯೋಸ್ ನಿರ್ಮಾಣದ ಮ್ಯಾಂಗೋ ಪಚ್ಚ ಚಿತ್ರವನ್ನು ರಿಲೀಸ್ ಮಾಡಲು ಅವಕಾಶ ಕೊಡಬಾರದು ಎಂದು ಕಲೈಪುಲಿ ತನು ಕೋರ್ಟ್‌ನಲ್ಲಿ ಮನವಿ ಮಾಡಿದ್ದಾರೆ. ಮದ್ರಾಸ್ ಹೈಕೋರ್ಟ್‌ನಲ್ಲಿ ಪ್ರಕರಣದ ವಿಚಾರಣೆಯನ್ನು ವಿರೋಧಿಸಿರುವ ಕೆಆರ್‌ಜಿ ಸಂಸ್ಥೆ, ಪ್ರಕರಣವನ್ನು ಬೆಂಗಳೂರು ನ್ಯಾಯಾಲಯ ವ್ಯಾಪ್ತಿಯಲ್ಲೇ ಬಗೆಹರಿಬೇಕು ಎಂದು ಆಗ್ರಹಿಸಿದೆ.

ಕಲೈಪುಲಿ ತನು ಹಾಗೂ ಕೆಆರ್‌ಜಿ ನಡುವಿನ ಒಪ್ಪಂದ ಪತ್ರವನ್ನು ಬೆಂಗಳೂರಿನಲ್ಲಿ ಖರೀದಿಸಲಾಗಿತ್ತು. ಇಲ್ಲೇ ಒಪ್ಪಂದ ನಡೆದಿದೆ. ಮ್ಯಾಕ್ಸ್ ಕನ್ನಡ ಚಿತ್ರ, ಇಲ್ಲೇ ನಿರ್ಮಾಣವಾಗಿದೆ. ಹಾಗಾಗಿ ಬೆಂಗಳೂರು ನ್ಯಾಯಾಲಯದಲ್ಲೇ ವಿಚಾರಣೆ ನಡೆಸಬೇಕು ಎಂದು ಕೆಆರ್‌ಜಿ ಸಂಸ್ಥೆ ಪಟ್ಟು ಹಿಡಿದಿದೆ, ಒಪ್ಪಂದ ಪತ್ರದಲ್ಲಿ 'ಬೆಂಗಳೂರು' ಎನ್ನುವ ಪದವನ್ನು ಅಳಿಸಿ 'ಚೆನ್ನೈ' ಎಂದು ಬರೆದಿದ್ದಾರೆ. ಅದರಲ್ಲಿ ಕಲೈಪುಲಿ ತನು ಅವರ ಸಹಿ ಇದೆ. ಆದರೆ ಕೆಆರ್‌ಜಿ ಸ್ಟುಡಿಯೋಸ್ ಪ್ರತಿನಿಧಿಗಳ ಸಹಿ ಇಲ್ಲ, ನಮಗೆ ಗೊತ್ತಿಲ್ಲದೇ ಈ ಬದಲಾವಣೆ ಮಾಡಿದ್ದಾರೆ ಎಂದು ವಾದ ಮುಂದಿಟ್ಟಿದ್ದಾರೆ.

ಕಲೈಪುಲಿ ತನು ತಮಿಳುನಾಡಿನವರು. ಒಪ್ಪಂದದ ಪ್ರಕಾರ ಚೆನ್ನೈನ ಅವರ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಬೇಕು. ಹಾಗಾಗಿ ವಿವಾದದ ಒಂದು ಭಾಗ ಚೆನ್ನೈ ವಿಚಾರಣೆ ಅವಕಾಶ ನೀಡಲಾಗಿತ್ತು. ಆದರೆ ಇದನ್ನು ಒಪ್ಪದೇ ಕೆಆರ್‌ಜಿ ಸಂಸ್ಥೆ ಹೊಸ ಅರ್ಜಿ ಸಲ್ಲಿಸಿತ್ತು. ಹಾಗಾಗಿ ಕಲೈಪುಲಿ ತನು ಅವರಿಗೆ ನೋಟಿಸ್ ನೀಡಲಾಗಿದೆ. ಏಪ್ರಿಲ್ 6ರಂದು ಈ ಕುರಿತು ವಿಚಾರಣೆ ನಡೆಯಲಿದೆ.

ಅರ್ಧ ಶತಕದತ್ತ ಮರಳಿ ಮನಸಾಗಿದೆ

ಬೆಸ ಟಾಕೀಸ್ ಲಾಂಛನದಲ್ಲಿ ಮುದೇಗೌಡ್ರು ನವೀನ್‌ಕುಮಾರ್ ಆರ್.ಟಿ. ಹಾಗೂ ತೆಲಿಗಿ ಮಲ್ಲಿಕಾರ್ಜುನಪ್ಪ ಅವರು ನಿರ್ಮಿಸಿರುವ ಮನುಕುಲದ ಮೌಲ್ಯಗಳನ್ನು ಸಾರುವ ಚಿತ್ರ ಮರಳಿ ಮನಸಾಗಿದೆ ಫೆಬ್ರವರಿ 12ರಂದು ರಾಜ್ಯಾದ್ಯಂತ ತೆರೆಕಂಡಿತ್ತು, ನಾಗರಾಜ್ ಶಂಕರ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರವು ಮೌತ್ ಪಬ್ಲಿಸಿಟಿ ಮೂಲಕವೇ ಹೆಚ್ಚು ಜನಪ್ರಿಯತೆ ಗಳಿಸಿದ್ದು, ಫ್ಯಾಮಿಲಿ ಆಡಿಯನ್ಸ್‌ಗೆ ಅಚ್ಚು ಮೆಚ್ಚಿನ ಚಿತ್ರವಾಗಿದ್ದು, ಎಲ್ಲಾ ವರ್ಗದ ಪ್ರೇಕ್ಷಕರನ್ನು ಸೆಳೆಯುತ್ತಿದೆ. ಈ ಚಿತ್ರದಲ್ಲಿ, ನಾಯಕನಾಗಿ ಅರ್ಜುನ್ ವೇದಾಂತ್, ನಾಯಕಿಯರಾಗಿ ನಿರೀಕ್ಷಾ ಶೆಟ್ಟಿ ಹಾಗೂ ಸ್ಮೃತಿ ವೆಂಕಟೇಶ್ ನಟಿಸಿದ್ದಾರೆ, ವಿನು ಮನಸು ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ಎಲ್ಲಾ ಹಾಡುಗಳು ಜನರನ್ನು ಸೆಳೆದಿದ್ದು ಮ್ಯೂಸಿಕ್ ಕೂಡ ಸಿನಿರಸಿಕರನ್ನು ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದೆ, ಈಗಾಗಲೇ ಈ ಚಿತ್ರವು ಯಶಸ್ವಿಯಾಗಿ 40 ದಿನಗಳನ್ನು ಪೂರೈಸಿದ್ದು ಇದೀಗ 50 ನೇ ದಿನದತ್ತ ದಾಪುಗಾಲು ಇಟ್ಟಿದೆ. ಈ ಚಿತ್ರವನ್ನು ಎಂಪಿ ಫಿಲಂಸ್ ಮೂಲಕ ಕೆ. ಮುನೀಂದ್ರ ಅವರು ರಾಜ್ಯಾದ್ಯಂತ ವಿತರಣೆ ಮಾಡಿದ್ದರು, ವಿಶೇಷ ಎಂದರೆ ಇವರು ಇದೇ ಚಿತ್ರದ ಜತೆ ರಿಲೀಸ್ ಮಾಡಿದ್ದ ಮಗ್ಗಿ





ಪುಸ್ತಕ ಚಿತ್ರವೂ ಸಹ ಯಶಸ್ವೀ ಪ್ರದರ್ಶನ ಕಾಣುತ್ತಿದ್ದು ಆ ಚಿತ್ರವೂ ಸಹ ಸದ್ಯದಲ್ಲೇ ಐವತ್ತು ದಿನಗಳ ಸಂಭ್ರಮ ಆಚರಿಸಲು ಸಿದ್ಧವಾಗಿದೆ,

ಮರಳಿ ಮನಸಾಗಿದೆ ಯುವಜನತೆಗೆ ಹತ್ತಿರವಾದ ಕಂಟೆಂಟ್ ಒಳಗೊಂಡ ಚಿತ್ರವಾಗಿದ್ದು, ಜೊತೆಗೆ ಸಂಬಂಧಗಳ ಮೌಲ್ಯಗಳನ್ನು ತಿಳಿಸುವ ಕಥೆಯಿದೆ, ಇದೇ ಹೆಚ್ಚು ಹೆಚ್ಚು ಹೊಸ ಆಡಿಯನ್ಸ್ ಆಕರ್ಷಿಸುತ್ತಲಿದೆ, ಇದರ ಜತೆಗೆ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಮಹತ್ವದ ವಿಷಯವೂ ಈ ಚಿತ್ರದಲ್ಲಿದೆ. ಮರಳಿ ಮನಸಾಗಿದೆ ಚಿತ್ರದ ನಿರ್ಮಾಪಕ ಮುದೇಗೌಡ ನವೀನ್‌ಕುಮಾರ್ ಆರ್.ಟಿ. ಅವರು ದಾವಣಗೆರೆ ನಿವಾಸಿಯಾಗಿದ್ದು ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರ ಅಪ್ಪಟ ಅಭಿಮಾನಿಯೂ ಹೌದು, ದಾವಣಗೆರೆಯಲ್ಲೇ ಈ ಚಿತ್ರದ ಚಿತ್ರೀಕರಣವನ್ನು ಆರಂಭಿಸಿ, ಕರ್ನಾಟಕದ ವಿವಿಧ ಜಿಲ್ಲೆಗಳ ಲೊಕೇಶನ್‌ಗಳಲ್ಲಿ ಶೂಟಿಂಗ್ ನಡೆಸಿದ್ದಾರೆ. ಈ ಚಿತ್ರದಲ್ಲಿ, ನಾಯಕನಾಗಿ ಅರ್ಜುನ್ ವೇದಾಂತ್ ಅವರು ಅಭಿನಯಿಸಿದ್ದಾರೆ.

ಇದೊಂದು ಸಂಗೀತ ಪ್ರಧಾನ ಕಥಾಹಂದರ ಒಳಗೊಂಡ ಚಿತ್ರವಾಗಿದ್ದು, ಸುಮಧುರ ಹಾಡುಗಳು ಈ ಚಿತ್ರದಲ್ಲಿ, ಹೈಲೈಟಾಗಿವೆ. ವಿನು ಮನಸು ಅವರು ಕಂಪೋಜ್ ಮಾಡಿರುವ ಮತ್ತೆ ಮತ್ತೆ ಕೇಳಬೇಕೆನಿಸುವ ಹಾಡುಗಳ ಜತೆಗೆ ಯುವಜನತೆಗೆ ಹತ್ತಿರವಾದ ಕಥಾಹಂದರ ಹೊಂದಿರುವ ಹಾಗೂ ಸಂಬಂಧಗಳ ಮೌಲ್ಯಗಳನ್ನು ತಿಳಿಸುವ ಚಿತ್ರವೂ ಇದಾಗಿದೆ. ಚಿತ್ರದಲ್ಲಿ, ಎದುರಿಗೆ ಬಂದರೆ, ಹೃದಯಕೆ ಹೊಂದರೆ ಎಂಬ ಹಾಡಿಗೆ ಅಜಿತ್ ಸುಬ್ರಹ್ಮಣ್ಯ ಹಾಗೂ ಶ್ರೀನಿಧಿ ಅವರುಗಳು ಸಾಹಿತ್ಯ ಬರೆದಿದ್ದು, ಸಂತೋಷ್ ವೆಂಕಿ ಹಾಡಿಗೆ ದನಿಯಾಗಿದ್ದಾರೆ. ಇದಲ್ಲದೆ ಸುಳಿಮಿಂಚು ಕಣ್ಣ ಒಳಗೆ ಎಂಬ ಸಾಹಿತ್ಯ ಇರುವ ಹಾಡಿಗೆ ಹರೀಶ್ ಎಸ್.ಎಂ. ಅವರು ಸಾಹಿತ್ಯ ಬರೆದಿದ್ದು, ಶಶಾಂಕ್ ಶೇಷಗಿರಿ ಹಾಗೂ ಈಶ ಸುಚಿ ಅವರುಗಳು ದನಿಯಾಗಿದ್ದಾರೆ. ಈ ಚಿತ್ರದ ಹಾಡುಗಳು ಈಗಾಗಲೇ ಎ 2 ಮ್ಯೂಸಿಕ್ ಮೂಲಕ ಬಿಡುಗಡೆಯಾಗಿದ್ದಲ್ಲದೆ, ಸಂಗೀತ ಪ್ರಿಯರ ಮನ ಗೆದ್ದು ಚಿತ್ರವನ್ನು ನೋಡಲೇಬೇಕೆಂಬ ಆಸೆಯನ್ನು ಹುಟ್ಟುಹಾಕಿವೆ, ಮರಳಿ ಮನಸಾಗಿದೆ ಚಿತ್ರದ ಉಳಿದ ಪಾತ್ರಗಳಲ್ಲಿ, ಟಿ.ಎಸ್.ನಾಗಾಭರಣ, ಭೋಜರಾಜ ವಾಮಂಜೂರು, ಮೂಗು ಸುರೇಶ್, ರಘು ಸೀರುಂಡೆ, ಸಂಗೀತ, ಚೇತನ್ ದುರ್ಗ ನಟಿಸಿದ್ದಾರೆ,

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340, Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26